ಶುಕ್ರವಾರ, ಮೇ 16, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮರಳಿ ಶಾಲೆಗೆ...

ಭಾರತ–ಪಾಕಿಸ್ತಾನ ಸಂಘರ್ಷದ ಬಳಿಕ, ಗಡಿಗೆ ಹೊಂದಿಕೊಂಡಿರದ ಜಿಲ್ಲೆಗಳಲ್ಲಿ ಶಾಲೆಗಳು ಪುನರಾರಂಭವಾಗಿದ್ದು, ಜಮ್ಮುವಿನ ಶಾಲೆಯೊಂದರಲ್ಲಿ ಮಕ್ಕಳು ಗುರುವಾರ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು

ಸಂಕ್ಷಿಪ್ತ ಸುದ್ದಿ

ಅತಿಥಿ ಶಿಕ್ಷಕರ ಗೌರವಧನ ₹2 ಸಾವಿರ ಹೆಚ್ಚಳ

ಬೆಂಗಳೂರು: ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರ ಗೌರವಧನವನ್ನು ತಲಾ ₹2 ಸಾವಿರ ಹೆಚ್ಚಳ ಮಾಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಪ್ರಸ್ತುತ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಅತಿಥಿ ಶಿಕ್ಷಕರಿಗೆ ₹10 ಸಾವಿರ, ಪ್ರೌಢಶಾಲಾ ಅತಿಥಿ ಶಿಕ್ಷಕರಿಗೆ ₹10,500 ಹಾಗೂ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ₹12 ಸಾವಿರ ನೀಡಲಾಗುತ್ತಿದೆ. 2025–26ನೇ ಶೈಕ್ಷಣಿಕ ಸಾಲಿನಿಂದ ಕ್ರಮವಾಗಿ ₹12 ಸಾವಿರ, ₹12,500 ಹಾಗೂ ₹14 ಸಾವಿರ ಪಡೆಯಲಿದ್ದಾರೆ.

ಹುಲಿ ಸಂರಕ್ಷಿತ ಪ್ರದೇಶದ ಹಾಡಿಗಳಿಗೆ ವಿದ್ಯುತ್, ನೀರು

ಬೆಂಗಳೂರು: ನಾಗರಹೊಳೆ ರಾಷ್ಟ್ರೀಯ ಉದ್ಯಾನ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಹಾಡಿಗಳಿಗೆ ವಿದ್ಯುತ್ ಸಂಪರ್ಕ ಕುಡಿಯುವ ನೀರು ಸಂಪರ್ಕ ಒದಗಿಸಲು ಅರಣ್ಯ ಇಲಾಖೆ ಒಪ್ಪಿಗೆ ನೀಡಿದೆ.

ಇಲ್ಲಿನ ಬುಡಕಟ್ಟು ವಾಸಿಗಳಿಗೆ ವಿದ್ಯುತ್ ಮತ್ತು ನೀರು ಪೂರೈಕೆ ಮಾಡಬೇಕು ಎಂಬ ಬೇಡಿಕೆ ಹಲವು ದಿನಗಳಿಂದ ಇತ್ತು. ಪೂರಕವಾಗಿ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಸಭೆಯಲ್ಲಿ ಈ ಪ್ರಸ್ತಾಪಕ್ಕೆ ಸಮ್ಮತಿ ನೀಡಲಾಗಿದೆ.

ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯ ಹನೂರು ತಾಲ್ಲೂಕಿನ ಏಳು ಗ್ರಾಮಗಳು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿ ಅಭಯಾರಣ್ಯದ ವ್ಯಾಪ್ತಿಯ ಸುಮಾರು ಹತ್ತು ಗ್ರಾಮಗಳಲ್ಲಿನ ಹಾಡಿಗಳಿಗೆ ಈ ಸೌಲಭ್ಯ ಸಿಗಲಿದೆ ಎಂದು ಮೂಲಗಳು ಹೇಳಿವೆ.

ಹುಲಿ ಸಂರಕ್ಷಿತ ಪ್ರದೇಶ ಮತ್ತು ಇತರ ವನ್ಯಜೀವಿಗಳ ಅಭಯಾರಣ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಾರದು ಎಂಬುದು ವನ್ಯಜೀವಿ ಪ್ರೇಮಿಗಳ ಆಕ್ಷೇಪಗಳಲ್ಲಿ ಒಂದಾಗಿತ್ತು.

ವೈದ್ಯಕೀಯ ಕೋರ್ಸ್ ಶುಲ್ಕ ಹೆಚ್ಚಳ ಇಲ್ಲ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಶುಲ್ಕವನ್ನು 2025–26ನೇ ಸಾಲಿಗೆ ಹೆಚ್ಚಳ ಮಾಡದಿರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಸಲ್ಲಿಸಿದ ಶೇ 15ರಷ್ಟು ಶುಲ್ಕ ಹೆಚ್ಚಳದ ಬೇಡಿಕೆಯನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆ ತಿರಸ್ಕರಿಸಿದೆ.

'2024–25ನೇ ಸಾಲಿನಲ್ಲಿ ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಸಮ್ಮತಿ ನೀಡಲಾಗಿತ್ತು. ಈಗ ಮತ್ತೆ ಶುಲ್ಕ ಹೆಚ್ಚಳ ಮಾಡಿದರೆ ಪೋಷಕರಿಗೆ ಹೊರೆಯಾಗುತ್ತದೆ. ಹಾಗಾಗಿ, ಈ ವರ್ಷ ಶುಲ್ಕ ಹೆಚ್ಚಳ ಮಾಡದೇ ಇರಲು ನಿರ್ಧರಿಸಲಾಗಿದೆ. ಕಳೆದ ಸಾಲಿನ ಶುಲ್ಕವೇ ಮುಂದುವರಿಯಲಿದೆ' ಎಂದು ಸಚಿವ ಶರಣಪ್ರಕಾಶ ಪಾಟೀಲ ಹೇಳಿದರು.

ಪ್ರಸ್ತುತ ಸರ್ಕಾರಿ ವೈದ್ಯಕೀಯ ಕಾಲೇಜುಗಳ ವಾರ್ಷಿಕ ಶುಲ್ಕ ₹50 ಸಾವಿರ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಸೀಟುಗಳ ಶುಲ್ಕ ₹1,40,621 ಮತ್ತು ಖಾಸಗಿ ಕೋಟಾದ ಸೀಟುಗಳ ಶುಲ್ಕ ₹11,88,167 ಇದೆ.

'ಸಿಂಧೂರ' ಕಾರ್ಯಾಚರಣೆಯ ಯೋಧರನ್ನು ಬೆಂಬಲಿಸಿ ಬಿಜೆಪಿ ಆಯೋಜನೆ

ಸೇನೆ ಬೆಂಬಲಿಸಿ 'ತಿರಂಗಾ ಯಾತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನ ವಿರುದ್ಧದ 'ಆಪರೇಷನ್ ಸಿಂಧೂರ' ಸೇನಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಸೇನಾನಿಗಳಿಗೆ ಅಭಿನಂದನೆ ಸಲ್ಲಿಸಲು ಗುರುವಾರ ಬೆಳಿಗ್ಗೆ ಬಿಜೆಪಿಯು ತಿರಂಗಾ ಯಾತ್ರೆಯನ್ನು ಹಮ್ಮಿಕೊಂಡಿತ್ತು.

ಮಲ್ಲೇಶ್ವರದ ಶಿರೂರ್ ಆಟದ ಮೈದಾನದ ಆವರಣದಿಂದ ಮಲ್ಲೇಶ್ವರದ 18ನೇ ಕ್ರಾಸ್‌ವರೆಗೆ ನಡೆದ ತಿರಂಗಾ ಯಾತ್ರೆಯಲ್ಲಿ ನಿವೃತ್ತ ಯೋಧರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ನಾಗರಿಕರು ಮತ್ತು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು. ತ್ರಿವರ್ಣಧ್ವಜವನ್ನು ಹಿಡಿದು 'ಭಾರತ್ ಮಾತಾ ಕೀ ಜೈ', 'ಪಾಕಿಸ್ತಾನಕ್ಕೆ ಪಾಠ ಕಲಿಸಿದ ದೇಶ ಭಕ್ತ ಸೈನಿಕರಿಗೆ ಜೈ' ಮತ್ತು 'ಭಾರತಕ್ಕೆ ವಿಶ್ವದಲ್ಲಿ ಗೌರವವನ್ನು ತಂದುಕೊಟ್ಟಿರುವ ವೀರಸೇನಾನಿಗಳಿಗೆ ಜೈ' ಎಂಬ ಘೋಷಣೆಗಳನ್ನು ಕೂಗಿದರು.

ಯಾತ್ರೆಯ ಆರಂಭದಲ್ಲಿ ನಿವೃತ್ತ ಏರ್ ಮಾರ್ಷಲ್ ಎ.ವಿ.ಮುರುಳಿ ಮಾತನಾಡಿ, 'ಆಪರೇಷನ್ ಸಿಂಧೂರ ಇನ್ನೂ ಮುಗಿದಿಲ್ಲ. ಮತ್ತೊಮ್ಮೆ ಉಗ್ರರ ದಾಳಿ ನಡೆದರೆ ಪಾಕಿಸ್ತಾನವೇ ನಿರ್ನಾಮವಾಗಲಿದೆ. ಪಾಕ್ ಆಕ್ರಮಿತ ಕಾಶ್ಮೀರ ನಮ್ಮದಾಗಲಿದೆ' ಎಂದು ಹೇಳಿದರು.

ವಕೀಲೆ ಕ್ಷಮಾ ನರಗುಂದ ಮಾತನಾಡಿ, 'ಪಹಲ್ಗಾಮ್‌ನಲ್ಲಿ ಹೆಣ್ಣು ಮಕ್ಕಳ ಸಿಂಧೂರ ಅಳಿಸಿದ್ದ ಭಯೋತ್ಪಾದಕರ ವಿರುದ್ಧ ಸೇನಾ ಕಾರ್ಯಾಚರಣೆ ಮೂಲಕ ಪ್ರತೀಕಾರ ತೀರಿಸಿಕೊಳ್ಳ ಲಾಗಿದೆ. 72 ತಾಸುಗಳಲ್ಲಿ ನಮ್ಮ ಸೈನ್ಯವು ಪಾಕಿಸ್ತಾನಕ್ಕೆ ತಕ್ಕ ಉತ್ತರ ಕೊಟ್ಟಿದೆ. 11 ಕ್ಕೂ ಹೆಚ್ಚು ವಾಯುನೆಲೆಗಳ ಮೇಲೆ ದಾಳಿ ಮಾಡಿ ನಾಶ ಮಾಡಿದೆ. ಇದು ಸೇನೆಯ ಸಾಮರ್ಥ್ಯಕ್ಕೆ ನಿದರ್ಶನ' ಎಂದರು.

ತಿರಂಗಾ ಯಾತ್ರೆಯಲ್ಲಿ ಬಿಜೆಪಿ ರಾಜ್ಯ ಉಸ್ತುವಾರಿ ಡಾ.ರಾಧಾಮೋಹನ್‌ದಾಸ್ ಅಗರ್‌ವಾಲ್, ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ.ಮೋಹನ್, ಶಾಸಕರಾದ ಡಾ. ಸಿ.ಎನ್.ಅಶ್ವತ್ಥನಾರಾಯಣ, ಎನ್.ಮುನಿರತ್ನ, ಕೆ.ಗೋಪಾಲಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ತಿರಂಗಾ ಯಾತ್ರೆಯಲ್ಲಿ ವಿದ್ಯಾರ್ಥಿಗಳು– ನಾಗರಿಕರು ಪಾಲ್ಗೊಂಡಿದ್ದರು

'ಯುದ್ಧ: ಎಐಸಿಸಿ ಸ್ಪಷ್ಟ ನಿಲುವು ಪ್ರಕಟಿಸಲಿ'

'ಕಾಂಗ್ರೆಸ್‌ನಲ್ಲಿ ಒಬ್ಬರು ಯುದ್ಧ ಬೇಕು ಎಂದರೆ, ಮತ್ತೊಬ್ಬರು ಶಾಂತಿ ಬೇಕು ಎನ್ನುತ್ತಾರೆ. ಈ ರೀತಿ ಗೊಂದಲ ಸೃಷ್ಟಿಸುವ ಬದಲು ಎಐಸಿಸಿ ಈ ಬಗ್ಗೆ ಸರಿಯಾದ ನಿಲುವು ಪ್ರಕಟಿಸಲಿ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಂಬೈನಲ್ಲಿ ಉಗ್ರರ ದಾಳಿ ನಡೆದಾಗ 175 ಜನರು ಸತ್ತಿದ್ದರು. ಆಗ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡದೇ ಕೈಚೆಲ್ಲಿ ಹತಾಶವಾಗಿ ಕುಳಿತಿತ್ತು. ಅಲ್ಲದೇ, ಕಾಂಗ್ರೆಸ್ ಆಡಳಿತವಿದ್ದಾಗ ಅಮೆರಿಕದ ಬಳಿ ಹೋಗಿ ಭಿಕ್ಷೆ ಬೇಡಿದ್ದನ್ನು ನೋಡಿದ್ದೇವೆ. ಸಚಿವ ಸಂತೋಷ್ ಲಾಡ್‌ಗೆ ಇವೆಲ್ಲ ಗೊತ್ತಿದೆಯೇ' ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಕದನ ವಿರಾಮವನ್ನು ಸ್ವಾಗತಿಸಿದ್ದಾರೆ. ಆದರೆ, ಅದೇ ಕಾಂಗ್ರೆಸ್‌ನಲ್ಲಿ ಹಲವರು ಯುದ್ಧ ಮುಂದುವರಿಸಬೇಕಿತ್ತು ಎಂದಿದ್ದಾರೆ. ಕಾಂಗ್ರೆಸ್‌ನಲ್ಲೇ ಅನೇಕ ಗುಂಪುಗಳಿದ್ದು, ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ಹೇಳುತ್ತಾರೆ ಎಂದು ಅಶೋಕ ದೂರಿದರು.

'ನಮ್ಮ ಸೇನೆಗೆ ಹಾನಿಯಾಗಿಲ್ಲ'

'ಸಿಂಧೂರ ಕಾರ್ಯಾಚರಣೆ ವೇಳೆ ಪಾಕಿಸ್ತಾನ ಬಳಸುತ್ತಿದ್ದ ವಾಯುನೆಲೆಗಳನ್ನು ನಮ್ಮ ವಾಯುಪಡೆ ಧ್ವಂಸ ಮಾಡಿದೆ. ಈ ಸಮರದಲ್ಲಿ ಭಾರತದ ಒಬ್ಬನೇ ಒಬ್ಬ ಸೈನಿಕ ಸತ್ತಿಲ್ಲ. ನಮ್ಮ ಸೇನಾ ಉಪಕರಣ ಗಳಿಗೂ ಹಾನಿ ಆಗಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಮ್ಮ ಕಾರ್ಯಾಚರಣೆಯಲ್ಲಿ ಕೇವಲ ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ. ಪಾಕಿಸ್ತಾನದ ನಾಗರಿಕರು ಸತ್ತಿಲ್ಲ. ಪಾಕಿಸ್ತಾನ ತನ್ನ 11 ವಾಯುನೆಲೆಗಳಿಂದ ಹಾರಿಸಿದ್ದ ಶೇ 100 ರಷ್ಟು ಡ್ರೋನ್ ಮತ್ತು ಕ್ಷಿಪಣಿಗಳು ಭಾರತದೊಳಗೆ ಪ್ರವೇಶಿಸದಂತೆ ವಿಫಲಗೊಳಿಸಲಾಗಿದೆ. ಭಾರತದ ವಾಯು ರಕ್ಷಣಾ ವ್ಯವಸ್ಥೆಯು ಅತ್ಯಂತ ಸಶಕ್ತವಾಗಿರುವುದಾಗಿ ಜಗತ್ತಿಗೇ ತಿಳಿಸಿದ್ದೇವೆ' ಎಂದು ಹೇಳಿದರು.

ದುಂಡುಮೇಜಿನ ಸಭೆಯಲ್ಲಿ ಎಸ್‌. ವರಲಕ್ಷ್ಮಿ ಮಾತನಾಡಿದರು ಪ್ರಜಾವಾಣಿ ಚಿತ್ರ

'ಸ್ತ್ರೀಯರಿಗೆ ರಾತ್ರಿ ಪಾಳಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಅಪಾಯಕಾರಿ ಉದ್ದಿಮೆಗಳಲ್ಲಿ ಮಹಿಳೆಯರಿಗೆ ರಾತ್ರಿ ಪಾಳಿ ಕೆಲಸ ಕಡ್ಡಾಯ ಬೇಡ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸುವಂತೆ ಗುರುವಾರ ನಡೆದ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ (ಜೆಸಿಟಿಯು) ದುಂಡು ಮೇಜಿನ ಸಭೆ ನಿರ್ಣಯ ಕೈಗೊಂಡಿದೆ.

ಮಹಿಳೆಯರ ಆರೋಗ್ಯ ಮತ್ತು ಪ್ರಜನನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ ರಾತ್ರಿ ಪಾಳಿಗೆ ಅವಕಾಶ ಕಲ್ಪಿಸುವ ತಿದ್ದುಪಡಿ ರದ್ದುಗೊಳಿಸಬೇಕು. ಕೆಲಸದ ಸಮಯ ಹೆಚ್ಚಳ ಬೇಡ. ಕನಿಷ್ಠ ವೇತನದಲ್ಲಿ ತಾರತಮ್ಯ ಬೇಡ (ನಿರ್ದಿಷ್ಟವಾಗಿ ಗಾರ್ಮೆಂಟ್ಸ್), ಪ್ಲಾಂಟೇಶನ್, ಬೀಡಿ ತಯಾರಿಕೆ ಘಟಕಗಳಲ್ಲಿ ಸಮನಾದ ಕನಿಷ್ಠ ವೇತನ ನಿಗದಿಪಡಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸುವ ಬಗ್ಗೆ ಸಭೆ ನಿರ್ಧಾರ ತೆಗೆದುಕೊಂಡಿದೆ.

ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ ಎಸ್.ವರಲಕ್ಷ್ಮೀ ಮಾತನಾಡಿ, 'ಶೇ 94ರಷ್ಟು ಮಹಿಳಾ ಕಾರ್ಮಿಕರು ಅಸಂಘಟಿತ ವಲಯ ಹಾಗೂ ಶೇ 6ರಷ್ಟು ಮಹಿಳೆಯರು ಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಕನಿಷ್ಠ ವೇತನ, ಉದ್ಯೋಗ ಭದ್ರತೆ ಮತ್ತು ಕೆಲಸದ ಪರಿಸ್ಥಿತಿಗಳಲ್ಲಿ ತಾರತಮ್ಯ ಎದುರಿಸುತ್ತಿದ್ದಾರೆ. ದುಡಿಯುವ ಸ್ಥಳದಲ್ಲಿ ಕಿರುಕುಳ ಮತ್ತು ತಾರತಮ್ಯ ಮುಕ್ತ ವಾತಾವರಣ ಖಾತ್ರಿ ಪಡಿಸಬೇಕು. ಕೆಲಸದ ಅವಧಿ ಹೆಚ್ಚಿಸಲು ಕೆಲ ಗಾರ್ಮೆಂಟ್ಸ್‌ಗಳಿಗೆ ಸರ್ಕಾರ ಕೊಟ್ಟಿರುವ ಅನುಮತಿಯನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ಕಾರ್ಮಿಕ ಸಂಘಟನೆ ಮುಖಂಡರಾದ ಮೈತ್ರೇಯಿ ಕೃಷ್ಣನ್ ಮಾತನಾಡಿ, 'ಕೇಂದ್ರ ಸರ್ಕಾರದ ಕಾರ್ಮಿಕ ಕಾಯ್ದೆ ಮಹಿಳಾ ಕಾರ್ಮಿಕರಿಗೆ ಸಮಾನ ವೇತನ ನಿರಾಕರಿಸುತ್ತದೆ. ಮಹಿಳೆಯರು ರಾತ್ರಿ ಪಾಳಿಯಲ್ಲಿ ದುಡಿಯುವುದರ ಜತೆಗೆ ಕೆಲಸದ ಸಮಯವನ್ನು 8 ರಿಂದ 12 ಗಂಟೆಗೆ ಏರಿಸಲು ಅವಕಾಶ ಇದೆ' ಎಂದರು.

ಆರೋಗ್ಯ, ಕೌಟುಂಬಿಕ ಹಾಗೂ ಸಾಮಾಜಿಕವಾಗಿ ಯಾವ ರೀತಿ ಸಮಸ್ಯೆಗಳು ಉಂಟಾಗುತ್ತವೆ ಎಂಬುದರ ಕುರಿತು ವಿವಿಧ ಸಂಘಟಿತ ಕ್ಷೇತ್ರಗಳ ಮಹಿಳಾ ಕಾರ್ಮಿಕರು ಚರ್ಚಿಸಿದರು.

ಮನಃಶಾಸ್ತ್ರಜ್ಞೆ ಆರ್.ಅರ್ಚನಾ, ರಾಜ್ಯ ಕಾರ್ಯದರ್ಶಿ ಡಿ.ನಾಗಲಕ್ಷ್ಮಿ, ಮುಖಂಡರಾದ ಜಯಮ್ಮ ಭಾಗವಹಿಸಿದ್ದರು.

ತಾವೇ 'ಸುಪ್ರೀಂ' ಎಂಬಂತೆ ಮೋದಿ ವರ್ತನೆ– ಲಾಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ತಾವೇ ಸುಪ್ರೀಂ ಎಂಬಂತೆ ವರ್ತಿಸುತ್ತಿದ್ದಾರೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದೇಶದಲ್ಲಿ ಯಾರೂ ಅಂತಿಮ ಅಲ್ಲ. ದೇಶ ಅಂತಿಮವೇ ಹೊರತು ವ್ಯಕ್ತಿಯಲ್ಲ' ಎಂದರು. 'ಪಾಕಿಸ್ತಾನ ಗೋಗರೆದ ಕಾರಣ ಕದನ ವಿರಾಮಕ್ಕೆ ಒಪ್ಪಿಗೆ ನೀಡಲಾಗಿದೆ ಎಂದು ತಮ್ಮ ಭಾಷಣದಲ್ಲಿ ಮೋದಿ ಹೇಳಿದ್ದಾರೆ. ಆದರೆ, ಅದಕ್ಕೂ ಮೊದಲು ಅಮೆರಿಕದ ಅಧ್ಯಕ್ಷ ಟ್ರಂಪ್ ಮೂಲಕ ಕದನ ವಿರಾಮ ತಿಳಿದುಕೊಳ್ಳ ಬೇಕಾಯಿತು. ಟ್ರಂಪ್ ಹೇಳಿದ ಮಾದರಿಯಲ್ಲಿ ವ್ಯಾಪಾರಕ್ಕಾಗಿ ಯುದ್ಧ ನಿಲ್ಲಿಸಲಾಯಿತೇ' ಎಂದು ಪ್ರಶ್ನಿಸಿದರು.

'ಬಿಜೆಪಿಯವರು ತಿರಂಗಾ ಯಾತ್ರೆ ಮಾಡುತ್ತಿದ್ದಾರೆ. ಅವರು ತಿರಂಗಾ ಯಾತ್ರೆ ಬದಲು ಟ್ರಂಪ್ ಯಾತ್ರೆ ಮಾಡಲಿ' ಎಂದರು.

'ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದ ನಂತರ ಮೋದಿ ವಿದೇಶ ಪ್ರವಾಸ ಮೊಟಕುಗೊಳಿಸಿ ವಾಪಸ್ ಆಗುತ್ತಾರೆ. ನಂತರ ಅವರು ಬಿಹಾರ ಚುನಾವಣಾ ಪ್ರಚಾರಕ್ಕೆ ತೆರಳುತ್ತಾರೆ. ಸರ್ವಪಕ್ಷಗಳ ಸಭೆಯಲ್ಲಿ ಭಾಗವಹಿಸುವುದೇ ಇಲ್ಲ. ಒಂದು ರೀತಿಯಲ್ಲಿ ನಾನೇ ಸುಪ್ರೀಂ ಎಂಬಂತೆ ವರ್ತಿಸುತ್ತಾರೆ. ಪ್ರತಿಯೊಂದು ವಿಚಾರಕ್ಕೂ ಪ್ರಧಾನಿ ಅವರನ್ನೇ ಸುಪ್ರೀಂ ಎಂಬಂತೆ ಬಿಂಬಿಸಲಾಗುತ್ತಿದೆ' ಎಂದರು.

'ದೇಶದ 140 ಕೋಟಿ ಜನ ಯುದ್ಧ ಮಾಡಬೇಕೆಂಬ ನಿರೀಕ್ಷೆ ಹೊಂದಿದ್ದರು. ಯಾಕೆ ಯುದ್ಧ ಆಗಬಾರದು, ಮಾಡಬೇಕಿತ್ತು. ದೇಶದ ಜನರು ಅದನ್ನೇ ಬಯಸಿದ್ದರು. ಆದರೆ, ರಾತ್ರೋರಾತ್ರಿ ಕದನ ವಿರಾಮ ಘೋಷಿಸುತ್ತಾರೆ. ಯಾವುದೇ ದಾಳಿ ನಡೆದಾಗಲೂ ಬಿಜೆಪಿ ಪ್ರಚಾರಕ್ಕೆ ಬಳಸಿಕೊಳ್ಳುತ್ತದೆ. ಸೈನ್ಯಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದೇವೆ ಎಂದು ಮೋದಿ ಹೇಳಿದ್ದರು. ಸೈನ್ಯ ಹೇಳಿದ ಮೇಲೆ ಕದನ ವಿರಾಮ ಮಾಡಲಾಯಿತೇ? ಈ ಬಗ್ಗೆ ಮೋದಿ ಸ್ಪಷ್ಟನೆ ನೀಡಬೇಕು' ಎಂದರು. 'ಯಾವುದೇ ದಾಳಿ ನಡೆದಾಗ ಬಿಜೆಪಿ ಪ್ರಚಾರ ಪಡೆದುಕೊಳ್ಳುತ್ತಿದೆ. ದಾಳಿಯ ಕ್ರೆಡಿಟ್ ದೇಶದ ಸೈನಿಕರಿಗೆ ಹೋಗಬೇಕು' ಎಂದರು.

ಸಮೀಕ್ಷೆ: ಅಡ್ಡಿಪಡಿಸಿದರೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಪರಿಶಿಷ್ಟ ಜಾತಿ ಕುಟುಂಬಗಳ ದತ್ತಾಂಶ ಸಂಗ್ರಹಿಸುತ್ತಿರುವ ಗಣತಿದಾರರಿಗೆ ಬಿಬಿಎಂಪಿ ಸೇರಿದಂತೆ ಕೆಲವು ಭಾಗಗಳಲ್ಲಿರುವ ಅಪಾರ್ಟ್‌ಮೆಂಟ್‌ಗಳ ಒಳಗೆ ಪ್ರವೇಶ ನಿರ್ಬಂಧಿಸಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಅಂತಹ ಅಪಾರ್ಟ್‌ಮೆಂಟ್‌ಗಳಿಗೆ ವಿದ್ಯುತ್ ಸಂಪರ್ಕ ಸೇರಿದಂತೆ ಮೂಲಸೌಲಭ್ಯವನ್ನೇ ಕಡಿತಗೊಳಿಸುವ ಎಚ್ಚರಿಕೆ ನೀಡಲು ಮುಂದಾಗಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತಂತೆ ಶಿಫಾರಸು ಮಾಡಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಏಕ ಸದಸ್ಯ ಆಯೋಗ ನೀಡಿದ್ದ ಮಧ್ಯಂತರ ವರದಿಯ ಶಿಫಾರಸಿನಂತೆ ಮೇ 5ರಿಂದ ರಾಜ್ಯದಾದ್ಯಂತ ಸಮೀಕ್ಷೆ ನಡೆಯುತ್ತಿದೆ. 17ರವರೆಗೆ ಮನೆ ಮನೆ ಸಮೀಕ್ಷೆ ನಡೆಯಲಿದೆ.

ಆದರೆ, ನಗರ ಪ್ರದೇಶಗಳಲ್ಲಿ ಕೆಲವು ಕಡೆ ಗಣತಿದಾರರರು ಮನೆಗಳಿಗೆ ಭೇಟಿ ನೀಡಿದಾಗ ಮಾಹಿತಿ ನೀಡುವುದಿಲ್ಲ. ಕೆಲವು ಅಪಾರ್ಟ್‌ಮೆಂಟ್‌ಗಳ ಒಳಗೆ ಪ್ರವೇಶಿಸಲು ಅವಕಾಶವನ್ನೇ ನೀಡುವುದಿಲ್ಲ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಬೆಂಗಳೂರಿನ ಯಲಹಂಕ, ರಾಜಾನುಕುಂಟೆ ಭಾಗದಲ್ಲಿರುವ ಕೆಲವು ಅಪಾರ್ಟ್‌ಮೆಂಟ್‌ಗಳಿಗೆ ಸಮೀಕ್ಷೆ ತೆರಳಿದ ಗಣತಿದಾರರರನ್ನು ಒಳಗೆ ಬಿಟ್ಟಿಲ್ಲ. ಸಮೀಕ್ಷೆಗೆ ಅವಕಾಶ ನೀಡುವಂತೆ ಕೆಲವು ಸಂಘಟನೆಗಳು ಆಗ್ರಹಿಸಿದರೂ ಅಪಾರ್ಟ್‌ಮೆಂಟ್ ಮಾಲೀಕರು ತಡೆದಿದ್ದಾರೆ. ಈ ಸಮೀಕ್ಷೆ, ಸರ್ಕಾರದ ಕಾರ್ಯಕ್ರಮ. ಇದಕ್ಕೆ ಅವಕಾಶ ನಿರಾಕರಿಸುವುದು ಸರಿಯಲ್ಲ. ಹೀಗಾಗಿ, ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಲಾಗಿದೆ. ಅನಿವಾರ್ಯವಾದರೆ ಕ್ರಮ ತೆಗೆದುಕೊಳ್ಳುವ ಕುರಿತು ಚರ್ಚೆ ನಡೆದಿದೆ ಎಂದೂ ಮೂಲಗಳು ಹೇಳಿವೆ.

'ವಲಸೆ ಕಾರ್ಮಿಕರನ್ನು ವಿಶೇಷ ವರ್ಗ ಎಂದು ಪರಿಗಣಿಸಿ ಆಧಾರ್, ರೇಷನ್ ಕಾರ್ಡ್ ಅಥವಾ ಜಾತಿ ಪ್ರಮಾಣಪತ್ರವನ್ನು ನೀಡಿ ಇದೇ 19ರಿಂದ 25ರವರೆಗೆ ನಡೆಯುವ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸಲು ಅವಕಾಶಗಳನ್ನು ಕಲ್ಪಿಸಲಾಗುವುದು. ಅವರು ಯಾವ ಸ್ಥಳಗಳಲ್ಲಿ ವಾಸಿಸುತ್ತಿದ್ದಾರೊ ಅದೇ ಪ್ರದೇಶಗಳಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸಲು ಅವಕಾಶ ನೀಡುವ ಬಗ್ಗೆ ಚರ್ಚಿಸಲಾಗುತ್ತಿದೆ. ಆಧಾರ್. ರೇಷನ್ ಕಾರ್ಡ್, ಜಾತಿ ಪ್ರಮಾಣಪತ್ರಗಳಿಲ್ಲದ ಅಲೆಮಾರಿ ಕುಟುಂಬಗಳನ್ನೂ ಸಮೀಕ್ಷೆಯಲ್ಲಿ ಸೇರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಮೂಲಗಳು ತಿಳಿಸಿವೆ.

ಒಳ ಮೀಸಲಾತಿಗಾಗಿ ರಾಜ್ಯದಾದ್ಯಂತ ಸಮೀಕ್ಷೆ (ಮೇ 15ರವರೆಗಿನ ಮಾಹಿತಿ)

18,79,826 ಈವರೆಗೆ ಸಮೀಕ್ಷೆಗೆ ಒಳಪಟ್ಟ ಪರಿಶಿಷ್ಟ ಜಾತಿಯ ಮನೆಗಳು

1,09,05,854 ಪರಿಶಿಷ್ಟ ಜಾತಿಯೇತರ ಮನೆಗಳು

65,171 ನಿಯೋಜನೆಗೊಂಡಿರುವ ಗಣತಿದಾರರು

62,170 ಮೊಬೈಲ್ ಆ್ಯಪ್‌ಗೆ ಲಾಗ್ ಇನ್ ಆದ ಗಣತಿದಾರರು

'ನೀತಿ ಯೋಜನೆ ಸಮಿತಿ ತ್ರೈಮಾಸಿಕ ಸಭೆ ಕಡ್ಡಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು ನಿಯಮಿತವಾಗಿ ರಾಜ್ಯ ಪ್ರವಾಸ ಕೈಗೊಂಡು, ಗ್ರಾಮ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ, ಹಿಂದುಳಿದವರಿಗೆ ಮೀಸಲಾತಿ ಸರಿಯಾಗಿ ಪಾಲನೆ ಆಗುತ್ತಿದೆಯೇ ಎಂದು ಗಮನಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಅವರಿಗೆ ಸೂಚನೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಹಾಗೂ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಜಂಟಿ ಸಭೆ ಗುರುವಾರ ನಡೆಯಿತು.

'ನಾನು ವಿಕೇಂದ್ರೀಕರಣದ ಪರ. ಅಧಿಕಾರವನ್ನು ಗ್ರಾಮ ಮಟ್ಟಕ್ಕೆ ಒಯ್ಯಬೇಕು. ಅಧಿಕಾರ ವಿಕೇಂದ್ರೀಕರಣದಲ್ಲಿ ಜನರ ಭಾಗಿ ಮುಖ್ಯ. ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡಬೇಕು' ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸಲು ಹಣಕಾಸು ಆಯೋಗದ ಅಧ್ಯಕ್ಷರಾದ ಸಿ. ನಾರಾಯಣಸ್ವಾಮಿ ವರದಿ ನೀಡಿದ್ದು, ಅದರ ಜಾರಿಗೆ ಕ್ರಮ ವಹಿಸಲಾಗುವುದು

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಕಾಲಕಾಲಕ್ಕೆ ನೀತಿ ಯೋಜನೆ ಸಮಿತಿಗಳ ಆಯ್ಕೆ ಮತ್ತು ನಿಯಮಿತವಾಗಿ ಸಭೆ ನಡೆಯುವಂತೆ ಅಧಿಕಾರಿಗಳು ಕ್ರಮ ವಹಿಸಬೇಕು. ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ನಡೆಸುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗುವುದು' ಎಂದರು.

'ಸಂವಿಧಾನದ 73ನೇ ತಿದ್ದುಪಡಿ ಅನ್ವಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಜವಾಬ್ದಾರಿ ನಕ್ಷೆಯನ್ನು ಸಿದ್ದಪಡಿಸಲು 2023-24ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಅದರಂತೆ 13 ಇಲಾಖೆಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿ ನಕ್ಷೆ ಸಿದ್ದಪಡಿಸಿದೆ. ಬಾಕಿ ಇರುವ ಇಲಾಖೆಗಳ ಜವಾಬ್ದಾರಿ ನಕ್ಷೆಯನ್ನು ಆಗಸ್ಟ್ 15ರ ಒಳಗೆ ಪೂರ್ಣಗೊಳಿಸಬೇಕು' ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

'ಬಹಳ ಹಿಂದೆ ಗ್ರಾಮ ಠಾಣಾ ಗಡಿ ನಿಗದಿಪಡಿಸಲಾಗಿದೆ. ಪ್ರಸ್ತುತ ವಿಸ್ತರಣೆ ಆಗಿರುವ ಪ್ರದೇಶದ ಪುನರ್ ಸಮೀಕ್ಷೆ ನಡೆಸಲು ಕಂದಾಯ ಮತ್ತು ಪಂಚಾಯತ್ ರಾಜ್ ಇಲಾಖೆ ಕ್ರಮ ವಹಿಸಬೇಕು. ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಮೂಲಸೌಕರ್ಯ ಅಭಿವೃದ್ಧಿಗೊಳಿಸಲು ಲ್ಯಾಂಡ್ ಬ್ಯಾಂಕ್ ಸ್ಥಾಪನೆ ಹಾಗೂ ಗ್ರಾಮ ನಕ್ಷೆ ಹೊಂದಿರದ ಗ್ರಾಮಗಳಿಗೆ ಗ್ರಾಮ ನಕ್ಷೆ ರಚನೆ ಕುರಿತು ಪ್ರಸ್ತಾವನೆ ಸಲ್ಲಿಸಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಬಿ.ಆರ್. ಪಾಟೀಲ, 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಸಭೆಯಲ್ಲಿದ್ದರು.

ಮ್ಯಾನೇಜರ್‌ಗೆ ₹3.84 ಕೋಟಿ ವಂಚನೆ

ತುಮಕೂರು: ಪ್ರತಿಷ್ಠಿತ ಕಂಪನಿಗಳ ಷೇರುಗಳನ್ನು ಮಾರಾಟ ಮಾಡುವುದಾಗಿ ನಂಬಿಸಿ ನಗರದ ಎಸ್.ಎಸ್.ಪುರಂನ ನಿವೃತ್ತ ಸಾಫ್ಟ್‌ವೇರ್ ಮ್ಯಾನೇಜರ್ ಶ್ರೀನಿವಾಸು ಬಚ್ಚು ಎಂಬುವರಿಗೆ ₹3.83 ಕೋಟಿ ವಂಚಿಸಲಾಗಿದೆ.

'ಸೈಬರ್ ಆರೋಪಿಗಳು ದಿವ್ಯಾ ವರ್ಮಾ ಎಂಬ ಹೆಸರಿನಲ್ಲಿ ಪರಿಚಯಿಸಿಕೊಂಡಿದ್ದರು. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವ ಬಗ್ಗೆ ಮಾಹಿತಿ ಹಂಚಿಕೊಂಡರು. ನಾನು 'ಟಪಾರಿಯ ಟೂಲ್ಸ್' ಕಂಪನಿಗೆ ಸಂಬಂಧಿಸಿದ ಷೇರು ಖರೀದಿಗೆ ಆಸಕ್ತಿ ತೋರಿದೆ. ಜಿನ್ ಸೇಥ್ ಎಂಬುವರು ಪ್ರತಿ ದಿನ ಮೆಸೇಜ್ ಮಾಡಿ ಹೂಡಿಕೆಯ ಆಮಿಷ ಒಡ್ಡಿದ್ದರು. ಅದರಂತೆ ಹಂತ ಹಂತವಾಗಿ ₹3,83,89,800 ವರ್ಗಾಯಿಸಿದ್ದೆ' ಎಂದು ಶ್ರೀನಿವಾಸು ಸೈಬರ್ ಠಾಣೆಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಪ್ರತಿಷ್ಠಿತ ಕಂಪನಿಗಳ ಷೇರು ಖರೀದಿಸಲು ಹಣವಿರಲಿಲ್ಲ. ಈ ಮೊದಲೇ ಇದ್ದ ವಿವಿಧ ಕಂಪನಿಗಳ ಷೇರುಗಳನ್ನು ಮಾರಾಟ ಮಾಡಿ, ದಿವ್ಯಾ ವರ್ಮಾ ನೀಡಿದ ವಿವಿಧ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದೆ. ಹಣ ವಿತ್ ಡ್ರಾ ಮಾಡಿಕೊಳ್ಳಲು ಮುಂದಾದಾಗ ವಂಚನೆಗೆ ಒಳಗಾಗಿರುವುದು ತಿಳಿಯಿತು' ಎಂದು ತಿಳಿಸಿದ್ದಾರೆ.

ಹೆಬ್ಬಾವು ರಕ್ಷಣೆ

ಉತ್ತರ ಕನ್ನಡ ಜಿಲ್ಲೆ ದಾಂಡೇಲಿ ತಾಲ್ಲೂಕಿನ ಅಂಬಿಕಾನಗರದ ಕೆಪಿಸಿ ಕಾಲೊನಿಯ ಮನೆಯೊಂದರ ಬಳಿ ಬುಧವಾರ ರಾತ್ರಿ ಪತ್ತೆಯಾದ 13 ಅಡಿ ಉದ್ದದ ಬೃಹತ್ ಗಾತ್ರದ ಹೆಬ್ಬಾವನ್ನು ಉರಗ ರಕ್ಷಕರಾದ ಅಸ್ಲಾಂ ಮತ್ತು ವಿನೋದ ಅವರು ಸೆರೆಹಿಡಿದು, ಕಾಡಿಗೆ ಬಿಟ್ಟರು

ಅಮೃತ ವಿಶ್ವ ವಿದ್ಯಾಪೀಠಂ AEEE 2025 ಫಲಿತಾಂಶ ಪ್ರಕಟ

ಚೆನ್ನೈ: ದೇಶದ ಉನ್ನತ ವಿಶ್ವ ವಿದ್ಯಾಲಯಗಳಲ್ಲಿ ಸ್ಥಾನ ಪಡೆದಿರುವ ಪ್ರತಿಷ್ಠಿತ ವಿದ್ಯಾಸಂಸ್ಥೆ 'ಅಮೃತ ವಿಶ್ವ ವಿದ್ಯಾಪೀಠಂ' ಮೇ 16 ರಂದು ಅಮೃತ ಪ್ರವೇಶ ಪರೀಕ್ಷೆ– ಎಂಜಿನಿಯರಿಂಗ್ (AEEE 2025)ನ ರ‍್ಯಾಂಕ್‌ಗಳನ್ನು ಪ್ರಕಟಿಸಲಿದೆ.

2025ರ ಎಇಇಇ ಪರೀಕ್ಷೆಯಲ್ಲಿ ದೇಶ, ವಿದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಕಾಂಕ್ಷಿಗಳು ಭಾಗವಹಿಸಿದ್ದದ್ದು ವಿಶೇಷ. ಅಮರಾವತಿ, ಅಮೃತಪುರಿ, ಬೆಂಗಳೂರು, ಚೆನ್ನೈ, ಕೊಯಮತ್ತೂರು, ದೆಹಲಿ ಎನ್‌ಸಿಆರ್ ಮತ್ತು ನಾಗರಕೋಯಿಲ್‌ನ ವಿಶ್ವವಿದ್ಯಾಲಯದ ಕ್ಯಾಂಪಸ್‌ಗಳಲ್ಲಿ ನೀಡಲಾಗುವ ಬಿ.ಟೆಕ್. ಪ್ರೋಗ್ರಾಂಗೆ ಪ್ರವೇಶ ಪಡೆಯಲು ಆಕಾಂಕ್ಷಿ ಅಭ್ಯರ್ಥಿಗಳು ಸ್ಪರ್ಧಿಸಿದ್ದರು ಎಂದು ಅಮೃತ ವಿಶ್ವ ವಿದ್ಯಾಪೀಠಂ ಪ್ರಕಟಣೆಯಲ್ಲಿ ಹೇಳಿದೆ.

2025ರ ಕೇಂದ್ರೀಕೃತ ಸೀಟು ಹಂಚಿಕೆ ಪ್ರಕ್ರಿಯೆ (CSAP)ಯು ಅಧಿಕೃತವಾಗಿ JEE ಆಧಾರಿತ ಅರ್ಜಿದಾರರಿಗೆ ಮತ್ತು AEEE 2025 ಭಾಗವಹಿಸುವವರಿಗೆ ಮಾತ್ರ ಆರಂಭವಾಗಿದೆ. ಬಿ.ಟೆಕ್ ಶಾಖೆಗಳಿಗೆ ಹಾಗೂ ಕ್ಯಾಂಪಸ್‌ಗಳಿಗೆ ಪ್ರವೇಶ ಪಡೆಯಲು ಅರ್ಹತೆ ಪಡೆದ ಅಭ್ಯರ್ಥಿಗಳು ಎಇಇಇಯಲ್ಲಿ ಗಳಿಸಿದ ಶ್ರೇಯಾಂಕ, ಜೆಇಇ ಮೇನ್ಸ್ ಅಂಕಗಳು ಮತ್ತು ಶೈಕ್ಷಣಿಕ ಅದ್ಯತೆಗಳ ಮೇಲೆ ಅವಲಂಬಿತವಾಗಿರುತ್ತದೆ. ಅಂತಹ ಅಭ್ಯರ್ಥಿಗಳು ಆನ್‌ಲೈನ್ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ನೋಂದಾಯಿಸಿಕೊಳ್ಳಬಹುದು ಹಾಗೂ ಭಾಗವಹಿಸಬಹುದು.

ಅಮೃತ ವಿಶ್ವವಿದ್ಯಾಲಯ ಗಟ್ಟಿಯಾದ ಕೈಗಾರಿಕಾ ಸಂಬಂಧಗಳನ್ನು, ವಿಶ್ವ ಪ್ರಸಿದ್ಧ ಅಧ್ಯಾಪಕರನ್ನು, ಜಾಗತಿಕ ಮಾನ್ಯತೆಯನ್ನು ಹಾಗೂ ಉತ್ತಮ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಎಲ್ಲಾ ರೀತಿ ಸೌಕರ್ಯಗಳ ಸಹಕಾರದಿಂದ ಆಧುನಿಕ ಎಂಜಿನಿಯರಿಂಗ್ ಶಿಕ್ಷಣ ನೀಡುವುದನ್ನು ಮುಂದುವರೆಸಿಕೊಂಡು ಬಂದಿರುವ ಅಮೃತ ವಿವಿ ಮೌಲ್ಯಾಧಾರಿತ ಶಿಕ್ಷಣ ಮತ್ತು ಸಮಗ್ರ ಅಭಿವೃದ್ಧಿಯ ಮೇಲೆ ಹೆಚ್ಚು ಒತ್ತು ನೀಡುತ್ತಲಿದೆ. ಆ ಮೂಲಕ ಬಿ.ಟೆಕ್. ವಿದ್ಯಾರ್ಥಿಗಳನ್ನು ವೃತ್ತಿಪರರನ್ನಾಗಿ ಸಿದ್ಧಪಡಿಸುತ್ತಲಿದೆ.

ಅಭ್ಯರ್ಥಿಗಳು ಸೀಟು ಹಂಚಿಕೆ ವೇಳಾಪಟ್ಟಿಗಳು, ದಾಖಲೆ ಪರಿಶೀಲನೆ ಮತ್ತು ಶುಲ್ಕ ಪಾವತಿ ಸೂಚನೆ ಇನ್ನಿತರ ಸಂಗತಿಗಳಿಗೆ ಅಧಿಕೃತ ಬಿ.ಟೆಕ್. ಪ್ರೋಗ್ರಾಂ ಪೋರ್ಟಲ್‌ಗೆ ಭೇಟಿ ನೀಡಲು ಅಮೃತ ಪೀಠಂ ಹೇಳಿದೆ.

AMRITA VISHWA VIDYAPEETHAM

2025ರ CSAP ಕೌನ್ಸೆಲಿಂಗ್ ಪ್ರಕ್ರಿಯೆ ಪ್ರಾರಂಭ

ಪ್ರಮುಖ ಮುಖ್ಯಾಂಶಗಳು

- CSAP 2025 ನೋಂದಣಿ ಮತ್ತು ಚಾಯ್ಸ್ ಫಿಲ್ಲಿಂಗ್ ಪ್ರಕ್ರಿಯೆ ಅಧಿಕೃತ ಪೋರ್ಟಲ್ https://aeee.amrita.edu ಮೂಲಕ ತೆರೆಯಲಾಗಿದೆ
- ತನ್ನ ಎಲ್ಲ 7 ವಿಶ್ವ ದರ್ಜೆಯ ಕ್ಯಾಂಪಸ್‌ಗಳಲ್ಲಿ ಅಭ್ಯರ್ಥಿಗಳು ಎಂಜಿನಿಯರಿಂಗ್ ಶಾಖೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು.
- ಸೀಟು ಹಂಚಿಕೆ ಪ್ರಕ್ರಿಯೆಯನ್ನು ಪಾರದರ್ಶಕತೆಯಿಂದ ಬಹು ಸುತ್ತಿನಲ್ಲಿ ನಡೆಸಲಾಗುವುದು.
- AEEE 2025 ರ‍್ಯಾಂಕ್ ಹೊಂದಿರುವವರು ಮತ್ತು JEE ಮೇನ್ಸ್ 2025ರ ಅರ್ಜಿದಾರರು ಮಾತ್ರ CSAP ನಲ್ಲಿ ಭಾಗವಹಿಸಲು ಅರ್ಹರು.
- ಅಮೃತ ವಿಶ್ವ ವಿದ್ಯಾಪೀಠದಲ್ಲಿ ಬಿ.ಟೆಕ್‌ನ ಎಲ್ಲಾ ಶಾಖೆಗಳಿಗೆ ಶೇ 75 ರವರೆಗೆ ಶುಲ್ಕ ವಿನಾಯಿತಿ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಭೀಮಗಢದಿಂದ 27 ಕುಟುಂಬ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವನ್ಯಜೀವಿ ದಾಳಿಯ ಭೀತಿಯೊಂದಿಗೆ ನಿತ್ಯ ಬದುಕು ಸಾಗಿಸುತ್ತಿರುವ ಬೆಳಗಾವಿ ಜಿಲ್ಲೆ ಭೀಮಗಢ ವನ್ಯಜೀವಿ ಧಾಮದ ಒಳಗೆ ಇದ್ದ ತಾಳೆವಾಡಿಯ ಗವಳಿ ಗ್ರಾಮದ 27 ಕುಟುಂಬಗಳು ಸ್ವ ಇಚ್ಛೆಯಿಂದ ಸ್ಥಳಾಂತರಕ್ಕೆ ಸಮ್ಮತಿಸಿದ್ದಾರೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಸ್ವಯಂಪ್ರೇರಿತರಾಗಿ ಸಮಾಜದ ಮುಖ್ಯ ವಾಹಿನಿ ಸೇರಲು ಬಯಸಿ ಬಂದಿರುವ 27 ಕುಟುಂಬಗಳಿಗೆ ಮೇ 17ರಂದು ಮೊದಲ ಹಂತದಲ್ಲಿ ತಲಾ ₹10 ಲಕ್ಷ ಚೆಕ್ ವಿತರಿಸಲಾಗುವುದು. ಕುಟುಂಬಗಳು ಸ್ಥಳಾಂತರ ಕುರಿತು ಅಧಿಕಾರಿಗಳು ಪರಿಶೀಲನೆ ನಡೆಸಿದ ಬಳಿಕ ಪ್ರತಿ ಕುಟುಂಬದ ಘಟಕಕ್ಕೆ ಉಳಿದ ₹5 ಲಕ್ಷ ಚೆಕ್ ವಿತರಿಸಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ವಿಧಾನಮಂಡಲ ಅಧಿವೇಶನ ನಡೆಯುತ್ತಿದ್ದ ವೇಳೆ, ಈ ಪ್ರದೇಶಕ್ಕೆ ಭೇಟಿ ನೀಡಿ ಅರಣ್ಯವಾಸಿ ಗಳೊಂದಿಗೆ ಸಂವಾದ ನಡೆಸಿದಾಗ ಸ್ವಯಂ ಪ್ರೇರಿತವಾಗಿ ಕಾಡಿನಿಂದ ಹೊರಬರುವ ಇಂಗಿತ ವ್ಯಕ್ತಪಡಿಸಿದ್ದರು. ನಂತರ ಅವರ ಸ್ಥಳಾಂತರಕ್ಕೆ ಗ್ರಾಮಸಭೆಯಲ್ಲಿ ನಿರ್ಣಯ ಇತ್ಯಾದಿ ಪ್ರಕ್ರಿಯೆಯನ್ನು ಅರಣ್ಯ ಅಧಿಕಾರಿಗಳು ನಡೆಸಿದ್ದರು ಎಂದಿದ್ದಾರೆ.

ಆನಂದ್ ಗುರೂಜಿಗೆ ಕೊಲೆ ಬೆದರಿಕೆ ಆರೋಪ • ಪೊಲೀಸರಿಂದ ತನಿಖೆ

ಬ್ಲ್ಯಾಕ್‌ಮೇಲ್: ದಿವ್ಯಾ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಯೋತಿಷಿ ಆನಂದ್ ಗುರೂಜಿಗೆ ಬ್ಲ್ಯಾಕ್‌ಮೇಲ್ ಹಾಗೂ ಕೊಲೆ ಬೆದರಿಕೆ ಹಾಕಿದ್ದ ಆರೋಪದ ಅಡಿ ಪತ್ರಕರ್ತೆ ದಿವ್ಯಾ ವಸಂತ್ ಹಾಗೂ ಯುಟ್ಯೂಬ್ ಚಾನಲ್‌ನ ಕೃಷ್ಣಮೂರ್ತಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನವರತ್ನ ಅಗ್ರಹಾರ ಸಾದಹಳ್ಳಿ ಗೇಟ್‌ನಲ್ಲಿ ಇರುವ ಮಹರ್ಷಿ ಮಂದಿರದ ಆನಂದ್ ಗುರೂಜಿ ನೀಡಿರುವ ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ ಕಾಯ್ದೆ 2008 ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 126(2), 351(3), 352 ಅಡಿ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಆನಂದ್ ಗುರೂಜಿ

ಕೃಷ್ಣಮೂರ್ತಿ ಅವರನ್ನು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಿದ್ದು, ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದು ಕೃಷ್ಣಮೂರ್ತಿ ಬಿಡುಗಡೆ ಆಗಿದ್ದಾರೆ. ದಿವ್ಯಾ ಪಾತ್ರದ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು

ಎಫ್‌ಐಆರ್‌ನಲ್ಲಿ ಏನಿದೆ?: 'ಸಾದಹಳ್ಳಿ ಗೇಟ್ ಬಳಿ ಕಳೆದ ಎಂಟು ವರ್ಷಗಳಿಂದ ವಾಸವಿದ್ದು, ಸಾರ್ವಜನಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿ ಆಗುತ್ತಿದ್ದೇನೆ. ಜ್ಯೋತಿಷ್ಯ ಹಾಗೂ ವಾಸ್ತುಶಿಲ್ಪದ ಕುರಿತು ಪುಸ್ತಕಗಳನ್ನೂ ಬರೆದಿದ್ದೇನೆ. ಖಾಸಗಿ ವಾಹಿನಿಯೊಂದರ ಜ್ಯೋತಿಷ್ಯ ಕಾರ್ಯಕ್ರಮದಲ್ಲೂ ಅತಿಥಿಯಾಗಿ ಪಾಲ್ಗೊಳ್ಳುತ್ತಿದ್ದೇನೆ. ಕಳೆದ ಆಗಸ್ಟ್ 26ರಂದು ಕಾರ್ಯಕ್ರಮ ಮುಗಿಸಿ ಆಶ್ರಮಕ್ಕೆ ಬರುತ್ತಿದ್ದಾಗ ಅಪರಿಚಿತರು ಕಾರು ಅಡ್ಡಗಟ್ಟಿ ಏಕವಚನದಲ್ಲಿ ನಿಂದಿಸಿ, ದೌರ್ಜನ್ಯ ಎಸಗಿದ್ದರು' ಎಂದು ಗುರೂಜಿ ದೂರು ನೀಡಿದ್ದರು.

ಹಣಕ್ಕೆ ಬೇಡಿಕೆ: ಅಶ್ಲೀಲ ವಿಡಿಯೊಗಳಿದ್ದು, ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುವುದಾಗಿ ಬೆದರಿಸಿ ಅಪರಿಚಿತರು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಹಣ ಕೊಡಲು ಒಪ್ಪದೇ ಇರುವ ಕಾರಣಕ್ಕೆ ಕೊಲೆ ಬೆದರಿಕೆ ಹಾಕಿದ್ದರು. ಅದಾದ ಕೆಲವು ದಿನಗಳ ಬಳಿಕ ಕೃಷ್ಣಮೂರ್ತಿ ಎಂಬಾತ ಆಶ್ರಮಕ್ಕೆ ಬಂದು ವಿಡಿಯೊಗಳನ್ನು ಚಿತ್ರೀಕರಿಸಿದ್ದರು. ಅಲ್ಲದೇ ಯುಟ್ಯೂಬ್ ಹಾಗೂ ಸಾಮ್ರಾಟ್ ಟಿ.ವಿಯಲ್ಲಿ ವಿಡಿಯೊ ಪ್ರಸಾರ ಮಾಡಿ ಮಾನಸಿಕ ಹಿಂಸೆ ನೀಡಿದ್ದರು. ವಿಡಿಯೊ ಪ್ರಸಾರ ಮಾಡಬಾರದೆಂದು ನ್ಯಾಯಾಲಯದಿಂದ ತಡೆಯಾಜ್ಞೆ ತರಲಾಗಿತ್ತು. ಅದಾದ ಮೇಲೂ ಕಳೆದ ಏಪ್ರಿಲ್ 9ರಂದು ಕೃಷ್ಣಮೂರ್ತಿ ಹಾಗೂ ದಿವ್ಯಾ ವಸಂತ್ ಅವರು ನ್ಯಾಯಾಲಯದ ಆದೇಶ ಉಲ್ಲಂಘಿಸಿ ಸಾಮ್ರಾಟ್ ಟಿ.ವಿ ಹಾಗೂ ಮುಖವಾಡ ಒ ಲೈವ್ ಎಂಬ ವಾಹಿನಿಯಲ್ಲಿ ಅಶ್ಲೀಲ ಪದ ಬಳಸಿ ವಿಡಿಯೊ ಪ್ರಸಾರ ಮಾಡಿದ್ದರು. ಮೂರನೇ ವ್ಯಕ್ತಿಯಿಂದ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಏಪ್ರಿಲ್ 17ರಂದು ನ್ಯಾಯಾಲಯವು ಮತ್ತೆ ತಡೆಯಾಜ್ಞೆ ನೀಡಿತ್ತು ನಂತರವೂ ಕೃಷ್ಣಮೂರ್ತಿ ಯುಟ್ಯೂಬ್‌ನಲ್ಲಿ ಇನ್ನೊಂದು ವಿಡಿಯೊವನ್ನು ಪ್ರಸಾರ ಮಾಡಿದ್ದರು' ಎಂದು ಅವರು ಉಲ್ಲೇಖಿಸಿದ್ದಾರೆ.

ಈ ಹಿಂದೆಯೂ ದಿವ್ಯಾ ಬಂಧನ

ಇಂದಿರಾನಗರ ಸೇರಿದಂತೆ ಹಲವು ಕಡೆಯ ಸ್ಪಾಗಳಲ್ಲಿ ಸುಲಿಗೆ ನಡೆಸಿದ್ದ ಆರೋಪದಡಿ ಪತ್ರಕರ್ತೆ ದಿವ್ಯಾ ವಸಂತ ಅವರನ್ನು ಜೆ.ಬಿ.ನಗರ ಠಾಣೆ ಪೊಲೀಸರು 2024ರ ಜುಲೈ 11ರಂದು ಕೇರಳದಲ್ಲಿ ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುತ್ತಿದ್ದ ದಿವ್ಯಾ ಒಂದು ವರ್ಷದ ಹಿಂದೆ ಕೆಲಸ ಬಿಟ್ಟಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ಇವರು ಸಕ್ರಿಯವಾಗಿದ್ದಾರೆ. ಸುದ್ದಿ ವಾಹಿನಿಯಲ್ಲಿ ಕಾರ್ಯಕ್ರಮ ನಿರೂಪಣೆ ನಡೆಸುತ್ತಿದ್ದ ವೇಳೆ 'ರಾಜ್ಯಕ್ಕೆ ಖುಷಿ ಕೊಡುವ ಸುದ್ದಿ' ಎಂದು ದಿವ್ಯಾ ಪ್ರಸ್ತಾಪಿಸಿದ್ದ ಮಾತು ಸಾಮಾಜಿಕ ಮಾಧ್ಯಮದಲ್ಲಿ ಸದ್ದು ಮಾಡಿತ್ತು.



ದಿವ್ಯಾ

ಶುಕ್ರವಾರ, ಮೇ 16, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 135 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಗನಯಾನ

ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಮೂವರ ತಂಡ ಜೂನ್ 8ರಂದು ಸಂಜೆ 6:41ಕ್ಕೆ (ಭಾರತೀಯ ಕಾಲಮಾನ) ಅಂತರರಾಷ್ಟ್ರೀಯ ಬಾಹ್ಯಕಾಶ ಕೇಂದ್ರಕ್ಕೆ ಫ್ಲಾರಿಡಾದಲ್ಲಿನ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಪಯಣಿಸಲಿದ್ದಾರೆ ಎಂದು 'ಆಕ್ಸಿಯಂ' ಮತ್ತು ನಾಸಾ ಘೋಷಿಸಿದೆ.

ಆಳ-ಅಗಲ
ಭಾರತ-ಪಾಕ್ ಸಂಘರ್ಷ 'ದಿ ನ್ಯೂಯಾರ್ಕ್ ಟೈಮ್ಸ್' ಕಂಡಂತೆ...
'ಬಹುಪತ್ನಿತ್ವದ ಅವಕಾಶ ವ್ಯಾಪಕ ದುರ್ಬಳಕೆ' 5
ಭಯೋತ್ಪಾದನೆ ನಿಲ್ಲುವವರೆಗೂ ಅಮಾನತು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,530	25,062	₹98,200 (ಬೆಂಗಳೂರು)	₹99,900 (ಬೆಂಗಳೂರು)	85.50

2.5 ಲಕ್ಷ ಹೆಣ್ಣುಮಕ್ಕಳಿಗೆ ತಲಾ ₹30 ಸಾವಿರ ವಿದ್ಯಾರ್ಥಿ ವೇತನ

ಕರ್ನಾಟಕದಲ್ಲಿ ಜಾರಿಗೆ ತಂದಿರುವ ಮೂರು ಪರೀಕ್ಷಾ ಪದ್ಧತಿ, ವೆಬ್‌ಕಾಸ್ಟಿಂಗ್ ದೇಶಕ್ಕೇ ಮಾದರಿ. ಪ್ರತಿಭಾವಂತರನ್ನು ರೂಪಿಸಲು, ಪರೀಕ್ಷಾ ಭಯ ಹೋಗಲಾಡಿಸಲು ಸಹಕಾರಿಯಾಗಿವೆ

ಅನುರಾಗ್ ಬೆಹರ್, ಸಿಇಒ, ಅಜೀಂ ಪ್ರೇಮ್‌ಜಿ ಫೌಂಡೇಷನ್

₹750 ಕೋಟಿ ಮೀಸಲಿಟ್ಟ ವಾರ್ಷಿಕ ಮೊತ್ತ | **₹2,250 ಕೋಟಿ** ಮೂರು ವರ್ಷಗಳ ನೆರವು | **2.5 ಲಕ್ಷ** ನೆರವು ಪಡೆಯುವ ವಿದ್ಯಾರ್ಥಿನಿಯರು | **₹30 ಸಾವಿರ** ಒಬ್ಬರಿಗೆ ನೀಡುವ ವಾರ್ಷಿಕ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜೀಂ ಪ್ರೇಮ್‌ಜಿ ಫೌಂಡೇಷನ್ 2025–26ನೇ ಶೈಕ್ಷಣಿಕ ಸಾಲಿನಲ್ಲಿ 2.5 ಲಕ್ಷ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ನಿರ್ಧರಿಸಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದ ಫೌಂಡೇಷನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನುರಾಗ್ ಬೆಹರ್, 2024-25ನೇ ಶೈಕ್ಷಣಿಕ ಸಾಲಿನಲ್ಲಿ ಮಧ್ಯಪ್ರದೇಶ, ಉತ್ತರಪ್ರದೇಶ, ರಾಜಸ್ಥಾನ ಮತ್ತು ಜಾರ್ಖಂಡ್‌ನ 25 ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಗಿತ್ತು. ಈ ಬಾರಿ ಕರ್ನಾಟಕ ಸೇರಿದಂತೆ 18 ರಾಜ್ಯಗಳಿಗೆ ವಿಸ್ತರಿಸಲಾಗಿದೆ. 10 ಮತ್ತು 12ನೇ ತರಗತಿ ಉತ್ತೀರ್ಣರಾಗಿ ಮುಂದಿನ ಹಂತದ ಶಿಕ್ಷಣ ಪಡೆಯುವ ಹೆಣ್ಣು ಮಕ್ಕಳಿಗೆ ನೆರವು ಸಿಗಲಿದೆ ಎಂದರು.

ನಗರ ಹಾಗೂ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲಾ-ಕಾಲೇಜು, ಬಿಬಿಎಂಪಿ ಸೇರಿದಂತೆ ಸ್ಥಳೀಯ ಸಂಸ್ಥೆಗಳು ನಡೆಸುವ ಶಾಲೆಗಳಲ್ಲಿ ಕಲಿತವರು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದು. ಸರ್ಕಾರಿ, ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು ನಡೆಸುವ ಡಿಪ್ಲೊಮಾ, ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಪ್ರತಿಭಾವಂತರಿಗೆ ಸೌಲಭ್ಯ ಸಿಗಲಿದೆ. ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಯಲ್ಲಿರುವ ಕೆಲ ಖಾಸಗಿ ಸಂಸ್ಥೆಗಳ ವಿದ್ಯಾರ್ಥಿನಿಯರನ್ನೂ ಪರಿಗಣಿಸಲಾಗುವುದು. ವಾರ್ಷಿಕ ₹750 ಕೋಟಿಯಂತೆ ಮೂರು ವರ್ಷಗಳಿಗೆ ₹2,250 ಕೋಟಿ ಮೀಸಲಿಡಲಾಗಿದೆ. ಪ್ರತಿ ವಿದ್ಯಾರ್ಥಿನಿಗೂ ಅವರ ಕೋರ್ಸ್ ಮುಗಿಯುವವರೆಗೂ ಪ್ರತಿ ವರ್ಷ ₹30 ಸಾವಿರ ನೀಡಲಾಗುವುದು. ಈ ಹಣವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಷಕ್ಕೆ ಎರಡು ಬಾರಿ ಜಮೆ ಮಾಡಲಾಗುವುದು ಎಂದು ಹೇಳಿದರು.

ಹೆಣ್ಣುಮಕ್ಕಳು ಶಿಕ್ಷಣ ಪಡೆಯುವಲ್ಲೂ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆ ಎದುರಿಸುತ್ತಿದ್ದಾರೆ. ತಮ್ಮ ಜೀವನದ ಹಾದಿಯಲ್ಲಿ ಸ್ವಾವಲಂಬನೆ ಸಾಧಿಸಲು ಉನ್ನತ ಶಿಕ್ಷಣ ಪಡೆಯಲೇಬೇಕು. ಪ್ರಯಾಣ ವೆಚ್ಚ, ಬಟ್ಟೆ, ಪುಸ್ತಕ ಸೇರಿದಂತೆ ಕೆಲ ವೆಚ್ಚಗಳು ಭಾರ ಎನಿಸಬಹುದು. ಅದಕ್ಕಾಗಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ನೆರವಾಗುತ್ತಿದೆ ಎಂದರು.

ಯಾರಿಗೆ ಸಿಗಲಿದೆ ಸೌಲಭ್ಯ

- ಸರ್ಕಾರಿ ಶಾಲಾ, ಕಾಲೇಜುಗಳಲ್ಲಿ ಕಲಿತವರು
- ಡಿಪ್ಲೊಮಾಕ್ಕೆ ಸೇರಿದ ವಿದ್ಯಾರ್ಥಿನಿಯರು
- ಎಂಜಿನಿಯರಿಂಗ್, ವೈದ್ಯಕೀಯ ವಿದ್ಯಾರ್ಥಿನಿಯರು
- ಇತರೆ ಪದವಿ ಕೋರ್ಸ್‌ಗಳ ವಿದ್ಯಾರ್ಥಿನಿಯರು

ಸೆಪ್ಟೆಂಬರ್‌ಗೆ ಅರ್ಜಿ ಸಲ್ಲಿಕೆ

2025–26ನೇ ಸಾಲಿಗೆ ಡಿಪ್ಲೊಮಾ, ಎಂಜನಿಯರಿಂಗ್ ಸೇರಿದಂತೆ ವಿವಿಧ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರು ಸೆಪ್ಟೆಂಬರ್ 1ರಿಂದ ಅರ್ಜಿ ಸಲ್ಲಿಸಬಹುದು.

ವಿವಿಧ ಮಾಧ್ಯಮಗಳಲ್ಲಿ ಈ ಕುರಿತು ಮಾಹಿತಿ ನೀಡಲಾಗುವುದು. ಅಜೀಂ ಪ್ರೇಮ್‌ಜಿ ಫೌಂಡೇಷನ್ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಕೆಯ ಲಿಂಕ್ ಬಿಡುಗಡೆ ಮಾಡಲಾಗುವುದು. ಅಂಕಗಳ ಅರ್ಹತೆಯ ಆಧಾರದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು ಎಂದು ಅನುರಾಗ್ ಬೆಹರ್ ಮಾಹಿತಿ ನೀಡಿದರು.

ಆ್ಯಪಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಟಿಮ್‌ಗೆ ಟ್ರಂಪ್ ಮನವಿ • ಭಾರತದಲ್ಲಿ ತಲ್ಲಣ

'ಭಾರತದಲ್ಲಿ ಐಫೋನ್ ತಯಾರಿಸಬೇಡಿ'

ನವದೆಹಲಿ/ದೋಹಾ: 'ನೀವು ಭಾರತದಲ್ಲಿ ಐಫೋನ್ ತಯಾರಿಸಬೇಡಿ. ಅಲ್ಲಿ ತಯಾರಿಸುವುದು ನನಗೆ ಇಷ್ಟವಿಲ್ಲ. ನೀವು ನಮ್ಮ ದೇಶಕ್ಕೆ ಬನ್ನಿ ಎಂದು ಆ್ಯಪಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಟಿಮ್ ಕುಕ್ ಅವರಿಗೆ ಹೇಳಿದ್ದೇನೆ. ಅವರು ನಮ್ಮ ದೇಶದಲ್ಲಿ ಐಫೋನ್ ತಯಾರಿಕೆ ಮಾಡಲು ಒಪ್ಪಿಕೊಂಡಿದ್ದಾರೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ದೋಹಾದಲ್ಲಿ ಗುರುವಾರ ಹೇಳಿದ್ದಾರೆ. ಇದು ಭಾರತದಲ್ಲಿ ತಲ್ಲಣ ಸೃಷ್ಟಿಸಿದೆ. ಭಾರತ ಸರ್ಕಾರದ ಅಧಿಕಾರಿಗಳು ಆ್ಯಪಲ್ ಕಂಪನಿಯವರ ಬಳಿ ಮಾತನಾಡಿದ್ದಾರೆ ಎಂದು ಮೂಲಗಳು ಹೇಳಿವೆ. ಆದರೆ, ಈ ಬಗ್ಗೆ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಭಾರತದಲ್ಲಿಯೇ ತಯಾರಿಸಲಾದ ಐಫೋನ್‌ಗಳನ್ನು ದಾಖಲೆ ಮಟ್ಟದಲ್ಲಿ ಇದೇ ಮಾರ್ಚ್‌ನಲ್ಲಿ ಅಮೆರಿಕಕ್ಕೆ ರಫ್ತು ಮಾಡಲಾಗಿದೆ. 'ಅಮೆರಿಕದಲ್ಲಿ ಮಾರಾಟ ಮಾಡುವ ಐಫೋನ್‌ಗಳನ್ನು ಭಾರತದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಕೆ ಮಾಡಲಾಗುವುದು' ಎಂದು ಟಿಮ್ ಕುಕ್ ಅವರು ಇದೇ ತಿಂಗಳಲ್ಲಿ ಘೋಷಿಸಿದ್ದರು.

4 ಕೋಟಿ ಭಾರತದಲ್ಲಿ ಪ್ರತಿ ವರ್ಷ ತಯಾರಾಗುವ ಐಫೋನ್‌ಗಳ ಸಂಖ್ಯೆ (ಇದು ಆ್ಯಪಲ್ ಕಂಪನಿಯ ಒಟ್ಟು ಐಫೋನ್ ತಯಾರಿಕೆಯಲ್ಲಿ ಶೇ 15ರಷ್ಟಾಗುತ್ತದೆ)

₹1.5 ಲಕ್ಷ ಕೋಟಿ 2024–25ನೇ ಆರ್ಥಿಕ ವರ್ಷದಲ್ಲಿ ಭಾರತ ರಫ್ತು ಮಾಡಿದ ಐಫೋನ್‌ಗಳ ಮೌಲ್ಯ

₹17 ಸಾವಿರ ಕೋಟಿ 2025ರ ಮಾರ್ಚ್ 30ಗಳಲ್ಲಿ ಭಾರತವು ರಫ್ತು ಮಾಡಿದ ಐಫೋನ್‌ಗಳ ಮೌಲ್ಯ

2 ಲಕ್ಷ ಆ್ಯಪಲ್ ಕಂಪನಿಯು ಭಾರತದಲ್ಲಿ ಸೃಷ್ಟಿಸಿರುವ ಉದ್ಯೋಗಗಳ ಸಂಖ್ಯೆ

ಆಧಾರ: ಪಿಟಿಐ

'ಅವರದ್ದು ಅವರು ನೋಡಿಕೊಳ್ಳುತ್ತಾರೆ'

ಟಿಮ್, ನೀವು ನನ್ನ ಸ್ನೇಹಿತ. ನೀವು ಅಮೆರಿಕದಲ್ಲಿ 500 ಬಿಲಿಯನ್ ಡಾಲರ್‌ನಷ್ಟು (ಸುಮಾರು ₹43 ಲಕ್ಷ ಕೋಟಿ) ಹೂಡಿಕೆ ಮಾಡಲಿದ್ದೀರಿ. ಆದರೆ, ನಾನು ಈಗಷ್ಟೇ ಕೇಳಲ್ಪಟ್ಟೆ. ನೀವು ಭಾರತದಲ್ಲಿ ಸಾಕಷ್ಟು ಹೂಡಿಕೆ ಮಾಡಲಿದ್ದೀರಿ ಎಂದು. ಭಾರತದಲ್ಲಿ ನೀವು ಐಫೋನ್ ತಯಾರಿಕೆ ಮಾಡುವುದು ನನಗೆ ಇಷ್ಟವಿಲ್ಲ. ಭಾರತದಲ್ಲಿ ತಯಾರಾಗುವ ಐಫೋನ್‌ಗಳು ಅಮೆರಿಕದಲ್ಲಿ ಮಾರಾಟವಾಗುವುದು ನಿಲ್ಲಬೇಕು. ಅವರದ್ದು ಅವರು ಚೆನ್ನಾಗಿಯೇ ನೋಡಿಕೊಳ್ಳುತ್ತಾರೆ. ಅದು ಭಾರಿ ಸುಂಕ ವಿಧಿಸುವ ದೇಶ. ಆ ದೇಶದಲ್ಲಿ ವ್ಯಾಪಾರ ಮಾಡಲು ಸಾಧ್ಯವಿಲ್ಲ. ಚೀನಾದವರು ಇಷ್ಟು ವರ್ಷಗಳಲ್ಲಿ ನಿಮಗೆ ಮಾಡಿಕೊಟ್ಟ ಎಲ್ಲ ಅನುಕೂಲಗಳನ್ನೂ ನಾವು ಮಾಡಿಕೊಡುತ್ತೇವೆ. ನೀವು ನಮ್ಮ ದೇಶದಲ್ಲಿ ಐಫೋನ್ ತಯಾರಿಕೆ ಮಾಡಿ.

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಶೂನ್ಯ ಸುಂಕಕ್ಕೆ ಭಾರತ ಒಪ್ಪಿಗೆ: ಟ್ರಂಪ್

'ಅಮೆರಿಕದಿಂದ ಪೂರೈಕೆಯಾಗುವ ಬಹುತೇಕ ಸರಕುಗಳಿಗೆ ಸುಂಕ ವಿನಾಯಿತಿ ನೀಡುವುದಾಗಿ ಭಾರತವು ಹೇಳಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ದೋಹಾದಲ್ಲಿ ಗುರುವಾರ ನಡೆದ ವ್ಯಾಪಾರ ಕುರಿತ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ಅವರು, 'ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಭಾಗವಾಗಿ ಅವರು (ಭಾರತ) ನಮ್ಮ ಎಲ್ಲಾ ಸರಕುಗಳಿಗೂ ಸುಂಕ ವಿನಾಯಿತಿ ನೀಡುವುದಕ್ಕೆ ಒಪ್ಪಿಗೆ ನೀಡಿದ್ದಾರೆ, ಆದರೆ ಅಧಿಕೃತವಾಗಿ ಈವರೆಗೆ ಏನನ್ನೂ ಘೋಷಿಸಿಲ್ಲ. ಇಡೀ ವಿಶ್ವದಲ್ಲಿಯೇ ಭಾರತವು ಅಮೆರಿಕದ ಸರಕುಗಳ ಮೇಲೆ ಅತಿಹೆಚ್ಚು ಸುಂಕ ವಿಧಿಸುವ ರಾಷ್ಟ್ರವಾಗಿದೆ. ಸದ್ಯ ಈಗ ಸುಂಕ ಹಿಂಪಡೆಯುವುದಾಗಿ ತಿಳಿಸಿದೆ' ಎಂದು ಹೇಳಿದರು.

ಅಮೆರಿಕವು ಭಾರತದ ಮೇಲೆ ಶೇ 26ರಷ್ಟು ಪ್ರತಿ ಸುಂಕ ವಿಧಿಸಿದ್ದು, ಇದರ ಜಾರಿಗೆ ಜುಲೈ 9ರವರೆಗೆ ವಿರಾಮ ನೀಡಲಾಗಿದೆ.

ಅಮೆರಿಕದ ಬಹುತೇಕ ಸರಕುಗಳಿಗೆ ಶೂನ್ಯ ಸುಂಕ ನೀತಿ ಅನುಸರಿಸಲು ಭಾರತ ಮುಂದಾಗಿದೆ ಎಂಬ ಟ್ರಂಪ್ ಹೇಳಿಕೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೌನವಹಿಸುವುದು ಏಕೆ?

ಕಾಂಗ್ರೆಸ್

'ಯೋಜನೆ ಹಿಂಪಡೆಯುವುದಿಲ್ಲ'

'ಭಾರತದಲ್ಲಿ ತಾವು ಹೂಡಿಕೆ ಮಾಡಲು ಉದ್ದೇಶಿಸಿರುವಂತೆಯೇ ಮುಂದುವರಿಯುತ್ತೇವೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ನಮ್ಮ ಉತ್ಪನ್ನಗಳಿಗೆ ಭಾರತವು ಎಂದಿನಂತೆ ದೊಡ್ಡ ತಯಾರಿಕಾ ಕೇಂದ್ರವೇ ಆಗಿರಲಿದೆ' ಎಂದು ಆ್ಯಪಲ್ ಸಂಸ್ಥೆಯ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಭಾರತ ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ' ಎಂದು ಮೂಲಗಳು ಹೇಳಿವೆ.

ಟ್ರಂಪ್ ಅವರ ಹೇಳಿಕೆ ಬಹಿರಂಗವಾಗುತ್ತಿದ್ದಂತೆಯೇ ಕೇಂದ್ರ ಸರ್ಕಾರದ ಅಧಿಕಾರಿಗಳು ಅಮೆರಿಕದಲ್ಲಿ ಇರುವ ಆ್ಯಪಲ್ ಕಂಪನಿಯ ಅಧಿಕಾರಿಗಳೊಂದಿಗೆ ಮಾತನಾಡಿದ್ದಾರೆ ಎನ್ನಲಾಗಿದೆ. 'ಈ ಬಗ್ಗೆ ಪ್ರತಿಕ್ರಿಯಿಸಲು ಆ್ಯಪಲ್ ಕಂಪನಿಗೆ ಇ-ಮೇಲ್ ಕಳುಹಿಸಿದರೂ ಯಾವುದೇ ಉತ್ತರ ಬರಲಿಲ್ಲ' ಎಂದು ಪಿಟಿಐ ಸುದ್ದಿ ಸಂಸ್ಥೆ ಹೇಳಿದೆ.

ಫಾಕ್ಸ್‌ಕಾನ್ ಮತ್ತು ಟಾಟಾ ಸಂಸ್ಥೆಯು ಭಾರತದಲ್ಲಿ ಐಫೋನ್ ತಯಾರಿಕೆಯಲ್ಲಿ ತೊಡಗಿವೆ. ಐಫೋನ್‌ಗಳ ತಯಾರಿಕೆಯನ್ನು ಹೆಚ್ಚಿಸುವ ಸಲುವಾಗಿ ಈ ಕಂಪನಿಗಳು ಹೊಸ ಹೊಸ ಘಟಕಗಳನ್ನು ನಿರ್ಮಾಣ ಮಾಡುತ್ತಿವೆ. ಫಾಕ್ಸ್‌ಕಾನ್ ಕಂಪನಿಯು ತೆಲಂಗಾಣದಲ್ಲಿ ಆ್ಯಪಲ್ ಏರ್‌ಪೋಡ್‌ಗಳನ್ನು ತಯಾರಿಸಲು ಆರಂಭಿಸಿದೆ.

ತಿರಂಗಾ ಯಾತ್ರೆ 'ಆಪರೇಷನ್ ಸಿಂಧೂರ'ದಲ್ಲಿ ಭಾಗವಹಿಸಿದ್ದ ಸೇನಾನಿಗಳಿಗೆ ಅಭಿನಂದನೆ ಸಲ್ಲಿಸಲು ಬೆಂಗಳೂರಿನಲ್ಲಿ ಗುರುವಾರ ಬಿಜೆಪಿ ಆಯೋಜಿಸಿದ್ದ ತಿರಂಗಾ ಯಾತ್ರೆಯಲ್ಲಿ ಜನರು ತ್ರಿವರ್ಣ ಧ್ವಜಗಳೊಂದಿಗೆ ಸಾಗಿದರು

7 ಕುಬೇರರ ಆಸ್ತಿ ₹22 ಕೋಟಿ

ಪ್ರಜಾವಾಣಿ ವಾರ್ತೆ

ಲೋಕಾ ದಾಳಿ

ಬೆಂಗಳೂರು: ವಿವಿಧ ಇಲಾಖೆಗಳ ಏಳು ಅಧಿಕಾರಿಗಳ ಮನೆ, ಕಚೇರಿಗಳಲ್ಲಿ ಶೋಧ ನಡೆಸಿದ ಲೋಕಾಯುಕ್ತ ಪೊಲೀಸರು ₹22.78 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿಗಳಿಸಿದ ಆರೋಪದ ಸಂಬಂಧ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ, ತುಮಕೂರು, ಮಂಗಳೂರು, ವಿಜಯಪುರ, ಯಾದಗಿರಿಯ ಒಟ್ಟು 35 ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರ ತಂಡವು ಗುರುವಾರ ಬೆಳಿಗ್ಗೆಯೇ ಶೋಧ ನಡೆಸಿತು.

4ನೇ ಪುಟ ನೋಡಿ

ರೇಣುಕಾ ಮನೆಯಲ್ಲಿ ₹10 ಲಕ್ಷ ನಗದು

ವಿಜಯಪುರ: ಅಂಬೇಡ್ಕರ್ ಅಭಿವೃದ್ಧಿ ನಿಗಮದ ಹಿಂದಿನ ಜಿಲ್ಲಾ ವ್ಯವಸ್ಥಾಪಕಿ ರೇಣುಕಾ ಸಾತರ್ಲೆ ಅವರ ವಿಜಯಪುರ ಮತ್ತು ಮಹಾರಾಷ್ಟ್ರದ ಸೊಲ್ಲಾಪುರದ ನಗರದಲ್ಲಿರುವ ಮನೆಗಳಲ್ಲಿ ಅಧಿಕಾರಿಗಳು ಶೋಧ ನಡೆಸಿ, ₹2 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

'ದಾಳಿ ವೇಳೆ ₹10 ಲಕ್ಷ ನಗದು, ಚಿನ್ನಾಭರಣ, ವಾಹನಗಳು ಮತ್ತು ಇತರೆ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳು ಸಿಕ್ಕಿವೆ. ₹2 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಅಕ್ರಮವಾಗಿ ಗಳಿಸಿರುವುದು ಪತ್ತೆಯಾಗಿದೆ' ಎಂದು ಲೋಕಾಯುಕ್ತ ಎಸ್‌ಪಿ ಟಿ.ಮಲ್ಲೇಶ್ ತಿಳಿಸಿದರು.

ರೇಣುಕಾ ಸಾತರ್ಲೆ ಅವರಿಂದ ವಶಪಡಿಸಿಕೊಂಡಿರುವ ನಗ, ನಗದು

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಸಚಿವರಿಗೆ ಜವಾಬ್ದಾರಿ ಇರಬೇಕು'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): 'ಸಾಂವಿಧಾನಿಕ ಹುದ್ದೆಯಲ್ಲಿರುವವರಿಗೆ ಜವಾಬ್ದಾರಿ ಇರಬೇಕು. ದೇಶವು ಇಂಥದ್ದೊಂದು ಪರಿಸ್ಥಿತಿ ಎದುರಿಸುತ್ತಿರುವಾಗ ಸಚಿವನಾದವನಿಗೆ ತಾನೇನು ಮಾತನಾಡುತ್ತಿದ್ದೇನೆ ಎಂಬ ಅರಿವಿರಬೇಕು. ಇದೆಂಥಾ ಹೇಳಿಕೆ ನೀಡಿದ್ದೀರಿ? ಸಚಿವನಾದವರು ಸಂಯಮದಿಂದ ಇರಬೇಕು ಎಂದು ಬಯಸಲಾಗುತ್ತದೆ...'

ವಿಜಯ್ ಶಾ

ಕರ್ನಲ್ ಸೋಫಿಯಾ ಖುರೇಷಿ ಅವರ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರ ಕುರಿತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಆಡಿದ ಮಾತುಗಳಿವು.

ತಮ್ಮ ಮೇಲೆ ಎಫ್‌ಐಆರ್ ದಾಖಲಿಸಿ ಎಂದು ಮಧ್ಯಪ್ರದೇಶದ ಹೈಕೋರ್ಟ್ ನೀಡಿದ ಆದೇಶಕ್ಕೆ ತಡೆ ನೀಡುವಂತೆ ಕೋರಿ ವಿಜಯ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ ಅಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

5ನೇ ಪುಟ ನೋಡಿ

ಎಫ್‌ಐಆರ್: ಹೈಕೋರ್ಟ್ ಅಸಮಾಧಾನ

ಮಧ್ಯಪ್ರದೇಶ ಹೈಕೋರ್ಟ್ ಆದೇಶದಂತೆ ವಿಜಯ್ ಅವರ ವಿರುದ್ಧ ಪೊಲೀಸರು ಬುಧವಾರ ರಾತ್ರಿ ಎಫ್‌ಐಆರ್ ದಾಖಲಿಸಿದ್ದಾರೆ. ಎಫ್‌ಐಆರ್ ದಾಖಲಿಸಿರುವ ಬಗ್ಗೆ ಅಡ್ವೊಕೇಟ್ ಜನರಲ್ ಅವರು ಗುರುವಾರ ನ್ಯಾಯಾಲಯಕ್ಕೆ ತಿಳಿಸಿದರು. ಆದರೆ, ಎಫ್‌ಐಆರ್ ಬಗ್ಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

5ನೇ ಪುಟ ನೋಡಿ

ಪಾಕ್ ಅಣ್ವಸ್ತ್ರ; ಐಎಇಎ ನಿಗಾವಹಿಸಲಿ

ಶ್ರೀನಗರ (ಪಿಟಿಐ): 'ಪಾಕಿಸ್ತಾನದಂತಹ ಪುಂಡ ಮತ್ತು ಬೇಜವಾಬ್ದಾರಿ ರಾಷ್ಟ್ರದ ಕೈಯಲ್ಲಿ ಅಣ್ವಸ್ತ್ರಗಳು ಸುರಕ್ಷಿತವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಆ ರಾಷ್ಟ್ರದ ಅಣ್ವಸ್ತ್ರಗಳು ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆಯ (ಐಎಇಎ) ನಿಗಾದಲ್ಲಿರಬೇಕು' ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಗುರುವಾರ ಆಗ್ರಹಿಸಿದ್ದಾರೆ.

'ಪಾಕಿಸ್ತಾನದ ಅಣ್ವಸ್ತ್ರ ಬೆದರಿಕೆ ನಡೆಯದು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಎಚ್ಚರಿಸಿದ ಕೆಲ ದಿನಗಳ ಬಳಿಕ ರಕ್ಷಣಾ ಸಚಿವರ ಹೇಳಿಕೆ ಹೊರಬಿದ್ದಿದೆ.

'ಆಪರೇಷನ್ ಸಿಂಧೂರ' ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಮೊದಲ ಭೇಟಿ ನೀಡಿದ ರಾಜನಾಥ, 'ಪಾಕಿಸ್ತಾನದ ಅಣ್ವಸ್ತ್ರ ಬೆದರಿಕೆಯನ್ನು ಭಾರತವು ಕಡೆಗಣಿಸಿದೆ ಎಂಬ ಅಂಶವು, ಭಯೋತ್ಪಾದನೆಯ ವಿರುದ್ಧ ದೇಶದ ಸಂಕಲ್ಪ ಎಷ್ಟು ಪ್ರಬಲವಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ' ಎಂದರು.

11ನೇ ಪುಟ ನೋಡಿ

'ವಿಕಿರಣ ಸೋರಿಕೆಯಾಗಿಲ್ಲ'

ನವದೆಹಲಿ: ಭಾರತದೊಂದಿಗೆ ಈಚೆಗೆ ನಡೆದ ಸೇನಾ ಸಂಘರ್ಷದ ಸಂದರ್ಭದಲ್ಲಿ ಪಾಕಿಸ್ತಾನದಲ್ಲಿ ಯಾವುದೇ ಅಣು ಘಟಕದಿಂದ ವಿಕಿರಣ ಸೋರಿಕೆಯಾಗಿಲ್ಲ ಎಂದು ಎಐಇಎ ಹೇಳಿದೆ.

'ಆಪರೇಷನ್ ಸಿಂಧೂರ' ಸಂದರ್ಭದಲ್ಲಿ ಭಾರತದ ಸಶಸ್ತ್ರ ಪಡೆಗಳು ಪಾಕಿಸ್ತಾನದ ಅಣು ಘಟಕಗಳನ್ನು ಗುರಿಯಾಗಿಸಿವೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ವದಂತಿ ಹಬ್ಬಿರುವ ಬೆನ್ನಲ್ಲೇ ಎಐಇಎ ಹೇಳಿಕೆ ಬಂದಿದೆ.

'ಐಎಇಎಗೆ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ, ಪಾಕಿಸ್ತಾನದಲ್ಲಿ ಯಾವುದೇ ಅಣು ಘಟಕದಿಂದ ವಿಕಿರಣ ಸೋರಿಕೆ ಅಥವಾ ಬಿಡುಗಡೆಯಾಗಿಲ್ಲ' ಎಂದು ಐಎಇಎ ವಕ್ತಾರರು ತಿಳಿಸಿದ್ದಾರೆ.



ಪಹಲ್ಗಾಮ್ ಭಯೋತ್ಪಾದಕ ದಾಳಿ ಮೂಲಕ ದೇಶದ ಜನರ ಒಗ್ಗಟ್ಟನ್ನು ಒಡೆಯುವ ಪ್ರಯತ್ನ ನಡೆದಿದೆ

ರಾಜನಾಥ ಸಿಂಗ್, ರಕ್ಷಣಾ ಸಚಿವ

ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ

'ಸುಪ್ರೀಂ'ಗೆ ಮುರ್ಮು 14 ಪ್ರಶ್ನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಜ್ಯ ವಿಧಾನಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳಿಗೆ ರಾಷ್ಟ್ರಪತಿಯವರು ಕಾಲಮಿತಿಯೊಳಗೆ ಅಂಕಿತ ಹಾಕಬೇಕು ಎಂದು ಏಪ್ರಿಲ್ 8ರಂದು ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್‌ಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 14 ಮಹತ್ವದ ಪ್ರಶ್ನೆಗಳನ್ನು ಕೇಳಿದ್ದಾರೆ.

ಸಂವಿಧಾನದ 143(1)ನೇ ವಿಧಿಯಡಿ ದತ್ತವಾದ ಅಧಿಕಾರವನ್ನು ಅಪರೂಪವೆಂಬಂತೆ ಬಳಸಿ, ಅವರು ಈ ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ.

'ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದಾಗಿ, ಕಾನೂನಿಗೆ ಸಂಬಂಧಿಸಿ ಈ ಪ್ರಶ್ನೆಗಳು ಉದ್ಭವಿಸಿವೆ. ಸಾರ್ವಜನಿಕ ಮಹತ್ವದ ಈ ಪ್ರಶ್ನೆಗಳಿಗೆ ಸುಪ್ರೀಂ ಕೋರ್ಟ್ ಅಭಿಪ್ರಾಯ ಪಡೆಯುವುದು ಸೂಕ್ತ ಎಂದು ಭಾವಿಸಿದ್ದೇನೆ' ಎಂದು ರಾಷ್ಟ್ರಪತಿ ಮುರ್ಮು ಹೇಳಿದ್ದಾರೆ.

ಸಂವಿಧಾನದ 143(1) ವಿಧಿಯು, ಸುಪ್ರೀಂ ಕೋರ್ಟ್‌ನೊಂದಿಗೆ ಸಮಾಲೋಚನೆ ನಡೆಸುವುದಕ್ಕೆ ರಾಷ್ಟ್ರಪತಿ ಹೊಂದಿರುವ ಅಧಿಕಾರಕ್ಕೆ ಸಂಬಂಧಿಸಿದ್ದಾಗಿದೆ.

'ಸಾರ್ವಜನಿಕ ಮಹತ್ವದ ಹಾಗೂ ಅಂತಹ ಸ್ವರೂಪದ ಯಾವುದೇ ಕಾನೂನು ಅಥವಾ ವಿಚಾರ ಕುರಿತು ಪ್ರಶ್ನೆಗಳು ಉದ್ಭವಿಸಿದಾಗ ಇಲ್ಲವೇ ಉದ್ಭವಿಸುವ ಸಾಧ್ಯತೆ ಇದ್ದಾಗ, ಸುಪ್ರೀಂ ಕೋರ್ಟ್‌ನ ಅಭಿಪ್ರಾಯ ಪಡೆಯುವುದು ಸೂಕ್ತ ಎಂದು ರಾಷ್ಟ್ರಪತಿಗಳು ಭಾವಿಸಿದಾಗ, ಅಂತಹ ಪ್ರಶ್ನೆಯನ್ನು ಅವರು ನ್ಯಾಯಾಲಯಕ್ಕೆ ಕೇಳಬಹುದು. ಈ ಪ್ರಶ್ನೆಗಳ ಕುರಿತು ಸುಪ್ರೀಂ ಕೋರ್ಟ್, ರಾಷ್ಟ್ರಪತಿ ಅವರಿಗೆ ತನ್ನ ಅಭಿಪ್ರಾಯವನ್ನು ತಿಳಿಸಬಹುದು' ಎಂದು ಈ ವಿಧಿ ಹೇಳುತ್ತದೆ.

11ನೇ ಪುಟ ನೋಡಿ

ರಾಷ್ಟ್ರಪತಿ ಕೇಳಿದ್ದೇನು?

1. ಮಸೂದೆಯೊಂದನ್ನು ತಮಗೆ ಸಲ್ಲಿಸಿದ ವೇಳೆ, ಸಂವಿಧಾನದ 200ನೇ ವಿಧಿ ಅನ್ವಯ ರಾಜ್ಯಪಾಲರ ಮುಂದಿರುವ ಸಾಂವಿಧಾನಿಕ ಆಯ್ಕೆಗಳು ಯಾವುವು?
2. ತಮಗೆ ಸಲ್ಲಿಕೆಯಾಗಿರುವ ಮಸೂದೆ ಕುರಿತು ನಿರ್ಧಾರ ಕೈಗೊಳ್ಳುವಾಗ, ಸಂವಿಧಾನದ 200ನೇ ವಿಧಿಯಲ್ಲಿ ಅವಕಾಶಗಳ ಅನ್ವಯ ರಾಜ್ಯಪಾಲರು ಅಧಿಕಾರ ಚಲಾಯಿಸಲು ಮಂತ್ರಿ ಪರಿಷತ್ತು ನೀಡುವ ಸಲಹೆಯಂತೆ ನಡೆದುಕೊಳ್ಳಬೇಕೇ?
3. ರಾಜ್ಯಪಾಲರು 200ನೇ ವಿಧಿಯಡಿ ದತ್ತವಾಗಿರುವ ವಿವೇಚನಾಧಿಕಾರ ಚಲಾಯಿಸುವುದರ ಕುರಿತು ನ್ಯಾಯಾಲಯ ವಿಚಾರಣೆ ನಡೆಸಬಹುದೇ?

11ನೇ ನೋಡಿ

Stores At: Gandhi Bazaar- 37 BOSCO Court Complex, Ph.:9963890921 | Malleshwaram - Near 11th Cross Sampige Main Road, Ph.: 9730508441 | Commercial Street - Next To Police Station, Ph.:9730508441 | Basaveshwar Nagar- Opp. To Chord Road Hospital, Ph.:9916061878 Mysore- Next To Bhima Jewellers, Devaraja Urs Road, Ph.:9730508441 | Mangluru- Opp. Maruti Suzuki Arena, Mandovi Motors, Ph.:9480353000 Udupi - Sriram Building, Karavali To City Bus Stand Road, Bananje, Ph.:08202525123 | Enquiry : 9730508441.

‘ಅನಧಿಕೃತ ಕೇಬಲ್ ತೆರವುಗೊಳಿಸಿ’

ಪೂರ್ವವಲಯ: ಬಿಬಿಎಂಪಿ ಮುಖ್ಯ ಆಯುಕ್ತರ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಕನ್ನಿಂಗ್‌ಹ್ಯಾಮ್ ರಸ್ತೆ ಬದಿಯಲ್ಲಿದ್ದ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಎಂ. ಮಹೇಶ್ವರರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು

ಬೆಂಗಳೂರು: ನಗರದ ಪೂರ್ವ ವಲಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಳವಡಿಸಿರುವ ಒಎಫ್‌ಸಿಗಳನ್ನು ತೆರವುಗೊಳಿಸಿ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದರು.

ಗುಟ್ಟಹಳ್ಳಿ ಮೇಲ್ಸೇತುವೆ ಸುತ್ತಮುತ್ತ ಗುರುವಾರ ಪರಿಶೀಲನೆ ನಡೆಸುವಾಗ ಪಾದಚಾರಿ ಮಾರ್ಗದಲ್ಲಿ ಅನಧಿಕೃತ ಒಎಫ್‌ಸಿಗಳು ನೇತಾಡುತ್ತಿರುವುದನ್ನು ಕಂಡು ಅವರು ಈ ಸೂಚನೆ ನೀಡಿದರು.

ಟೆಂಡರ್ ಶ್ಯೂರ್, ವೈಟ್ ಟಾಪಿಂಗ್ ಮಾಡಿರುವ ರಸ್ತೆಗಳಲ್ಲಿ ಕೇಬಲ್‌ಗಳನ್ನು ನೆಲದಡಿ ಅಳವಡಿಸಲು ಡಕ್ಟ್‌ಗಳ ವ್ಯವಸ್ಥೆ ಮಾಡಲಾಗಿದೆ. ಆದರೂ ಕೆಲ ಸಂಸ್ಥೆಗಳು ರಸ್ತೆ ಬದಿ, ಪಾದಚಾರಿ ಮಾರ್ಗ, ವಿದ್ಯುತ್ ಕಂಬಗಳು ಹಾಗೂ ಮರಗಳಲ್ಲಿ ನೇತಾಡುವ ರೀತಿಯಲ್ಲಿದ್ದು, ಅದರಿಂದ ನಾಗರಿಕರಿಗೆ ಸಮಸ್ಯೆಯಾಗಲಿದೆ ಎಂದು ಹೇಳಿದರು.

ಪಾಲಿಕೆ ಒಡೆತನದ ಖಾಲಿ ಜಾಗಗಳನ್ನು ಬಳಕೆ ಮಾಡದೇ ಇರುವಲ್ಲಿ ಸ್ವಚ್ಛತೆ ಇಲ್ಲದಂತಾಗಿದೆ. ಅಂತಹ ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರ ಬಳಕೆಗೆ ಅನುವು ಮಾಡಿಕೊಡಬೇಕು. ನಗರದಲ್ಲಿ ಬೀದಿ ಬದಿ ವ್ಯಾಪಾರಿಗಳಿಗಾಗಿ ವ್ಯಾಪಾರ ವಲಯಗಳನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಪಾಲಿಕೆ ಒಡೆತನದ ವಿಶಾಲ ಜಾಗಗಳನ್ನು ಗುರುತಿಸಬೇಕು ಸೂಚಿಸಿದರು.

ಅರಮನೆ ರಸ್ತೆ, ವಸಂತ ನಗರದ 12ನೇ ಮುಖ್ಯರಸ್ತೆ ಹಾಗೂ ಕಂಟೋನ್ಮೆಂಟ್ ರೈಲ್ವೆ ಹಳಿ ಬಳಿ ಪಾದಚಾರಿ ಮಾರ್ಗ ನಿರ್ಮಿಸಬೇಕು. ಚರಂಡಿಯಲ್ಲಿ ತುಂಬಿರುವ ಹೂಳು ತೆಗೆದು ಸ್ವಚ್ಛಗೊಳಿಸಬೇಕು ಎಂದು ತಿಳಿಸಿದರು. ಗೋಡೆ, ಬ್ಯಾರಿಕೇಡ್‌ಗಳಿಗೆ ಅಂಟಿಸಿರುವ ಭಿತ್ತಿಪತ್ರಗಳನ್ನು ತೆರವುಗೊಳಿಸಬೇಕು. ರಸ್ತೆ ಬದಿ ಖಾಸಗಿ ಸಂಸ್ಥೆ, ಶಾಲಾ-ಕಾಲೇಜುಗಳ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ, ಅಂತಹವರಿಗೆ ದಂಡ ವಿಧಿಸಬೇಕು ಎಂದು ಹೇಳಿದರು.

ನಂತರ ಮಿಲ್ಲರ್ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿದರು. ಇಡ್ಲಿ ಹಾಗೂ ಪುಲಾವ್ ಸೇವಿಸಿ ಆಹಾರದ ಗುಣಮಟ್ಟವನ್ನು ಪರಿಶೀಲಿಸಿದರು.

ಅರಮನೆ ರಸ್ತೆ, ಮೌಂಟ್ ಕಾರ್ಮೆಲ್ ಕಾಲೇಜು ಮುಂಭಾಗದ ರಸ್ತೆ, ಕನ್ನಿಂಗ್‌ಹ್ಯಾಮ್ ರಸ್ತೆ, ಮಿಲ್ಲರ್ ರಸ್ತೆಯ ಮೂಲಕ ಕಂಟೋನ್ಮೆಂಟ್ ರೈಲ್ವೆ ಹಳಿಯವರೆಗೆ 2.5 ಕಿ.ಮೀ. ರಸ್ತೆ ಪರಿಶೀಲನೆ ನಡೆಸಿದರು.

ವಲಯ ಆಯುಕ್ತರಾದ ಸ್ನೇಹಲ್, ಯೋಜನಾ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಜಂಟಿ ಆಯುಕ್ತೆ ಸರೋಜಾ, ಮುಖ್ಯ ಎಂಜಿನಿಯರ್ ಸುಗುಣಾ ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಇಂಗಿತ • ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ

ಮೂರು ಪಾಲಿಕೆ ರಚಿಸುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ಇನ್ನು ಮುಂದೆ ‘ಗ್ರೇಟರ್ ಬೆಂಗಳೂರು’ ಆಗಲಿದ್ದು, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಕನಿಷ್ಠ ಮೂರು ಪಾಲಿಕೆ ರಚನೆಯಾಗುವ ಸಾಧ್ಯತೆಯಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಗುರುವಾರದಿಂದ (ಮೇ 15) ಜಾರಿಗೆ ಬಂದಿದೆ. ಆ ಮೂಲಕ, ಬಿಬಿಎಂಪಿ ಬದಲು ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದ ಮುಖ್ಯಮಂತ್ರಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದು, ಮುಂದಿನ ದಿನಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಅಧಿಸೂಚನೆ: ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 (ಕರ್ನಾಟಕ ಕಾಯ್ದೆ–2025 ಸಂಖ್ಯೆ 36) ಗುರುವಾರ ಜಾರಿಗೆ ಬಂದಿದೆ. ಹೊಸ ‘ಗ್ರೇಟರ್ ಬೆಂಗಳೂರು ಪ್ರದೇಶ’ವು ಸದ್ಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಗೆ ಅನ್ವಯವಾಗಲಿದೆ ಎಂದು ನಗರಾಭಿವೃದ್ಧಿ ಇಲಾಖೆ ಗುರುವಾರ ಅಧಿಸೂಚನೆ ಹೊರಡಿಸಿದೆ.

ಮಳೆಯಿಂದಾಗಿ ಹಲವೆಡೆ ಅನಾಹುತಗಳು ಸಂಭವಿಸುತ್ತಿವೆ. ಈ ಅನಾಹುತಗಳಿಗೆ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲಾಗುವುದು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ, ಪಾಲಿಕೆ ಮತ್ತು ಇತರ ಸ್ಥಳೀಯ ಸಂಸ್ಥೆಗಳ ರಚನೆಯಾಗುವವರೆಗೆ ಬೃಹತ್ ಬೆಂಗಳೂರು ಆಡಳಿತ ಕಾಯ್ದೆ, 2024 (ಕರ್ನಾಟಕ ಕಾಯ್ದೆ–2025 ಸಂಖ್ಯೆ 53) ರ ನಿಬಂಧನೆಗಳ ಅಡಿಯಲ್ಲಿ ನೀಡಲಾದ ಅಧಿಕಾರ, ಕರ್ತವ್ಯಗಳನ್ನು ಈಗಿರುವ ಆಡಳಿತ ವ್ಯವಸ್ಥೆಯೇ ಚಲಾಯಿಸುವುದನ್ನು ಮುಂದುವರಿಸಲಿದೆ ಎಂದು ತಿಳಿಸಲಾಗಿದೆ.

ಕ್ವಾರ್ಟರ್ ಬೆಂಗಳೂರು: ಆರ್. ಅಶೋಕ

ಬೆಂಗಳೂರು: ‘ಬೆಂಗಳೂರನ್ನು ಗ್ರೇಟರ್ ಅಲ್ಲ, ಕ್ವಾರ್ಟರ್ ಬೆಂಗಳೂರು ಮಾಡಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಸುದ್ದಿಗಾರರ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರನ್ನು ಕಾಂಗ್ರೆಸ್ ಸರ್ಕಾರ ಮೂರು ಭಾಗ ಮಾಡಿದೆ. ಗ್ರೇಟರ್ ಬೆಂಗಳೂರಿನಿಂದ ಅಭಿವೃದ್ಧಿ ಸಾಧ್ಯವಿಲ್ಲ, ಜನರಿಗೆ ಅನಾನುಕೂಲಗಳೇ ಹೆಚ್ಚಾಗುತ್ತವೆ. ಇದರ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ’ ಎಂದರು.

‘110 ಹಳ್ಳಿಗಳಲ್ಲಿ ಜನರಿಗೆ ಹೆಚ್ಚು ತೆರಿಗೆ ವಿಧಿಸಲಾಗಿದೆ. ಯಾರದ್ದೋ ಜಮೀನಿಗೆ ಬೆಲೆ ಹೆಚ್ಚುವಂತೆ ಮಾಡಲು ಇಂತಹ ಯೋಜನೆ ರೂಪಿಸಲಾಗಿದೆ. ಇದರಿಂದಾಗಿ ಕೆಂಪೇಗೌಡರ ಚಿಂತನೆಗೆ ದ್ರೋಹ ಬಗೆದಂತಾಗುತ್ತದೆ’ ಎಂದು ಹೇಳಿದರು.

‘ಬೆಂಗಳೂರು ಭಾಗವಾದರೆ ಆದಾಯ ಬರುವುದಿಲ್ಲ. ಐಟಿ–ಬಿಟಿ ಕೇಂದ್ರಗಳು ಒಂದು ಕಡೆ ಇರುವಾಗ, ಮತ್ತೊಂದು ಕಡೆಗೆ ಆದಾಯವೇ ಬರುವುದಿಲ್ಲ. ಮೂರು ಪಾಲಿಕೆಗಳು ನಿರ್ಮಾಣವಾದರೆ, ಅಲ್ಲಿ ಕನ್ನಡಿಗರೇ ಮೇಯರ್ ಆಗುತ್ತಾರೆ ಎಂಬ ಖಚಿತತೆ ಇಲ್ಲ’ ಎಂದರು.

‘ಮುಖ್ಯಮಂತ್ರಿಯವರು ಪಾಲಿಕೆಯಿಂದ ಆಯ್ಕೆ ಆಗುವುದಿಲ್ಲ ಎಂದಾದ ಮೇಲೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಅವರನ್ನು ಹೇಗೆ ಅಧ್ಯಕ್ಷರನ್ನಾಗಿ ಮಾಡುತ್ತಾರೆ? ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲಿಕೆ ಸಭೆಯಲ್ಲಿ ಬಂದು ಕೂರಲು ಸಾಧ್ಯವಿಲ್ಲ. ಬೆಂಗಳೂರು ಭಾಗ ಆಗಬಾರದು ಎಂಬುದು ಬಿಜೆಪಿಯ ಅಭಿಪ್ರಾಯ. ಮುಂದೆ ನಮ್ಮ ಸರ್ಕಾರ ಬಂದರೆ ಬೆಂಗಳೂರನ್ನು ಒಂದು ಮಾಡುವ ಕೆಲಸ ಮಾಡುತ್ತೇವೆ’ ಎಂದು ಅಶೋಕ ತಿಳಿಸಿದರು.

‘ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಲಾಭಕ್ಕೆ ಏನು ಬೇಕೋ ಎಲ್ಲವನ್ನೂ ಮಾಡುತ್ತಿದ್ದಾರೆ. ಬಿಡಿಎ ಲೇಔಟ್‌ಗಳು ಇನ್ನೂ ಖಾಲಿ ಇದ್ದು, ಅಲ್ಲಿಗೆ ನೀರು, ವಿದ್ಯುತ್ ಕೊಡಲು ಆಗುತ್ತಿಲ್ಲ. ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಈ ಯೋಜನೆ ಮಾಡಿದ್ದಾರೆ. ಎಲ್ಲ ಕಡೆ ಕಸದ ರಾಶಿ ಇದೆ; ಮೇಕೆದಾಟು ಯೋಜನೆ ಜಾರಿ ಮಾಡಿಲ್ಲ. ನಗರದ ಆಡಳಿತ ನಡೆಸಲು ಆಗುತ್ತಿಲ್ಲ. ಇಂತಹ ವಿಫಲತೆ ಒಪ್ಪಿಕೊಳ್ಳದೆ ಇಂತಹ ಯೋಜನೆ ಜಾರಿ ತಂದಿದ್ದಾರೆ’ ಎಂದು ಟೀಕಿಸಿದರು.

ಜಿಬಿಎ ಆಯ್ತು: ಮುಂದೇನಾಗಬೇಕು

‘ಗ್ರೇಟರ್ ಬೆಂಗಳೂರು ಪ್ರದೇಶ’ ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ. ಜೊತೆಗೆ ವಿಳಾಸ, ಭಾವಚಿತ್ರವಿರಲಿ.
ವ್ಯಾಟ್ಸ್‌ಆ್ಯಪ್ ಸಂಖ್ಯೆ: 9606038256

ಯುವಕ ಸಾವು

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ವೆಸ್ಲಿ ಸೇತುವೆ ಬಳಿ ಈಜಲು ಹೋಗಿದ್ದ ಯುವಕ, ಬೆಂಗಳೂರಿನ ಬಾಗಲಗುಂಟೆ ನಿವಾಸಿ ಪ್ರೇಮ್ ಕುಮಾರ್ (20) ನೀರಿನಲ್ಲಿ ಮುಳುಗಿ ಗುರುವಾರ ಮೃತಪಟ್ಟರು.

ಆರಂಭಗೊಳ್ಳಲಿದೆ ಅಂತಿಮ ಪರೀಕ್ಷೆ • ಜೂನ್‌ನಲ್ಲಿ ಸಂಚಾರ ಆರಂಭ

ಹಳದಿ ಮಾರ್ಗಕ್ಕೆ ಬಂತು 3ನೇ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಪಶ್ಚಿಮ ಬಂಗಾಳದ ಟಿಟಾಗಢದಿಂದ ಹೊರಟಿದ್ದ ಒಂದು ಸೆಟ್ ರೈಲು ಬೋಗಿಗಳು ಬೆಂಗಳೂರಿಗೆ ತಲುಪಿವೆ. ಅಂತಿಮ ಪರೀಕ್ಷೆಗಳನ್ನು ಪೂರ್ಣಗೊಳಿಸಿ, ಇನ್ನೊಂದು ತಿಂಗಳಲ್ಲಿ ಮೆಟ್ರೊ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ

ಒಂದು ರೈಲು ಆರು ಕೋಚ್‌ಗಳನ್ನು ಹೊಂದಿರುತ್ತದೆ. ಅದರಲ್ಲಿ ಮೂರು ಕೋಚ್‌ಗಳನ್ನು ಏಪ್ರಿಲ್ 29ರಂದು ಮತ್ತು ಉಳಿದ ಮೂರು ಕೋಚ್‌ಗಳನ್ನು ಮೇ 2ರಂದು ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಿಂದ ಕಳುಹಿಸಲಾಗಿತ್ತು. ಹೆಬ್ಬಗೋಡಿಯಲ್ಲಿರುವ ನಮ್ಮ ಮೆಟ್ರೊ ಡಿಪೊಗೆ ಎಲ್ಲ ಆರು ಕೋಚ್‌ಗಳು ತಲುಪಿದ್ದು, ಅವುಗಳನ್ನು ಬೃಹತ್ ಲಾರಿಯಿಂದ ಇಳಿಸಿ ಜೋಡಣೆ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೊಮ್ಮಸಂದ್ರ–ಆರ್.ವಿ. ರಸ್ತೆ ನಡುವಿನ 18.8 ಕಿ.ಮೀ. ಉದ್ದದ ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭಗೊಳ್ಳಲು ಕನಿಷ್ಠ ಮೂರು ರೈಲುಗಳ ಅವಶ್ಯವಿದ್ದು, ಚಾಲಕರಹಿತ ಎಂಜಿನ್ ಹೊಂದಿರುವ ಪ್ರೊಟೊಟೈಪ್ (ಮೂಲ ಮಾದರಿ) ಎರಡು ರೈಲುಗಳು ಪೂರೈಕೆಯಾಗಿ, ಮೂರನೇ ರೈಲಿಗಾಗಿ ಕಾಯಲಾಗುತ್ತಿತ್ತು. ಇದೀಗ ಮೂರೂ ರೈಲುಗಳು ಪೂರೈಕೆಯಾಗಿವೆ. ಪರೀಕ್ಷೆಗಳು ನಡೆದ ಬಳಿಕ ಪ್ರತಿ 30 ನಿಮಿಷಕ್ಕೆ ಒಂದು ರೈಲು ಸಂಚರಿಸಲಿದೆ.

ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಬಂದಿರುವ ಮೂರನೇ ಮೆಟ್ರೊ

ಐಪಿಎಲ್: ಮೆಟ್ರೊ ಸಂಚಾರ ಅವಧಿ ವಿಸ್ತರಣೆ

ಟಾಟಾ ಐಪಿಎಲ್ ಟಿ 20 ಕ್ರಿಕೆಟ್ ಪಂದ್ಯ ಮೇ 17 ಮತ್ತು 23ರಂದು ಬೆಂಗಳೂರು ಚಿನ್ನಸ್ವಾಮಿ ಮೈದಾನದಲ್ಲಿ ನಡೆಯಲಿದೆ. ಅಂದು ನಮ್ಮ ಮೆಟ್ರೊ ಸಂಚಾರದ ಅವಧಿಯನ್ನು ರಾತ್ರಿ 1.35ರ ವರೆಗೆ ವಿಸ್ತರಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ನೇರಳೆ ಮತ್ತು ಹಸಿರು ಮಾರ್ಗಗಳ ನಾಲ್ಕು ಟರ್ಮಿನಲ್‌ಗಳಾದ ವೈಟ್‌ಫೀಲ್ಡ್ (ಕಾಡುಗೋಡಿ), ಚಲ್ಲಘಟ್ಟ, ರೇಷ್ಮೆ ಸಂಸ್ಥೆ ಮತ್ತು ಮಾದಾವರ ಮೆಟ್ರೊ ನಿಲ್ದಾಣಗಳಿಂದ ರಾತ್ರಿ 1ಕ್ಕೆ ಕೊನೇ ಮೆಟ್ರೊ ಸಂಚರಿಸಲಿದೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ನಾಲ್ಕು ಟರ್ಮಿನಲ್‌ಗಳ ಕಡೆಗೆ ಕೊನೇ ಮೆಟ್ರೊ ರಾತ್ರಿ 1.35ಕ್ಕೆ ಹೊರಡಲಿದೆ ಎಂದು ತಿಳಿಸಿದೆ.

ರೈಲುಗಳ ಸಂಖ್ಯೆ ಹೆಚ್ಚಳವಾದಂತೆ ಟ್ರಿಪ್‌ಗಳ ನಡುವಿನ ಅವಧಿ ಕಡಿಮೆಯಾಗಲಿದೆ. ಈ ಮಾರ್ಗಕ್ಕೆ ಒಟ್ಟು 14 ರೈಲುಗಳ ಅಗತ್ಯವಿದೆ. ಪ್ರತಿ 15 ನಿಮಿಷಗಳಿಗೆ ಒಂದು ರೈಲು ಸಂಚರಿಸಲು 8 ರೈಲುಗಳು ಇರಬೇಕಿದೆ ಎಂದು ಮಾಹಿತಿ ನೀಡಿದ್ದಾರೆ.

ಅರ್ಧಗಂಟೆಗೆ ಒಂದು ಟ್ರಿಪ್ ನಡೆಸಲು ಮೂರು ರೈಲು ಬೇಕು. ಟಿಆರ್‌ಎಸ್‌ಎಲ್ ಕಾರ್ಯಾಗಾರದಲ್ಲಿ ‘ಮೇಕ್ ಇನ್ ಇಂಡಿಯಾ’ ಅಡಿಯಲ್ಲಿ 36 ರೈಲುಗಳನ್ನು ತಯಾರಿಸಲಾಗುತ್ತಿದೆ. ಅದರಲ್ಲಿ 34 ರೈಲುಗಳು ಬಿಎಂಆರ್‌ಸಿಎಲ್‌ಗೆ ಬರಲಿವೆ. 14 ರೈಲುಗಳು ಹಳದಿ ಮಾರ್ಗಕ್ಕೆ ಬಳಕೆಯಾಗಲಿವೆ. ಉಳಿದವುಗಳು ಹಸಿರು ಮತ್ತು ನೇರಳೆ ಮಾರ್ಗದಲ್ಲಿರುವ ರೈಲುಗಳ ಕೊರತೆಯನ್ನು ನೀಗಿಸಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ತುಮಕೂರಿಗೆ ನಮ್ಮ ಮೆಟ್ರೊ?

ಬೆಂಗಳೂರು: ನಮ್ಮ ಮೆಟ್ರೊವನ್ನು ತುಮಕೂರಿಗೆ ವಿಸ್ತರಿಸುವ ಕುರಿತು ಬೆಂಗಳೂರು ಮೆಟ್ರೊ ರೈಲ್ ನಿಗಮ (ಬಿಎಂಆರ್‌ಸಿಎಲ್) ಸರ್ಕಾರಕ್ಕೆ ಕಾರ್ಯಸಾಧ್ಯತಾ ವರದಿಯನ್ನು ಸಲ್ಲಿಸಿದೆ.

ಹಸಿರು ಮಾರ್ಗವನ್ನು ಮಾದಾವರದಿಂದ ತುಮಕೂರಿಗೆ ವಿಸ್ತರಿಸಲು ಕಾರ್ಯಸಾಧ್ಯತಾ ವರದಿ ನೀಡುವಂತೆ ಸರ್ಕಾರವು ಬಿಎಂಆರ್‌ಸಿಎಲ್‌ಗೆ ವರ್ಷದ ಹಿಂದೆ ಸೂಚಿಸಿತ್ತು. ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹಸಚಿವ ಜಿ.ಪರಮೇಶ್ವರ್ ಸಹಿತ ಕೆಲವರು ಈ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿದ್ದರು.

ಇದಕ್ಕಾಗಿ ಬಿಎಂಆರ್‌ಸಿಎಲ್ ಟೆಂಡರ್ ಕರೆದಿತ್ತು. ಹೈದರಾಬಾದ್‌ನ ಖಾಸಗಿ ಕಂಪನಿಯು ಸಮೀಕ್ಷೆ ನಡೆಸಿ ಬಿಎಂಆರ್‌ಸಿಎಲ್‌ಗೆ ವರದಿ ಒಪ್ಪಿಸಿತ್ತು. 56.6 ಕಿ.ಮೀ. ಮಾರ್ಗದಲ್ಲಿ, 25 ಎತ್ತರಿಸಿದ ನಿಲ್ದಾಣಗಳ ನಿರ್ಮಿಸುವ ಯೋಜನೆ ಇದಾಗಿದ್ದು, ರಾಜ್ಯ ಸರ್ಕಾರದ ಒಪ್ಪಿಗೆ ಸಿಕ್ಕಿದ ಮೇಲೆ ಕೇಂದ್ರದ ಅನುಮೋದನೆಗೆ ವರದಿ ಸಲ್ಲಿಕೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

‘ಭಿನ್ನಾಭಿಪ್ರಾಯಗಳಿದ್ದರೆ ಚರ್ಚೆಗೆ ಅವಕಾಶ’

ಪರಮಾಧಿಕಾರಕ್ಕಾಗಿ ಬೈ–ಲಾ ತಿದ್ದುಪಡಿ ಮಾಡುತ್ತಿಲ್ಲ: ಕಸಾಪ ಅಧ್ಯಕ್ಷ ಜೋಶಿ

ಪ್ರಜಾವಾಣಿ ವಾರ್ತೆ

ಮಹೇಶ ಜೋಶಿ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ ವಿಚಾರದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ನೀಡುವುದಿಲ್ಲ. ಪರಿಷತ್ತಿನ ಕಾರ್ಯಚಟುವಟಿಕೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೆ ಚರ್ಚೆಯ ಮೂಲಕ ಬಗೆಹರಿಸಿಕೊಳ್ಳಬಹುದು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಬುಧವಾರ ನಡೆದ ಕಾರ್ಯಕಾರಿ ಸಮಿತಿಯಲ್ಲಿ ಕೈಗೊಳ್ಳಲಾದ ತೀರ್ಮಾನಗಳು ಹಾಗೂ ಬೈ–ಲಾ ತಿದ್ದುಪಡಿ ಸೇರಿದಂತೆ ಇತ್ತೀಚಿನ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಕಸಾಪ ಸ್ಥಾಪನೆ ಆದಾಗಿನಿಂದಲೂ ಬೈ–ಲಾ ತಿದ್ದುಪಡಿ ಆಗುತ್ತಲೇ ಬಂದಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಸ್. ಪಾಚ್ಚಾಪೂರೆ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ‘ನಿಬಂಧನೆ ತಿದ್ದುಪಡಿ ಸಲಹಾ ಉಪಸಮಿತಿ’ಯ ಶಿಫಾರಸಿನ ಅನುಸಾರ ಈಗ ಬೈ–ಲಾ ತಿದ್ದುಪಡಿ ಮಾಡಲಾಗುತ್ತಿದೆ. ಪರಿಷತ್ತಿನ ಘನತೆ ಗೌರವಗಳನ್ನು ಎತ್ತಿ ಹಿಡಿಯುವ ಜೊತೆಗೆ, ಸಮಕಾಲೀನ ಸವಾಲುಗಳಿಗೆ ಸ್ಪಂದಿಸುವ ಉದ್ದೇಶವನ್ನು ಹೊಂದಲಾಗಿದೆ. ಸರ್ವಾಧಿಕಾರಿಯಾಗಲು, ಪರಮಾಧಿಕಾರ ಪಡೆಯಲು ಈ ತಿದ್ದುಪಡಿ ಮಾಡುತ್ತಿಲ್ಲ. ಅನಗತ್ಯವಾಗಿ ಕೆಲವರು ಆರೋಪ ಮಾಡುತ್ತಿದ್ದಾರೆ’ ಎಂದರು.

‘ಸಮಾನ ಮನಸ್ಕರ ವೇದಿಕೆಯಡಿ ಉದ್ದೇಶಪೂರ್ವಕ ಹಾಗೂ ಪೂರ್ವಗ್ರಹಪೀಡಿತರಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಾ, ಪರಿಷತ್ತಿನ ವಿರುದ್ಧ ಪ್ರತಿಭಟನಾ ಸಭೆ ನಡೆಸಲಾಗುತ್ತಿದೆ. ಈ ವೇದಿಕೆಯ ಪ್ರತಿಭಟನಾ ಸಭೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಕೂಡ ಪಾಲ್ಗೊಂಡಿದ್ದರು. ರಾಜಕಾರಣಿಯಾದ ಅವರು ಈ ರೀತಿ ಪರಿಷತ್ತಿನ ವಿಚಾರದಲ್ಲಿ ಹಸ್ತಕ್ಷೇಪ ಮಾಡಿದ್ದು ಸರಿಯಲ್ಲ. ಮುಂದಿನ ದಿನಗಳಲ್ಲಿ ಪರಿಷತ್ತಿನ ವಿಚಾರದಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿದರೆ, ಕಾರ್ಯಕಾರಿ ಸಮಿತಿ ಜತೆಗೆ ಚರ್ಚಿಸಿ ಕ್ರಮಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಪರಿಷತ್ತಿನ ಧ್ಯೇಯೋದ್ದೇಶಗಳ ಅನುಷ್ಠಾನಕ್ಕಾಗಿ, ವಿವಿಧ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸಲು ಉಪ ಸಮಿತಿ ರಚನೆ ಮಾಡಲಾಗಿದೆ. ನಾಡಿನ ಚಿಂತಕರು, ಕನ್ನಡಿಗರೊಂದಿಗೆ ಸಮಾಲೋಚನೆ ನಡೆಸಲು, ವಾಸ್ತವಿಕತೆ ಮನವರಿಕೆ ಮಾಡಲು ಈ ಉಪ ಸಮಿತಿ ಸಹಕಾರಿಯಾಗಲಿದೆ. ಇದರಲ್ಲಿ ಕಸಾಪ ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು ಇರಲಿದ್ದು, ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಪರಿಷತ್ತಿನ ಬಗ್ಗೆ ನಿಖರ ಮಾಹಿತಿ ಪ್ರಸಾರ ಮಾಡುತ್ತಾರೆ’ ಎಂದರು.

‘ಒಳ ಮೀಸಲು: ದತ್ತಾಂಶ ಸಂಗ್ರಹಣೆ ಮುಂದೂಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯಡಿ ಒಳ ಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ದತ್ತಾಂಶ ಸಂಗ್ರಹಕ್ಕೆ ನಿಗದಿಪಡಿಸಲಾದ ಕಾಲಮಿತಿಯನ್ನು ಆರು ತಿಂಗಳು ವಿಸ್ತರಿಸಬೇಕು’ ಎಂದು ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ ಸರ್ಕಾರವನ್ನು ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎನ್.ಆರ್. ನಾಯಕ್, ‘ಒಳ ಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಏಕಸದಸ್ಯ ವಿಚಾರಣಾ ಆಯೋಗದ ಶಿಫಾರಸಿನ ಅನುಸಾರ ಸಮೀಕ್ಷೆ ಮಾಡಲಾಗುತ್ತಿದೆ. ಇದೇ 5ರಿಂದ ಪ್ರಾರಂಭವಾದ ಈ ಸಮೀಕ್ಷೆ, 17ಕ್ಕೆ ಕೊನೆಗೊಳ್ಳಲಿದೆ. ಲಂಬಾಣಿ ಜನಾಂಗದವರು ಯಾವುದೇ ರೀತಿಯ ಭೂ ಮಾಲೀಕತ್ವ ಹೊಂದದೇ ಇದ್ದ ಕಾರಣ, ಗುಳೆ ಹೋಗುವುದು ಮತ್ತು ಮಕ್ಕಳನ್ನು ಮಾರಾಟ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿರುತ್ತಾರೆ. ಹಲವರು ಕೂಲಿ ಕೆಲಸಕ್ಕೆ ಹೋಗುತ್ತಾರೆ. ಆದರೆ, ದೀಪಾವಳಿ ಹಬ್ಬದ ದಿನದಂದು ಎಲ್ಲರೂ ಊರಿಗೆ ಬರುವ ವಾಡಿಕೆ ಹೊಂದಿದ್ದಾರೆ. ಆದ್ದರಿಂದ ದತ್ತಾಂಶ ಸಂಗ್ರಹದ ಅವಧಿ ವಿಸ್ತರಿಸಬೇಕು’ ಎಂದು ಒತ್ತಾಯಿಸಿದರು.

‘ಸಮೀಕ್ಷೆಯಲ್ಲಿ ಭಾಗವಹಿಸುವ ಶಿಕ್ಷಕರು ತಾಂಡಾಗಳಿಗೆ ಸೂಚನೆ ನೀಡದೇ ಹೋಗುವುದರಿಂದ ಸಮುದಾಯದ ದತ್ತಾಂಶ ಸಂಗ್ರಹಣೆ ಸಾಧ್ಯವಾಗುತ್ತಿಲ್ಲ. ಮತ್ತೆ ಆ ತಾಂಡಾಗಳಿಗೆ ಹೋಗಿ ದತ್ತಾಂಶ ಸಂಗ್ರಹಿಸುವ ಕಾರ್ಯ ನಡೆಯುತ್ತಿಲ್ಲ. ಆದ್ದರಿಂದ ಅಸಮರ್ಪಕ ಮಾಹಿತಿ ಸಲ್ಲಿಸುವ ಬದಲು, ಅವಧಿಯನ್ನು ವಿಸ್ತರಿಸಬೇಕು. ಆಗ ಸಮೀಕ್ಷೆಯಲ್ಲಿ ಎಲ್ಲರೂ ಭಾಗಿಯಾಗಲು ಸಾಧ್ಯವಾಗುತ್ತದೆ’ ಎಂದರು.

‘ಮನ್ಸ ಸಮುದಾಯದ ಹೆಸರು ಸೇರಿಸಿ’

ಬೆಂಗಳೂರು: ‘ಪರಿಶಿಷ್ಟ ಜಾತಿಯಡಿ ಒಳ ಮೀಸಲಾತಿ ಹಂಚಿಕೆ ಕುರಿತ ಸಮೀಕ್ಷೆಯ ನಮೂನೆಯಲ್ಲಿ ‘ಮನ್ಸ’ ಸಮುದಾಯದ ಹೆಸರು ಸೇರ್ಪಡೆ ಮಾಡಿ, ಸಮೀಕ್ಷೆ ನಡೆಸಬೇಕು’ ಎಂದು ತುಲುನಾಡ್ ಮನ್ಸ ಸಮಾಜ ಸೇವಾ ಸಂಘ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ವೆಂಕಣ್ಣ ಕೊಯ್ಯೂರು, ‘ಮನ್ಸ ಸಮುದಾಯದ ಹೆಸರನ್ನು ನಮೂನೆಯಲ್ಲಿ ಉಲ್ಲೇಖಿಸಿಲ್ಲ. ಇದು, ನಮ್ಮ ಜಾತಿಯ ಅಸ್ತಿತ್ವವನ್ನೇ ಅಳಿಸಿ ಹಾಕುವ ಪ್ರಯತ್ನ ಇದಾಗಿದೆ. ರಾಜ್ಯದಲ್ಲಿ 5 ಲಕ್ಷಕ್ಕೂ ಅಧಿಕ ಮಂದಿ ಈ ಸಮುದಾಯದವರಿದ್ದಾರೆ. ಹೀಗಾಗಿ, ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಏಕಸದಸ್ಯ ವಿಚಾರಣಾ ಆಯೋಗ ಈ ಬಗ್ಗೆ ಗಮನ ಹರಿಸಬೇಕು’ ಎಂದು ಒತ್ತಾಯಿಸಿದರು.

ಸಂಘದ ಗೌರವ ಅಧ್ಯಕ್ಷ ಎಂ.ಶಾಂತರಾಂ, ಗೌರವ ಸಲಹೆಗಾರ ಅಚ್ಯುತ ಎಸ್, ಉಪಾಧ್ಯಕ್ಷ ಸಂಜೀವ, ಪ್ರಧಾನ ಕಾರ್ಯದರ್ಶಿ ಉದಯ, ಸಂಘಟನಾ ಕಾರ್ಯದರ್ಶಿ ಎಂ.ರಮೇಶ್ ಬೋಧಿ ಉಪಸ್ಥಿತರಿದ್ದರು.

TENDERING OF REGIMENTAL SHOPS

1. Sealed tenders are invited from interested War Widow/ Widows of def pers killed while on duty/ Disabled Soldiers/ ESM & Spouses/ Widows of ESM subject to license pd of 3 years (extn upto 5 years) for running of Regt Shop at ASC Centre (South), Agram Post, Bengaluru-560007.

S. No	Name of Shop	No of shop	Area Sqft	Loc	EMD
(a)	Health and Wellness Centre	01	1325	Shopping Complex ASC Centre (South)	1,500/-

2. Application form incl terms & conditions can be obtained from ASC Centre (South) at the cost of Rs.100/- each as under :-
(a) Collection of Form - 16 May 2025 to 30 May 2025
(b) Last date of submission - By 1230 hrs on 30 May 2025
3. Queries, if any, may be clarified on Tele No. 080 29900365

Published by: ASC Centre (S)

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ: ಇ–ಜಿಎಸ್‌ಯು–ಇಎಲ್‌ಇ–2025–26–ಒಟಿ–2 ದಿನಾಂಕ 09.05.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಪೆನುಕೊಂಡ ಜಂಕ್ಷನ್‌ನಲ್ಲಿರುವ ಗೂಡ್ಸ್ ಶೆಡ್‌ನ ಉನ್ನತೀಕರಣ/ಆಧುನೀಕರಣಕ್ಕಾಗಿ ವಿದ್ಯುತ್ ವ್ಯವಸ್ಥೆ.	ರೂ. 73,48,636.57

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31–05–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಉಪ ಮುಖ್ಯ ವಿದ್ಯುತ್ ಅಭಿಯಂತರರು, ಗತಿ ಶಕ್ತಿ ಘಟಕ, ಬೆಂಗಳೂರು
ಪಿಯುಬಿ/113/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂಆರ್/2025–26
South Western Railway - SWR SWRRLY SWRRLY

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ : ಬಿ–ಟಿಆರ್‌ಡಿ–29–2025–26–01 ದಿನಾಂಕ: 09.05.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಟಿಎಸ್‌ಎಸ್, ಡೇಟಾ ಎಂಟ್ರಿ ಆಪರೇಟರ್‌ಗಳು, ಸಿಎಡಿ ಆಪರೇಟರ್‌ಗಳು, ಶೆಡ್ಯೂಲಿಂಗ್ ಮತ್ತು ಎನರ್ಜಿ ಮ್ಯಾನೇಜ್‌ಮೆಂಟ್ ಸೆಲ್‌ಗಾಗಿ ಡೇಟಾ ಮ್ಯಾನೇಜ್‌ಮೆಂಟ್ ಆಪರೇಟರ್‌ಗಳು ಎರಡು ವರ್ಷಗಳ ಅವಧಿಗೆ ಬೆಂಗಳೂರು (ಜಿಟಿ ಒಳಗೊಂಡಂತೆ) (ಹೊರತುಪಡಿಸಿ), ಬೈಯ್ಯಪ್ಪನಹಳ್ಳಿ (ಸೇರಿದಂತೆ) ಓಮಲೂರು (ಹೊರತುಪಡಿಸಿ) ಚಿಕ್ಕ ಬಾಣಾವರ (ಒಳಗೊಂಡಂತೆ)–ಸಂಪಿಗೆ ರಸ್ತೆ (ಇಕ್ಲಾಂಗ್ ರಸ್ತೆ) ಬಂಗಾರಪೇಟೆ (ಹೊರತುಪಡಿಸಿ) ಯಲಹಂಕ (ಹೊರತುಪಡಿಸಿ) ವಿಭಾಗಗಳಿಗೆ 24 ತಿಂಗಳಿಗಾಗಿ ಸಿಬ್ಬಂದಿ ನೇಮಕ.	ರೂ. 2,84,83,527/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–05–2025 ರಂದು 12:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.gem.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟ್ರಾಕ್ಷನ್ ಡಿಸ್ಟ್ರಿಬ್ಯೂಷನ್ ಬೆಂಗಳೂರು
ಪಿಯುಬಿ/114/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26
South Western Railway - SWR SWRRLY SWRRLY

IN THE COURT OF THE HONOURABLE ADDL SENIOR CIVIL JUDGE AT K.G.F
MC No.231/2024

Petitioner:
Smt. Shantha Kumari (a), Shantha Rajesh, Aged about 48 Years, W/o Sri.V.Rajesh Babu, Residing at : No 858, 2nd Division, N.T.Block, Oorgaum Post, K.G.F,-560121

V/s

Respondent: Sri.V.Rajesh Babu, Aged about 51 Years, S/o Sri.Venugopal, R/at: No 28,1st cross, PWD Road, Near HDFC ATM, A Narayanapura. Akash Nagar, Bangalore North. Bangalore-560016.

NOTICE

WHEREAS the petitioner above named have filed the above petition for Divorce and other reliefs against the respondent.
NOTICE is issued to the respondent to appear in person or through authorized representative to answer all the questions in regard to the above matter on 26.06.2025 at 11. A.M . Failing to appear on the dated mentioned above the matter will be proceeded as per law, which may be noted.

BY ORDER OF THE COURT
CHIEF MINISTERIAL OFFICER, Court of Honourable Senior Civil Judge & JMFC at Kolar Gold Fields.
Place : K.G.F., Dated : 03.05.2025

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91–8431186388, ಇ–ಮೇಲ್: sabvmcri@gmail.com

ಸಂಖ್ಯೆ:SABVMCRI/E-TENDER/URO/12/2024-25 ದಿನಾಂಕ: 15–05–2025
TENDER No: DME/2024-25/IND0958/CALL-3

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು ಮತ್ತು ಇದರ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಯುರಲಾಜಿ ವಿಭಾಗಕ್ಕೆ ಅವಶ್ಯವಿರುವ **Flexible Ureteronoscope** ನ್ನು ಅಳವಡಿಸುವ ಮತ್ತು ಪೂರೈಕೆ ಮಾಡಲು ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.
1) ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ: **15–05–2025** ರಿಂದ. 2) ಟೆಂಡರ್ ಬಗ್ಗೆ ಆನ್‌ಲೈನ್ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: **17–05–2025 ರ ಸಂಜೆ 5.30 ಗಂಟೆವರೆಗೆ.** 3) ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **22–05–2025 ರ ಸಂಜೆ 5.30 ಗಂಟೆವರೆಗೆ.** 4) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **26–05–2025 ರ ಬೆಳಿಗ್ಗೆ 10.30 ಗಂಟೆಗೆ.** ವಿವರವಾದ ಮಾಹಿತಿಗಾಗಿ ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿನೀಡಿ. ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/692/ಅಡ್ವರ್ಟೋರ್/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
‘ಜಲಭವನ’, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು–560029.

ಟೆಂಡರ್ ಅಧಿಸೂಚನೆ (3ನೇ ಕರೆ)

ಸಂಖ್ಯೆ: KWB/EE/BNG/TA/AE-2/O&M-CPT/240/2025-26 Dt : 13.05.2025
Work Indent No. KUWSDB/2024-25/WS/WORK_INDENT286Call3.
ಕಾಮಗಾರಿಯ ಹೆಸರು: ಚನ್ನಪಟ್ಟಣ ನಗರದ ವಾರ್ಷಿಕ ನೀರು ಸರಬರಾಜು ನಿರ್ವಹಣೆಯಡಿ ಚನ್ನಪಟ್ಟಣ ನಗರ ವ್ಯಾಪ್ತಿಯಲ್ಲಿ ಕೊಳವೆಬಾವಿಯ ಸಬ್ ಮರ್ಸಿಬಲ್ ಪಂಪ್ ಸೆಟ್‌ಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ : **ರೂ. 43,32,070/–.** ಇ.ಎಂ.ಡಿ ಮೊತ್ತ **ರೂ.86,700/–.** ಗುತ್ತಿಗೆ ಕಾಲಾವಧಿ: **12 ತಿಂಗಳು.**
ಟೆಂಡರ್ ವಿವರ: (1) ಟೆಂಡರ್ ಪ್ರಾರಂಭ ದಿನಾಂಕ ಮತ್ತು ಸಮಯ:**16.05.2025 ರ ಬೆಳಿಗ್ಗೆ 11.00 ಗಂಟೆಯ ನಂತರ.** (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **30.05.2025 ಸಂಜೆ 5.30ರ ವರೆಗೆ.** (3) ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **02.06.2025ರ ಬೆಳಿಗ್ಗೆ 11.00 ಗಂಟೆಯ ನಂತರ.**
ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರವರ ಕಛೇರಿ ದೂರವಾಣಿ **080–41106536** ಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
DIPR/CP/YC/680/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬಿಡಿಎ/ಇಇ/ಉತ್ತರ/ಟೆಂಡರ್/ಟಿ–1/2025–26 ದಿನಾಂಕ: 15.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿಪಿ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಆಯುಕ್ತರು, ಬಿಡಿಎ, ಬೆಂಗಳೂರು, ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬಿಡಿಎ, ಬೆಂಗಳೂರು, ಇವರು ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. **ಕೆಲಸದ ಹೆಸರು: (1) ಅರ್ಕಾವತಿ ಬಡಾವಣೆ, 18ನೇ ಬ್ಲಾಕ್‌ನಲ್ಲಿರುವ ಬೈರತಿಖಾನೆ ಗ್ರಾಮದ ಸರ್ವೆ ನಂ.25ರಲ್ಲಿ ಆರ್‌ಸಿಸಿ ಬಾಕ್ಸ್ ಚಿಕ್ಕ ಸೇತುವೆಯ ನಿರ್ಮಾಣ.** ಟೆಂಡರ್‌ಗಿಟ್ಟ ಅಂದಾಜು ವೆಚ್ಚ (ಜಿಎಸ್‌ಟಿ ಹೊರತುಪಡಿಸಿ): **ರೂ.133.53 ಲಕ್ಷಗಳು.** ಇಎಂಡಿ: **ರೂ.2,00,000/–. (2) ಅರ್ಕಾವತಿ ಬಡಾವಣೆ, 18ನೇ ಬ್ಲಾಕ್‌ನಲ್ಲಿರುವ ಬೈರತಿಖಾನೆ ಗ್ರಾಮದ ಸರ್ವೆ ನಂ.26ರಲ್ಲಿ ಆರ್‌ಸಿಸಿ ಸ್ಲ್ಯಾಬ್ ಚಿಕ್ಕ ಸೇತುವೆಯ ನಿರ್ಮಾಣ.** ಟೆಂಡರ್‌ಗಿಟ್ಟ ಅಂದಾಜು ವೆಚ್ಚ (ಜಿಎಸ್‌ಟಿ ಹೊರತುಪಡಿಸಿ): **ರೂ.160.86 ಲಕ್ಷಗಳು.** ಇಎಂಡಿ: **ರೂ.2,41,000/–.** ಪ್ರತೀ ಕಾಮಗಾರಿಗೂ ಸೇರಿದಂತೆ ಪೂರ್ಣಗೊಳಿಸಲು ಕಾಲಾವಧಿ: **ತಲಾ 6 ತಿಂಗಳು.** ಟೆಂಡರ್ ಪ್ರಕ್ರಿಯೆ ಶುಲ್ಕ: **ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್** ಪರಿವೀಕ್ಷಿಸಿ. ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ:16.05.2025** ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 31.05.2025, ಸಂಜೆ 4.00 ಗಂಟೆವರೆಗೆ.** ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 080–46010000/6894877 ಗೆ ಕರೆಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬಿಡಿಎ, ಬೆಂಗಳೂರು.

ನಗರಸಭೆ ಕಾರ್ಯಾಲಯ ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂರವಾಣಿ: 080–27722135,
Email : itstaff_ulb_nelamangala@yahoo.com

ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/45/2025–26 ದಿನಾಂಕ: 14.05.2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KC ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ನೀರು ಸರಬರಾಜು ವಿಭಾಗಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಾಲ್ವ್ ಮೆನ್‌ಗಳು ಹಾಗೂ ಪ್ಲಂಬರ್ ಗಳನ್ನು ಸರಬರಾಜು ಮಾಡಲು ವಾರ್ಷಿಕ ನಿರ್ವಹಣೆಗೆ ಟೆಂಡರ್ ಕೈಗೊಳ್ಳಲು ಒಟ್ಟು ಮೊತ್ತ **ರೂ: 41.65 ಲಕ್ಷಗಳ** ಕೈಗೊಳ್ಳುವ ಕಾಮಗಾರಿಗಳ ಐಟಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ	ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/685/ಎಸ್‌ಎಸ್‌ಸಿ/2025–26

ಭಾರತೀಯ ಬುಡಕಟ್ಟು ಸಹಕಾರಿ ಮಾರಾಟ ಅಭಿವೃದ್ಧಿ ಒಕ್ಕೂಟ ನಿಗಮ (ಟ್ರೈಫೆಡ್)
(ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ)
ಪ್ರಧಾನ ಕಚೇರಿ: ಎನ್‌ಎಸ್‌ಐಸಿ ಬಿಜಿನೆಸ್ ಪಾರ್ಕ್, ಎನ್‌ಎಸ್‌ಐಸಿ ಎಸ್ಟೇಟ್, ಒಖ್ಲಾ ಫೇಸ್–3, ಒಖ್ಲಾ ಕೈಗಾರಿಕಾ ಪ್ರದೇಶ, ನವದೆಹಲಿ–110020
ಸತ್ಯಮೇವ ಜಯತೇ ಟ್ರೈಫೆಡ TRIFED

ಆಸಕ್ತಿ ವ್ಯಕ್ತಪಡಿಸುವಿಕೆ
ಉಲ್ಲೇಖ: ಟ್ರೈಫುಡ್/ಒ&ಎಂ/2025

ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿನ ಭಾರತೀಯ ಬುಡಕಟ್ಟು ಸಹಕಾರಿ ಮಾರಾಟ ಅಭಿವೃದ್ಧಿ ಒಕ್ಕೂಟ ನಿಗಮ (ಟ್ರೈಫೆಡ್) ಇವರು, ತಮ್ಮ ‘ಟ್ರೈಫುಡ್’ ಉಪಕ್ರಮದ ಅಡಿಯಲ್ಲಿ, ಪ್ರಧಾನಮಂತ್ರಿ ಕಿಸಾನ್ ಸಂಪದ ಯೋಜನೆ ಅಡಿಯಲ್ಲಿ ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯ (ಎಂಒಎಫ್‌ಪಿಐ) ಮೂಲಕ ಬ್ಯಾಕ್‌ವಾರ್ಡ್ ಮತ್ತು ಫಾರ್‌ವಾರ್ಡ್ ಲಿಂಕೇಜ್‌ಗಳಿಗಾಗಿನ ಯೋಜನೆ ಅಡಿಯಲ್ಲಿ, ಕಿರು ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಒಂದು ಎಂಎಫ್‌ಪಿ ಸಂಸ್ಕರಣಾ ಘಟವನ್ನು ಸ್ಥಾಪಿಸಿದ್ದಾರೆ.
ಛತ್ತೀಸ್‌ಗಢದ ಜಗದಾಲ್‌ಪುರದಲ್ಲಿನ ಈ ಟ್ರೈಫುಡ್ ಘಟಕದ ಚಾಲನೆ ಮತ್ತು ನಿರ್ವಹಣೆಗಾಗಿ ಆಪರೇಟರ್ ಎಂಬುದಾಗಿ ಕಾರ್ಯನಿರ್ವಹಿಸಲಿಕ್ಕಾಗಿ, ಟ್ರೈಫೆಡ್ ಮುಖಾಂತರ ಪ್ರತಿಷ್ಠಿತ ಖಾಸಗಿ/ಸರ್ಕಾರಿ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ದಿನಾಂಕಗಳು
1.	ಪ್ರಕಟಣೆಯ ದಿನಾಂಕ	16.05.2025
2.	ಸಲ್ಲಿಕೆಗೆ ಕೊನೆಯ ದಿನಾಂಕ	16.05.2025 (ಸಂಜೆ 4:00 ಗಂಟೆ)
3.	ಇಒಐ ಸಂಸ್ಕರಣಾ ಶುಲ್ಕ (ಹಿಂದಿರುಗಿಸಲಾಗದು)	ರೂ. 5,000/– (ರೂಪಾಯಿ ಐದು ಸಾವಿರ ಮಾತ್ರ)
4.	ಬಿಡ್‌ಪೂರ್ವ ಸಭೆ	ರೂ. 28.05.2025
5.	ತಾಂತ್ರಿಕ ಬಿಡ್ ತೆರೆಯುವಿಕೆ	16.05.2025 (ಸಂಜೆ 5:00 ಗಂಟೆ)

ಟೆಂಡರ್ ದಸ್ತಾವೇಜುಗಳನ್ನು https://trifed.tribal.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

CBC 43104/12/0003/2526 ಜಿಎಂ (ಐ/ಸಿ), ಸಿಎಡಿ

ಗೋಡೆ ಕೊರೆದು ಒಳಕ್ಕೆ ನುಗ್ಗಿದ್ದ ಆರೋಪಿ ಬಂಧಿಸಿದ ಬೊಮ್ಮನಹಳ್ಳಿ ಠಾಣೆಯ ಪೊಲೀಸರು

ಅಂಗಡಿಗೆ ನುಗ್ಗಿ 85 ಮೊಬೈಲ್ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಅಂಗಡಿಯ ಹಿಂಬದಿಯ ಗೋಡೆ ಕೊರೆದು ಒಳಕ್ಕೆ ನುಗ್ಗಿ, ವಿವಿಧ ಕಂಪನಿಗಳ 85 ಮೊಬೈಲ್ ಕಳ್ಳತನ ಮಾಡಿದ್ದ ಆರೋಪಿಯನ್ನು ಬೊಮ್ಮನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂನ ಇಕ್ರಂ ಉಲ್ ಹಸನ್ ಬಂಧಿತ ಆರೋಪಿ.

ಅಂಗಡಿ ಒಳಕ್ಕೆ ನುಗ್ಗುವಾಗ ಬಟ್ಟೆ ಹರಿದುಹೋಗುವ ಸಾಧ್ಯತೆಯಿದೆ ಎಂದು ಭಾವಿಸಿದ್ದ ಕಳ್ಳ, ಬಟ್ಟೆಯನ್ನು ಕಳಚಿ ನಗ್ನಗೊಂಡು ಒಳಕ್ಕೆ ನುಗ್ಗಿರುವ ದೃಶ್ಯವು ಅಂಗಡಿಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಬೊಮ್ಮನಹಳ್ಳಿಯ ಹೊಂಗಸಂದ್ರದ ದಿನೇಶ್ ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ದಿನೇಶ್ ಅವರು ಹನುಮಾನ್ ಟೆಲಿಕಾಂ ಮೊಬೈಲ್ ಶಾಪ್ ನಡೆಸುತ್ತಿದ್ದರು. ಅವರ ಶಾಪ್‌ನಲ್ಲಿ ಮೇ 9ರ ಮಧ್ಯರಾತ್ರಿ ಕಳ್ಳತನವಾಗಿತ್ತು.

ಆರು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ ಅರೆಕೆರೆಯಲ್ಲಿ ನೆಲಸಿದ್ದ. ಆರಂಭದಲ್ಲಿ ಸೆಂಟ್ರಲ್ ಮಾಲ್‌ನಲ್ಲಿ ಕೆಲಸ ಮಾಡುತ್ತಿದ್ದ. ಬಳಿಕ ಕೆಲಸ ತೊರೆದು ಡಾಮಿನೋಸ್ ಶಾಪ್‌ವೊಂದರಲ್ಲಿ ಸ್ವಚ್ಛತಾ ವಿಭಾಗದಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಹೆಚ್ಚು ಹಣ ಸಂಪಾದನೆಗಾಗಿ ಕಳ್ಳತನಕ್ಕೆ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಅಂಗಡಿ ಮಾಲೀಕ ದಿನೇಶ್ ಅವರು ಮೇ 9ರಂದು ಎಂದಿನಂತೆ ಅಂಗಡಿಗೆ ಬೀಗ ಹಾಕಿ ಮನೆಗೆ ತೆರಳಿದ್ದರು. ಪೂರ್ವ ಸಂಚಿನಂತೆ ಅಂದೇ ಮಧ್ಯರಾತ್ರಿ ಅಂಗಡಿಯ ಬಳಿಗೆ ಬಂದಿದ್ದ ಆರೋಪಿ, ಅಂಗಡಿ ಹಿಂಬದಿಯ ಗೋಡೆಯನ್ನು ಗ್ರೀಲ್ ಹಾಗೂ ಇತರೆ ಆಯುಧದಿಂದ ಕೊರೆದಿದ್ದಾನೆ. ಬಳಿಕ ಮುಖಕ್ಕೆ ಮಾಸ್ಕ್ ಹಾಕಿಕೊಂಡು, ಬಟ್ಟೆಗಳನ್ನು ಕಳಚಿ ನಗ್ನವಾಗಿ ಒಳಕ್ಕೆ ನುಗ್ಗಿದ್ದಾನೆ. ನಂತರ, ಲಕ್ಷಾಂತರ ರೂಪಾಯಿ ಮೌಲ್ಯದ ಮೊಬೈಲ್‌ಗಳನ್ನು ಕ್ಷಣಾರ್ಧದಲ್ಲಿ ದೋಚಿ ಪರಾರಿಯಾಗಿದ್ದ. ಮರು ದಿನ ಬೆಳಿಗ್ಗೆ ಅಂಗಡಿ ಮಾಲೀಕ ಬಂದು ನೋಡಿ ಕಳ್ಳತನ ನಡೆದಿರುವುದು ಗೊತ್ತಾಗಿತ್ತು. ಆದರೆ, ಕಳ್ಳನ ಕೃತ್ಯ ಅಂಗಡಿಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅದನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರಂಭದಲ್ಲಿ 2ರಿಂದ 3 ಮಂದಿ ಕಳ್ಳರು ಕೃತ್ಯ ಎಸಗಿದ್ದಾರೆ ಎಂದು ಅಂದಾಜಿಸಲಾಗಿತ್ತು. ಆದರೆ, ಅಂಗಡಿ ಸಮೀಪದ ಸಿಸಿಟಿವಿ ಕ್ಯಾಮೆರಾ ಹಾಗೂ ಅಂಗಡಿ ಒಳಗಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ ಒಬ್ಬನೇ ಕೃತ್ಯ ಎಸಗಿದ್ದಾನೆ ಎಂಬುದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

‘ಬಟ್ಟೆ ಧರಿಸಿ ಒಳಗೆ ಹೋದರೆ ಬಟ್ಟೆ ಹರಿದು ಹೋಗಲಿದೆ. ಜತೆಗೆ, ಬಟ್ಟೆಯೂ ಗಲೀಜು ಆಗುವ ಸಾಧ್ಯತೆಯಿದೆ. ಮೊಬೈಲ್ ಕಳ್ಳತನ ಮಾಡಿಕೊಂಡು ಪರಾರಿ ಆಗುವಾಗ ಯಾರಿಗಾದರೂ ಸಂಶಯ ಬಂದು ಮಾಹಿತಿ ನೀಡುತ್ತಾರೆ ಎಂದು ಹೆದರಿ ನಗ್ನವಾಗಿ ಒಳಕ್ಕೆ ನುಗ್ಗಿ ಕಳ್ಳತನ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಕಳ್ಳತನ ನಡೆಸಲು ಕೊರೆದಿದ್ದ ಗೋಡೆ

ಮುಖ್ಯಾಂಶಗಳು
- ಬಟ್ಟೆ ಕಳಚಿ ಕೃತ್ಯ
- ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆ
- ಮೇ 9ರ ಮಧ್ಯರಾತ್ರಿ ಕಳ್ಳತನ

ಅಪರಾಧ ಸುದ್ದಿ

ಇ.ಡಿ ಮಾಜಿ ಅಧಿಕಾರಿ ವಿರುದ್ಧ ಎಫ್‌ಐಆರ್

ವಂಚನೆ ನಡೆಸಿದ ಆರೋಪದಡಿ ಜಾರಿ ನಿರ್ದೇಶನಾಲಯದ(ಇ.ಡಿ) ಮಾಜಿ ಸಹಾಯಕ ನಿರ್ದೇಶಕ ಸೇರಿ ನಾಲ್ವರ ವಿರುದ್ಧ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಸೋಮಶೇಖರ್

ಪೀಣ್ಯ ಕೈಗಾರಿಕಾ ಪ್ರದೇಶದ ವಾಫೆ ಎಂಜಿನಿಯರಿಂಗ್‌ನ ನಿರ್ದೇಶಕ ನಿರಂಜನ್ ಎಸ್. ಮಯೂರ್ ಹಾಗೂ ಅವರ ತಂದೆ, ಜಾರಿ ನಿರ್ದೇಶನಾಲಯದ ಮಾಜಿ ಸಹಾಯಕ ನಿರ್ದೇಶಕ ಸೋಮಶೇಖರ್, ಎಲ್‌ಎಲ್‌ಎನ್ ಸಿಎನ್‌ಸಿಟಿ ಟೆಕ್‌ನ ನಿರ್ದೇಶಕ ಅಶೋಕ್, ವಾಫೆ ಎಂಜಿನಿಯರಿಂಗ್‌ನ ನಿರ್ದೇಶಕ ಎಂ.ಎ.ಕಾರ್ತಿಕ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಜಾಲಹಳ್ಳಿ ನಿವಾಸಿ ಸುಹಾಸ್ ಎಂಬುವರು ದೂರು ನೀಡಿದ್ದರು.

‘ಸೋಮಶೇಖರ್ ಮತ್ತು ಅವರ ಪುತ್ರ ನಿರಂಜನ್ ಎಸ್. ಮಯೂರ್ ಅವರು ಕಂಪನಿಯ ಹಣ ಮತ್ತು ಆಸ್ತಿಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ನಾನು ಸಂಸ್ಥೆಯ ಮಾರ್ಕೆಟಿಂಗ್ ನಿರ್ದೇಶಕನಾಗಿದ್ದರೂ ಸಂಸ್ಥೆಯ ನಿಯಂತ್ರಣವು ಸಂಪೂರ್ಣವಾಗಿ ಸೋಮಶೇಖರ್ ಬಳಿಯೇ ಇತ್ತು. ಸೋಮಶೇಖರ್ ಅವರು ಆಗ ಸರ್ಕಾರಿ ಹುದ್ದೆಯಲ್ಲಿದ್ದ ಕಾರಣಕ್ಕೆ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಗದೆ, ಪುತ್ರನ ಮೂಲಕ ಕೆಲಸ ಮಾಡಿಸುತ್ತಿದ್ದರು’ ಎಂದು ಸುಹಾಸ್ ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ.

‘2021ರ ಡಿಸೆಂಬರ್‌ನಿಂದ 2023ರ ಡಿಸೆಂಬರ್‌ವರೆಗೆ ವಾಫೆ ಎಂಜಿನಿಯರಿಂಗ್ ಸಂಸ್ಥೆಯಿಂದ ಅಶೋಕ ಅವರ ಎಲ್‌ಎಲ್‌ಎನ್ ಸಿಎನ್‌ಸಿಟಿ ಟೆಕ್‌ಗೆ ಯಂತ್ರಗಳ ಖರೀದಿ, ಏರೋಸ್ಪೇಸ್ ಉತ್ಪಾದನೆಗಾಗಿ ₹2.15 ಕೋಟಿ ವರ್ಗಾವಣೆ ಮಾಡಿದೆ. ಆದರೆ, ಖರೀದಿಗೆ ಆದೇಶ ಸಲ್ಲಿಸಲಾದ ಉಪಕರಣಗಳು ಮಾತ್ರ ಕಂಪನಿಗೆ ತಲುಪಿಲ್ಲ. ಬದಲಿಗೆ, ಆ ಹಣವನ್ನು ಸಂಸ್ಥೆ ಹೆಸರಿನಲ್ಲಿ ದುರುಪಯೋಗ ಪಡಿಸಿಕೊಳ್ಳಲಾಗಿದೆ. ಅದನ್ನು ಪ್ರಶ್ನಿಸಿದಾಗ ನನಗೆ ಬೆದರಿಕೆ ಹಾಕಿ ಹಲವಾರು ಚೆಕ್‌ಗಳಿಗೆ ಸಹಿ ಮಾಡಿಸಿಕೊಂಡಿದ್ದಾರೆ’ ಎಂದು ಸುಹಾಸ್ ದೂರಿದ್ದಾರೆ.

ಬೇನಾಮಿ ಹೆಸರಿನಲ್ಲಿ ಕಂಪನಿ ಸ್ಥಾಪಿಸಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ. ವಾಫೆ ಎಂಜಿನಿಯರಿಂಗ್ ಸಂಸ್ಥೆಗೆ ₹80 ಲಕ್ಷ ನಷ್ಟವಾಗಿದೆ. ಆದ್ದರಿಂದ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸುಹಾಸ್ ದೂರಿನಲ್ಲಿ ಕೋರಿದ್ದಾರೆ.

‘ಸೋಮಶೇಖರ್ ಅವರು ಇ.ಡಿಯ ಮಾಜಿ ಸಹಾಯಕ ನಿರ್ದೇಶಕರೇ ಎಂಬುದರ ಬಗ್ಗೆಯೂ ತನಿಖೆ ನಡೆಯುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಾಲ ವಾಪಸ್ ಕೇಳಿದ್ದಕ್ಕೆ ಕೊಲೆಗೆ ಯತ್ನ

ಮಹಿಳೆಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹನುಮಂತನಗರದ ನಿವಾಸಿ, ಕ್ಯಾಬ್ ಚಾಲಕ ರಾಜು(46) ಬಂಧಿತ ಆರೋಪಿ.

ಏ.12ರಂದು ಮಹಿಳೆಗೆ ಚಾಕುವಿನಿಂದ ಇರಿದು ಆರೋಪಿ ಪರಾರಿ ಆಗಿದ್ದ. ಮಹಿಳೆ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿ ರಾಜು ಹಾಗೂ ದೂರುದಾರೆ ಮಹಿಳೆ ಅಕ್ಕಪಕ್ಕದ ಮನೆಯ ನಿವಾಸಿಗಳು. ಇಬ್ಬರ ನಡುವೆ ತುಂಬಾ ಆತ್ಮೀಯತೆ ಇತ್ತು. ಹೀಗಾಗಿ, ಮಹಿಳೆ ರಾಜುಗೆ ₹5 ಲಕ್ಷ ಸಾಲ ನೀಡಿದ್ದರು. ಏ.12ರಂದು ಇಬ್ಬರೂ ಕೆಂಗೇರಿಯ ಅಪಾರ್ಟ್‌ಮೆಂಟ್‌ಗೆ ಬಂದಿದ್ದರು. ಆಗ ಸಾಲ ವಾಪಸ್ ನೀಡುವಂತೆ ಮಹಿಳೆ, ಆರೋಪಿಯ ಬಳಿ ಕೇಳಿದ್ದರು. ಆಗ ಗಲಾಟೆ ನಡೆದು ಮಹಿಳೆಯನ್ನು ಇರಿದು ಕೊಲೆಗೆ ಯತ್ನಿಸಲಾಗಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಮಹಿಳೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದರು. ಚೇತರಿಸಿಕೊಂಡ ಬಳಿಕ ಆರೋಪಿ ವಿರುದ್ಧ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಬಾಲಕಿ ಕೊಲೆ: ತನಿಖೆ ತೀವ್ರ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಹೋಬಳಿ ವ್ಯಾಪ್ತಿಯ ರೈಲು ಹಳಿ ಬಳಿ ಅರೆ ನಗ್ನಾವಸ್ಥೆಯಲ್ಲಿ ಪತ್ತೆಯಾಗಿದ್ದ 15 ವರ್ಷದ ಬಾಲಕಿ ಶವದ ಪ್ರಕರಣ ದಿನದಿಂದ ದಿನಕ್ಕೆ ಜಟಿಲವಾಗುತ್ತಿದೆ. ಬಾಲಕಿಯದ್ದು ಕೊಲೆಯೊ, ಅಪಘಾತವೊ ಅಥವಾ ಅತ್ಯಾಚಾರ ಎಸಗಿ ನಡೆಸಿರುವ ಹತ್ಯೆಯೊ ಎಂಬ ಪ್ರಶ್ನೆಗಳು ಎದ್ದಿರುವ ಬೆನ್ನಲ್ಲೇ ಪೊಲೀಸರು ತನಿಖೆಯನ್ನು ತೀವ್ರಗೊಳಿಸಿದರು.

ಬಾಲಕಿ ತಾಯಿ ಸೇರಿದಂತೆ ಕುಟುಂಬದವರನ್ನು ಮತ್ತೊಮ್ಮೆ ಬಿಡದಿ ಠಾಣೆಗೆ ಕರೆಯಿಸಿ, ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ನೇತೃತ್ವದಲ್ಲಿ ವಿಚಾರಣೆ ನಡೆಸಿ ಕೆಲ ಮಾಹಿತಿಗಳನ್ನು ಕಲೆ ಹಾಕಲಾಯಿತು. ಕುಟುಂಬದವರೇ ಅತ್ಯಾಚಾರದ ಶಂಕೆ ವ್ಯಕ್ತಪಡಿಸಿರುವುದರಿಂದ ಕೆಲ ಅಧಿಕಾರಿಗಳು ಮತ್ತೊಮ್ಮೆ ಘಟನಾ ಸ್ಥಳವನ್ನು ಪರಿಶೀಲನೆ ನಡೆಸಿದರು.

ಸಂಸದ, ಐಜಿಪಿ ಭೇಟಿ: ಈ ಎಲ್ಲಾ ಬೆಳವಣಿಗೆಗಳ ಮಧ್ಯೆ ಸಂಸದ ಡಾ. ಸಿ.ಎನ್. ಮಂಜುನಾಥ್, ಕೇಂದ್ರ ವಲಯದ ಐಜಿಪಿ ಲಾಭೂ ರಾಮ್, ಹಿರಿಯ ಸಿವಿಲ್ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸವಿತ ಪಿ.ಆರ್ ಬೆಳಗ್ಗೆ ಭೇಟಿ ಗ್ರಾಮಕ್ಕೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಪ್ರಕರಣದ ತನಿಖೆ ಸೇರಿದಂತೆ ಇದುವರೆಗಿನ ಬೆಳವಣಿಗೆಗಳ ಕುರಿತು ಲಾಭೂ ರಾಮ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ, ಡಿವೈಎಸ್ಪಿಗಳಾದ ಶ್ರೀನಿವಾಸ್, ಪ್ರವೀಣ್ ಕುಮಾರ್, ಗಿರಿ, ಪ್ರಕರಣ ತನಿಖಾಧಿಕಾರಿ ಬಿಡದಿ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಸೇರಿದಂತೆ ಇತರ ಅಧಿಕಾರಿಗಳೊಂದಿಗೆ ರಾತ್ರಿ ಸಭೆ ನಡೆಸಿ, ಮಹತ್ವದ ಸೂಚನೆ ನೀಡಿದರು.

ಕಗ್ಗಂಟಾಗಿರುವ ಪ್ರಕರಣದ ತನಿಖೆಗಾಗಿ ಎಸ್‌ಪಿ ಅವರು 3 ತಂಡಗಳನ್ನು ರಚಿಸಿದ್ದಾರೆ.

‘ಕಟ್ಟಡ ಬೇಡ, ಮರ ಉಳಿಸಿ’

'ಪರಿಸರಕ್ಕಾಗಿ ನಾವು' ಸಂಘಟನೆಯ ಸದಸ್ಯರು ನಗರದ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ ಮರ,ಜೀವ ಪರಿಸರ ವ್ಯವಸ್ಥೆ ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ಪ್ರದೇಶದಲ್ಲಿರುವ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಉದ್ದೇಶದ ಕಟ್ಟಡ ಕಟ್ಟಲು ಅವಕಾಶ ಕೊಡದೆ, ಮರಗಳು ಮತ್ತು ಜೀವ ಪರಿಸರ ವ್ಯವಸ್ಥೆ ಉಳಿಸಿಕೊಳ್ಳಬೇಕು ಎಂದು ‘ಪರಿಸರಕ್ಕಾಗಿ ನಾವು’ ಸಂಘಟನೆಯ ಅಧ್ಯಕ್ಷ ಎ.ಟಿ.ರಾಮಸ್ವಾಮಿ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ 368 ಮರಗಳನ್ನು ಕಡಿಯಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಸ್ಥಳಕ್ಕೆ ಸಂಘಟನೆ ಸದಸ್ಯರೊಂದಿಗೆ ಭೇಟಿ ನೀಡಿ ಮರಗಳು ಮತ್ತು ಜೀವ ಪರಿಸರ ವ್ಯವಸ್ಥೆ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

ಸರ್ಕಾರಕ್ಕೆ ಜನರ ಆರೋಗ್ಯ ಮುಖ್ಯ ಆಗುತ್ತಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಮರಗಳ ಹನನವಾಗುತ್ತಿದೆ ಎಂದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, ‘1973ರಲ್ಲಿ ಇದ್ದ ಹಸಿರಿನ ಹೊದಿಕೆ 2023ರಲ್ಲಿ ಶೇಕಡಾ 90 ರಷ್ಟು ಕಡಿಮೆ ಆಗಿದೆ. ಇಲ್ಲಿನ ಮರಗಳ ಜೊತೆಗೆ ಪಕ್ಷಿ, ಕ್ರಿಮಿ ಕೀಟಗಳು, ಜೇನು ಜೇಡ ದುಂಬಿ ಇತ್ಯಾದಿ ಜೀವ ಸಂಕುಲವನ್ನು ಸಂರಕ್ಷಣೆ ಮಾಡಲು ಸಂಕಲ್ಪ ಮಾಡಬೇಕು’ ಎಂದು ಹೇಳಿದರು.

ಟ್ರೀ ಡಾಕ್ಟರ್ ವಿಜಯ್ ನಿಶಾಂತ್ ಅವರು, ಈ ಭಾಗದಲ್ಲಿ 70ಕ್ಕೂ ಹೆಚ್ಚು ಪಾರಂಪರಿಕ ಮರಗಳಿವೆ ಎಂದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪಾರ್ವತಿ ಶ್ರೀರಾಮ್, ಸಂಘಟನಾ ಕಾರ್ಯದರ್ಶಿ ಸಿ.ಎಚ್. ಸಿಕಂದರ್, ಕಾರ್ಯಾಧ್ಯಕ್ಷ ಆಂಜನೇಯ ರೆಡ್ಡಿ , ರಾಜ್ಯ ಕಾರ್ಯದರ್ಶಿಗಳಾದ ಕೆ. ಪಾಪೇಗೌಡ, ಮಂಜುನಾಥ್ ಸಣ್ಣಿಂಗಣ್ಣನವರ, ವೇಣುಗೋಪಾಲ, ಅರ್ಚನಾ ರಾವ್, ನಮ್ಮ ಬೆಂಗಳೂರು ಫೌಂಡೇಶನ್‌ನ ವಿನೋದ್ ಜೇಕಬ್, ಜೋಸೆಫ್ ಹೂವರ್, ಜೇಮ್ಸ್ ಅಲೆಕ್ಸಾಂಡರ್, ಡಾ ಟಿ. ಜೆ.ರೇಣುಕಾ ಪ್ರಸಾದ್, ಪತ್ರಕರ್ತ ಇಂದೂಧರ ಹೊನ್ನಾಪುರ, ಪರಿಸರ ಮಂಜು ಹಾಜರಿದ್ದರು.

ಯಲಹಂಕದ ಇತಿಹಾಸ ಪ್ರಸಿದ್ಧ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು

ಮಹೇಶ್ವರಮ್ಮನವರ ಕರಗ ಮಹೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಇತಿಹಾಸ ಪ್ರಸಿದ್ಧ ವಹ್ನಿಕುಲ ಕ್ಷತ್ರಿಯ ಆರಾಧ್ಯದೇವಿ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವ ಹಾಗೂ ವಿವಿಧ ದೇವರುಗಳ ಫಲ್ಲಕ್ಕಿ ಉತ್ಸವ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ದೇವಾಲಯದಿಂದ ಬುಧವಾರ ಮಧ್ಯರಾತ್ರಿ 1.45ಕ್ಕೆ ಹೊರಟ ಹೂವಿನ ಕರಗ, ಕೋಟೆಬೀದಿ, ಬೆಸ್ತರಬೀದಿ, ಕಾಮಾಕ್ಷಮ್ಮ ಬಡಾವಣೆ, ಹೊಸಬೀದಿ, ಗಾಂಧಿನಗರ, ಮನವರ್ತಿ ತೋಟ, ಡೌನ್ ಬಜಾರ್ ರಸ್ತೆ, ಮಾರುತಿನಗರ ಹಾಗೂ ವೆಂಕಟಾಲ ಮತ್ತಿತರ ಬಡಾವಣೆಗಳಲ್ಲಿ ಸಂಚರಿಸಿ, ಬೆಳಗ್ಗೆ 9.15ಕ್ಕೆ ಮತ್ತೆ ದೇವಾಲಯಕ್ಕೆ ಆಗಮಿಸಿತು.

ಶಕ್ತಿದೇವತೆ ಮಹೇಶ್ವರಮ್ಮನವರ ಕರಗ, ಮನೆಗಳ ಮುಂದೆ ಬಂದಾಗ ಮಹಿಳೆಯರು ಆರತಿಬೆಳಗಿ ಹೂವಿನ ಅರ್ಚನೆಮಾಡಿ ಭಕ್ತಿಯಿಂದ ಸ್ವಾಗತಿಸಿದರು. ಸುತ್ತಮುತ್ತಲ ಗ್ರಾಮಗಳ 30 ದೇವರುಗಳ ಅಲಂಕೃತಗೊಂಡಿದ್ದ ಪಲ್ಲಕ್ಕಿ ಉತ್ಸವ ಕರಗ ಮಹೋತ್ಸವಕ್ಕೆ ವಿಶೇಷ ಮೆರುಗು ನೀಡಿತು. ಸುತ್ತಮುತ್ತಲ ಗ್ರಾಮಗಳ ಸಾವಿರಾರು ಜನರು ಕರಗ ವೀಕ್ಷಿಸಿದರು. ಮುನಿರಾಜು ಅವರು 4ನೇ ಬಾರಿಗೆ ಕರಗ ಹೊತ್ತಿದ್ದರು.

ಕರಗ ಮಹೋತ್ಸವದ ಹಿನ್ನೆಲೆಯಲ್ಲಿ ಕೆರೆಯ ಆವರಣದಲ್ಲಿರುವ ಕರಗ ಮಂಟಪವನ್ನು ವಿಶೇಷ ಹೂವುಗಳು ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಗಂಗಮ್ಮ ದೇವಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

18 ವರ್ಷ ಮೇಲ್ಪಟ್ಟವರಿಗೆ ಬಿಸಿಜಿ ಲಸಿಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹದಿನೆಂಟು ವರ್ಷಕ್ಕಿಂತ ಮೇಲ್ಪಟ್ಟ ಪ್ರತಿಯೊಬ್ಬರೂ ಬಿಸಿಜಿ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಮಹದೇವಪುರ ಬಿಬಿಎಂಪಿ ವಲಯ ಅರೋಗ್ಯ ವೈದ್ಯಾಧಿಕಾರಿ ಡಾ.ವಿಶ್ವೇಶ್ವರಯ್ಯ ಹೇಳಿದರು.

ಕೆ.ಆರ್.ಪುರದ ತಾಲ್ಲೂಕು ಆಸ್ಪತ್ರೆಯಲ್ಲಿ ಕ್ಷಯಮುಕ್ತ ಭಾರತಕ್ಕಾಗಿ ವಯಸ್ಕರಿಗೆ ಬಿಸಿಜಿ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕ್ಷಯರೋಗ ಮುನ್ನೆಚ್ಚರಿಕೆ ಕ್ರಮವಾಗ ಬಿಸಿಜಿ ಲಸಿಕೆ ನೀಡುವ ಕಾರ್ಯಕ್ರಮ ಎಲ್ಲೆಡೆಯೂ ಆರಂಭವಾಗಿದೆ. ಪ್ರತಿಯೊಬ್ಬ ವಯಸ್ಕರ ಲಸಿಕೆ ಹಾಕಿಸಿಕೊಂಡು ರೋಗ ತಡೆಗಟ್ಟಬೇಕಿದೆ ಎಂದರು.

ಕ್ಷಯರೋಗ ಪ್ರಯೋಗಾಲಯದ ಹಿರಿಯ ಮೇಲ್ವಿಚಾರಕಿ ಮುತ್ತುರಾಮನ್, ಕೆ.ಆರ್.ಪುರ, ದೇವಸಂದ್ರ ಹಾಗೂ ಬಸವನಪುರ ವಾರ್ಡ್‌ನಲ್ಲಿ 115 ಕ್ಷಯರೋಗ ಬಾಧಿತರಿದ್ದು, ಅವರ ಸಂಪರ್ಕದಲ್ಲಿರುವವರಿಗೂ ಲಸಿಕೆ ನೀಡಲಾಗುವುದು ಎಂದರು.

ಸಂಕ್ಷಿಪ್ತ ಸುದ್ದಿ

ಬೈಕ್‌ನಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಉಲ್ಲಾಳದ ಸಮೀಪದ ಬೈಕ್‌ನಿಂದ ಬಿದ್ದು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ.

ಉಲ್ಲಾಳ ಸಮೀಪದ ಶಿರ್ಕೆ ನಿವಾಸಿ ಕೀರ್ತಿ(25) ಮೃತ ಕಾರ್ಮಿಕ. ಮನೆ ಸಮೀಪದಲ್ಲಿದ್ದ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಬುಧವಾರ ರಾತ್ರಿ ಉಲ್ಲಾಳ ಜಂಕ್ಷನ್‌ನಿಂದ ಮರಿಯಪ್ಪನಪಾಳ್ಯ ಜಂಕ್ಷನ್ ಕಡೆಗೆ ಹೋಗುವಾಗ ಪಿವಿಸಿ ಶಾಲೆ ಬಳಿ ಬೈಕ್ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಕೂಡಲೇ ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಅವರು ಮೃತಪಟ್ಟಿದ್ದಾರೆ.

ಎಂ.ಕೆ. ನಾಯಕ್‌ಗೆ ‘ನುಡಿಸಿರಿ ಪ್ರಶಸ್ತಿ’

ಬೆಂಗಳೂರು: ಕರ್ನಾಟಕ ವಿಕಾಸ ರಂಗವು ಕವಿ ಜರಗನಹಳ್ಳಿ ಶಿವಶಂಕರ್ ಅವರ ಸ್ಮರಣಾರ್ಥ ನೀಡುವ ‘ನುಡಿಸಿರಿ ಪ್ರಶಸ್ತಿ’ಗೆ ಕವಿ ಮಾಸ್ಕೇರಿ ಎಂ.ಕೆ. ನಾಯಕ್ ಆಯ್ಕೆಯಾಗಿದ್ದಾರೆ.

ಎಂ.ಕೆ. ನಾಯಕ್

ಈ ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ. ಉತ್ತರ ಕನ್ನಡ ಜಿಲ್ಲೆಯವರಾದ ಎಂ.ಕೆ. ನಾಯಕ್ ಅವರು, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಜೂನ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಗುವುದು ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಸ್ಟ್ ವೆಸ್ಟ್ ಅಕಾಡೆಮಿ, ಸಿಬಿಎಸ್‌ಇ 10ನೇ ತರಗತಿ ಸಾಧಕರು

ಮಾನ್ಯ ಅರವಿಂದ್ (ಶೇ 97.6)

ಪಬ್ಬಿಸೆಟ್ಟಿ ಶ್ರೀನಿವಿತ (ಶೇ 98)

ಶ್ರೀಸ್ಕಂದ ವಿ (ಶೇ 97)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಆಯುಕ್ತರವರ ಕಛೇರಿ, ನೇಮಕಾತಿ ಮತ್ತು ವಿಚಾರಣೆ ವಿಭಾಗ,
ಅನೆಕ್ಸ್ ಕಟ್ಟಡ–2, ಎನ್.ಆರ್. ಚೌಕ, ಬೆಂಗಳೂರು–560002

ಸಂಖ್ಯೆ: ಸ.ಆ(ನೇ&ವಿ)ಪಿಆರ್/53/2025–26 ದಿನಾಂಕ: 15.05.2025

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಯ ವಿಭಾಗದಲ್ಲಿ ನೇರಪಾವತಿಯಡಿ (ಡಿಪಿಎಸ್) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳ ಪೈಕಿ ರೋಸ್ಟರ್ / ಮೀಸಲಾತಿ ನಿಯಮಾವಳಿಗಳನ್ವಯ 12692 ಪೌರಕಾರ್ಮಿಕರ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ: 16.11.2024ರಂದು ಪ್ರಚುರಪಡಿಸಲಾಗಿರುತ್ತದೆ.

ಸದರಿ ಪೌರಕಾರ್ಮಿಕ ಅಭ್ಯರ್ಥಿಗಳ ಸಿಂಧುತ್ವ ಪರಿಶೀಲನೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವರದಿಯನ್ನು ಪಡೆಯುವ ಸಲುವಾಗಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಈಗಾಗಲೇ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ. ಸೇವಾ ಸಿಂಧು ಅರ್ಜಿದಾರರ ಪ್ರಮಾಣ ಪತ್ರ ಪೋರ್ಟಲ್‌ನಲ್ಲಿ ಪ್ರಮಾಣ ಪತ್ರ–1, ಪ್ರಮಾಣ ಪತ್ರ–2 ಮತ್ತು ಇನ್ನಿತರೇ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬೇಕಾಗಿರುವ ಅವಶ್ಯಕತೆಯಿರುತ್ತದೆ. ತತ್ಸಂಬಂಧ ಪ್ರಮಾಣ ಪತ್ರ–1 ಮತ್ತು ಪ್ರಮಾಣ ಪತ್ರ–2 ಗಳನ್ನು ಸಿದ್ಧಪಡಿಸಲು ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದಲೇ ಭರಿಸಲಾಗುವುದು.

ಆದ್ದರಿಂದ, ಸದರಿ ಪ್ರಮಾಣ ಪತ್ರಗಳನ್ನು ಸಿದ್ಧಪಡಿಸಿ, ಅಪ್‌ಲೋಡ್ ಮಾಡಲು ಯಾವುದೇ ಆಮಿಷಗಳಿಗೆ ಒಳಗಾಗಬಾರದೆಂದು ಪೌರಕಾರ್ಮಿಕ ಹುದ್ದೆಗೆ ಆಯ್ಕೆಯಾಗಿರುವ, ಸಿಂಧುತ್ವ ಪ್ರಮಾಣ ಪತ್ರ ಅಗತ್ಯವಿರುವ ಅಭ್ಯರ್ಥಿಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–,
ವಿಶೇಷ ಆಯುಕ್ತರು (ಆಡಳಿತ) ಹಾಗೂ
ಸದಸ್ಯ ಕಾರ್ಯದರ್ಶಿ, ಪೌರಕಾರ್ಮಿಕರ ಆಯ್ಕೆ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಲಿಂಗತ್ವ ಅಲ್ಪಸಂಖ್ಯಾತರಿಗೆ ಆಟೋಟ ಇಂದು

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಬಗೆಗಿನ ತಾರತಮ್ಯ, ಭಯ ಹೋಗಲಾಡಿಸಲು ಒಂದೆಡೆ ಸಂಸ್ಥೆಯು ಇದೇ ಶುಕ್ರವಾರ ಹೆಬ್ಬಾಳ ದಾಸರಹಳ್ಳಿ ಸರ್ಕಾರಿ ಶಾಲಾ ಮೈದಾನದಲ್ಲಿ ಆಟೋಟ ಲೋಕ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸಂಸ್ಥೆಯ ಮೋನಿಕಾ, 'ಕಾರ್ಯಕ್ರಮದಲ್ಲಿ ವಾಲಿಬಾಲ್, ಕ್ರಿಕೆಟ್, ಕಬಡ್ಡಿ, ಹಗ್ಗಜಗ್ಗಾಟ ಸೇರಿ ವಿವಿಧ ಆಟಗಳನ್ನು ಆಡಿಸಲಾಗುತ್ತದೆ' ಎಂದು ಹೇಳಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಈ ಸಾಲಿನ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚಿನ ಅಂಕ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗುತ್ತಿದ್ದು, ಆಸಕ್ತರು ಅರ್ಜಿ ಸಲ್ಲಿಸಬಹುದು' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಗಳೂರು ಪೂರ್ವ ತಾಲ್ಲೂಕು ಅಧ್ಯಕ್ಷ ಎಂ.ಕನ್ಯಾಗಪ್ಪ ತಿಳಿಸಿದರು.

'ಪ್ರತಿ ವರ್ಷ ಸಂಘದಿಂದ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ' ಎಂದು ತಿಳಿಸಿದರು.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ಪೋಷಕರು ರಾಜ್ಯ ಸರ್ಕಾರದ ಕಾಯಂ ನೌಕರರಾಗಿರಬೇಕು ಹಾಗೂ ಸರ್ಕಾರಿ ನೌಕರರ ಸಂಘದ ಸದಸ್ಯರಾಗಿರಬೇಕು. ಸಂಘವು ನಿಗದಿಪಡಿಸಿರುವ ನಮೂನೆಯಲ್ಲಿ ಸಂಘದ ಜಿಲ್ಲೆ/ತಾಲ್ಲೂಕು / ಯೋಜನಾ ಶಾಖೆ ಅಧ್ಯಕ್ಷರು ಮತ್ತು ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರಿಂದ ದೃಢೀಕರಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ನಿಗಮ ಮಂಡಳಿ ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾಸಂಸ್ಥೆಯ ನೌಕರರು ಅರ್ಜಿ ಸಲ್ಲಿಸುವಂತಿಲ್ಲ.

ಅರ್ಜಿ ಸಲ್ಲಿಸಲು ಕೊನೆಯ ದಿನ ಮೇ 31. ವೆಬ್‌ಸೈಟ್ https://ksgeanews.blogspot.com ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 79758 65561 ಸಂಪರ್ಕಿಸಲು ಕೋರಿದ್ದಾರೆ.

ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಯು.ಎಸ್. ಅವಸ್ಥಿ

ಕೃಷಿಗೆ ಹವಾಮಾನದ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷೀಣಿಸುತ್ತಿರುವ ನೈಸರ್ಗಿಕ ಸಂಪತ್ತು, ಏರುತ್ತಿರುವ ಉತ್ಪಾದನಾ ವೆಚ್ಚ ಮತ್ತು ಅನಿಶ್ಚಿತ ಹವಾಮಾನವು ಕೃಷಿಗೆ ದೊಡ್ಡ ಸವಾಲುಗಳು ಎಂದು ನವದೆಹಲಿಯ ಇಫ್ಕೊ ವ್ಯವಸ್ಥಾಪಕ ನಿರ್ದೇಶಕ ಯು.ಎಸ್. ಅವಸ್ಥಿ ಹೇಳಿದರು.

ಗುರುವಾರ ನಡೆದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ಕೃಷಿ ಅಂದರೆ ಆಹಾರ ಉತ್ಪಾದನೆಯಷ್ಟೇ ಅಲ್ಲ. ನಮ್ಮ ಆರ್ಥಿಕತೆಯ ಬೆನ್ನೆಲುಬು, ಗ್ರಾಮೀಣ ಸಮುದಾಯಗಳ ಹೃದಯದ ಬಡಿತ. ಪರಿಸರ ಸಮತೋಲನದ ಮೂಲಾಧಾರ. ಆಗಾಗ ಉಂಟಾಗುವ ಬರಗಾಲ, ಪ್ರವಾಹ, ತೀವ್ರ ತಾಪಮಾನಗಳು ಕೃಷಿಕರಿಗೆ ಸಂಕಷ್ಟಗಳನ್ನು ತಂದೊಡ್ಡುತ್ತಿವೆ. ಹವಾಮಾನ ವೈಪರೀತ್ಯಗಳು ಬೆಳೆ ಅಭಿವೃದ್ಧಿಗೆ ತಡೆಯೊಡ್ಡುವುದಲ್ಲದೇ ಬೆಳೆಗಳಿಗೆ ಕೀಟ, ರೋಗ ಬಾಧೆಗಳನ್ನೂ ಹೆಚ್ಚಿಸುತ್ತಿದೆ' ಎಂದು ವಿಶ್ಲೇಷಿಸಿದರು.

ಮಣ್ಣು, ನೀರು, ಗಾಳಿಯಂಥ ಪ್ರಮುಖ ಸಂಪನ್ಮೂಲಗಳು ಅಪಾಯದಲ್ಲಿವೆ. ಸುಸ್ಥಿರವಲ್ಲದ ಭೂ ಬಳಕೆ ಪದ್ಧತಿ, ಮಣ್ಣಿನ ಸವಕಳಿ, ಪೋಷಕಾಂಶಗಳ ಗಣಿಗಾರಿಕೆ, ಸಾವಯವ ವಸ್ತುಗಳ ನಷ್ಟವು ಮಣ್ಣಿನ ಅನಾರೋಗ್ಯಕ್ಕೆ ಕಾರಣವಾಗುತ್ತಿದೆ. ಜೊತೆಗೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅತಿಯಾದ ಬಳಕೆಯೂ ಮಣ್ಣಿನ ಫಲವಂತಿಕೆಯನ್ನು ಹಾಳು ಮಾಡುತ್ತಿದೆ. ಕೃತಕ ಗೊಬ್ಬರ ಬಳಸುವುದನ್ನು ಕಡಿಮೆ ಮಾಡಬೇಕು. ನೈಸರ್ಗಿಕವಾಗಿ ವೇಗವಾಗಿ ಬೆಳೆ ಪಡೆಯುವ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ನಿಖರ ಕೃಷಿ ಮಾಡಬೇಕು. ಅದು ಉತ್ಪಾದನೆ ಮತ್ತು ಆದಾಯವನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.

ಕುಲಾಧಿಪತಿಯಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ರಾಸಾಯನಿಕ, ಕೀಟನಾಶಕಗಳ ಬಳಕೆ ಕಡಿಮೆ ಮಾಡಿ ಮಣ್ಣಿನ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು. ಇಂದು ಪದವಿ ಪಡೆದಿರುವ ಅಭ್ಯರ್ಥಿಗಳು ಕೃಷಿಯನ್ನು ಸುಸ್ಥಿರವನ್ನಾಗಿಸಿ, ಲಾಭದಾಯಕವಾಗಿಸಲು ಬೇಕಾದ ಸಂಶೋಧನೆಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, 'ಹಸಿರು ಕ್ರಾಂತಿಯಿಂದಾಗಿ ರಾಜ್ಯದಲ್ಲಿಯೂ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸುಸ್ಥಿರತೆ ಸಾಧಿಸಲಾಯಿತು. ಕೃಷಿ ವಿಶ್ವವಿದ್ಯಾಲಯವು ಸುಧಾರಿತ, ಸಮಗ್ರ ಕೃಷಿ ಪದ್ಧತಿ, ಉತ್ತಮ ತಳಿ, ಒಣಬೇಸಾಯ ತಾಂತ್ರಿಕತೆ, ಸುಸ್ಥಿರ ನೀರು, ಪೋಷಕಾಂಶ, ಕಳೆ ನಿವಾರಣೆ, ರೋಗ, ಕೀಟ ನಿರ್ವಹಣೆ ಪದ್ಧತಿಗಳು, ಕೃಷಿ ಯಾಂತ್ರೀಕರಣ, ಪರ್ಯಾಯ ಭೂ ಬಳಕೆ ಹೀಗೆ ಅನೇಕ ವಿಷಯಗಳಲ್ಲಿ ಸಾಧನೆ ಮಾಡಿದೆ' ಎಂದು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಕುಲಪತಿ ಎಸ್.ವಿ. ಸುರೇಶ ಉಪಸ್ಥಿತರಿದ್ದರು.

ಕೃಷಿ ವಿಶ್ವವಿದ್ಯಾಲಯ ಗುರುವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ವಿ. ಬಾಲಸುಬ್ರಮಣಿಯನ್ ಹಾಗೂ ಯೋಗೇಂದ್ರ ಕುಮಾರ್ ಅವರಿಗೆ ಥಾವರಚಂದ್ ಗೆಹಲೋತ್ ಅವರು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದರು. ಸಚಿವ ಎನ್. ಚಲುವರಾಯಸ್ವಾಮಿ, ಯು.ಎಸ್. ಅವಸ್ಥಿ ಹಾಗೂ ಕುಲಪತಿ ಎಸ್. ವಿ. ಸುರೇಶ ಹಾಜರಿದ್ದರು ಪ್ರಜಾವಾಣಿ ಚಿತ್ರ

ಪದಕಗಳು

ಬಿ.ಎಸ್‌ಸಿ(ಆನರ್ಸ್) ಕೃಷಿ	
ದೀಪ್ತಿ ಟಿ.ಎಲ್	13
ಸ್ಫೂರ್ತಿ ಆರ್.	9
ಯಕ್ಷಿತ್ ಡಿ.ಎಸ್	3

ಐಶ್ವರ್ಯ ಗಣಪತಿ ಗೌಡ, ಬಿ.ಎಸ್‌ಸಿ (ಆನರ್ಸ್)ಕೃಷಿ ವ್ಯವಹಾರ ನಿರ್ವಹಣೆ	7
ಒ.ಗಣೇಶ, ಬಿ.ಎಸ್‌ಸಿ (ಆನರ್ಸ್) ರೇಷ್ಮೆ ಕೃಷಿ	1

ಬಿ.ಟೆಕ್ ಪದವಿ	
ಸಾಯಂತನ್ ಮೈತಿ, ಕೃಷಿ ಎಂಜಿನಿಯರಿಂಗ್	3
ರಮ್ಯಶ್ರೀ ಎನ್.ಸಿ., ಜೈವಿಕ ತಂತ್ರಜ್ಞಾನ	2
ಸೋನು ಸಿ.ಎ., ಆಹಾರ ತಂತ್ರಜ್ಞಾನ	1

ಸ್ನಾತಕೋತ್ತರ ಪದವಿ (ಎಂ.ಎಸ್‌ಸಿ)	
ಆರ್ತಿ ಆರ್., ಕೃಷಿ ಅರ್ಥಶಾಸ್ತ್ರ	5
ಹರ್ಷಿತಾ ಕೆ., ಬೇಸಾಯ ವಿಜ್ಞಾನ	3
ಸುಕನ್ಯ ರಾಣೇಬೆನ್ನೂರು, ಕೃಷಿ ಸಂಖ್ಯಾಶಾಸ್ತ್ರ,	3
ಮೇಘನಾ ಎಸ್.ಎನ್., ಅಣ್ವಿಕ ಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ	3
ಪ್ರಿಯಾಂಕ ಸಿ.ಎಸ್., ಅನುವಂಶೀಯ ಮತ್ತು ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ	2

ಪಿಎಚ್.ಡಿ ಪದವಿ	
ಪ್ರವಳಿಕ ಕೆ.ಎಂ, ಬೇಸಾಯ ವಿಜ್ಞಾನ	4
ಮಾರೇಪಲ್ಲಿ ಉದಯ ಸಿಂಧು, ಕೃಷಿ ವಿಸ್ತರಣೆ	3
ಸ್ಫೂರ್ತಿ ಶಂಕರ್ ಕೆ.ಎಸ್., ಮಣ್ಣು ವಿಜ್ಞಾನ, ಕೃಷಿ ರಸಾಯನ ಶಾಸ್ತ್ರ	3

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Walk-in

LALITH CASTLE INTERNATIONAL SCHOOL
(CBSE AFFILIATION NO : 830998)
RAJARAJESHWARI NAGAR, BENGALURU-560 098
WALK-IN INTERVIEW on 16th and 17th May-25
Applications are invited for the following positions to handle Nursery & High School students with required eligibility as per the CBSE norms in the below mentioned subjects. **Qualification:** Graduates/Post Graduates with B.Ed & min 3 years of experience.
NURSERY TEACHERS/ ANGLO INDIAN/ NURSERY CO ORDINATOR/ MUSIC WITH KEYBOARD KNOWLEDGE.
For PRIMARY & HIGH SCHOOL SOCIAL SCIENCE /ENGLISH/ HINDI/ MATHS/PHYSICS/ CHEMISTRY/BIOLOGY/ ART & CRAFT/ PE TRAINER
JEE /NEET/FOUNDATION PROGRAM TRAINERS/DTP OPERATOR/ LAB ASSISTANT/LIBRARIAN/ ADMIN/ OFFICE ASSISTANT.
Interested Candidates can walk in for interview on 16th and 17th May- 2025 at 10.00 AM with updated resume & Original Certificates at the school campus. Short listed candidates will be recruited immediately.
Salary based on credentials.
Contact : Principal
9663871771/9620464800
Email: Lcis.rrnagar@gmail.com
ADMISSIONS OPEN FOR MONT TO GRADE X

PUBLIC NOTICE

ಸಾರ್ವಜನಿಕ ಸೂಚನೆ
ಮಲ್ಲಿಗೆ ಆಸ್ಪತ್ರೆ ವೈದ್ಯಕೀಯ ದಾಖಲೆಗಳ ನಾಶ
1ನೇ ಜುಲೈ, 2021 ರಿಂದ ಡಿಸೆಂಬರ್ 31ನೇ 2021ರ ಅವಧಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾದ ಒಳರೋಗಿಗಳಿಗೆ ಸಂಬಂಧಿಸಿದ ವೈದ್ಯಕೀಯ ದಾಖಲೆಗಳನ್ನು ಮಲ್ಲಿಗೆ ಆಸ್ಪತ್ರೆ (ಮಲ್ಲಿಗೆ ಮೆಡಿಕಲ್ ಸೆಂಟರ್ ಪ್ರೈ.ಲಿ.,) ನಾಶಮಾಡಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. ಸದರಿ ದಾಖಲೆಗಳ ನಾಶ ಪ್ರಕ್ರಿಯೆ 15ನೇ ಜೂನ್ 2025 ರಿಂದ ಆರಂಭವಾಗಲಿದೆ. ವೈದ್ಯಕೀಯ ಕಾನೂನು ಕೇಸ್‌ಗಳು, ಜನನ, ಮರಣ ಮತ್ತು ಮಕ್ಕಳ ಆರೈಕೆ ಕೇಸ್‌ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಾಶ ಮಾಡುವುದಿಲ್ಲ. ನಿಮಗೆ ಸಂಬಂಧಿಸಿದ ಯಾವುದೇ ದಾಖಲೆಯ ಪ್ರತಿ ಉಳಿಸಿಕೊಳ್ಳಲು ನಾಶಪಡಿಸಲು ನಿಗದಿಪಡಿಸಲಾದ ದಿನಾಂಕಕ್ಕೆ ಮುನ್ನ ಸಹಿ ಮಾಡಿದ ಒಪ್ಪಿಗೆ ಪತ್ರ ಮತ್ತು ಭಾವಚಿತ್ರ ಐಡಿಯೊಂದಿಗೆ ದಯವಿಟ್ಟು ನಮ್ಮ ವೈದ್ಯಕೀಯ ದಾಖಲೆಗಳ ವಿಭಾಗವನ್ನು ಭೇಟಿ ಮಾಡಿ. ನಮ್ಮ ವೈದ್ಯಕೀಯ ದಾಖಲೆ ವಿಭಾಗವನ್ನು ಈ ಸಂಖ್ಯೆಯಲ್ಲಿ ಸಂಪರ್ಕಿಸಿ:
080 6716 5555 ವಿಸ್ತರಣೆ: 1408
ಮಲ್ಲಿಗೆ ಮೆಡಿಕಲ್ ಸೆಂಟರ್ ಪ್ರೈ.ಲಿ., 31/32, ಕ್ರೆಸೆಂಟ್ ರಸ್ತೆ ಬೆಂಗಳೂರು-01
ದೂ: 91-80-67165555
ಇ-ಮೇಲ್: info@mallige.com

PUBLIC NOTICE
To Place your Classified Ads Contact
9731810277

EDUCATION SUCCESS ಕ್ಲಾಸಿಫೈಡ್ಸ್



BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

FOR LEASE. Begumpet Main Road, Hyderabad. Showroom and Office Space. Grade A building. 15,000 to 18,000 SFT. Fully Air Conditioned. Agents welcome! Ph: 9347576914.

REAL ESTATE SELLING

Commercial Land

Whitefield

SALE COMMERCIAL Land suitable for IT, Hospitals, Star Hotel, 68000Sqft on 80feet Road 170ft width depth 400ft, close to Metro Station. call Verna Developers, MG Road, BLR. 9916310226/ 9353128035.

Industrial & Factory

Out-Station

FOR SALE
1. Industrial Sheds admeasuring 1 to 1.5 lakh sqft of built up area, suitable for Manufacturing & Heavy industries in Mysore
2. 1 MVA Ferro Alloy Plant for sale/lease in Goa
Contact +919113911001

Commerical

J P Nagar

J.P.NAGAR 3RD Phase 60x90 Commercial declared Excellent BDA Site South 80feet Road, Suraj Realtors: 9845232711

Sites

Kempegowda Layout

COMMERCIAL BDA SITE FOR SALE Kempegowda Layout 8th block East face 50x80, 80feet road Contact: 9743322555

Nagarabhavi

"NAGARABHAVI RHCS-LAYOUT 30x50 West facing Site for sale Good Location, Genuine Buyers Contact: 8105688602"

CONNECT

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-25603


SALE CHAMRAJPET COMMERCIAL BUILDING 18,000 SFT,
RENTAL INCOME 7 LACS
SALE PRICE 12 CRORES
Call: 96322-37557 / 96069-07557

Vishweshwariah Layout

BDA SITE FOR SALE SIR M.VISHVESHWARAIAH LAYOUT 8th BLOCK SITE NO:2076, WESTFACE 40x60 good location Contact: 9743322555

CHANGE OF NAME
I, ANSELM WILSON CRASTA R/a # C-94, Janatha Colony, CMC Layout, Channapatna Town, Ramanagara Dist., have changed my name to **ASIN WILSON CRASTA** vide affidavit dated 13.05.2025 before notary A R Nagendra, Ramanagara.

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8970126393

CHANGE OF NAME
I, SURESH PAUL residing at Allia Kuzhyil Pulikurumba, New Naduvil Kannur, Kerala-670582. have declared that the names "SURESH PAUL" and "SURESH PAUL A" belongs to me only, and both names belongs to one and the same person. vide affidavit dated 15-05-2025 sworn before notary A.S. Narayana Reddy, Bangalore

CHANGE OF NAME
I, RAGHUPATHI B S/o Basavaraju P, R/a #32/73, Near Sandya Deepa Ashrama, Poornapragna Layout, Uttarahalli, Subramanyapura, Bangalore - 560061, changed my son's name from **SAMARTH R** to **VIVAN AKASH SHIVAM** Vide affidavit dated 30.04.2025 before notary Mohammed Hussain.K, Bangalore

PERSONAL

CHANGE OF NAME
I, SANDHYA NAGESH, residing at Malleshwara 'B' Estate, Dasarahalli, Kaimara Post, Chikkamagaluru-577132, have changed my name to **H.K. SANDYA** vide affidavit dated 15.05.2025 before notary B.V. Nagabhushana, Bengaluru

Change of Name

CHANGE OF NAME
I , RAGHUPATHI B, S/o Basavaraju P, R/a #32/73, Near Sandya Deepa Ashrama, Poornapragna Layout, Uttarahalli, Subramanyapura, Bangalore - 560061, changed my daughter's name from **HARSHIKA R** to **VIHANI NIDHI SHIVAM** Vide affidavit dated 30.04.2025 before notary Mohammed Hussain.K, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
080- 45557163/164
*Conditions apply

ಅಪಾರ್ಟ್‌ಮೆಂಟ್ ಮಾಲೀಕರ ಸಂಘ ನೋಂದಣಿ

'ಕೆಎಒ ಕಾಯ್ದೆ ಮಾತ್ರ ಕಾನೂನುಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಫ್ಲ್ಯಾಟ್‌ಗಳಿರುವ ಅಪಾರ್ಟ್‌ಮೆಂಟ್ ಮಾಲೀಕರ ಸಂಘವನ್ನು, ಕರ್ನಾಟಕ ಅಪಾರ್ಟ್‌ಮೆಂಟ್ ಓನರ್‌ಶಿಪ್ ಕಾಯ್ದೆ–1972ರ (ಕೆಎಒ) ಅಡಿಯಲ್ಲಿಯೇ ನೋಂದಾಯಿಸಬೇಕು' ಎಂದು ಹೈಕೋರ್ಟ್ ಪುನರುಚ್ಚರಿಸಿದೆ.

ಈ ಸಂಬಂಧ ಯಲಹಂಕದ ಅವಲಹಳ್ಳಿಯ 'ರಾಮ್ಕಿ ಒನ್ ನಾರ್ಥ್ ಅಪಾರ್ಟ್‌ಮೆಂಟ್' ಮಾಲೀಕರ ಸಂಘದ ರೇಖಾ ಕಣ್ಣನ್ ಸೇರಿದಂತೆ ಐವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು (ಡಬ್ಲ್ಯು.ಪಿ.27821/2024 ಸಿಎಸ್-ಆರ್‌ಇಎಸ್) ಪುರಸ್ಕರಿಸಿರುವ ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಇದೇ ವೇಳೆ ನ್ಯಾಯಪೀಠವು, ಅರ್ಜಿದಾರರು ಕರ್ನಾಟಕ ಸಹಕಾರ ಸೊಸೈಟಿಗಳ ಕಾಯ್ದೆ–1959ರ (ಕೆಸಿಎಸ್) ಅಡಿಯಲ್ಲಿ ತಮ್ಮ ಅಪಾರ್ಟ್‌ಮೆಂಟ್ ಮಾಲೀಕರ ಸಂಘವನ್ನು ನೋಂದಣಿ ಮಾಡಿಸಿದ್ದ ಕ್ರಮವನ್ನು ರದ್ದುಪಡಿಸಿದೆ.

'ಕೆಸಿಎಸ್ ಕಾಯ್ದೆ ಅಡಿ ವಸತಿ ಸಮುಚ್ಚಯಗಳ ಸಂಘಗಳ ನೋಂದಣಿಗೆ ಅವಕಾಶವಿಲ್ಲ. ವಸತಿ ಸಮುಚ್ಚಯಗಳಿಗೆಂದೇ ಕೆಎಒ ಕಾಯ್ದೆಯನ್ನು ರೂಪಿಸಲಾಗಿದೆ. ಹಾಗಾಗಿ, ಅರ್ಜಿದಾರರು ತಮ್ಮ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್ ಅನ್ನು ಕೆಎಒ ಕಾಯ್ದೆ ಅಡಿಯಲ್ಲಿ ನೋಂದಾಯಿಸಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಕೋಮಾದಲ್ಲಿ ವೈದ್ಯ: ಪತ್ನಿಯ ಮನವಿಗೆ ಹೈಕೋರ್ಟ್ ಸೈ

ಬೆಂಗಳೂರು: ಅಪರೂಪದ ನರರೋಗ ಎನಿಸಿರುವ 'ಗುಯಿಲಿನ್ ಬಾರ್ ಸಿಂಡ್ರೋಮ್'ಗೆ (ಜಿಬಿಎಸ್) ಒಳಗಾಗಿ ಕೋಮಾ ಸ್ಥಿತಿಯಲ್ಲಿರುವ ವೈದ್ಯರೊಬ್ಬರು ಮೂರು ಬ್ಯಾಂಕ್‌ಗಳಲ್ಲಿ ಹೊಂದಿರುವ ಖಾತೆಗಳ ಹಣವನ್ನು ಡ್ರಾ ಮಾಡಿಕೊಳ್ಳಲು ಅವರ ಪತ್ನಿಗೆ ಅನುಮತಿ ನೀಡಿ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ರಾಜಾಜಿ ನಗರದಲ್ಲಿರುವ ವೈದ್ಯರ ಪತ್ನಿ, ಸಂಧ್ಯಾ ಅನಿಲ್ ಕುಮಾರ್ (55) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸಂಧ್ಯಾ ಅವರನ್ನು ಅನಿಲ್ ಕುಮಾರ್ ಅವರ ಕಾನೂನುಬದ್ಧ ಪಾಲಕಿಯಾಗಿ ನೇಮಿಸಿ ಆದೇಶಿಸಿದೆ.

ಅಂತೆಯೇ, 'ಅನಿಲ್ ಕುಮಾರ್ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಿವಮೊಗ್ಗ ಮತ್ತು ಬೆಂಗಳೂರು ಶಾಖೆಗಳಲ್ಲಿ ಹಾಗೂ ಬೆಂಗಳೂರಿನ ಮಹಾಲಕ್ಷ್ಮಿಪುರಂ ಶಾಖೆಯ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನಲ್ಲಿ ಹೊಂದಿರುವ ಬ್ಯಾಂಕ್ ಖಾತೆಗಳಿಂದ ಹಣ ಡ್ರಾ ಮಾಡಿಕೊಳ್ಳಲು ಸಂಧ್ಯಾ ಅವರಿಗೆ ಅನುಮತಿ ನೀಡಬೇಕು. ಈ ವಿಚಾರದಲ್ಲಿ ಯಾವುದೇ ಕಾರಣಕ್ಕೂ ವಿಳಂಬ ಮಾಡಕೂಡದು' ಎಂದು ಬ್ಯಾಂಕುಗಳಿಗೆ ತಾಕೀತು ಮಾಡಿದೆ.

ಹೈಕೋರ್ಟ್ ಸುದ್ದಿಗಳು

'ವಿನಯ್ ವಿರುದ್ಧ ಬಲವಂತದ ಕ್ರಮ ಬೇಡ'

'ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಶಾಸಕ ವಿನಯ ಕುಲಕರ್ಣಿ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿರುವ ಸಮನ್ಸ್‌ಗೆ ಸಂಬಂಧಿಸಿದಂತೆ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಹೈಕೋರ್ಟ್, ಇ.ಡಿಗೆ ಆದೇಶಿಸಿದೆ.

'ಇ.ಡಿ ಜಾರಿಗೊಳಿಸಿರುವ ಸಮನ್ಸ್ ರದ್ದುಪಡಿಸಬೇಕು' ಎಂದು ಕೋರಿ ವಿನಯ ಕುಲಕರ್ಣಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಮಧ್ಯಂತರ ಆದೇಶಕ್ಕೆ ಸಂಬಂಧಿಸಿದಂತೆ ಇ.ಡಿ ಆಕ್ಷೇಪಣೆ ಪರಿಗಣಿಸಲು ನಿರಾಕರಿಸಿದ ನ್ಯಾಯಪೀಠ, ವಿನಯ ಕುಲಕರ್ಣಿ ವಿರುದ್ಧ ಬಲವಂತದ ಕ್ರಮ ಜರುಗಿಸದಂತೆ ಇ.ಡಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು. 'ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ವಂಚಿಸಿದ ಆರೋಪದಡಿ ಐಶ್ವರ್ಯಾ ಗೌಡ ಅಲಿಯಾಸ್ ನವ್ಯಶ್ರೀ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದಲ್ಲಿ ವಿನಯ ಕುಲಕರ್ಣಿ ಅವರಿಗೂ ಇ.ಡಿ ಸಮನ್ಸ್ ಜಾರಿಗೊಳಿಸಿದೆ.

ನಗರದಲ್ಲಿ ಇಂದು

ವಿಶ್ವ ಅಧಿಕ ರಕ್ತದೊತ್ತಡ ದಿನ: ಅತಿಥಿ: ಶರಣ ಪ್ರಕಾಶ ಪಾಟೀಲ, ಆಯೋಜನೆ ಹಾಗೂ ಸ್ಥಳ: ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲ, ಜಯನಗರ, ಬೆಳಿಗ್ಗೆ 10

ತಿಂಗಳ ಉಪನ್ಯಾಸ: 'ಅನುವಾದ ಪ್ರಕ್ರಿಯೆ: ನನ್ನ ಅನುಭವಗಳು' ವಿಷಯದ ಬಗ್ಗೆ ಉಪನ್ಯಾಸ: ಪ್ರೊ.ಸಿ.ಎನ್. ರಾಮಚಂದ್ರನ್, ಪ್ರಸ್ತಾವನೆ: ಡಿ.ಕೆ. ಚಿತ್ತಯ್ಯ ಪೂಜಾರ್, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಹಾಗೂ ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5


ಪ್ರೊ.ಸಿ.ಎನ್. ರಾಮಚಂದ್ರನ್

ಅಂಚೆ ಚೀಟಿ ಬಿಡುಗಡೆ: ಕೊಡೈಕೆನಾಲ್ ಸೌರ ವೀಕ್ಷಣಾಲಯದ 125ನೇ ವಾರ್ಷಿಕೋತ್ಸವದ ಸ್ಮರಣಾರ್ಥ, ಅತಿಥಿ: ಎ.ಎಸ್. ಕಿರಣ್ ಕುಮಾರ್, ಎಸ್. ರಾಜೇಂದ್ರ ಕುಮಾರ್, ಉಷಾ ದೀಕ್ಷಿತ್, ರಾಮನಾಥ್ ಕೌಶಿಕ್, ಎಸ್.ಸಿರಾಜುಲ್ ಹಸನ್, ಪಿ. ಶ್ರೀಕುಮಾರ್, ಅನ್ನಪೂರ್ಣಿ ಸುಬ್ರಹ್ಮಣ್ಯಂ, ಆಯೋಜನೆ ಹಾಗೂ ಸ್ಥಳ: ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ, ಕೋರಮಂಗಲ, ಮಧ್ಯಾಹ್ನ 3

ಸಮನ್ವಯ ಕಲಾ ಉತ್ಸವ: ಅತಿಥಿಗಳು: ಡಾ.ಸಿ.ಎನ್.ಅಶ್ವತ್ಥನಾರಾಯಣ, ಸುಮಾ ಸುಧೀಂದ್ರ, ಶುಭಾ ಧನಂಜಯ್, 'ಸಮನ್ವಯ ಪುರಸ್ಕಾರ': ಅನುಪಮಾ ಹೊಸಕೆರೆ, ಎಚ್.ಎಚ್. ವೇಣುಗೋಪಾಲ್, ಲಕ್ಷ್ಮೀ ನಾಗೇಶ್ವರ, ಆಯೋಜನೆ: ನೃತ್ಯ ರಂಗೋಲಿ, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಮಲ್ಲೇಶ್ವರ, ಸಂಜೆ 6

ಹರಿನಾಮ ಸಂಕೀರ್ತನೆ: ಗಾಯನ: ರಂಜಿತಾ ಪ್ರಸಾದ್, ಕೀ-ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಸರ್ವೋತ್ತಮ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮೂವರಿಗೆ ಬಹುಮಾನ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು 'ಶ್ರೀಮತಿ ಸುಜಾತಾ ಮತ್ತು ಶ್ರೀ ರಾ.ಕೃ. ಶ್ರೀಧರಮೂರ್ತಿ ದತ್ತಿನಿಧಿ'ಯಡಿ ನೀಡುವ ಅತ್ಯುತ್ತಮ ಲೇಖನ ಸ್ಪರ್ಧೆ ಬಹುಮಾನಕ್ಕೆ ದಯಾನಂದ ಮತ್ತು ವಸುಂಧರ ಆಯ್ಕೆಯಾಗಿದ್ದಾರೆ.

ಉತ್ತಮ ಸಂಶೋಧನಾರ್ಥಿ ಬಹುಮಾನಕ್ಕೆ ಶೋಭಾ ಪಾಟೀಲ ಭಾಜನರಾಗಿದ್ದಾರೆ. ಬಹುಮಾನವು ತಲಾ ₹1,500 ನಗದು ಒಳಗೊಂಡಿದೆ. ಇದೇ 20ರಂದು ಸಂಜೆ 5 ಗಂಟೆಗೆ ಪ್ರತಿಷ್ಠಾನದ ಸಭಾಂಗಣದಲ್ಲಿ ಬಹುಮಾನ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ಪೂರ್ವ ವಲಯದ ಪ್ರದೇಶಗಳಲ್ಲಿ ಸಮಸ್ಯೆ

ಶ್ರೀಸಾಯಿ ಬಡಾವಣೆ ಜಲಾವೃತ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ನಗರದಲ್ಲಿ ಮಂಗಳವಾರ ಸಂಜೆ ಸುರಿದ ಬಿರುಗಾಳಿ ಮಳೆಗೆ ಬೆಂಗಳೂರು ಪೂರ್ವ ವಲಯದ ಹೊರಮಾವು ವಾರ್ಡ್‌ನ ಶ್ರೀಸಾಯಿ ಬಡಾವಣೆ ಜಲಾವೃತಗೊಂಡು, ಜನಜೀವನ ಅಸ್ತವ್ಯಸ್ಥಗೊಂಡಿತ್ತು.

ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಗೆ ಬಡಾವಣೆಯ ರಸ್ತೆಗಳೆಲ್ಲ ಹೊಳೆಯಂತಾದವು. ರಸ್ತೆ ಬದಿಯಲ್ಲಿದ್ದ ಮನೆಗಳಿಗೆ ಪ್ರವಾಹದಂತೆ ನೀರು ನುಗ್ಗಿತು. ಮನೆಯಲ್ಲಿದ್ದ ಫ್ರಿಡ್ಜ್, ಟಿ.ವಿ, ಕಂಪ್ಯೂಟರ್‌ಗಳಿಗೆ ಹಾನಿಯಾಯಿತು. ಪುಸ್ತಕಗಳು, ದವಸ-ಧಾನ್ಯಗಳೆಲ್ಲ ನೀರಿನಲ್ಲಿ ತೊಯ್ದು ಹೋದವು.

ಮಳೆ ನೀರು ನುಗ್ಗಿದ್ದರಿಂದ ಬಡಾವಣೆಯ ನಿವಾಸಿಗಳು ಮನೆಯಿಂದ ಹೊರಗೆ ತೆರಳಲು ಪ್ರಯಾಸಪಟ್ಟರು. ಸಂಪ್‌ಗಳಿಗೆಲ್ಲ ಕೊಳಚೆ ನೀರು ತುಂಬಿಕೊಂಡಿದ್ದರಿಂದ, ಕೆಲವು ಮನೆಗಳವರಿಗೆ ಕುಡಿಯಲು ನೀರು ಇಲ್ಲದಾಗಿತ್ತು..

ಶ್ರೀಸಾಯಿ ಬಡಾವಣೆ ಜಲವೃತವಾಗಿದೆ

'ಸಂಜೆ ನಂತರ, ರಾತ್ರಿಯೂ ಮಳೆ ಮುಂದುವರಿಯಿತು. ಮಳೆ ಹೆಚ್ಚಾದಂತೆ ಹೆಬ್ಬಾಳ, ಆರ್.ಟಿ.ನಗರ, ಪುಲಿಕೇಶಿ ನಗರದಿಂದ ರಾಜಕಾಲುವೆಯ ಮೂಲಕ ರಭಸವಾಗಿ ಹರಿದು ಬಂದ ನೀರು, ಗೆದ್ದಲಹಳ್ಳಿಯ ರೈಲ್ವೆ ವೆಂಟ್ ಬಳಿ ನಿಧಾನವಾಗುತ್ತದೆ. ಇದರಿಂದ ಒತ್ತಡ ಸೃಷ್ಟಿಯಾಗಿ ನೀರು ಸಾಯಿ ಬಡಾವಣೆಗೆ ನುಗ್ಗಿ ಅವಾಂತರ ಸೃಷ್ಟಿಸಿದೆ' ಎಂದು ಸ್ಥಳೀಯರು ಹೇಳಿದರು.

'ಇಷ್ಟೆಲ್ಲ ಮಳೆಯಾಗಿ ಅವಾಂತರ ಸೃಷ್ಟಿಯಾದರೂ, ಬಿಬಿಎಂಪಿಯ ಯಾವ ಸಿಬ್ಬಂದಿಯೂ ಬಡಾವಣೆಗೆ ಭೇಟಿ ನೀಡಿ, ಸಮಸ್ಯೆ ಪರಿಹರಿಸಲು ಪ್ರಯತ್ನಿಸಲಿಲ್ಲ' ಎಂದು ಸ್ಥಳೀಯ ನಿವಾಸಿಯೊಬ್ಬರು ಬುಧವಾರ ಮಾಧ್ಯಮದವರ ಬಳಿ ಸಮಸ್ಯೆಯನ್ನು ವಿವರಿಸಿದರು.

ಘಟನೆಯ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಬಿತ್ತರವಾಗುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಬಿಬಿಎಂಪಿ ಸಿಬ್ಬಂದಿ, ಪಂಪ್‌ಗಳನ್ನಿಟ್ಟು ನೀರು ಹೊರ ಹಾಕುವ ಕಾರ್ಯದಲ್ಲಿ ನಿರತರಾದರು.

ತಪ್ಪದ ಗೋಳು, ಜನರ ಆಕ್ರೋಶ

ಪ್ರತಿ ಬಾರಿ ಮಳೆ ಬಂದಾಗ ಇಲ್ಲಿ ಪ್ರವಾಹ ಸ್ಥಿತಿ ಉಂಟಾಗುತ್ತದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಮಳೆ ಸುರಿದಾಗ ಇದೇ ರೀತಿಯ ಪರಿಸ್ಥಿತಿ ಎದುರಾಗಿತ್ತು. ಪ್ರವಾಹ ಉಂಟಾದಾಗ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಥಳಕ್ಕೆ ಭೇಟಿ ನೀಡಿದ್ದರು. ಕಳೆದ ವರ್ಷ ಪ್ರವಾಹ ಬಂದಾಗಲೂ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಬಿಬಿಎಂಪಿ ಆಯುಕ್ತರು ಸ್ಥಳಕ್ಕೆ ಭೇಟಿ ನೀಡಿ ಹೋಗಿದ್ದರು. ಆದರೆ ಸಮಸ್ಯೆಗೆ ಮುಕ್ತಿ ದೊರೆತಿಲ್ಲ ಎಂದು ಸ್ಥಳೀಯ ನಾಗರಿಕರು ದೂರಿದರು.

ಸಚಿವ ಸಂಪುಟದ ಅನುಮೋದನೆ ಪಡೆಯಲು ತಯಾರಾದ ನಗರಾಭಿವೃದ್ಧಿ ಇಲಾಖೆ

ಅವಳಿ ಸುರಂಗ ಮಾರ್ಗ: ಟಿಪ್ಪಣಿ ಸಿದ್ಧ

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ಹೆಬ್ಬಾಳ (ಎಸ್ಟೀಮ್ ಮಾಲ್) ಜಂಕ್ಷನ್‌ನಿಂದ ಎಚ್‌ಎಸ್‌ಆರ್ ಲೇಔಟ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗಿನ ಉತ್ತರ–ದಕ್ಷಿಣ ಕಾರಿಡಾರ್ ಅವಳಿ ಸುರಂಗ ಮಾರ್ಗ ಯೋಜನೆ ಅನುಷ್ಠಾನಕ್ಕಾಗಿ ಸಚಿವ ಸಂಪುಟದ ಅನುಮೋದನೆ ಪಡೆಯಲು ನಗರಾಭಿವೃದ್ಧಿ ಇಲಾಖೆಯು 126 ಪುಟಗಳ ಟಿಪ್ಪಣಿ ಸಿದ್ಧಪಡಿಸಿದೆ.

ಈ ಕಾರಿಡಾರ್ ಒಟ್ಟು 16.745 ಕಿ.ಮೀ. ಉದ್ದದ 3 ಪಥಗಳ ಜೊತೆಗೆ, 3 ಪಥ/2 ಪಥ ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್ ಸಹಿತ ಭೂಗತ ಅವಳಿ ಸುರಂಗ ಮಾರ್ಗ ಹೊಂದಿದೆ. ಅದರ ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ, ನಿರ್ವಹಣೆಗೆ ಸರ್ಕಾರದ ಅನುಮೋದನೆ ಕೋರಲಾಗಿದೆ.

ಕಾರಿಡಾರ್‌ಗೆ ಅಂದಾಜು ₹17,780.13 ಕೋಟಿ ವೆಚ್ಚವಾಗಲಿದ್ದು, ಆಡಳಿತಾತ್ಮಕ ಅನುಮೋದನೆ ನೀಡಬೇಕು. ತಜ್ಞರ ಸಮಿತಿಯು ಮೇ 5ರಂದು ವರದಿ ಸಲ್ಲಿಸಿತ್ತು. ಅದರಲ್ಲಿರುವ ಅಂಶಗಳು, ಬದಲಾವಣೆಗಳು, ಶಿಫಾರಸುಗಳು, ಸಲಹೆಗಳಿಗೆ ಅನುಗುಣವಾಗಿ, ಬಿಬಿಎಂಪಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿದೆ. ಅದರಂತೆ, ಪ್ಯಾಕೇಜ್ 1 ಮತ್ತು 2 ಅನ್ನು ಪರಿಷ್ಕರಿಸಿ ಟೆಂಡರ್ ಕರೆಯಲು ಒಪ್ಪಿಗೆ ನೀಡಬೇಕು ಎಂದು ಪಟ್ಟಿಯಲ್ಲಿ ತಿಳಿಸಲಾಗಿದೆ.

ಯೋಜನೆಯನ್ನು ಪ್ಯಾಕೇಜ್ 1 (ಉತ್ತರ) ಮತ್ತು ಪ್ಯಾಕೇಜ್ 2 (ದಕ್ಷಿಣ) ಎಂದು ಎರಡು ಪ್ಯಾಕೇಜ್‌ಗಳ ಅಡಿಯಲ್ಲಿ ಪ್ರತ್ಯೇಕವಾಗಿ ಸುಧಾರಿತ ಬಿಒಟಿ (ನಿರ್ಮಾಣ, ನಿರ್ವಹಣೆ, ವರ್ಗಾವಣೆ) ಮಾದರಿಯಲ್ಲಿ ನಿರ್ಮಿಸಲು ಅನುಮೋದನೆ ನೀಡಬೇಕು. ಇಲ್ಲದೇ ಇದ್ದರೆ ಪ್ರತ್ಯೇಕವಾಗಿ ಹೈಬ್ರೀಡ್ ಮಿಶ್ರಣ ಮಾದರಿಯಲ್ಲಿ (ಹೈಬ್ರೀಡ್ ಆ್ಯನುವಿಟಿ ಮಾಡೆಲ್) ಅನುಷ್ಠಾನಗೊಳಿಸಲು ಅನುಮತಿ ನೀಡಬೇಕು.

ಹೆಬ್ಬಾಳ ಎಸ್ಟೀಮ್ ಮಾಲ್ ಜಂಕ್ಷನ್‌ನಿಂದ ಶೇಷಾದ್ರಿ ರಸ್ತೆ ಫ್ರೀಡಂ ಪಾರ್ಕ್‌ವರೆಗೆ (8.748 ಕಿ.ಮೀ) ಅಂದಾಜು ₹8,814.78 ಕೋಟಿ ಮೊತ್ತದಲ್ಲಿ, ಪ್ಯಾಕೇಜ್ 2ರಲ್ಲಿ ಶೇಷಾದ್ರಿ ರಸ್ತೆಯಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ (8.748 ಕಿ.ಮೀ. ಯಿಂದ 16.745 ಕಿ.ಮೀಟರ್‌ವರೆಗೆ) ಅಂದಾಜು ₹8,965.35 ಕೋಟಿ ಮೊತ್ತದಲ್ಲಿ ಸುರಂಗ ಮಾರ್ಗ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಬೇಕು. ಭೂಸ್ವಾಧೀನ ವೆಚ್ಚ ₹800 ಕೋಟಿಗೆ ಪ್ರತ್ಯೇಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಬೇಕು. ಸ್ಥಳಾಂತರ ಕಾಮಗಾರಿಗೆ ₹150 ಕೋಟಿಗೆ ಅನುಮೋದನೆ ನೀಡಬೇಕು ಎಂದು ಕೋರಲಾಗಿದೆ.

ಈ ಎರಡೂ ಪ್ಯಾಕೇಜ್‌ಗಳಲ್ಲಿ ತಜ್ಞರ ಸಮಿತಿ ನೀಡಿರುವ ವರದಿಯ ಅನ್ವಯ ಅಂದಾಜು ಪಟ್ಟಿಯನ್ನು ಪರಿಷ್ಕರಿಸಲಾಗುವುದು, ಪರಿಷ್ಕೃತಗೊಳ್ಳುವ ಅಂದಾಜು ಪಟ್ಟಿಯ ಅನುಸಾರ ಟೆಂಡರ್ ಕರೆಯಲಾಗುವುದು. ಒಟ್ಟು ಯೋಜನಾ ಮೊತ್ತದ ಶೇ 40ರಷ್ಟನ್ನು ಕಾರ್ಯಸಾಧನೆಯ ಅಂತರ ನಿಧಿ (ವಿಜಿಎಫ್) ಆಧಾರದಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬಿಬಿಎಂಪಿಯು ವಿಜಿಎಫ್ ಪಾಲುದಾರಿಕೆ ಮೊತ್ತ ಶೇ 40ರಷ್ಟನ್ನು (ಜಿಎಸ್‌ಟಿ ಹೊರತುಪಡಿಸಿ) ಆಯ್ಕೆಯಾಗುವ ಬಿಡ್ಡುದಾರ ಸಂಸ್ಥೆಗೆ ಪಾವತಿಸಲು ಅನುಮತಿಸಬೇಕು ಎಂದು ಪಟ್ಟಿಯಲ್ಲಿ ತಿಳಿಸಲಾಗಿದೆ.

ಅಂಕಿ ಅಂಶಗಳು

₹19 ಸಾವಿರ ಕೋಟಿ
ಸಾಲಕ್ಕೆ ಗ್ಯಾರಂಟಿ ನೀಡಲು ಈಗಾಗಲೇ ಒಪ್ಪಿಗೆ ನೀಡಿರುವ ರಾಜ್ಯ ಸರ್ಕಾರ

26 ತಿಂಗಳು
ಸುರಂಗಗಳ ಕೊರೆಯಲು ಬೇಕಾದ ಅವಧಿ

12 ತಿಂಗಳು
ಅವಳಿ ಸುರಂಗ ಮಾರ್ಗ ನಿರ್ಮಾಣಕ್ಕೆ ಬೇಕಾದ ಸಮಯ

ಪ್ರತಿ ಕಿ.ಮೀ.ಗೆ ₹19 ಟೋಲ್

ಅವಳಿ ಸುರಂಗ ಮಾರ್ಗ 2029–30ಕ್ಕೆ ಆರಂಭವಾಗುವ ಸಾಧ್ಯತೆ ಇದೆ. ಆಗ ಸುರಂಗ ಮಾರ್ಗದ ಬಳಕೆಗೆ ಪ್ರತಿ ಕಿ.ಮೀ.ಗೆ ಕನಿಷ್ಠ ದರ ₹ 19 ಇರಲಿದೆ ಎಂದು ಅಂದಾಜು ಮಾಡಲಾಗಿದೆ.

ಮೆ: ರೋಡಿಕ್ ಸಂಸ್ಥೆ ನೀಡಿರುವ ವಾಹನ ದಟ್ಟಣೆ ಮತ್ತು ಸಂಭವನೀಯ ಏರಿಕೆ ಆಧಾರದ ಮೇಲೆ ಈ ದರವನ್ನು ತಿಳಿಸಿದೆ. ಮುಂಬೈ ನಗರದ ಟ್ರಾನ್ಸ್ ಹಾರ್ಬರ್ ಮೇಲ್ ರಸ್ತೆ 22 ಕಿ.ಮೀ. ಇದ್ದು, ₹ 250 ಟೋಲ್ ವಿಧಿಸಲಾಗುತ್ತಿದೆ. ಅದಕ್ಕೆ ಹೋಲಿಸಿದರೆ ಉದ್ದೇಶಿತ ಅವಳಿ ಸುರಂಗ ಮಾರ್ಗಕ್ಕೆ ಪ್ರತಿ ಕಿಲೋಮೀಟರ್‌ಗೆ ₹ 19 ಸಮಂಜಸ ಎಂದು ಅಭಿಪ್ರಾಯಪಟ್ಟಿದೆ.

ಟ್ರಂಪ್ ಮಧ್ಯಸ್ಥಿಕೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷ ಶಮನಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆ ವಹಿಸಲು ಅವಕಾಶ ನೀಡಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯೂನಿಸ್ಟ್‌ನ (ಎಸ್‌ಯುಸಿಐ) ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಎಸ್‌ಯುಸಿಐ ಕಮ್ಯೂನಿಸ್ಟ್ ಪಕ್ಷದ ಪೊಲಿಟ್ ಬ್ಯೂರೊ ಸದಸ್ಯ ಕೆ. ರಾಧಾಕೃಷ್ಣ ಮಾತನಾಡಿ, 'ದುಡಿಯುವ ಜನರಿಗೆ ಶಾಂತಿಯುತವಾಗಿ ಬದುಕುವ ಅವಕಾಶ ನೀಡಬೇಕು. ಇಸ್ರೇಲ್ ಪ್ಯಾಲೆಸ್ಟೀನ್, ರಷ್ಯಾ–ಉಕ್ರೇನ್‌ನಂತಹ ಯುದ್ಧಗಳಿಗೆ ಬಂಡವಾಳಗಾರರ ಮಾರುಕಟ್ಟೆಯ ದಾಹವೇ ಕಾರಣ. ದೇಶದ ಜನರ ಜೀವನ ಸಂಕಟಮಯವಾಗಿದೆ. ಆದರೆ, ಸರ್ಕಾರಗಳು ಅದಾನಿ, ಅಂಬಾನಿಯಂತಹ ಶ್ರೀಮಂತರಿಗೆ ಅನುಕೂಲವಾಗುವ ಕಾರ್ಪೊರೇಟ್ ಪರ ನೀತಿಗಳನ್ನು ರೂಪಿಸುತ್ತಿವೆ' ಎಂದು ಆರೋಪಿಸಿದರು.

'ಬೆಲೆ ಏರಿಕೆ ನಿಯಂತ್ರಿಸಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಒದಗಿಸಬೇಕು. ಉದ್ಯೋಗ ಖಾತ್ರಿ ಕೂಲಿಯ ದಿನಗಳನ್ನು ಹೆಚ್ಚಿಸಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು. ಉದ್ಯೋಗಾವಕಾಶ ನೀಡುವುದು ಹಾಗೂ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು. ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರಿಗೆ ಕಾರ್ಮಿಕರ ಸ್ಥಾನಮಾನ ನೀಡಬೇಕು' ಎಂದು ಆಗ್ರಹಿಸಿದರು.

ಎಸ್‌ಯುಸಿಐ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯೆ ಕೆ. ಉಮಾ, ರಾಜ್ಯ ಸೆಕ್ರೆಟೇರಿಯೆಟ್ ಸದಸ್ಯ ರಾಮಾಂಜಿನಪ್ಪ, ಕೆ. ಸೋಮಶೇಖರ್, ಎಂ. ಶಶಿಧರ್, ಎಂ.ಎನ್. ಶ್ರೀರಾಮ್, ಟಿ.ಎಸ್. ಸುನಿತ್ ಕುಮಾರ್, ಬಿ.ಆರ್. ಅಪರ್ಣ, ವಿ.ಎನ್. ರಾಜಶೇಖರ್, ಬಿ. ರವಿ, ವಿಜ್ಞಾನಮೂರ್ತಿ ಉಪಸ್ಥಿತರಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಎಸ್‌ಯುಸಿಐನ ಸದಸ್ಯರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿದರು ಪ್ರಜಾವಾಣಿ ಚಿತ್ರ

ಕ್ರೀಡಾ ಚಟುವಟಿಕೆಗಳ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಟುಂಬ ನಿರ್ವಹಣೆಯ ಜೊತೆಗೆ ದೇಶದ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಪ್ರಮುಖಪಾತ್ರ ವಹಿಸಬೇಕಾದ ಮಹತ್ತರ ಜವಾಬ್ದಾರಿ ಇಂದಿನ ಯುವಜನಾಂಗದ ಮೇಲಿದೆ ಎಂದು ಶಾಸಕ ಎ.ಸಿ.ಶ್ರೀನಿವಾಸ್ ಅಭಿಪ್ರಾಯಪಟ್ಟರು.

ಪುಲಿಕೇಶಿನಗರ ಕ್ಷೇತ್ರದ ದಿಣ್ಣೂರು ಮುಖ್ಯರಸ್ತೆಯಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 2024-25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್‌ಎಸ್‌ಎಸ್-ಎನ್‌ಸಿಸಿ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಿಕ್ಷಣದಿಂದ ಜ್ಞಾನ ವೃದ್ಧಿಯಾಗುವುದರ ಜೊತೆಗೆ ತ್ಯಾಗ ಮತ್ತು ಸೇವಾ ಮನೋಭಾವನೆ ಮೂಡಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ನೀವು ಮೊದಲು ವಿದ್ಯಾವಂತರಾಗಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಪ್ಯಾರಾಲಿಂಪಿಕ್ಸ್ ಬೆಳ್ಳಿಪದಕ ವಿಜೇತ, ಎತ್ತರ ಜಿಗಿತದ ಸ್ಪರ್ಧಿ ಗಿರೀಶ.ಎಚ್.ಎನ್ ಅವರನ್ನು ಸನ್ಮಾನಿಸಲಾಯಿತು. ವಿವಿಧ ವಿಷಯಗಳಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ದತ್ತಿ ಪ್ರಶಸ್ತಿ ಹಾಗೂ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

ಪಾಲಿಕೆ ಮಾಜಿ ಸದಸ್ಯೆ ನೇತ್ರಾ ನಾರಾಯಣ್, ಪ್ರಾಂಶುಪಾಲ ಡಾ.ಮಹ್ಮದ್ ಮಂಜೂರ್ ನೌಮಾನ್, ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಸೋಮಪ್ಪ ಬಡಿಗೇರ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಮಂಜುಶ್ರೀ ಎಂ, ಸಹಸಂಚಾಲಕಿ ಆಶಾ.ಎಚ್.ಆರ್, ಎನ್‌ಸಿಸಿ ಅಧಿಕಾರಿ ಗೀತಾ ಮತ್ತಿತರರು ಉಪಸ್ಥಿತರಿದ್ದರು.

ಪುಲಿಕೇಶಿನಗರ ಕ್ಷೇತ್ರದ ದಿಣ್ಣೂರು ಮುಖ್ಯರಸ್ತೆಯಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್‌ಎಸ್‌ಎಸ್‌ಎನ್‌ಸಿಸಿ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಪ್ಯಾರಾ ಒಲಂಪಿಕ್ಸ್ ಬೆಳ್ಳಿಪದಕ ವಿಜೇತ ಹೈಜಂಪ್ ಕ್ರೀಡಾಪಟು ಗಿರೀಶ.ಎಚ್.ಎನ್ ಅವರನ್ನು ಸನ್ಮಾನಿಸಲಾಯಿತು. ಶಾಸಕ ಎ.ಸಿ. ಶ್ರೀನಿವಾಸ್, ಪ್ರಾಂಶುಪಾಲ ಮಹ್ಮದ್ ಮಂಜೂರ್ ನೌಮಾನ್ ಇತರರು ಇದ್ದರು

ಭಾಷಾಂತರ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ದ್ರಾವಿಡಭಾಷಾಅನುವಾದಕರ ಸಂಘವು (ಡಿಬಿಟಿಎ) 'ಭಾಷಾಂತರ ಪ್ರಶಸ್ತಿ'ಗೆ ಕೃತಿಗಳನ್ನು ಆಹ್ವಾನಿಸಿದೆ.

ತಮಿಳು, ಮಲಯಾಳಂ, ತೆಲುಗು ಅಥವಾ ತುಳು ಭಾಷೆಯಿಂದ ಕನ್ನಡಕ್ಕೆ ಭಾಷಾಂತರ ಮಾಡಿರುವ ಕಾದಂಬರಿಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಕೃತಿಗಳು 2023 ಅಥವಾ 2024ರಲ್ಲಿ ಪ್ರಕಟವಾಗಿರಬೇಕು. ಪ್ರಶಸ್ತಿಯು ₹11,111 ನಗದು ಒಳಗೊಂಡಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಸಂಘದ ನಾಲ್ಕನೇ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಅರ್ಜಿದಾರರು ಮೂಲ ಕೃತಿಯ ಒಂದು ಪ್ರತಿ ಹಾಗೂ ಭಾಷಾಂತರಿತ ಕನ್ನಡ ಆವೃತ್ತಿಯ ಮೂರು ಪ್ರತಿಗಳನ್ನು ಜೂನ್ 20ರ ಒಳಗೆ, ಅಧ್ಯಕ್ಷರು, ಡಿಬಿಟಿಎ, ಶ್ರೀ ಭೈರವೇಶ್ವರ ನಿಲಯ, ಇಮ್ಮಡಿ ಹಳ್ಳಿ ಮುಖ್ಯ ರಸ್ತೆ, ಹಗದೂರು, ವೈಟ್‌ಫೀಲ್ಡ್, ಬೆಂಗಳೂರು- 560066 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಸಂಸ್ಥಾಪನಾಧ್ಯಕ್ಷೆ ಸುಷ್ಮಾ ಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9901041889 ಅಥವಾ 9731561354

ವಿಶ್ಲೇಷಣೆ ಸಹಿತ ಕ್ರಿಯಾ ಯೋಜನೆ ಅಗತ್ಯ: ಉಮಾ ಮಹದೇವನ್

ಪ್ರಜಾವಾಣಿ ವಾರ್ತೆ

ಉಮಾ ಮಹಾದೇವನ್

ಬೆಂಗಳೂರು: ಸೃಜನಶೀಲ ಶಕ್ತಿಯನ್ನು ಬಳಸಿಕೊಂಡು ಹವಾಮಾನ ಬದಲಾವಣೆಗೆ ಸಂಬಂಧಿತ ವಿಶ್ಲೇಷಿತ ವಿವರಗಳನ್ನೊಳಗೊಂಡ ಕ್ರಿಯಾ ಯೋಜನೆಯನ್ನು ರಚಿಸುವುದು ಅಗತ್ಯ ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಉಮಾ ಮಹದೇವನ್ ತಿಳಿಸಿದರು.

ಪಾಲಿಕೆಯ ಹವಾಮಾನ ಕ್ರಿಯಾ ಕೋಶದ ವತಿಯಿಂದ ಐಎಎಸ್ ಅಧಿಕಾರಿಗಳ ಸಂಘದಲ್ಲಿ ಬುಧವಾರ ಏರ್ಪಡಿಸಿದ್ದ ಲೇಖನ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಬೆಂಗಳೂರು ನಾಗರಿಕರ ಪಾಲ್ಗೊಳ್ಳುವಿಕೆ, ಸ್ವಯಂಸೇವಾ ಚಟುವಟಿಕೆ ಹಾಗೂ ಪರ್ಯಾಯ ಶಿಕ್ಷಣದ ಕೇಂದ್ರವಾಗಿದೆ ಎಂದರು.

ಬಿಬಿಎಂಪಿ ಆಡಳಿತಗಾರ ತುಷಾರ್ ಗಿರಿನಾಥ್ ಮಾತನಾಡಿ, 'ಬೆಂಗಳೂರು ಹವಾಮಾನ ಬದಲಾವಣೆಯನ್ನು ಗಂಭೀರವಾಗಿ ಪರಿಗಣಿಸಿ ಸಮಗ್ರ ಹವಾಮಾನ ಕ್ರಿಯಾ ಯೋಜನೆಯನ್ನು ಪ್ರಕಟಿಸಲಾಗಿದೆ. ಅನೇಕ ಇಲಾಖೆಗಳು ಈ ಕ್ರಮಗಳನ್ನು ಅನುಷ್ಠಾನ ಮಾಡಬೇಕು' ಎಂದು ಹೇಳಿದರು.

ಹವಾಮಾನ ವೈಪರೀತ್ಯ ನಿರ್ವಹಣೆ ವಿಭಾಗದ ಅಧ್ಯಕ್ಷೆ ಪ್ರೀತಿ ಗೆಹಲೋತ್ ಮಾತನಾಡಿ, 'ಹವಾಮಾನ ಕ್ರಿಯಾ ಕೋಶದೊಂದಿಗೆ ಜವಾಬ್ದಾರಿ ಹಾಗೂ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಸಹಕಾರಯುತ ವಾತಾವರಣ ನಿರ್ಮಿಸುವುದು ನಮ್ಮ ಉದ್ದೇಶ. ಸರ್ಕಾರದ ಜೊತೆ ನಾಗರಿಕರು ಕೈ ಜೋಡಿಸಿ ಏಕಮತವಾಗಿ ಕಾರ್ಯನಿರ್ವಹಿಸಿದರೆ, ನಮ್ಮ ಪ್ರಯತ್ನಗಳು ಪರಿಣಾಮಕಾರಿ ಕೊಡುಗೆಗಳನ್ನು ನೀಡಲು ಸಾಧ್ಯ' ಎಂದು ತಿಳಿಸಿದರು.

ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪ್ರಭಾಶ್ ಚಂದ್ರ ರೇ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್, ಯೋಜನೆ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್ ಭಾಗವಹಿಸಿದ್ದರು.

ಮುರಿದ ಬೆಂಚು, ಸೋರುವ ಚಾವಣಿ

ಶಿಥಿಲಗೊಂಡ ಸರ್ಕಾರಿ ಆಯುರ್ವೇದ ಆಸ್ಪತ್ರೆ ಕಟ್ಟಡ • ಮೂಲಸೌಕರ್ಯ ಕೊರತೆ ನಡುವೆ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ಮುರಿದ ಬೆಂಚಿನ ಮೇಲೆಯೇ ಕುಳಿತು ಬಿಸಿಲು ಕಾಯಿಸುವ ರೋಗಿಗಳು, ಮಂಡಿ ನೋವಿನ ನಡುವೆಯೂ ಏದುಸಿರು ಬಿಡುತ್ತಾ ಮೆಟ್ಟಿಲುಗಳನ್ನು ಹತ್ತುವ ವೃದ್ಧರು, ಮಳೆ ಬಂದಾಗ ಸೋರುವ ಚಾವಣಿ...

ಇದು ಧನ್ವಂತರಿ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಸ್ಥಿತಿ. 1948ರಲ್ಲಿ ಕಾರ್ಯಾರಂಭಿಸಿದ ಈ ಆಸ್ಪತ್ರೆಯು ಮೂಲಸೌಕರ್ಯಗಳ ಕೊರತೆ ನಡುವೆ ಚಿಕಿತ್ಸೆ ಒದಗಿಸುತ್ತಿದೆ. ಆಸ್ಪತ್ರೆಯ ಕಲ್ಲಿನ ಕಟ್ಟಡವು ಶಿಥಿಲಗೊಂಡಿದ್ದು, ಮಳೆ ಬಂದಾಗ ಚಾವಣಿ ಸೋರುತ್ತದೆ. ಇದರಿಂದಾಗಿ ರೋಗಿಗಳು ಹಾಗೂ ಅವರ ಸಹಾಯಕರು ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಈ ಆಸ್ಪತ್ರೆಯು 200 ಹಾಸಿಗೆಗಳನ್ನು ಒಳಗೊಂಡಿದ್ದು, ಬಹುತೇಕ ಎಲ್ಲ ಹಾಸಿಗೆಗಳು ಭರ್ತಿಯಾಗಿವೆ. ಆದರೆ, ಸುಸಜ್ಜಿತ ವಾರ್ಡ್‌ಗಳಿರದ ಪರಿಣಾಮ ರೋಗಿಗಳು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ.

ಈ ಕಟ್ಟಡಕ್ಕೆ ಲಿಫ್ಟ್ ವ್ಯವಸ್ಥೆ ಕಲ್ಪಿಸಿಲ್ಲ. ಇದರಿಂದ ರೋಗಿಗಳು ಮೆಟ್ಟಿಲುಗಳನ್ನು ಹತ್ತಿಯೇ ಸಾಗಬೇಕಾದ ಸ್ಥಿತಿಯಿದೆ. ವಯಸ್ಸಾದವರೇ ಹೆಚ್ಚಾಗಿ ಇಲ್ಲಿ ಬರುವುದರಿಂದ ಮೊದಲ ಮಹಡಿಯ ವಾರ್ಡ್‌ಗಳಿಗೆ ತೆರಳಲು ಪರದಾಟ ನಡೆಸುವುದು ಸಾಮಾನ್ಯವಾಗಿದೆ. ಸಹಾಯಕರು ಕೂಡ ಸಮಸ್ಯೆ ಎದುರಿಸುತ್ತಿದ್ದಾರೆ. ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ಪ್ರತಿನಿತ್ಯ ಸರಾಸರಿ 600 ಮಂದಿ ಭೇಟಿ ನೀಡುತ್ತಿದ್ದು, ಟೋಕನ್ ವ್ಯವಸ್ಥೆ ಇಲ್ಲವಾದ್ದರಿಂದ ರೋಗಿಗಳು ತಮ್ಮ ಪಾಳಿಗೆ ಸರದಿಯಲ್ಲಿ ನಿಲ್ಲಬೇಕಾಗಿದೆ.

ಮುರಿದ ಕಿಟಕಿ, ಬಾಗಿಲು: ಒಳರೋಗಿ ವಿಭಾಗದ ಕಟ್ಟಡದ ನಡುವೆ ಖಾಲಿ ಜಾಗವಿದ್ದು, ಅಲ್ಲಿ ಅಳವಡಿಸಿರುವ ಸಿಮೆಂಟ್ ಬೆಂಚುಗಳು ಶಿಥಿಲಗೊಂಡಿವೆ. ಅಲ್ಲಿಯೇ ರೋಗಿಗಳ ಸಹಾಯಕರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ವಿಶ್ರಾಂತಿ ಪಡೆಯಬೇಕಾಗಿದೆ. ಕಟ್ಟಡದ ಚಾವಣಿಯ ಮೇಲ್ಪದರಗಳು ಕಿತ್ತುಹೋಗಿದ್ದು, ಮಳೆ ಬಂದಾಗ ಸೋರುತ್ತದೆ. ವಾರ್ಡ್‌ಗಳಲ್ಲಿನ ಕೊಠಡಿಗಳೂ ಶಿಥಿಲಗೊಂಡಿವೆ. ಕಿಟಕಿ ಹಾಗೂ ಬಾಗಿಲುಗಳು ಮುರಿದುಹೋಗಿವೆ. ಇದರಿಂದಾಗಿ ರೋಗಿಗಳು ಕಿಟಕಿಗಳಿಗೆ ಬಟ್ಟೆಗಳನ್ನೇ ಮುಚ್ಚಿಕೊಳ್ಳುತ್ತಿದ್ದಾರೆ. ವಾರ್ಡ್‌ಗಳಲ್ಲಿ ಕಬ್ಬಿಣದ ಮಂಚಗಳನ್ನು ಹೊರತುಪಡಿಸಿದರೆ, ಬೇರೆ ಯಾವುದೇ ವ್ಯವಸ್ಥೆಯನ್ನು ಕಲ್ಪಿಸದಿರುವುದು ರೋಗಿಗಳ ಹಾಗೂ ಸಹಾಯಕರ ಅಸಮಾಧಾನಕ್ಕೆ ಕಾರಣವಾಗಿದೆ.

'ಆಸ್ಪತ್ರೆಯಲ್ಲಿ ಚಿಕಿತ್ಸೆ ಉತ್ತಮವಾಗಿದೆ. ಆದರೆ, ಯಾವುದೇ ಮೂಲಸೌಕರ್ಯವಿಲ್ಲ. ಗೋಡೆಗೆ ಬಳಿದಿರುವ ಸುಣ್ಣ, ಚಕ್ಕೆ ಚಕ್ಕೆಯಂತೆ ಉದುರುತ್ತಿದೆ. ಮಳೆ ಬಂದಾಗ ಚಾವಣಿ ಸೋರುತ್ತಿದೆ. ಕಿಟಕಿಗಳು ಹಾಳಾಗಿದ್ದು, ಬಾಗಿಲುಗಳನ್ನು ಹಾಕಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕುಳಿತುಕೊಳ್ಳಲು ಸೂಕ್ತ ಆಸನ ವ್ಯವಸ್ಥೆಯಿಲ್ಲ. ನೆಲಹಾಸು ಕೂಡ ಹಾಳಾಗಿದ್ದರಿಂದ ಓಡಾಡುವುದು ಕಷ್ಟಸಾಧ್ಯವಾಗಿದೆ. ಕೆಲ ಔಷಧಗಳನ್ನು ಹೊರಗಡೆಯಿಂದ ತರಬೇಕಾಗಿದೆ' ಎಂದು ಆಸ್ಪತ್ರೆಯಲ್ಲಿನ ರೋಗಿಗಳು ಹಾಗೂ ಅವರ ಸಹಾಯಕರು ದೂರಿದರು.

ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಶಿಥಿಲಗೊಂಡ ಪಂಚಕರ್ಮ ಚಿಕಿತ್ಸೆ ಕೊಠಡಿಯಲ್ಲಿ ರೋಗಿಗಳಿಗೆ ಮಸಾಜ್ ಮಾಡಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ವಿದ್ಯಾರ್ಥಿಗಳ ಕಲಿಕೆಗೆ ತೊಡಕು

ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದಡಿ ಈ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದ್ದು, ನೆಲಮಹಡಿ ಹಾಗೂ ಮೇಲ್ಮಹಡಿ ಹೊಂದಿದೆ. ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರರಾಜ್ಯಗಳಿಂದಲೂ ರೋಗಿಗಳು ಇಲ್ಲಿಗೆ ಬರುತ್ತಿದ್ದು, ಉಚಿತವಾಗಿ ಚಿಕಿತ್ಸೆ ಒದಗಿಸಲಾಗುತ್ತಿದೆ. ವೈದ್ಯಕೀಯ ವಿದ್ಯಾಲಯದಲ್ಲಿ ಪಂಚಕರ್ಮ, ಶಾಲಾಕ್ಯತಂತ್ರ, ಶಲ್ಯತಂತ್ರ ಸೇರಿ ವಿವಿಧ ವಿಭಾಗಗಳಿದ್ದು, ಪದವಿಯಲ್ಲಿ 500 ಹಾಗೂ ಸ್ನಾತಕೋತ್ತರ ಪದವಿಯಲ್ಲಿ 150 ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಸುಮಾರು 90 ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತಿದ್ದಾರೆ. ಆಸ್ಪತ್ರೆಯಲ್ಲಿ ಸೂಕ್ತ ಮೂಲಸೌಕರ್ಯ ಇಲ್ಲದಿರುವುದು ವಿದ್ಯಾರ್ಥಿಗಳ ಕಲಿಕೆಗೂ ತೊಡಕಾಗಿದೆ.

ಕಟ್ಟಡ ಹಳೆಯದಾಗಿದ್ದು, ಇರುವ ವ್ಯವಸ್ಥೆಯಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸುತ್ತಿದ್ದೇವೆ. ರೋಗಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದಾರೆ
ಡಾ. ವೆಂಕಟರಾಮಯ್ಯ, ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ)

ಜೀವ ವೈವಿಧ್ಯ ಮಂಡಳಿಗೆ ಜೀವ ನೀಡಿ: ಅಶೀಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ, ಮಲೆನಾಡು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಒಟ್ಟು 12 ಜೀವ ವೈವಿಧ್ಯ ತಾಣಗಳನ್ನು ಗುರುತಿಸಲಾಗಿದೆ. ಆದರೆ ಈವರೆಗೆ ಸರ್ಕಾರ ಅಧಿಸೂಚನೆ ಹೊರಡಿಸಿಲ್ಲ ಎಂದು ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಹೇಳಿದ್ದಾರೆ.

ಈ ಕುರಿತು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಪತ್ರ ಬರೆದಿರುವ ಅವರು, ಅವುಗಳನ್ನು ಜೀವ ವೈವಿಧ್ಯ ತಾಣಗಳೆಂದು ಘೋಷಿಸಲು ಈ ಹಿಂದೆ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ, ಸರ್ಕಾರ ಇನ್ನೂ ಮನಸ್ಸು ಮಾಡಿಲ್ಲ ಎಂದಿದ್ದಾರೆ.

ಅನಂತ ಹೆಗಡೆ ಆಶೀಸರ

ಈ 12 ಜೀವ ವೈವಿಧ್ಯ ತಾಣಗಳ ಪೈಕಿ ಪ್ರಮುಖವಾದವು ಆದಿನಾರಾಯಣ ಸ್ವಾಮಿ ಬೆಟ್ಟ, ಕೋಲಾರ ಅಂತರಗಂಗೆ ಬೆಟ್ಟ, ಸಾಗರ ಬರೂರು ಸೀತಾ ಅಶೋಕ ವನ, ಜೋಗ ಬಳಿಯ ಕತ್ತಲೆ ಕಾನು ಪ್ರಮುಖವಾದವು ಎಂದು ಅವರು ತಿಳಿಸಿದ್ದಾರೆ.

ಅಲ್ಲದೇ, ಈ ಹಿಂದೆ ಜೀವ ವೈವಿಧ್ಯ ಮಂಡಳಿಯು ಮೀನುಗಾರಿಕೆ ಇಲಾಖೆ ನೆರವಿನೊಂದಿಗೆ ರಾಜ್ಯ ಮಟ್ಟದಲ್ಲಿ 11 ಮತ್ಸ್ಯಧಾಮಗಳನ್ನು ಗುರುತಿಸಿದೆ. ಪಶ್ಚಿಮಘಟ್ಟದಲ್ಲಿ 15 ನದಿ ಸ್ಥಳಗಳಲ್ಲಿ ಅಪರೂಪದ ಮೀನುಗಳು ಇರುವುದನ್ನು ಗುರುತಿಸಲಾಗಿದೆ. ಇವುಗಳ ರಕ್ಷಣೆಗೆ ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

ಜೀವ ವೈವಿಧ್ಯ ಸಂರಕ್ಷಣಾ ಕಾಯ್ದೆಯ ಮೂಲಕ ಗ್ರಾಮ ಪಂಚಾಯಿತಿಗಳಿಗೆ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಜವಾಬ್ದಾರಿ ಸಿಕ್ಕಿದೆ. ಸುಮಾರು 6,000 ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಹೆಸರಿಗೆ ಮಾತ್ರ ಇವೆ. ಇವುಗಳಿಗೆ ಜೀವ ತುಂಬುವ ಕಾರ್ಯ ಮಾಡಬೇಕು. ಮಂಡಳಿಗೆ ತಜ್ಞ ಅಧಿಕಾರೇತರ ಸದಸ್ಯರ ನೇಮಕ ಮಾಡಬೇಕು ಆಗ್ರಹಿಸಿದ್ದಾರೆ.

ಈ ಮಂಡಳಿಗೆ ಜೀವವೇ ಇಲ್ಲದ ಪರಿಸ್ಥಿತಿ ಬಂದಿದೆ. 25 ತಜ್ಞರು ಇದ್ದಾರೆ. ಆದರೆ, ನಾಡಿನ ಪ್ರಾಕೃತಿಕ ಸಂಪತ್ತಿನ ನಿರ್ವಹಣೆ, ಸಂರಕ್ಷಣೆ ಅಭಿವೃದ್ಧಿಗೆ ಕೊಡುಗೆ ನೀಡಬೇಕಾದ ಜೀವ ವೈವಿಧ್ಯ ಮಂಡಳಿ ನಿಂತ ನೀರಾಗಿದೆ. ಆದ್ದರಿಂದ, ಮಂಡಳಿಯನ್ನು ಚುರುಕುಗೊಳಿಸಲು ಸಚಿವರೇ 'ಚುಚ್ಚುಮದ್ದು' ನೀಡಬೇಕು ಎಂದು ಮನವಿ ಮಾಡಿದ್ದಾರೆ.

ನೀರವ್ ಮೋದಿ ಜಾಮೀನು ಅರ್ಜಿ ತಿರಸ್ಕೃತ

ನವದೆಹಲಿ/ಲಂಡನ್ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ)ಗೆ ₹13,000 ಕೋಟಿ ವಂಚನೆ ಮಾಡಿದ ಪ್ರಕರಣದ ಆರೋಪಿ ನೀರವ್ ಮೋದಿ ಅವರ ಜಾಮೀನು ಅರ್ಜಿಯನ್ನು ಲಂಡನ್‌ನ ಹೈಕೋರ್ಟ್ ತಿರಸ್ಕರಿಸಿದೆ.

ಈ ಪ್ರಕರಣದಲ್ಲಿ ಬಂಧಿತರಾಗಿರುವ 54 ವರ್ಷ ವಯಸ್ಸಿನ ನೀರವ್ ಮೋದಿ ಅವರು ಕಳೆದ ಆರು ವರ್ಷಗಳಿಂದ ಬ್ರಿಟನ್‌ನ ಕಾರಾಗೃಹದಲ್ಲಿ ಇದ್ದಾರೆ. ಅಲ್ಲದೆ, ಭಾರತಕ್ಕೆ ಗಡೀಪಾರು ಮಾಡದಂತೆ ಹೋರಾಟ ನಡೆಸುತ್ತಿದ್ದಾರೆ.

ಲಂಡನ್ ಬಂದೀಖಾನೆಯಲ್ಲಿರುವ ಅವರ ಆರೋಗ್ಯ ಹದಗೆಡುತ್ತಿದ್ದು, ಜಾಮೀನು ಮಂಜೂರು ಮಾಡಬೇಕು ಎಂದು ಅವರ ಪರ ವಕೀಲರು ವಾದ ಮಂಡಿಸಿದರು. ಆದರೆ, ನ್ಯಾಯಮೂರ್ತಿ ಮೈಕೇಲ್ ಫೋರ್ದಾಮ್ ಅವರು, 'ಜಾಮೀನು ನೀಡಿದಲ್ಲಿ ಪ್ರಕರಣದ ಸಾಕ್ಷ್ಯಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ' ಎಂದರು.

ಗಡೀಪಾರು ವಾರಂಟ್ ಆಧರಿಸಿ 2019ರ ಮಾರ್ಚ್ 19ರಂದು ಮೋದಿ ಅವರನ್ನು ಬಂಧಿಸಲಾಗಿತ್ತು. ಬ್ರಿಟನ್‌ನ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಅವರು ಏಪ್ರಿಲ್ 2021ರಂದು ಗಡೀಪಾರು ಮಾಡಿ ಆದೇಶಿಸಿದ್ದರು.

ಅಗಲಿದ ಸಾಹಿತಿಗೆ ಒಡನಾಡಿಗಳಿಂದ ನುಡಿನಮನ

'ನಿಷ್ಕಳಂಕವಾಗಿ ಬಾಳಿದ ಸಿದ್ದಲಿಂಗಯ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಜೀವನದಲ್ಲಿ ಪ್ರಮುಖ ಸ್ಥಾನಗಳಲ್ಲಿದ್ದರೂ ನಿಷ್ಕಳಂಕರಾಗಿ ಬಾಳಿದ ಜಿ.ಎಸ್. ಸಿದ್ದಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ತಿಗೂ ನೈತಿಕ ಶಕ್ತಿ ತುಂಬಿದ್ದರು' ಎಂದು ಅವರ ಒಡನಾಡಿಗಳು ಸ್ಮರಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಪ್ರೊ.ಜಿ.ಎಸ್. ಸಿದ್ದಲಿಂಗಯ್ಯ ನುಡಿ ನಮನ' ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಪ್ರಮುಖರು ಮನದಾಳ ಹಂಚಿಕೊಂಡರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ಸಿದ್ದಲಿಂಗಯ್ಯ ಅವರು ಪರಿಷತ್ತಿನ ಅಧಿಕಾರ ವಹಿಸಿಕೊಂಡಾಗ, ಪರಿಷತ್ತು ಸಂದಿಗ್ಧ ಸನ್ನಿವೇಶದಲ್ಲಿತ್ತು. ಆ ಸಂದರ್ಭದಲ್ಲಿ ನುಡಿದಂತೆ ನಡೆದ ಅವರು, ತಮ್ಮ ಅವಧಿಯಲ್ಲಿ ಪರಿಷತ್ತಿಗೆ ಬಹುಮುಖ ಕೊಡುಗೆಗಳನ್ನು ನೀಡಿದರು. ಮಾರ್ಗದರ್ಶಕರಾಗಿದ್ದ ಅವರು, ಇತ್ತೀಚಿನವರೆಗೂ ಪರಿಷತ್ತಿನ ಏಳ್ಗೆಗೆ ಸಲಹೆಗಳನ್ನು ನೀಡುತ್ತಿದ್ದರು' ಎಂದು ಸ್ಮರಿಸಿಕೊಂಡರು.

ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, 'ಕಪಟತನ ಇರದ, ಆತ್ಮರತಿಗೆ ಒಳಗಾಗದ ಪರಿಶುದ್ಧ ವ್ಯಕ್ತಿತ್ವ ಅವರದಾಗಿತ್ತು. ಸಾರ್ವಜನಿಕ ಜೀವನದಲ್ಲಿ ಪ್ರಮುಖ ಸ್ಥಾನಗಳಲ್ಲಿದ್ದೂ, ನಿಷ್ಕಳಂಕವಾಗಿ ಬಾಳಿದ ಅಪರೂಪದ ವ್ಯಕ್ತಿ ಅವರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, 'ಎಲ್ಲರೊಂದಿಗೆ ಒಂದಾಗಿ, ಎಲ್ಲರಿಗೂ ಬೇಕಾಗಿ ಬಾಳಿದವರು ಸಿದ್ದಲಿಂಗಯ್ಯ' ಎಂದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, 'ಸಿದ್ದಲಿಂಗಯ್ಯ ಅವರಿಗೆ ಸಿಟ್ಟಿನಷ್ಟೇ ಸಂಯಮವೂ ಇತ್ತು' ಎಂದು ಸ್ಮರಿಸಿಕೊಂಡರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಬರಹಗಾರರಾದ ಮಂಡಗದ್ದೆ ಶ್ರೀನಿವಾಸಯ್ಯ, ಕೆ.ಇ.ರಾಧಾಕೃಷ್ಣ, ತುಮಕೂರು ಜಿಲ್ಲಾ ಕಸಾಪ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ, ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷ ಆರ್.ಲಕ್ಷ್ಮೀನಾರಾಯಣ, ಪ್ರಾಧ್ಯಾಪಕರಾದ ಕಾ.ವೆಂ. ಶ್ರೀನಿವಾಸಮೂರ್ತಿ ಹಾಗೂ ರುದ್ರೇಶ ಅದರಂಗಿ ಅವರು ಸಿದ್ದಲಿಂಗಯ್ಯ ಅವರ ಬಗ್ಗೆ ಅಭಿಪ್ರಾಯ ಹಂಚಿಕೊಂಡರು.

ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗಶೆಟ್ಟಿ, ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಶಿವರುದ್ರ ಸ್ವಾಮೀಜಿ, ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಗೊ.ರು. ಚನ್ನಬಸಪ್ಪ, ಮಹೇಶ ಜೋಶಿ, ಕೆ.ವಿ. ನಾಗರಾಜಮೂರ್ತಿ, ಕೆ.ಇ. ರಾಧಾಕೃಷ್ಣ ಮತ್ತು ಆರ್. ಲಕ್ಷ್ಮೀನಾರಾಯಣ ಅವರು ಜಿ.ಎಸ್. ಸಿದ್ದಲಿಂಗಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು ರೇಸ್ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನನಗರಿಯಲ್ಲಿ ಈ ವರ್ಷದ 'ಬೆಂಗಳೂರು ಬೇಸಿಗೆ ರೇಸ್'ಗಳು ಶನಿವಾರದಿಂದ ಆರಂಭವಾಗಲಿವೆ. ಈ ಬಾರಿ ಒಟ್ಟು 24 ರೇಸ್ ದಿನಗಳನ್ನು ನಿಗದಿಪಡಿಸಲಾಗಿದೆ. ಈ ಋತುವು ಆಗಸ್ಟ್ 1ರಂದು ಮುಕ್ತಾಯಗೊಳ್ಳಲಿದೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆರ್.ಮಂಜುನಾಥ್ ರಮೇಶ್, 'ಟ್ರೋಫಿಗಳು ಸೇರಿದಂತೆ ಒಟ್ಟು ಬಹುಮಾನದ ಮೊತ್ತಕ್ಕೆ ಸುಮಾರು ₹18 ಕೋಟಿ ವಿನಿಯೋಗವಾಗಲಿದೆ' ಎಂದರು.

'ಪ್ರತಿಷ್ಠಿತ ಎಚ್.ಪಿ.ಎಸ್.ಎಲ್ ಬೆಂಗಳೂರು ಬೇಸಿಗೆ ಡರ್ಬಿ ರೇಸ್ ಜುಲೈ 13ರಂದು ನಡೆಯಲಿದೆ. ಎಚ್.ಪಿ.ಎಸ್.ಎಲ್ ಸಂಸ್ಥೆಯ ಸುರೇಶ್ ಪಾಲಡುಗು ಅವರು ಡರ್ಬಿಯನ್ನು ಪ್ರಾಯೋಜಿಸುತ್ತಿದ್ದಾರೆ. ಡರ್ಬಿಯ ಒಟ್ಟು ಬಹುಮಾನದ ಮೊತ್ತ ಸುಮಾರು ₹2 ಕೋಟಿ ಇದ್ದು, ಬಿಟಿಸಿ ಮತ್ತು ಎಚ್.ಪಿ.ಎಸ್.ಎಲ್ ಸಂಸ್ಥೆಯು ತಲಾ ₹1 ಕೋಟಿ ನೀಡಲಿವೆ' ಎಂದು ತಿಳಿಸಿದರು.

'ಇತರೆ ಪ್ರಮುಖ ರೇಸ್‌ಗಳನ್ನು ಪ್ರಾಯೋಜಿಸಲು ಕೆಲವು ಸಂಸ್ಥೆಗಳ ಪ್ರಮುಖರು ಆಸಕ್ತಿ ತೋರಿದ್ದಾರೆ. ಅವುಗಳಲ್ಲಿ ಡಾರಿಯಸ್ ಬೈರಾಮ್ಜಿ, ಹೂವ್ಸ್ ಓ ಸ್ಟೀಲ್ ಮಿಲಿಯನ್, ಕೊರೊಮಂಡಲ್ ಗ್ರೊಮೋರ್ ಮತ್ತು ಫೈವ್ ಸ್ಟಾರ್ ಶಿಪ್ಪಿಂಗ್ ಕಂಪನಿ ಪ್ರಮುಖರಾಗಿದ್ದಾರೆ' ಎಂದರು.

ಈ ಅವಧಿಯಲ್ಲಿ ಸುಮಾರು 168 ರೇಸ್‌ಗಳು ನಡೆಯಲಿವೆ ಎಂದು ಅಂದಾಜಿಸಲಾಗಿದೆ. ಇತರೆ ರೇಸ್ ಕೇಂದ್ರಗಳಿಂದ ಬಂದಿರುವ ಸುಮಾರು 30 ಟ್ರೈನರ್‌ಗಳ ತರಬೇತಿಯಲ್ಲಿರುವ ಹೊರಪ್ರದೇಶದ 202 ಕುದುರೆಗಳು ಸೇರಿ ಒಟ್ಟು 799 ಅಶ್ವಗಳು ಸ್ಪರ್ಧಿಸಬಹುದು ಎಂದು ನಿರೀಕ್ಷಿಸಲಾಗಿದೆ.

ಇದೇ ಮೊದಲ ಬಾರಿಗೆ 1300 ಮತ್ತು 1500 ಮೀಟರ್ಸ್ ರೇಸ್‌ಗಳನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತಿದೆ ಎಂದು ಮಂಜುನಾಥ್ ತಿಳಿಸಿದರು.

ವಿವಿಧೆಡೆ ಬಿರುಸು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ಗುರುವಾರ ರಾತ್ರಿ ಬಿರುಸು ಮಳೆಯಾಗಿದೆ.

ಖೋಡೆ ಜಂಕ್ಷನ್, ವಿಂಡ್ಸರ್ ಮ್ಯಾನರ್‌ನಿಂದ ಪಿ.ಜಿ. ಹಳ್ಳಿ ಕಡೆಗೆ ಹೋಗುವ ರಸ್ತೆ, ಅನಿಲ್ ಕುಂಬ್ಳೆ ವೃತ್ತ, ವಿದ್ಯಾನಗರ ಕೆಳಸೇತುವೆ ಮುಂತಾದಡೆ ನೀರು ನಿಂತಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ಜಕ್ಕೂರಿನಲ್ಲಿ 2.4 ಸೆಂ.ಮೀ., ಪುಲಕೇಶಿನಗರದಲ್ಲಿ 2.2 ಸೆಂ.ಮೀ., ಬಾಣಸವಾಡಿಯಲ್ಲಿ 1.6 ಸೆಂ.ಮೀ., ಹೊರಮಾವು 1.3 ಸೆಂ.ಮೀ., ಸಂಪಿಗೆರಾಮ ನಗರದಲ್ಲಿ 1.2 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯದಲ್ಲಿ 1.1 ಸೆಂ.ಮೀ., ಶೆಟ್ಟಿಹಳ್ಳಿಯಲ್ಲಿ 1 ಸೆಂ.ಮೀ. ಮಳೆ ದಾಖಲಾಗಿದೆ.

ರಂಗೋತ್ರಿ ಸಾಂಸ್ಕೃತಿಕ ಸಂಸ್ಥೆಯು ಕೊಡಿಗೆಹಳ್ಳಿಯಲ್ಲಿ ಹಮ್ಮಿಕೊಂಡಿದ್ದ 24ನೇ ವರ್ಷದ ಬುದ್ಧ ಪೂರ್ಣಿಮೆಯಲ್ಲಿ (ಕುಳಿತವರು ಎಡದಿಂದ) ಎನ್. ಚಂದ್ರಶೇಖರ್, ಜಗದೀಶ ಎಸ್. ಮಹಾರಾಜಪೇಟ, ಜೆ. ರಾಜು, ಸಿ. ಸೋಮಶೇಖರ್, ಗುರುರಾಜ ಹೊಸಕೋಟೆ, ಜಿ. ಅಂಬರೀಶ್ ಅವರಿಗೆ 'ಬುದ್ಧ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು

ಡಿಮಾಂಡ್ ನೋಟೀಸ್

ದಿನಾಂಕ: 29.03.2025

(ಮುಂದಿನ ಪುಟದಲ್ಲಿ ಮುಂದುವರೆಯುತ್ತದೆ...)

(ಹಿಂದಿನ ಪುಟದಿಂದ ಮುಂದುವರಿದಿದೆ...)

[illegible]

ದಿನಾಂಕ 05.12.2017 ಉಪ ಆಯುಕ್ತರು, ಬೆಂಗಳೂರು ಜಿಲ್ಲೆ ರವರಿಂದ ನೀಡಿದೆ.

ಐಟಂ ನಂ. 22: (ಎ) ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿ ಸರ್ವೆ ನಂ. 230/3 ಅಳತೆ 10 (ಹತ್ತು) ಗುಂಟೆಗಳು, ಗುಂಜೂರು ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಭೂಮಿ ಸರ್ವೆ ನಂ. 230/4, ಪಶ್ಚಿಮಕ್ಕೆ : ಶ್ರೀನಿವಾಸ ರೆಡ್ಡಿ ರವರ ಭೂಮಿ, ಉತ್ತರಕ್ಕೆ : ಸುಶೀಲ ರವರಿಗೆ ಸೇರಿದ ಭೂಮಿ ಸರ್ವೆ ನಂ. 230/3, ದಕ್ಷಿಣಕ್ಕೆ : ಸುನಂದಮ್ಮ ರವರಿಗೆ ಸೇರಿದ ಭೂಮಿ ಸರ್ವೆ ನಂ. 230/3, ಷೆಡ್ಯೂಲ್ಆಸ್ತಿಯು ವಾಸಯೋಗ್ಯಕ್ಕೆ ಪರಿವರ್ತಿತ ಅಫಿಷಿಯಲ್ ಮೆಮೊರಂಡಮ್ ನಂ. ಎಎಲ್ಎನ್/ಇವಿಹೆಚ್(ಸರ್ಕಲ್) ಎಸ್ಆರ್/75/2017–18, ದಿನಾಂಕ 05.12.2017 ಉಪ ಆಯುಕ್ತರು, ಬೆಂಗಳೂರು ಜಿಲ್ಲೆ ರವರಿಂದ ನೀಡಿದೆ.

(ಬಿ) ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿ ಸರ್ವೆ ನಂ. 230/3 ಅಳತೆ 10 (ಹತ್ತು) ಗುಂಟೆಗಳು, 1 ಎಕರೆ 25.06 ಗುಂಟೆಗಳು ಮತ್ತು 6 ಗುಂಟೆಗಳು ಖರಾಬ್, ಗುಂಜೂರು ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಭೂಮಿ ಸರ್ವೆ ನಂ. 230/4, ಪಶ್ಚಿಮಕ್ಕೆ : ಶ್ರೀನಿವಾಸ ರೆಡ್ಡಿ ರವರ ಭೂಮಿ, ಉತ್ತರಕ್ಕೆ : ಭೂಮಿ ಸರ್ವೆ ನಂ. 230/4, ದಕ್ಷಿಣಕ್ಕೆ : ರತ್ನಮ್ಮ ರವರಿಗೆ ಸೇರಿದ ಭೂಮಿ ಸರ್ವೆ ನಂ. 230/3, ಷೆಡ್ಯೂಲ್ಆಸ್ತಿಯು ವಾಸಯೋಗ್ಯಕ್ಕೆ ಪರಿವರ್ತಿತ ಅಫಿಷಿಯಲ್ ಮೆಮೊರಂಡಮ್ ನಂ. ಎಎಲ್ಎನ್/ಇವಿಹೆಚ್(ಸರ್ಕಲ್) ಎಸ್ಆರ್/75/2017–18, ದಿನಾಂಕ 05.12.2017 ಉಪ ಆಯುಕ್ತರು, ಬೆಂಗಳೂರು ಜಿಲ್ಲೆ ರವರಿಂದ ನೀಡಿದೆ.

(ಸಿ) ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿ ಸರ್ವೆ ನಂ. 230/3 ಅಳತೆ 12.06 (ಹನ್ನೆರಡು ವರೆ) ಗುಂಟೆಗಳು, 1 ಎಕರೆ 25.06 ಗುಂಟೆಗಳು ಮತ್ತು 6 ಗುಂಟೆಗಳು ಖರಾಬ್, ಗುಂಜೂರು ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಭೂಮಿ ಸರ್ವೆ ನಂ. 230/4, ಪಶ್ಚಿಮಕ್ಕೆ : ಶ್ರೀನಿವಾಸ ರೆಡ್ಡಿ ರವರ ಭೂಮಿ, ಉತ್ತರಕ್ಕೆ :ರತ್ನಮ್ಮರವರಿಗೆ ಸೇರಿದ ಭೂಮಿ ಸರ್ವೆ ನಂ. 230/3, ದಕ್ಷಿಣಕ್ಕೆ : ಮುನಿರೆಡ್ಡಿ ರವರಿಗೆ ಸೇರಿದ ಭೂಮಿ ಸರ್ವೆ ನಂ. 230/3, ಷೆಡ್ಯೂಲ್ಆಸ್ತಿಯು ವಾಸಯೋಗ್ಯಕ್ಕೆ ಪರಿವರ್ತಿತ ಅಫಿಷಿಯಲ್ ಮೆಮೊರಂಡಮ್ ನಂ. ಎಎಲ್ಎನ್/ಇವಿಹೆಚ್(ಸರ್ಕಲ್) ಎಸ್ಆರ್/75/2017–18, ದಿನಾಂಕ 05.12.2017 ಉಪ ಆಯುಕ್ತರು, ಬೆಂಗಳೂರು ಜಿಲ್ಲೆ ರವರಿಂದ ನೀಡಿದೆ.

ಐಟಂ ನಂ. 23 : (ಎ) ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿ ಸರ್ವೆ ನಂ. 270/3 ಅಳತೆ 10 (ಹತ್ತು) ಗುಂಟೆಗಳು, ಗುಂಜೂರು ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಭೂಮಿ ಸರ್ವೆ ನಂ. 270/4, ಪಶ್ಚಿಮಕ್ಕೆ : ಶ್ರೀನಿವಾಸ ರೆಡ್ಡಿ ರವರ ಭೂಮಿ, ಉತ್ತರಕ್ಕೆ : ಸುಶೀಲ ರವರಿಗೆ ಸೇರಿದ ಭೂಮಿ ಸರ್ವೆ ನಂ. 270/3, ದಕ್ಷಿಣಕ್ಕೆ : ಸುನಂದಮ್ಮ ರವರಿಗೆ ಸೇರಿದ ಭೂಮಿ ಸರ್ವೆ ನಂ. 270/3, ಷೆಡ್ಯೂಲ್ಆಸ್ತಿಯು ವಾಸಯೋಗ್ಯಕ್ಕೆ ಪರಿವರ್ತಿತ ಅಫಿಷಿಯಲ್ ಮೆಮೊರಂಡಮ್ ನಂ. ಎಎಲ್ಎನ್/ಇವಿಹೆಚ್(ಸರ್ಕಲ್) ಎಸ್ಆರ್/75/2017–18, ದಿನಾಂಕ 05.12.2017 ಉಪ ಆಯುಕ್ತರು, ಬೆಂಗಳೂರು ಜಿಲ್ಲೆ ರವರಿಂದ ನೀಡಿದೆ.

'ಪ್ರಸ್ತುತ ದೇಶದಲ್ಲಿ 1,400 ನಿಲ್ದಾಣಗಳನ್ನು ₹20 ಸಾವಿರ ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣದ ಮಾದರಿಯಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ಇದರಲ್ಲಿ ರಾಜ್ಯದ 61 ನಿಲ್ದಾಣಗಳೂ ಸೇರಿವೆ. ಆಲಮಟ್ಟಿಯಿಂದ-ಯಾದಗಿರಿ ತನಕದ 162 ಕಿ.ಮೀ ಮಾರ್ಗದ ಅಂತಿಮ ಸ್ಥಳ ಸಮೀಕ್ಷೆ ಮಾಡಲು ₹4.05 ಕೋಟಿ, ಭದ್ರಾವತಿಯಿಂದ ಚನ್ನಗಿರಿ ಮಾರ್ಗವಾಗಿ ಚಿಕ್ಕಜಾಜೂರು ತನಕ 73 ಕಿ.ಮೀ. ಸರ್ವೆ ಮಾಡಲು ರೈಲ್ವೆ ಮಂಡಳಿಯ ಅನುಮತಿ ಲಭಿಸಿದೆ. ಈ ಕಾಮಗಾರಿಗೆ ₹5,875 ಕೋಟಿ ಅಂದಾಜಿಸಲಾಗಿದೆ' ಎಂದು ಹೇಳಿದರು.

7 ಕುಬೇರರ ಆಸ್ತಿ ₹22 ಕೋಟಿ

ಒಂದನೇ ಪುಟದಿಂದ...

ಅಧಿಕಾರಿಗಳ ಮನೆಗಳನ್ನು ಜಾಲಾಡಿದ ಲೋಕಾಯುಕ್ತ ಪೊಲೀಸರು, ಕೋಟ್ಯಂತರ ಮೌಲ್ಯದ ಸ್ಥಿರಾಸ್ತಿ ಮತ್ತು ಚಿನ್ನಾಭರಣ ಪತ್ತೆ ಮಾಡಿದರು. ಅಧಿಕಾರಿಗಳು ನಿವೇಶನ ಮತ್ತು ಕೃಷಿ ಜಮೀನುಗಳ ಮೇಲೆ ಹೂಡಿಕೆ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಶೋಧದ ವೇಳೆ ಪತ್ತೆಯಾಗಿವೆ.

ಆರೋಪಿಗಳ ಬಳಿ ₹16.48 ಕೋಟಿ ಮೌಲ್ಯದ ಸ್ಥಿರಾಸ್ತಿಗಳು, ₹33.68 ಲಕ್ಷ ನಗದು, ₹2.44 ಕೋಟಿ ಮೌಲ್ಯದ ಚಿನ್ನಾಭರಣ, ₹96.42 ಲಕ್ಷ ಮೌಲ್ಯದ ವಾಹನಗಳು, ₹2.55 ಕೋಟಿ ಮೌಲ್ಯದ ಇತರ ಸ್ವತ್ತುಗಳನ್ನು ಪತ್ತೆ ಮಾಡಲಾಗಿದೆ ಎಂದು ಲೋಕಾಯುಕ್ತ ಪೊಲೀಸ್ ವಿಭಾಗ ತಿಳಿಸಿದೆ.

ತುಮಕೂರು ಜಿಲ್ಲೆಯ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಡಿ.ರಾಜಶೇಖರ್ ಬಳಿ ಅತ್ಯಧಿಕ ₹5.74 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಲಾಗಿದೆ. ಅವರು ನಾಲ್ಕು ಮನೆಗಳು, 12 ನಿವೇಶನ, 4 ಎಕರೆ ಜಮೀನು ಹೊಂದಿರುವುದು ಪತ್ತೆಯಾಗಿದೆ.

ಬೆಂಗಳೂರು ಸಿಟಿ ಮಾರ್ಕೆಟ್-1 ಉಪ ವಿಭಾಗದ ಕಾನೂನು ಮಾಪನ ನಿರೀಕ್ಷಕ ಎಚ್.ಆರ್.ನಟರಾಜ್ ಬಳಿ ₹3.94 ಕೋಟಿ ಅಕ್ರಮ ಆಸ್ತಿ ಇರುವುದು ತನಿಖೆಯಲ್ಲಿ ಬಯಲಾಗಿದೆ. ಅವರು ಎರಡು ನಿವೇಶನ, ಎರಡು ಮನೆ, 9 ಎಕರೆ ಕೃಷಿ ಜಮೀನಿನ ಒಡೆತನ ಹೊಂದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನೆ ಹೆಚ್ಚುವರಿ ನಿರ್ದೇಶಕ ಟಿ.ವಿ.ಮುರಳಿ ಅವರ ಬಳಿ ₹3.47 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಲಾಗಿದೆ. ಅವರ ಬಳಿ ಮೂರು ನಿವೇಶನಗಳು, ಮೂರು ವಾಸದ ಮನೆಗಳು ಪತ್ತೆಯಾಗಿವೆ. ಆರೋಪಿಗಳ ವಿರುದ್ಧ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದೆ.

ಅಕ್ರಮ ಆಸ್ತಿಯ ಮಾಹಿತಿ

ಅಧಿಕಾರಿ	ಸ್ಥಿರಾಸ್ತಿ	ನಗದು	ಚಿನ್ನಾಭರಣ	ವಾಹನಗಳ ಮೌಲ್ಯ	ಇತರ	ಒಟ್ಟು ಅಕ್ರಮ ಆಸ್ತಿ
ಎಚ್.ಆರ್.ನಟರಾಜ್ (ಕಾನೂನು ಮಾಪನ ನಿರೀಕ್ಷಕ, ಸಿಟಿ ಮಾರ್ಕೆಟ್-1 ಉಪ-ವಿಭಾಗ, ಬೆಂಗಳೂರು)	₹3.13 ಕೋಟಿ	₹1.50 ಲಕ್ಷ	₹21 ಲಕ್ಷ	₹5 ಲಕ್ಷ	₹ 54 ಲಕ್ಷ	₹3.94 ಕೋಟಿ
ಮುರುಳಿ. ಟಿ. ವಿ, (ಹೆಚ್ಚುವರಿ ನಿರ್ದೇಶಕ, ನಗರ ಯೋಜನೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ)	₹3.16 ಕೋಟಿ	ನಗದು ಸಿಕ್ಕಿಲ್ಲ	₹25.54 ಲಕ್ಷ	₹5 ಲಕ್ಷ	-0-	₹3.47 ಕೋಟಿ
ಅನಂತ ಕುಮಾರ್ (ದ್ವಿತೀಯ ದರ್ಜೆ ಸಹಾಯಕ, ಹೊಸಕೋಟೆ ತಾಲ್ಲೂಕು ಕಛೇರಿ, ಬೆಂ. ಗ್ರಾಮಾಂತರ ಜಿಲ್ಲೆ)	₹1.51 ಕೋಟಿ	₹2.84 ಲಕ್ಷ	₹21 ಲಕ್ಷ	₹6 ಲಕ್ಷ	₹15 ಲಕ್ಷ	₹1.96 ಕೋಟಿ
ರಾಜಶೇಖರ್ ಡಿ, (ಯೋಜನಾ ನಿರ್ದೇಶಕ, ನಿರ್ಮಿತಿ ಕೇಂದ್ರ, ತುಮಕೂರು ಜಿಲ್ಲೆ): ₹3.89 ಕೋಟಿ	₹11.66 ಲಕ್ಷ	₹89 ಲಕ್ಷ	₹37.92 ಲಕ್ಷ	₹45.98 ಲಕ್ಷ	₹5.74 ಕೋಟಿ	
ಮಂಜುನಾಥ ಎಂ. ಆರ್. (ಸರ್ವೆ ಸೂಪರ್‌ವೈಸರ್, ಯು.ಪಿ.ಓ.ಆರ್ ಕಚೇರಿ, ಮಂಗಳೂರು)	₹2.31 ಕೋಟಿ	₹23 ಸಾವಿರ	₹17 ಲಕ್ಷ	₹3.50 ಲಕ್ಷ	₹5 ಲಕ್ಷ	₹2.56 ಕೋಟಿ
ರೇಣುಕಾ ಸತಾರ್ಲೆ, ಹಿಂದಿನ ಜಿಲ್ಲಾ ವ್ಯವಸ್ಥಾಪಕಿ, ಡಾ. ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಯಮಿತ, ವಿಜಯಪುರ)	₹1.55 ಕೋಟಿ	₹10 ಲಕ್ಷ	₹58.80 ಲಕ್ಷ	₹28 ಲಕ್ಷ	₹59 ಲಕ್ಷ	₹3.10 ಕೋಟಿ
ಉಮಾಕಾಂತ್ ಹಳ್ಳಿ, (ತಹಶೀಲ್ದಾರ್, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ)	₹91.18 ಲಕ್ಷ	₹7.44 ಲಕ್ಷ	₹12.31 ಲಕ್ಷ	₹11 ಲಕ್ಷ	₹76.58 ಲಕ್ಷ	₹1.98 ಕೋಟಿ

ನಕಲಿ ಬಿಲ್ ಸೃಷ್ಟಿಸಿ ವಂಚನೆ

ತುಮಕೂರು: ಮೂರು ದಿನಗಳ ಹಿಂದೆ ಚೀನಾ ಪ್ರವಾಸಕ್ಕೆ ತೆರಳಿರುವ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಡಿ.ರಾಜಶೇಖರ್ ಮನೆ, ಕಚೇರಿಗಳಲ್ಲಿ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದಾರೆ.

ಅಶೋಕ ನಗರದಲ್ಲಿರುವ ರಾಜಶೇಖರ್ ಮನೆಯಲ್ಲಿ ಅವರ ಪತ್ನಿ ಸಮ್ಮುಖದಲ್ಲಿ ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಬೆಂಗಳೂರು, ತುಮಕೂರು ಸೇರಿದಂತೆ ವಿವಿಧೆಡೆ 12 ನಿವೇಶನ, ಬೆಂಗಳೂರಿನ ಕೆಂಗೇರಿ ಬಳಿಯ ಐಷಾರಾಮಿ ಫ್ಲ್ಯಾಟ್, ತುಮಕೂರಿನ ಹಿರೇಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಎರಡು ಕಾರ್ಖಾನೆ, ವಸಂತನರಸಾಪುರ ಕೈಗಾರಿಕಾ ಪ್ರದೇಶದ ಬಳಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ನಾಲ್ಕು ಎಕರೆ ಜಮೀನು ಸೇರಿದಂತೆ ಅಕ್ರಮವಾಗಿ ಸಂಪಾದಿಸಿರುವ ಅಪಾರ ಪ್ರಮಾಣದ ಆಸ್ತಿಯ ದಾಖಲೆ ಪತ್ತೆಯಾಗಿವೆ. ಪತ್ನಿ, ಸಂಬಂಧಿಕರ ಹೆಸರಿನಲ್ಲಿ ಆಸ್ತಿ ನೋಂದಣಿ ಮಾಡಿಸಿರುವುದು ಗೊತ್ತಾಗಿದೆ.

2023-24ರಲ್ಲಿ ಹಳೆ ಕಾಮಗಾರಿ ಹೆಸರಿನಲ್ಲಿ ನಕಲಿ ಬಿಲ್ ಸೃಷ್ಟಿಸಿ ₹2 ಕೋಟಿಗೂ ಅಧಿಕ ಮೊತ್ತ ಪಡೆದುಕೊಂಡಿರುವುದು, 2024-25ರಲ್ಲೂ ಹಳೆ ಕಾಮಗಾರಿಗಳಿಗೆ ನಕಲಿ ಬಿಲ್ ಸೃಷ್ಟಿಸಿ ₹3 ಕೋಟಿಗೂ ಅಧಿಕ ಮೊತ್ತ ಡ್ರಾ ಮಾಡಿಕೊಂಡಿದ್ದಾರೆ. ಸಂಬಂಧಿಕರ ಹೆಸರಿನಲ್ಲೂ ನಕಲಿ ಬಿಲ್ ಸೃಷ್ಟಿಸಿ ವಂಚಿಸಿರುವುದು ತಪಾಸಣೆ ವೇಳೆ ಗೊತ್ತಾಗಿದೆ.

'ಸೋನು ನಿಗಮ್ ವಿರುದ್ಧ ಬಲವಂತದ ಕ್ರಮ ಬೇಡ'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಕನ್ನಡದ ಅಭಿಮಾನವನ್ನು ಪಹಲ್ಗಾಮ್ ಘಟನೆಗೆ ತಳಕು ಹಾಕಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿ ಗಾಯಕ ಸೋನು ನಿಗಮ್ ವಿರುದ್ಧ ಪೊಲೀಸರು ಬಲವಂತದ ಕ್ರಮ ಜರುಗಿಸಬಾರದು' ಎಂದು ಆದೇಶಿಸಿರುವ ಹೈಕೋರ್ಟ್, ಪ್ರಕರಣದ ಅಂತಿಮ ವರದಿ ಸಲ್ಲಿಕೆಗೆ ಮಧ್ಯಂತರ ತಡೆ ನೀಡಿದೆ.

'ನನ್ನ ವಿರುದ್ಧ ಬೆಂಗಳೂರಿನ ಅವಲಹಳ್ಳಿ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಮುಂಬೈನ ಸೋನು ನಿಗಮ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸೋನು ನಿಗಮ್ ಪರ ವಕೀಲರು, 'ಸೋನು ನಿಗಮ್ ಖ್ಯಾತ ಗಾಯಕರಿದ್ದು, ಪೊಲೀಸರ ಮುಂದೆ ತನಿಖೆಗೆ ಖುದ್ದು ಹಾಜರಾದರೆ ನಾಟಕೀಯ ಬೆಳವಣಿಗೆ ಘಟಿಸುವ ಸಾಧ್ಯತೆಯಿದೆ. ಹಾಗಾಗಿ, ಆನ್‌ಲೈನ್ ಮೂಲಕ ಅಥವಾ ಲಿಖಿತ ಹೇಳಿಕೆ ದಾಖಲಿಸಲು ಅವಕಾಶ ಕಲ್ಪಿಸಬೇಕು' ಎಂದು ಕೋರಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರಾಸಿಕ್ಯೂಷನ್ ಪರ ವಕೀಲರು, 'ಅರ್ಜಿದಾರರ ಹೇಳಿಕೆಯಿಂದ ಕನ್ನಡಿಗರ ಭಾವನೆಗಳಿಗೆ ಧಕ್ಕೆಯಾಗಿದ್ದು, ಅವರನ್ನು ಖುದ್ದು ವಿಚಾರಣೆಗೆ ಒಳಪಡಿಸಿದಾಗ ಮಾತ್ರವೇ, ಅವರು ಯಾವ ಉದ್ದೇಶದಿಂದ ಆಕ್ಷೇಪಾರ್ಹ ಹೇಳಿಕೆ ನೀಡಿದರು ಎಂಬುದನ್ನು ತಿಳಿಯಲು ಸಾಧ್ಯ. ಅಂತೆಯೇ, ತನಿಖಾಧಿಕಾರಿಗಳು ಮಹಜರು ಪ್ರಕ್ರಿಯೆ ನಡೆಸಬೇಕಿದೆ. ಸೋನು ನಿಗಮ್ ವಿಚಾರಣೆಗೆ ಹಾಜರಾದರೆ ಭದ್ರತೆ ಕಲ್ಪಿಸುವುದು ಪೊಲೀಸರ ಕರ್ತವ್ಯ. ಹಾಗಾಗಿ, ಅವರು ಖುದ್ದಾಗಿ ವಿಚಾರಣೆಗೆ ಹಾಜರಾಗುವುದಕ್ಕೆ ವಿನಾಯಿತಿ ನೀಡಬಾರದು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ವಿಡಿಯೊ ಕಾನ್ಫರೆನ್ಸ್ ಮೂಲಕ ಅರ್ಜಿದಾರರ ಹೇಳಿಕೆ ದಾಖಲಿಸಿಕೊಳ್ಳಲು ಏನು ಸಮಸ್ಯೆ' ಎಂದು ಪ್ರಾಸಿಕ್ಯೂಷನ್ ಪರ ವಕೀಲರನ್ನು ಪ್ರಶ್ನಿಸಿತಲ್ಲದೆ, 'ತನಿಖಾಧಿಕಾರಿ ವಿಡಿಯೊ ಕಾನ್ಫರೆನ್ಸ್ ಮೂಲಕ ಸೋನು ನಿಗಮ್ ಹೇಳಿಕೆ ದಾಖಲಿಸಿಕೊಳ್ಳಬೇಕು. ಇಲ್ಲವಾದರೆ ತನಿಖಾಧಿಕಾರಿಗಳೇ ಸೋನು ನಿಗಮ್ ಇರುವ ಸ್ಥಳಕ್ಕೆ ತೆರಳಿ ಹೇಳಿಕೆ ದಾಖಲಿಸಿಕೊಳ್ಳಬೇಕು. ಇದಕ್ಕೆ ತಗಲುವ ಖರ್ಚನ್ನು ಸೋನು ನಿಗಮ್ ಭರಿಸಬೇಕು' ಎಂದು ಆದೇಶಿಸಿತು.

ಪ್ರಕರಣವೇನು?: 'ಸೋನು ನಿಗಮ್ ಅವರು 'ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ'ಯಲ್ಲಿ ನಡೆದಿದ್ದ ಸಂಗೀತ ಕಾರ್ಯಕ್ರಮದಲ್ಲಿ ಆಕ್ಷೇಪಾರ್ಹ ಮತ್ತು ಕನ್ನಡಿಗರ ಭಾವನೆ ಕೆರಳಿಸುವ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ 'ಕರ್ನಾಟಕ ರಕ್ಷಣಾ ವೇದಿಕೆ'ಯ (ನಾರಾಯಣಗೌಡ ಬಣ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎ.ಧರ್ಮರಾಜ ಇದೇ 2ರಂದು ದೂರು ನೀಡಿದ್ದರು. ತನಿಖೆಗೆ ಹಾಜರಾಗುವಂತೆ ಸೋನು ನಿಗಮ್ ಅವರಿಗೆ ಅವಲಹಳ್ಳಿ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು.

ಡಿಮಾಂಡ್ ನೋಟಿಸ್‌ಗೆ ತಿದ್ದುಪಡಿ

ಸಿಆರ್‌ಜಿ/ಪಿಕೆ/ಎಫ್‌ವೈ25/07 ದಿನಾಂಕ: 01.04.2025

1. ಕಾರ್ನರ್‌ಸ್ಟೋನ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ("ಸಿಪಿಪಿಎಲ್"/"ಸಾಲಗಾರ 1"/"ಅಡಮಾನದಾರ 1"/"ಹೈಪೊಥಿಕೇಟರ್ 1") ವಿಳಾಸ: 583, 1ನೇ ಕ್ರಾಸ್, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038	2. ಕಾರ್ನರ್‌ಸ್ಟೋನ್ ಬೇ ಈಸ್ಟ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ("ಸಿಬಿಇಡಿಪಿಎಲ್"/"ಸಹ-ಸಾಲಗಾರ 1"/"ಅಡಮಾನದಾರ 2"/"ಹೈಪೊಥಿಕೇಟರ್ 2") ವಿಳಾಸ: 583, 1ನೇ ಕ್ರಾಸ್, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038
3. ಬಿಪಿಕೆ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ("ಕಾರ್ಪೊರೇಟ್ ಜಾಮೀನುದಾರ 1"/ಬಿಪಿಕೆಎಚ್‌ಪಿಎಲ್") ವಿಳಾಸ: 583, 1ನೇ ಕ್ರಾಸ್, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038	4. ಅಕ್ಷಯ್ ಎಂಟರ್‌ಪ್ರೈಸಸ್ ("ಅಡಮಾನದಾರ 3") ವಿಳಾಸ: 583, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038
5. ಕಾರ್ನರ್‌ಸ್ಟೋನ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್ ("ಸಿಪಿಐಪಿಎಲ್"/ "ಅಡಮಾನದಾರ 4"/"ಕಾರ್ಪೊರೇಟ್ ಜಾಮೀನುದಾರ 2") ವಿಳಾಸ: 583, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038	6. ಕಾರ್ನರ್‌ಸ್ಟೋನ್ ಬೇ ಸಿಟಿ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್ ("ಸಿಬಿಇಡಿಪಿಎಲ್"/"ಅಡಮಾನದಾರ 5"/"ಕಾರ್ಪೊರೇಟ್ ಜಾಮೀನುದಾರ 3") ವಿಳಾಸ: 583, 1ನೇ ಕ್ರಾಸ್, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038
7. ಕ್ರೈಸೊಲೈಟ್ ಪ್ರಾಪರ್ಟಿ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್ ("ಸಹ-ಸಾಲಗಾರ 2"/"ಅಡಮಾನದಾರ 6"/"ಹೈಪೊಥಿಕೇಟರ್ 3") (ಹಿಂದಿನ ಮಾವರಿಕ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್) ವಿಳಾಸ: 583, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038	8. ಅನಮಿತ್ರ ಎಸ್ಟೇಟ್ಸ್ & ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ("ಎಇಡಿಪಿಎಲ್"/"ಸಹ-ಸಾಲಗಾರ 3"/"ಹೈಪೊಥಿಕೇಟರ್ 4") ವಿಳಾಸ: 583, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ-560038
9. ಶ್ರೀ. ಬೈಯಪ್ಪನಹಳ್ಳಿ ಪ್ರಭಾಕರ ರೆಡ್ಡಿ ಕುಮಾರ್ ಬಾಬು ("ವೈಯಕ್ತಿಕ ಜಾಮೀನುದಾರ 1") ವಿಳಾಸ: ವಿಷ್ಣು ಪಾದಂ, 132, 4ನೇ ಮೇನ್, ಡಿಫೆನ್ಸ್ ಕಾಲೋನಿ, ಇಂದಿರಾನಗರ, ಬೆಂಗಳೂರು, ಕರ್ನಾಟಕ-560038	10.ಶ್ರೀಮತಿ. ಕುಮುದಾ ಕುಮಾರ್ ಬಾಬು ("ವೈಯಕ್ತಿಕ ಜಾಮೀನುದಾರ 2"/"ಅಡಮಾನದಾರ 7") ವಿಳಾಸ: ವಿಷ್ಣು ಪಾದಂ, 132, 4ನೇ ಮೇನ್, ಡಿಫೆನ್ಸ್ ಕಾಲೋನಿ, ಇಂದಿರಾನಗರ, ಬೆಂಗಳೂರು, ಕರ್ನಾಟಕ-560038
11.ಶ್ರೀ. ಮಹೇಶ್ ರಾಮದಾಸ್ ("ಅಡಮಾನದಾರ 8"/"ಹೈಪೊಥಿಕೇಟರ್ 5") ವಿಳಾಸ: 16ನೇ ಬಿ ಮೇನ್, ಇಂದಿರಾನಗರ, 2ನೇ ಹಂತ, ಎಚ್‌ಎಎಲ್ 2ನೇ ಹಂತ, ಬೆಂಗಳೂರು, ಕರ್ನಾಟಕ-560008	12.ಬಿ ಪಿ ಕೆ ಇನ್ಫ್ರಾಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್ ("ಬಿಪಿಕೆಐಪಿಎಲ್"/"ಸಾಲಗಾರ 2") ವಿಳಾಸ: 583, 1ನೇ ಕ್ರಾಸ್, 9ನೇ ಮೇನ್, ಸಿಎಂಎಚ್ ರಸ್ತೆ ಪಕ್ಕ, 1ನೇ ಹಂತ, ಇಂದಿರಾನಗರ, ಬೆಂಗಳೂರು, ಬೆಂಗಳೂರು, ಕರ್ನಾಟಕ, ಭಾರತ, 560038

ಉಲ್ಲೇಖ: ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002 ("ಸರ್ಫಾಯಸಿ ಕಾಯ್ದೆ, 2002") ಸೆಕ್ಷನ್ 13 (2)ರ ಅಡಿಯಲ್ಲಿ, ದಿನಾಂಕ ಮಾರ್ಚ್ 29, 2025 ರಂದು ಹೊರಡಿಸಲಾಗಿರುವ ನಂ. ಸಿಆರ್‌ಜಿ/ಪಿಕೆ/ಎಫ್‌ವೈ25/4909 ಹೊಂದಿರುವ ನೋಟಿಸ್ (ಇಲ್ಲಿ ಇನ್ನುಮುಂದೆ "ಡಿಮಾಂಡ್ ನೋಟಿಸ್" ಎನ್ನಲಾಗುವ)

ವಿಷಯ: ಡಿಮಾಂಡ್ ನೋಟಿಸ್‌ಗೆ ತಿದ್ದುಪಡಿ

ಮಾನ್ಯರೇ,

ಇದು, ಮೇಲ್ಕಂಡ ವಿಷಯ ಮತ್ತು ಡಿಮಾಂಡ್ ನೋಟಿಸ್‌ನಲ್ಲಿ ಉಲ್ಲೇಖಿತ 'ಮಾವರಿಕ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್/ಎಂಪಿಐಪಿಎಲ್' ಹೆಸರಿನ ಉಲ್ಲೇಖದೊಂದಿಗೆ.

ದಯವಿಟ್ಟು ಗಮನಿಸಿ, ಪ್ರಮಾದವಶಾತ್ 'ಕ್ರೈಸೊಲೈಟ್ ಪ್ರಾಪರ್ಟಿ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್' ("ಸಹ-ಸಾಲಗಾರ 2"/ "ಅಡಮಾನದಾರ 6"/ಹೈಪೊಥಿಕೇಟರ್ 3") ಎಂಬ ಹೆಸರಿನ ಬದಲಾಗಿ 'ಮಾವರಿಕ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ ಪ್ರೈವೇಟ್ ಲಿಮಿಟೆಡ್' ಎಂದು ತಪ್ಪಾಗಿ ನಮೂದಾಗಿದ್ದು, ಈ ಹೆಸರು "ಸಹ-ಸಾಲಗಾರ 2"/"ಅಡಮಾನದಾರ 6"/ಹೈಪೊಥಿಕೇಟರ್ 3" ಎಂಬುವರ ಹಿಂದಿನ ಹೆಸರು ಆಗಿರುತ್ತದೆ, ಆದ್ದರಿಂದ ಈ ತಿದ್ದುಪಡಿ ಪ್ರಕಟಣೆಯ ಮೂಲಕ ಆ ಪ್ರಮಾದವನ್ನು ನಿವಾರಿಸಲಾಗಿದೆ. ಹೀಗಾಗಿ, ಡಿಮಾಂಡ್ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದ್ದ ಮಾವರಿಕ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್/ಎಂಪಿಐಪಿಎಲ್ ಎಂಬ ಹೆಸರನ್ನು ಈ ಕೆಳಗಿನಂತೆ ಓದಿಕೊಳ್ಳಬೇಕೆಂದು ಕೋರಲಾಗಿದೆ:

'ಕ್ರೈಸೊಲೈಟ್ ಪ್ರಾಪರ್ಟಿ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್' ("ಸಹ-ಸಾಲಗಾರ 2"/"ಅಡಮಾನದಾರ 6"/ ಹೈಪೊಥಿಕೇಟರ್ 3")

ಈ ಮೂಲಕ ಸ್ಪಷ್ಟೀಕರಿಸುವುದು ಏನೆಂದರೆ, ಡಿಮಾಂಡ್ ನೋಟಿಸ್‌ನಲ್ಲಿ ಎಲ್ಲಿಯಾದರೂ 'ಮಾವರಿಕ್ ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್/ಎಂಪಿಐಪಿಎಲ್' ಎಂಬ ಹೆಸರು ಇದ್ದಲ್ಲಿ, ಅದರ ಬದಲಾಗಿ ಇಲ್ಲಿ ಮೇಲೆ ತಿಳಿಸಿರುವಂತೆ ಓದಿಕೊಳ್ಳುವುದು.

ಮುಂದುವರಿದಂತೆ, ಈ ಪತ್ರವು ಡಿಮಾಂಡ್ ನೋಟಿಸ್‌ನ ಒಂದು ಪ್ರಮುಖ ಭಾಗವಾಗಿರುತ್ತದೆ ಮತ್ತು ಇದನ್ನು ಡಿಮಾಂಡ್ ನೋಟಿಸ್ ಪ್ರಾಸದಲ್ಲಿ ಓದಿಕೊಳ್ಳಬೇಕು. ಅದಾಗ್ಯೂ, ಡಿಮಾಂಡ್ ನೋಟಿಸ್‌ನಲ್ಲಿ ಸದರಿ ತಿದ್ದುಪಡಿ ಹೊರತಾಗಿ ಇನ್ನಿತರ ಯಾವುದೇ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್ ಪರವಾಗಿ

(ತನ್ನ ಸಾಮರ್ಥ್ಯದಲ್ಲಿ ಆರ್ಸಿಲ್-ಟ್ರಸ್ಟ್-2025-009ರ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿರುವ)

ಸಹಿ/-

ಅಧಿಕೃತ ಅಧಿಕಾರಿ

ಸಿ.ಸಿ.

ಕೆಟಲಿಸ್ಟ್ ಟ್ರಸ್ಟೀಶಿಪ್ ಲಿಮಿಟೆಡ್
901, 9ನೇ ಮಹಡಿ, ಟವರ್ ಬಿ, ಪೆನಿನ್ಸುಲಾ ಬಿಜನೆಸ್ ಪಾರ್ಕ್,
ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ 400013.

Arcil Premier ARC

ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್

ಸಿಐಎನ್ U65999MH2002PLC134884, ವೆಬ್‌ಸೈಟ್: www.arcil.co.in

ನೋಂದಾಯಿತ ಕಚೇರಿ: ದಿ ರೂಬಿ, 10ನೇ ಮಹಡಿ, 29 ಸೇನಾಪತಿ ಬಾಪಟ್ ಮಾರ್ಗ, ದಾದರ್ (ವೆಸ್ಟ್), ಮುಂಬೈ-400 028. ಫೋನ್: +91 2266581300

ಸುಹಾಸ್ ಶೆಟ್ಟಿ ಕೊಲೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಹಾಸನ: ಮಂಗಳೂರಿನಲ್ಲಿ ನಡೆದ, ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಕೊಲೆಗೆ ನೆರವು ನೀಡಿದ ಆರೋಪದಲ್ಲಿ ಇಲ್ಲಿನ ನೌಶಾದ್ ಅಲಿಯಾಸ್ ಚೋಟೆ ನೌಶಾದ್(39)ನನ್ನು ಮಂಗಳೂರು ಸಿಸಿಬಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಇಲ್ಲಿನ ಮಹಿಳಾ ಪೊಲೀಸ್ ಠಾಣೆ ಮುಂಭಾಗದಲ್ಲಿ ಹೋಟೆಲ್ ನಡೆಸುತ್ತಿದ್ದ ಆರೋಪಿಯು ಕೆ.ಆರ್. ಪುರಂನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದಾಗಿದ್ದ. ಕೊಲೆಗೆ ಸಂಚು ರೂಪಿಸಲು ನೆರವು ನೀಡಿದ ಆರೋಪದ ಮೇರೆಗೆ ಆತನನ್ನು ಬಂಧಿಸಲಾಗಿದೆ.

ಆತನ ವಿರುದ್ಧ ಸುರತ್ಕಲ್, ಬಜ್ಪೆ, ಮೂಡುಬಿದರೆ, ಮಂಗಳೂರು, ಉತ್ತರ ಬಂಟ್ವಾಳ ಗ್ರಾಮಾಂತರ ಠಾಣೆಗಳಲ್ಲಿ ಆರು ಪ್ರಕರಣಗಳು ದಾಖಲಾಗಿವೆ.

ಭವಿಷ್ಯದ ಬಗ್ಗೆ ಭವ್ಯ ಕನಸು ಕಟ್ಟಿಕೊಂಡಿರುವ ವಿದ್ಯಾರ್ಥಿಗಳು

'ಚಿನ್ನ'ದ ಮಕ್ಕಳ ಕಣ್ಣಲ್ಲಿ ಸಾಧನೆ ಹೊಳಪು

ಪ್ರಜಾವಾಣಿ ವಾರ್ತೆ

ಯಲಹಂಕ (ಬೆಂಗಳೂರು): ಜಿಕೆವಿಕೆಯಲ್ಲಿ ಗುರುವಾರ ನಡೆದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಕಣ್ಣಲ್ಲಿ ಸಾಧನೆಯ ಹೊಳಪು, ಭವಿಷ್ಯದಲ್ಲಿ ಕನಸನ್ನು ನನಸು ಮಾಡುವ ಹುರುಪು ಕಂಡು ಬಂತು.

ಕೃಷಿ ವಿಜ್ಞಾನಿಯಾಗುವೆ: 'ಕೃಷಿ ಕ್ಷೇತ್ರದಲ್ಲಿ ಆಸಕ್ತಿಯಿದ್ದಿದ್ದರಿಂದ ಕೃಷಿಯಲ್ಲಿ ಅಧ್ಯಯನ ಆರಂಭಿಸಿದೆ. ಕುಟುಂಬ ಅಡಿಕೆ ಕೃಷಿ ಮಾಡುತ್ತಿದ್ದು, ಭವಿಷ್ಯದಲ್ಲಿ ಕೃಷಿವಿಜ್ಞಾನಿಯಾಗಿ ಸಂಶೋಧನೆಯಲ್ಲಿ ತೊಡಗಬೇಕೆಂಬ ಗುರಿ ಹೊಂದಿದ್ದೇನೆ'

ಬಿಎಸ್‌ಸಿ(ಆನರ್ಸ್) ಕೃಷಿಯಲ್ಲಿ ಒಟ್ಟು 13 ಚಿನ್ನದ ಪದಕ ಪಡೆದ ಟಿ.ಎಲ್. ದೀಪ್ತಿಯ ಮಾತುಗಳಿವು.

ತಂದೆ-ತಾಯಿಯ ಸಹಕಾರ, ಶಿಕ್ಷಕರ ಮಾರ್ಗದರ್ಶನ ಹಾಗೂ ಕಠಿಣ ಪರಿಶ್ರಮದಿಂದ ಹೆಚ್ಚಿನ ಚಿನ್ನದ ಪದಕಗಳನ್ನು ಪಡೆಯಲು ಸಾಧ್ಯವಾಯಿತು ಎಂದು ಅವರು ತಿಳಿಸಿದರು.

ದೀಪ್ತಿ, ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನ ತಲಕಾಲಕೊಪ್ಪ ಗ್ರಾಮದ ಶಿಕ್ಷಕ ಲಕ್ಷ್ಮೀಶ್ ಅವರ ಪುತ್ರಿ.

ಪ್ರಸ್ತುತ ನವದೆಹಲಿಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಸಸ್ಯತಳಿ ಮತ್ತು ಅನುವಂಶೀಯ ವಿಭಾಗದಲ್ಲಿ ಎಂ.ಎಸ್‌ಸಿ ಪದವಿ ಅಧ್ಯಯನ ಮಾಡುತ್ತಿದ್ದಾರೆ.

ಹಳ್ಳಿಯಲ್ಲಿ ಸ್ವಂತ ಉದ್ದಿಮೆಯ ಕನಸು: 'ವ್ಯವಸಾಯವನ್ನು ನೋಡುತ್ತ ಬೆಳೆದಿರುವುದರಿಂದ ಕೃಷಿಯ ಮೇಲೆ ಆಸಕ್ತಿಹೊಂದಿ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದೆ' ಎಂದು ಬಿಎಸ್‌ಸಿ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ 7 ಚಿನ್ನದ ಪದಕಗಳನ್ನು ಪಡೆದ ಐಶ್ವರ್ಯ ಗಣಪತಿಗೌಡ ತಿಳಿಸಿದರು.

ಟಿ.ಎಲ್‌.ದೀಪ್ತಿ

ಐಶ್ವರ್ಯ

ಉತ್ತರ ಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕಿನ ಅಂಡಗಿ ಗ್ರಾಮದ ಐಶ್ವರ್ಯ ಅವರು, ಕೃಷಿ ಕುಟುಂಬದ ಹಿನ್ನೆಲೆಯವರು. 14 ಎಕರೆ ಜಮೀನಿನಲ್ಲಿ ಭತ್ತ, ಅಡಿಕೆ, ಬಾಳೆ ಮತ್ತು ಶುಂಠಿ ಕೃಷಿಯಲ್ಲಿ ಅವರ ಕುಟುಂಬವು ತೊಡಗಿಸಿಕೊಂಡಿದೆ.

'ತಂದೆ-ತಾಯಿ ಮತ್ತು ಅಜ್ಜನ ಸಹಕಾರದಿಂದ ಚಿನ್ನದ ಪದಕಗಳನ್ನು ಪಡೆಯಲು ಸಾಧ್ಯವಾಯಿತು. ಬ್ಯಾಂಕ್ ಪರೀಕ್ಷೆ, ಸಿ-ಮ್ಯಾಟ್, ಎಂಬಿಎ ಮಾಡಬೇಕೆಂಬ ಆಸೆಯಿದೆ. ಮುಂದೆ ಹಳ್ಳಿಯಲ್ಲಿಯೆ ಸ್ವಂತ ಉದ್ದಿಮೆ ಆರಂಭಿಸಿ, ಹಲವು ಮಂದಿಗೆ ಉದ್ಯೋಗ ನೀಡ ಬೇಕು ಎಂಬುದು ನನ್ನ ಕನಸು' ಎಂದು ಹೇಳಿದರು.

ಚಿನ್ನದ ಪದಕ ಅಮ್ಮನ ಆಸೆ

ತಂದೆ ದ್ವಿಚಕ್ರ ವಾಹನದ ಮೆಕ್ಯಾನಿಕ್, ತಾಯಿ ಗೃಹಿಣಿ. ಮಗಳಿಗೆ ಬಿ.ಎಸ್‌ಸಿ ಕೃಷಿಯಲ್ಲಿ 9 ಚಿನ್ನದ ಪದಕ.

ಇಂಥ ಸಾಧನೆ ಮಾಡಿದವರು ಮೈಸೂರಿನ ರವೀಂದ್ರ ಕುಮಾರ್ ಹಾಗೂ ಮಂಜುಳಾ ದಂಪತಿಯ ಮಗಳು ಸ್ಫೂರ್ತಿ ಆರ್.

'ನಾನು ದೊಡ್ಡ ವೇದಿಕೆಯಲ್ಲಿ ಎಲ್ಲರ ಮುಂದೆ ಪದಕ ಪಡೆಯಬೇಕೆಂಬುದು ನನ್ನ ಅಮ್ಮನ ಆಸೆಯಾಗಿತ್ತು. ನಾನು ಕೃಷಿಯಲ್ಲಿ ಅಧ್ಯಯನ ಮಾಡಬೇಕು ಎಂಬುದು ತಂದೆಯ ಬಯಕೆಯೂ ಆಗಿತ್ತು. ಇಂದು ಅದು ನಿಜವಾಗಿದೆ' ಎಂದು ಸ್ಫೂರ್ತಿ ಭಾವುಕಳಾಗಿ ನುಡಿದರು.

ಮಂಡ್ಯದಲ್ಲಿ ಬಿಎಸ್‌ಸಿ ಕೃಷಿ ಪದವಿ ಪಡೆದ ಸ್ಫೂರ್ತಿ, ರಾಂಚಿಯ ಐಐಎಬಿ ಸಂಸ್ಥೆಯಲ್ಲಿ(ಜೆಆರ್‌ಎಫ್) ಸಸ್ಯತಳಿ ಮತ್ತು ಅನುವಂಶೀಯ ಶಾಸ್ತ್ರ ವಿಭಾಗದಲ್ಲಿ ಎಂಎಸ್‌ಸಿ ಪದವಿ ಮಾಡುತ್ತಿದ್ದಾರೆ. ಮುಂದೆ ಕೃಷಿ ವಿಜ್ಞಾನಿಯಾಗುವ ಕನಸು ಕಂಡಿದ್ದಾರೆ.



ಸ್ಫೂರ್ತಿ ಆರ್.

ತೆಲಂಗಾಣದ ಮುಲುಗು ಜಿಲ್ಲೆಯಲ್ಲಿರುವ ವಿಶ್ವ ಪಾರಂಪರಿಕ ರಾಮಪ್ಪ ದೇವಸ್ಥಾನಕ್ಕೆ ಭೇಟಿ ನೀಡಿದ ವಿಶ್ವ ಸುಂದರಿ ಸ್ಪರ್ಧಿಗಳು ದೇಗುಲ ಪ್ರವೇಶಿಸುವ ಮುನ್ನ ಕಾಲು ತೊಳೆದುಕೊಂಡರು —ಪಿಟಿಐ ಚಿತ್ರ

ವಿಶ್ವ ಸುಂದರಿ ಸ್ಪರ್ಧಿಗಳ ಕಾಲು ತೊಳೆದ ಮಹಿಳೆಯರು

ಹೈದರಾಬಾದ್ (ಪಿಟಿಐ): ಇಲ್ಲಿನ ರಾಮಪ್ಪ ದೇವಸ್ಥಾನದಲ್ಲಿ ವಿಶ್ವ ಸುಂದರಿ ಸ್ಪರ್ಧಿಗಳು ಕಾಲು ತೊಳೆದುಕೊಳ್ಳಲು ಕೆಲವು ಮಹಿಳೆಯರು ಸಹಾಯ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಇದು ತೆಲಂಗಾಣ ಮಹಿಳೆಯರಿಗೆ ಮಾಡಿದ ಅವಮಾನ ಎಂದು ಬಿಜೆಪಿ ಮತ್ತು ಬಿಆರ್‌ಎಸ್ ಪಕ್ಷಗಳು ಟೀಕಿಸಿವೆ.

ಪರಂಪರೆಯ ಪ್ರವಾಸದ ಭಾಗವಾಗಿ ಸೀರೆ ಧರಿಸಿದ್ದ ಸ್ಪರ್ಧಿಗಳು ಯುನೆಸ್ಕೊ ವಿಶ್ವ ಪಾರಂಪರಿಕವಾದ ರಾಮಪ್ಪ ದೇವಸ್ಥಾನಕ್ಕೆ ಬುಧವಾರ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸಾಲಾಗಿ ಕುಳಿತಿದ್ದ ಸ್ಪರ್ಧಿಗಳ ಕಾಲುಗಳ ಮೇಲೆ ಕೆಲವು ಮಹಿಳೆಯರು ನೀರು ಹಾಕುತ್ತಿರುವುದು ಮತ್ತು ಒಬ್ಬ ಮಹಿಳೆ ಸ್ಪರ್ಧಿಯೊಬ್ಬರ ಕಾಲನ್ನು ಟವಲ್‌ನಿಂದ ಒರಸುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದ್ದು, ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸ್ಥಳೀಯ ದಲಿತ, ಬುಡಕಟ್ಟು ಮತ್ತು ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಸ್ಪರ್ಧಿಗಳ ಕಾಲು ತೊಳೆದು, ಒರೆಸುವಂತೆ ಬಲವಂತ ಮಾಡಲಾಗಿದೆ. ಇದಕ್ಕೆ ರಾಜ್ಯದಾದ್ಯಂತ ವಿರೋಧ ವ್ಯಕ್ತವಾಗಿದೆ ಎಂದು ಬಿಆರ್‌ಎಸ್ ತಿಳಿಸಿದೆ.

ಈ ವಿಡಿಯೊವನ್ನು ತನ್ನ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್, 'ಕಾಂಗ್ರೆಸ್ ಮುಖ್ಯಮಂತ್ರಿ ಅಧಿಕೃತವಾಗಿ ಮಾನಸಿಕ ಅಸ್ವಸ್ಥರಾಗಿದ್ದಾರೆ' ಎಂದು ಟೀಕಿಸಿದ್ದಾರೆ.

ಸಮಾನವಾಗಿ ಕಾಣುವುದಿದ್ದಲ್ಲಿ ಮುಸ್ಲಿಂ ವ್ಯಕ್ತಿ ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಹೊಂದಬಹುದು– ಹೈಕೋರ್ಟ್

'ಬಹುಪತ್ನಿತ್ವದ ಅವಕಾಶ ವ್ಯಾಪಕ ದುರ್ಬಳಕೆ'

ಪ್ರಜಾವಾಣಿ ವಾರ್ತೆ

ಲಖನೌ: ಸಮರ್ಥನೀಯ ಕಾರಣ ಇದ್ದಾಗ ಹಾಗೂ ಎಲ್ಲ ಪತ್ನಿಯರನ್ನೂ ಸಮಾನವಾಗಿ ನೋಡಿಕೊಳ್ಳುವುದಿದ್ದರೆ ಮುಸ್ಲಿಂ ವ್ಯಕ್ತಿಯು ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಹೊಂದಬಹುದು ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ.

ಉತ್ತರ ಪ್ರದೇಶದ ಫುರ್ಖಾನ್ ಎನ್ನುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅರುಣಕುಮಾರ್ ಸಿಂಗ್ ಅವರಿದ್ದ ಏಕಸದಸ್ಯ ಪೀಠ ಈ ಮಾತು ಹೇಳಿದೆ.

'ಮುಸ್ಲಿಂ ಕಾಯ್ದೆಯಲ್ಲಿನ ಅವಕಾಶಗಳನ್ನು ಗಮನಿಸಿದಾಗ, ಅನಿವಾರ್ಯ ಸಂದರ್ಭಗಳಲ್ಲಿ ಹಾಗೂ ಕೆಲ ಷರತ್ತುಗಳಡಿ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಮದುವೆಯಾಗಲು ಇಸ್ಲಾಂ ಅನುಮತಿ ನೀಡುತ್ತದೆ. ಆದರೆ, ಇಂತಹ ಅವಕಾಶಗಳನ್ನು ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಕುರ್‌ಆನ್‌ನಲ್ಲಿ ಉಲ್ಲೇಖಿಸಿರುವಂತೆ, ಮುಸ್ಲಿಂ ಕಾಯ್ದೆಯಲ್ಲಿನ ಅವಕಾಶಗಳಿಗೆ ಇದು ವಿರುದ್ಧವಾದುದು ಎಂಬುದು ಗೊತ್ತಿದ್ದರೂ ದುರ್ಬಳಕೆಯಾಗುತ್ತಿದೆ' ಎಂದು ಇತ್ತೀಚೆಗೆ ನೀಡಿರುವ ತೀರ್ಪಿನಲ್ಲಿ ನ್ಯಾಯಪೀಠ ಹೇಳಿದೆ.

'ಮೊದಲ ಮದುವೆ ಆಗಿದ್ದನ್ನು ಮುಚ್ಚಿಟ್ಟು ಫುರ್ಖಾನ್, ನನ್ನನ್ನು ಮದುವೆಯಾಗಿದ್ದಾನೆ. ಅಲ್ಲದೇ, ಆತನೊಂದಿಗೆ ಸಂಬಂಧವಿರಿಸಿಕೊಂಡಿದ್ದ ವೇಳೆ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾನೆ' ಎಂದು ಫುರ್ಖಾನ್ ಅವರ ಎರಡನೇ ಪತ್ನಿ ದೂರು ನೀಡಿದ್ದರು.

ಈ ದೂರು ಆಧರಿಸಿ, ಫುರ್ಖಾನ್ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಲಾಗಿತ್ತು. ಮೊರಾದಾಬಾದ್ ಜಿಲ್ಲಾ ನ್ಯಾಯಾಲಯ ಸಮನ್ಸ್ ಕೂಡ ಜಾರಿ ಮಾಡಿತ್ತು.

ಈ ದೋಷಾರೋಪಪಟ್ಟಿ ಹಾಗೂ ಸಮನ್ಸ್ ರದ್ದುಗೊಳಿಸುವಂತೆ ಕೋರಿ ಫುರ್ಖಾನ್ ಹೈಕೋರ್ಟ್ ಮೆಟ್ಟಿಲೇರಿದ್ದರು.

'ನ್ಯಾಯಯುತ ಕಾರಣಕ್ಕಾಗಿ ಬಹುಪತ್ನಿತ್ವಕ್ಕೆ ಕುರ್‌ಆನ್ ಅನುಮತಿ ನೀಡುತ್ತದೆ. ಆದರೆ, ಮುಸ್ಲಿಂ ಪುರುಷರು ತಮ್ಮ ಸ್ವಾರ್ಥಕ್ಕಾಗಿ ಈ ಅವಕಾಶವನ್ನು ಬಳಸಿಕೊಳ್ಳುತ್ತಿದ್ದಾರೆ. ಷರತ್ತುಬದ್ಧ ಬಹುಪತ್ನಿತ್ವ ಕುರಿತು ಕುರ್‌ಆನ್‌ನಲ್ಲಿ ಒಂದು ಬಾರಿ ಮಾತ್ರ ಉಲ್ಲೇಖಿಸಲಾಗಿದೆ' ಎಂದು ಪೀಠ ಹೇಳಿದೆ.

'ಐತಿಹಾಸಿಕ ಕಾರಣಗಳಿಂದಾಗಿ ಬಹುಪತ್ನಿತ್ವಕ್ಕೆ ಕುರ್‌ಆನ್ ಅನುಮತಿ ನೀಡಿದೆ. ಆಗ, ಇಸ್ಲಾಂ ವಿಕಸನಗೊಳ್ಳುತ್ತಿದ್ದ ಸಮಯ. ಸಮುದಾಯದ ರಕ್ಷಣೆಗಾಗಿ ಮದೀನಾದಲ್ಲಿ ಅರಬ್ಬರ ಬುಡಕಟ್ಟು ಗುಂಪುಗಳ ನಡುವೆ ನಡೆದ ಸಂಘರ್ಷದ ವೇಳೆ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ವಿಧವೆಯರಾದರೆ, ಮಕ್ಕಳು ಅನಾಥರಾಗುತ್ತಿದ್ದರು. ಮಕ್ಕಳು ಹಾಗೂ ಮಹಿಳೆಯರು ಶೋಷಣೆಗೆ ಒಳಗಾಗುವುದನ್ನು ತಪ್ಪಿಸುವ ಉದ್ದೇಶದಿಂದ ಷರತ್ತುಬದ್ಧ ಬಹುಪತ್ನಿತ್ವಕ್ಕೆ ಕುರ್‌ಆನ್ ಅನುಮತಿ ನೀಡಿತ್ತು' ಎಂದು ಪೀಠವು ಆದೇಶದಲ್ಲಿ ವಿವರಿಸಿದೆ.

'ಎಲ್ಲ ಪತ್ನಿಯರನ್ನು ಸಮಾನವಾಗಿ ಕಾಣುವ ಸಾಮರ್ಥ್ಯ ಇಲ್ಲದಿದ್ದರೆ, ಮುಸ್ಲಿಂ ವ್ಯಕ್ತಿಯು ಎರಡನೇ ಮದುವೆ ಮಾಡಿಕೊಳ್ಳುವುದಕ್ಕೆ ಯಾವುದೇ ಹಕ್ಕು ಹೊಂದಿಲ್ಲ ಎಂದು ಮಹಮ್ಮದೀಯ ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ' ಎಂದು ಹೇಳಿದೆ.

'ಅರ್ಜಿದಾರ (ಪತಿ) ತನ್ನನ್ನು ಎರಡನೇ ಮದುವೆ ಮಾಡಿಕೊಂಡಿರುವುದಾಗಿ ಎರಡನೇ ಪತ್ನಿಯು ಹೇಳಿದ್ದಾರೆ. ಇಬ್ಬರೂ ಮುಸ್ಲಿಮರೇ ಆಗಿದ್ದಾರೆ ಎಂಬುದು ಅವರ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಹೀಗಾಗಿ ಎರಡನೇ ಮದುವೆಯು ಮಾನ್ಯವಾಗಿದೆ' ಎಂದು ಪೀಠ ಹೇಳಿದೆ.

'ಯುಸಿಸಿ: ಪರಿಶೀಲನೆ ಅಗತ್ಯ'

ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿ ಕುರಿತು ಪರಿಶೀಲಿಸುವ ಅಗತ್ಯವಿದೆ ಎಂದು ಅಲಹಾಬಾದ್ ಹೈಕೋರ್ಟ್ ಸಲಹೆ ನೀಡಿದೆ.

ಶ್ರೀಮತಿ ಸರಳಾ ಮುದ್ಗಲ್, ಲಿಲಿ ಥಾಮಸ್ ಹಾಗೂ ಜಾಫರ್ ಅಬ್ಬಾಸ್ ರಸೂಲ್ ಮೊಹಮ್ಮದ್ ಮರ್ಚಂಟ್ ಪ್ರಕರಣಗಳ ತೀರ್ಪಿನಲ್ಲಿ ಯುಸಿಸಿ ಕುರಿತು ನೀಡಿರುವ ಸಲಹೆಗಳನ್ನು ಕೋರ್ಟ್ ಪ್ರಸ್ತಾಪಿಸಿದೆ.

ಅಲ್ಲದೆ, ಸಂವಿಧಾನದ 44ನೇ ವಿಧಿಯು ಕೂಡ ಏಕರೂಪ ನಾಗರಿಕ ಸಂಹಿತೆ ಕುರಿತು ಪ್ರತಿಪಾದಿಸಿದೆ ಎಂದೂ ಹೈಕೋರ್ಟ್ ಹೇಳಿದೆ.

ವಕ್ಫ್ ಕಾಯ್ದೆ: 20ರಂದು 'ಸುಪ್ರೀಂ' ಪರಿಶೀಲನೆ

ನವದೆಹಲಿ: ವಕ್ಫ್ (ತಿದ್ದುಪಡಿ) ಕಾಯ್ದೆ–2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳನ್ನು ಮಧ್ಯಂತರ ಪರಿಹಾರದ ಸೀಮಿತ ಉದ್ದೇಶಕ್ಕಾಗಿ ಇದೇ 20ರಂದು ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಗುರುವಾರ ತಿಳಿಸಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಎ.ಜಿ. ಮಸಿಹ್ ಅವರ ಪೀಠವು ಬಳಕೆಯ ಕಾರಣದಿಂದಾಗಿ ವಕ್ಫ್, ಕೇಂದ್ರ ವಕ್ಫ್ ಪರಿಷತ್ ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ಮುಸ್ಲಿಮೇತರರ ನಾಮನಿರ್ದೇಶನ ಮತ್ತು ವಕ್ಫ್ ಅಡಿಯಲ್ಲಿ ಸರ್ಕಾರಿ ಭೂಮಿಯ ಗುರುತಿಸುವಿಕೆ ಕುರಿತ ಮೂರು ವಿಷಯಗಳಲ್ಲಿ ತಡೆಯಾಜ್ಞೆಯ ಮಧ್ಯಂತರ ಪರಿಹಾರ ಅಗತ್ಯವಿದೆಯೇ ಎಂಬುದನ್ನು ಪರಿಗಣಿಸಲಿದೆ.

ಈ ಮಧ್ಯೆ, 'ಕೇಂದ್ರ ವಕ್ಫ್ ಪರಿಷತ್ತು ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ಮುಂದಿನ ವಿಚಾರಣೆಯ ವರೆಗೆ ಯಾವುದೇ ನೇಮಕಾತಿ ನಡೆಸುವುದಿಲ್ಲ ಮತ್ತು ನ್ಯಾಯಾಲಯಗಳು ವಕ್ಫ್ ಎಂದು ಘೋಷಿಸಿರುವ ಆಸ್ತಿಗಳನ್ನು ಡಿ–ನೋಟಿಫೈ ಮಾಡುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಭರವಸೆ ನೀಡಿದ್ದಾರೆ. ಯಥಾಸ್ಥಿತಿ ಮುಂದುವರಿಯಲಿದೆ' ಎಂದು ಪೀಠ ಸ್ಪಷ್ಟಪಡಿಸಿತು.

'ವಾದ ಮಂಡಿಸಲು ನಾವು ಎರಡೂ ಕಡೆಯವರಿಗೆ ತಲಾ ಎರಡು ಗಂಟೆಗಳ ಕಾಲಾವಕಾಶ ನೀಡುತ್ತೇವೆ' ಎಂದು ಪೀಠವು ತಿಳಿಸಿತು.

ಕಾನೂನಿನ ಸಿಂಧುತ್ವ ಪ್ರಶ್ನಿಸಿರುವವರ ಪರವಾಗಿ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ಮತ್ತು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿರುವ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸೋಮವಾರದೊಳಗೆ ತಮ್ಮ ಲಿಖಿತ ಟಿಪ್ಪಣಿಗಳನ್ನು ಸಲ್ಲಿಸಬೇಕು ಎಂದು ಪೀಠ ಸೂಚಿಸಿತು.

ಅರ್ಜಿಗಳ ವಿಚಾರಣೆ ಮುಂದೂಡುತ್ತಾ ಮುಖ್ಯ ನ್ಯಾಯಮೂರ್ತಿ, 'ನಾವು ಮಧ್ಯಂತರ ಪರಿಹಾರದ ವಿಷಯವನ್ನು ಮಾತ್ರ ಮಂಗಳವಾರ ಪರಿಗಣಿಸುತ್ತೇವೆ' ಎಂದರು.

ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್, ರಾಜೀವ್ ಧವನ್, ಅಭಿಷೇಕ್ ಮನು ಸಿಂಘ್ವಿ, ಹುಜೆಫಾ ಅಹ್ಮದಿ ಮತ್ತು ಸಿ.ಯು. ಸಿಂಗ್ ಹಾಗೂ ಕೇಂದ್ರ ಸರ್ಕಾರದ ಪರವಾಗಿ ತುಷಾರ್ ಮೆಹ್ತಾ ಅವರ ವಾದಗಳನ್ನು ಪೀಠವು ಸಂಕ್ಷಿಪ್ತವಾಗಿ ಆಲಿಸಿತು.

2025ರ ಕಾಯ್ದೆಯಲ್ಲಿರುವ ಅಸಂವಿಧಾನಿಕ ನಿಯಮಗಳ ಬಗ್ಗೆ ಟಿಪ್ಪಣಿ ಸಲ್ಲಿಸುವುದಾಗಿ ಸಿಬಲ್ ತಿಳಿಸಿದರು.

ಸಚಿವರಿಗೆ ಜವಾಬ್ದಾರಿ ಇರಬೇಕು: 'ಸುಪ್ರೀಂ'

ಒಂದನೇ ಪುಟದಿಂದ...

'ವಿಜಯ್ ಅವರ ಹೇಳಿಕೆಯನ್ನು ಅಪಾರ್ಥ ಮಾಡಿಕೊಳ್ಳಲಾಗಿದೆ. ಮಾಧ್ಯಮಗಳಲ್ಲಿ ವಿಶ್ಲೇಷಿಸಲಾಗುತ್ತಿರುವ ರೀತಿಯಲ್ಲಿ ಅವರು ಹೇಳಿಕೆ ನೀಡಿಲ್ಲ. ಮಾಧ್ಯಮಗಳು ಉತ್ಪ್ರೇಕ್ಷೆ ಮಾಡುತ್ತಿವೆ. ವಿಜಯ್ ಅವರ ವಾದವನ್ನು ಹೈಕೋರ್ಟ್ ಆಲಿಸಿಲ್ಲ. ಆದ್ದರಿಂದ ಹೈಕೋರ್ಟ್ ಆದೇಶಕ್ಕೆ ತಡೆ ನೀಡಿ ನನ್ನ ಅರ್ಜಿಯ ವಿಚಾರಣೆ ನಡೆಯುವವರೆಗೆ ನನ್ನ ಮೇಲೆ ಕ್ರಮ ಕೈಗೊಳ್ಳದಂತೆ ಆದೇಶಿಸಿ' ಎಂದು ಸಚಿವರ ಪರ ವಕೀಲರಾದ ವಿಧಾ ದತ್ತ ಮಖೀಜಾ ಅವರು ಮನವಿ ಮಾಡಿದರು.

'ವಿಜಯ್ ಅವರ ಮೇಲೆ ಕ್ರಮ ಕೈಗೊಳ್ಳಬಾರದು ಎಂದು ನೀವು ಹೈಕೋರ್ಟ್ ಬಳಿಯೇ ಮನವಿ ಮಾಡಿ. ಇವರು ಸಚಿವರು ಎನ್ನುವ ಕಾರಣಕ್ಕೆ ಇಂಥ ಮನವಿಗಳನ್ನು ಆಲಿಸಲು ಸಾಧ್ಯವಿಲ್ಲ' ಎಂದು ಪೀಠ ಹೇಳಿತು. 'ಹೈಕೋರ್ಟ್ ಆದೇಶವನ್ನಾದರೂ ಗಮನಿಸಿ' ಎಂದು ವಿಭಾ ಅವರು ಪೀಠವನ್ನು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಈ ಬಗ್ಗೆ ಶುಕ್ರವಾರ ವಿಚಾರಣೆ ನಡೆಸುತ್ತೇವೆ' ಎಂದು ತಿಳಿಸಿತು.

ಎಫ್‌ಐಆರ್: ಹೈಕೋರ್ಟ್ ಅಸಮಾಧಾನ

ಒಂದನೇ ಪುಟದಿಂದ...

'ಪ್ರಕರಣ ಬಿದ್ದು ಹೋಗಲಿ ಎಂದೇ ಎಫ್‌ಐಆರ್ ಬರೆದಂತಿದೆ. ಈ ಎಫ್‌ಐಆರ್ ಮೇಲೆ ನ್ಯಾಯಾಲಯಕ್ಕೆ ಹೋದರೆ, ಪ್ರಕರಣ ಬಿದ್ದೇ ಹೋಗಲಿದೆ. ಒಂದು ವೇಳೆ ನಾವು ಮೇಲ್ವಿಚಾರಣೆ ನಡೆಸದೇ ಹೋದರೆ, ಪೊಲೀಸರು ಈ ಪ್ರಕರಣದಲ್ಲಿ ನ್ಯಾಯಯುತವಾಗಿ ತನಿಖೆ ನಡೆಸಲಿದ್ದಾರೆ ಎಂಬ ನಂಬಿಕೆಯೇ ನಮಗೆ ಬರುತ್ತಿಲ್ಲ' ಎಂದು ನ್ಯಾಯಮೂರ್ತಿಗಳಾದ ಅತುಲ್ ಶ್ರೀಧರನ್ ಮತ್ತು ಅನುರಾಧಾ ಶುಕ್ಲಾ ಅವರು ಅಭಿಪ್ರಾಯಪಟ್ಟಿದ್ದಾರೆ.

ನಾಲ್ಕು ತಾಸಿನಲ್ಲಿ ಎಫ್‌ಐಆರ್ ದಾಖಲಿಸಿ ಎಂದು ಹೈಕೋರ್ಟ್ ಆದೇಶಿಸಿದರೆ, ಪೊಲೀಸರು ಆರು ತಾಸು ತೆಗೆದುಕೊಂಡರು. ಅಲ್ಲಿಗೆ, ವಿಜಯ್ ಅವರನ್ನು ವಜಾಗೊಳಿಸುವುದನ್ನು ಬಿಟ್ಟು ಬಿಜೆಪಿಯು ಅವರನ್ನು ರಕ್ಷಿಸಲು ನಿಂತಿದೆ ಎಂದಾಯಿತು

ಜಿತು ಪಟ್ವಾರಿ, ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ

ವಿಜಯ್ ಅವರು ಬಿಜೆಪಿಯ ಟ್ರೋಲ್ ಪಡೆಯಂತಿದ್ದಾರೆ. ಇವರ ಹೇಳಿಕೆ ಸರಿ ಇದೆ ಎಂದು ಪ್ರಧಾನಿ ಮೋದಿ ಅವರಿಗೆ ಅನ್ನಿಸುತ್ತದೆಯೇ? ಎಲ್ಲ ವಿಷಯದಲ್ಲೂ ಹಿಂದೂ–ಮುಸ್ಲಿಂ ವಿಚಾರವನ್ನು ತೂರಿಸಲು ಬಿಜೆಪಿ ನಾಯಕರ ಮಧ್ಯೆ ಸ್ಪರ್ಧೆ ಇದೆ

ದಿಗ್ವಿಜಯ ಸಿಂಗ್, ಕಾಂಗ್ರೆಸ್ ನಾಯಕ

ಆಪರೇಷನ್ ಸಿಂಧೂರದ ಚಹರೆಯಾಗಿದ್ದ ಮುಸ್ಲಿಂ ಸಮುದಾಯಕ್ಕೆ ಸೇರಿದ ಕರ್ನಲ್ ಸೋಫಿಯಾ ಅವರ ಬಗ್ಗೆ ವಿಜಯ್ ಅವರು ನೀಡಿದ ಹೇಳಿಕೆ ಖಂಡನೀಯ. ಹೈಕೋರ್ಟ್ ಆದೇಶದಂತೆ ಈಗ ಎಫ್‌ಐಆರ್ ದಾಖಲಿಸಲಾಗಿದೆ. ಬಿಜೆಪಿಯು ಈಗ ಯಾವ ಕ್ರಮ ಕೈಗೊಳ್ಳಲಿದೆ ಎಂದು ದೇಶ ಕಾಯುತ್ತಿದೆ

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

ಯಾವ ಶಾಗಳೂ (ಶಾ ಎನ್ನುವ ಹೆಸರು ಇಟ್ಟುಕೊಂಡವರು) ದೇಶಪ್ರೇಮಿಗಳಲ್ಲ. ನಾನು ಶಾ ಎಂದು ಒತ್ತಿ ಹೇಳುತ್ತಿದ್ದೇನೆ. ಇವರೆಲ್ಲರೂ ಬೆನ್ನ ಹಿಂದೆ ದಾಳಿ ಮಾಡುವವರೇ

ಸಂಜಯ್ ರಾವುತ್, ಶಿವಸೇನಾ (ಉದ್ಧವ್ ಬಣ) ಸಂಸದ

ರಾವುತ್ ಅವರ ಹೇಳಿಕೆಯು ನೀಚತನದ ಮತ್ತು ಜಾತಿವಾದಿ ಹೇಳಿಕೆಯಾಗಿದೆ. ಅವರು ಇಡೀ ಶಾ ಸಮುದಾಯವನ್ನೇ ಅವಮಾನಿಸಿದ್ದಾರೆ

ಪ್ರದೀಪ್ ಭಂಡಾರಿ, ಬಿಜೆಪಿ ವಕ್ತಾರ

ಸೋಫಿಯಾ ಬಗ್ಗೆ ವದಂತಿ ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೊಣ್ಣೂರಿನಲ್ಲಿ ಇರುವ ಕರ್ನಲ್ ಸೋಫಿಯಾ ಖುರೇಷಿ ಅವರ ಮಾವನ ಮನೆ ಮೇಲೆ ಆರ್‌ಎಸ್‌ಎಸ್ ಕಾರ್ಯಕರ್ತರು ದಾಳಿ ಮಾಡಿ, ಧ್ವಂಸಗೊಳಿಸಿದ್ದಾರೆ ಎಂಬ ವದಂತಿ ಹರಡಿದ ಆರೋಪಿಗಳಾದ ಅನಿಸ್ ಉದ್ದೀನ್, ಖುಬಾನಿ ಮತ್ತು ಡಾ.ರುಮಿ ವಿರುದ್ಧ ಜಿಲ್ಲಾ ಸಿಇಎನ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸೋಫಿಯಾ ಖುರೇಷಿ ಹೆಸರು ಬಳಸಿಕೊಂಡು ಅನಿಸ್ ಉದ್ದೀನ್ ಎಂಬಾತ 'ಎಕ್ಸ್' ಖಾತೆಯಲ್ಲಿ ಸುಳ್ಳು ಮಾಹಿತಿ ಪೋಸ್ಟ್ ಮಾಡಿದ್ದ. ಇನ್ನಿಬ್ಬರು ಅದನ್ನು ಹರಡಿದ್ದರು. ಎರಡು ಪಂಗಡಗಳ ಮಧ್ಯೆ ದ್ವೇಷ ಬಿತ್ತುವುದರ ಜೊತೆಗೆ ದೊಂಬಿಗೆ ಪ್ರೇರಣೆ ನೀಡಿದ ಆರೋಪದಡಿ ಸ್ವಯಂಪ್ರೇರಿತವಾಗಿ ಗುರುವಾರ ದೂರು ದಾಖಲಿಸಿಕೊಂಡಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸುದ್ದಿಗಾರರಿಗೆ ತಿಳಿಸಿದರು.

'ಸದ್ಯ 'ಎಕ್ಸ್'ನಲ್ಲಿ ಪೋಸ್ಟ್ ಅಳಿಸಲಾಗಿದೆ. ಅನಿಸ್ ಉದ್ದೀನ್ ಬಗ್ಗೆ ಮಾಹಿತಿ ನೀಡಲು ಎಕ್ಸ್ ಕಚೇರಿಗೆ ಕೋರಲಾಗಿದೆ. ಆರೋಪಿ ಒಂದು ವೇಳೆ ಭಾರತದಲ್ಲಿ ಇದ್ದರೆ ವಶಕ್ಕೆ ಪಡೆಯುತ್ತೇವೆ. ಕೆನಡಾದಲ್ಲಿ ಇದ್ದರೂ ರಾಜತಾಂತ್ರಿಕ ಪ್ರಕ್ರಿಯೆ ಮತ್ತು ಇಂಟರ್‌ಪೋಲ್ ಮೂಲಕ ಕ್ರಮ ತೆಗೆದುಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತೇವೆ' ಎಂದರು.

P.E.S.COLLEGE OF ENGINEERING
MANDYA-571401, Karnataka
(An Autonomous Institution under Visveswaraya Technological University, Belagavi, Aided by the Govt.of Karnataka, Accredited by National Board of Accreditation)
Phone No.08232-220043, 238683, 238042

No. PES/EST/2025-26/ 16-05-2025

EMPLOYMENT NOTIFICATION

Applications are invited for the following unaided posts. Application form can be obtained from the office of the undersigned during working hours in person on payment of Rs.1000/- OR in the form of Demand Draft drawn in favour of the Principal, P.E.S. College of Engineering, Mandya. The duly filled in application along with copies of testimonials and other certificates duly attested by a Gazetted Officer should be submitted to the Principal, PESCE, Mandya on or before **30-05-2025 at 5.00 p.m.** Applications received after the due date will not be considered.

I. ASSISTANT PROFESSORS :
For the Department of:
1) Computer Science & Engg
2) Computer Science & Engg (AI & ML)
3) Computer Science & Engg (Data Science)
4) Computer Science & Business Systems (CSBS)

Qualification:
1) B.E/B.Tech and M.E/M.Tech in the relevant branch with First Class or equivalent in any one of the Degrees.
2) Scale of Pay: According to AICTE Norms & P.E.T. Rules.
3) Higher pay will be considered for experienced candidates or those with Ph.D qualifications.

II. START-UP INCUBATOR LEAD :
Qualification:
1) Bachelor's or Master's degree in Business Administration, Entrepreneurship, Engineering or a related field.
2) Proven Experience (3-5 years preferred) in start-up incubation, acceleration, venture capital, entrepreneurship support or a related field.
3) For detailed responsibilities and qualification, visit https://pesce.ac.in/career.php.

General conditions:
1) Mere submission of application is not a right for appointment.
2) The application cover should be superscribed.
3) Selected candidates should reside in the headquarters during their service.
4) No TA & DA will be paid for attending the interview.
5) Application fee once paid will not be refunded under any circumstances.
6) The interview date for the eligible candidates will be intimated in due course.
7) The right of filling up the Posts is left to the discretion of the Management.
8) Management decision is final.

Sd/- (Dr. N.L.Murali Krishna) PRINCIPAL

Sd/- (Sri K.S.Vijay Anand) CHAIRMAN, GC

ಸೈನೈಡ್ ಚಿತ್ರದ ದೃಶ್ಯ

ಅಂಕಿತಾ

ಇಬ್ಬನಿ ತಂದ ಹೊಸ ಹನಿ

ನಟಿ ಅಂಕಿತಾ ಅಮರ್ ಇಲ್ಲಿಯವರೆಗೆ ಮಾಡಿರುವ ಒಟ್ಟು ಸಿನಿಮಾಗಳು ನಾಲ್ಕು. ಇವುಗಳಲ್ಲಿ ಎರಡು ತೆರೆಕಂಡಿವೆ. ಕಳೆದ ವರ್ಷ ತೆರೆಕಂಡ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಅಂಕಿತಾ ಸಿನಿಬದುಕಿಗೆ ತಿರುವು ನೀಡಿದೆ. ಅಂಕಿತಾ ಇದೀಗ ಉಪೇಂದ್ರ ನಟನೆಯ 'ಭಾರ್ಗವ' ಸಿನಿಮಾದಲ್ಲಿ ಮುಖ್ಯಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಹೊಸ ಪ್ರಾಜೆಕ್ಟ್ ಬಗ್ಗೆ ಅಂಕಿತಾ ಮಾತು.

ಅಭಿಲಾಷ್ ಪಿ.ಎಸ್.

• ಸಿನಿ ಪಯಣದ ಮೇಲೆ 'ಇಬ್ಬನಿ ತಬ್ಬಿದ ಇಳೆಯಲಿ' ಪರಿಣಾಮ...

ನನಗೆ ಈ ಸಿನಿಮಾವೇ ಎಲ್ಲವನ್ನೂ ಕೊಟ್ಟಿದೆ. ಇಡೀ ತಂಡ ಬಹಳ ಕಷ್ಟಪಟ್ಟು, ಇಷ್ಟಪಟ್ಟು ಮಾಡಿದ ಸಿನಿಮಾವಿದು. ಅಲ್ಲಿ ಹಾಕಿದ ಶ್ರಮವೇ ಇಂದು ಇಂತಹ ಅವಕಾಶಗಳು ತೆರೆದುಕೊಳ್ಳಲು ಕಾರಣವಾಗಿದೆ. 'ಇಬ್ಬನಿ..' ಸಿನಿಮಾದ ನಿರ್ಮಾಪಕರು, ನಿರ್ದೇಶಕರು ಪೂರ್ಣವಾದ ನಂಬಿಕೆ ಇಟ್ಟು ನನಗೆ ಆ ಪಾತ್ರ ನೀಡಿದ್ದರು. ಹೊಸಬರ ಮೇಲೆ ಭರವಸೆ ಇಟ್ಟ ವೇದಿಕೆಯದು. ಸದ್ಯ ಚಿತ್ರರಂಗದಲ್ಲಿ ಇಂತಹ ಅವಕಾಶ ನೀಡುವುದು ಬಹಳ ಮುಖ್ಯ. ನಟನೆಯನ್ನೇ ಸರ್ವಸ್ವ ಎಂದುಕೊಂಡಿದ್ದ ನನಗೆ ಇದೊಂದು ಅತ್ಯುತ್ತಮ ವೇದಿಕೆಯಾಯಿತು. ಉಪೇಂದ್ರ ಅವರು ಈ ಸಿನಿಮಾದಲ್ಲಿನ ನನ್ನ ನಟನೆಯನ್ನು ನೋಡಿಯೇ 'ಭಾರ್ಗವ'ದಲ್ಲಿ ಅವಕಾಶ ನೀಡಿದ್ದಾರೆ. ಅವರು ಈ ಸಿನಿಮಾ ನೋಡದೇ ಹೋಗಿದ್ದರೆ ಅವಕಾಶ ಸಿಗುತ್ತಿತ್ತೋ ಇಲ್ಲವೋ ತಿಳಿಯದು.

• 'ಭಾರ್ಗವ' ಪ್ರಾಜೆಕ್ಟ್ ದೊರಕಿದ್ದು ಹೇಗೆ?

'ಇಬ್ಬನಿ ತಬ್ಬಿದ ಇಳೆಯಲಿ' ನನ್ನ ಮೊದಲ ಕಮರ್ಷಿಯಲ್ ಸಿನಿಮಾ. ಇದು ಸೇರಿ ಇಲ್ಲಿಯವರೆಗೆ ನಾಲ್ಕು ಸಿನಿಮಾಗಳನ್ನು ಮಾಡಿದ್ದೇನೆ. ಆದರೆ ಯಾವುದಕ್ಕೂ ಆಡಿಷನ್ ನೀಡಿಲ್ಲ. ಎಲ್ಲಾ ಅವಕಾಶಗಳೂ ನೇರವಾಗಿ ಬಂದಿತ್ತು. ಚಿತ್ರರಂಗಕ್ಕೆ ಹೊಸದಾಗಿ ಬಂದಾಗ ಮೊದಲ ಸಿನಿಮಾದ ಬಳಿಕ ಮುಂದೇನು ಎಂಬ ಯೋಚನೆ ಬಂದಿತ್ತು. ಯಾವ ರೀತಿ ಆಡಿಷನ್ ನೀಡಬೇಕು ಎಂಬುವುದೂ ನನಗೆ ತಿಳಿದಿಲ್ಲ. ಇಂತಹ ಸಂದರ್ಭದಲ್ಲೇ ಒಂದು ದಿನ ಬೆಳಗ್ಗೆ ನಿರ್ಮಾಪಕರಾದ ಸೂರಪ್ಪ ಬಾಬು ಅವರು ಫೋನ್ ಮಾಡಿದರು. 'ಉಪೇಂದ್ರ ಅವರು ನಿಮ್ಮ ಸಿನಿಮಾ ನೋಡಿದ್ದಾರೆ. ಅವರು ಮಾತನಾಡುತ್ತಾರೆ' ಎಂದು ಅವರ ಜೊತೆಗೇ ಇದ್ದ ಉಪೇಂದ್ರ ಅವರಿಗೆ ಮೊಬೈಲ್ ನೀಡಿದರು. 'ಎಂತಹಾ ಅಭಿನೇತ್ರಿ ನೀವು, ನಿಮ್ಮ ಕಣ್ಣುಗಳು ಎಷ್ಟು ಚೆನ್ನಾಗಿ ಮಾತನಾಡುತ್ತವೆ. ನಿಮ್ಮ ಜೊತೆ ಸಿನಿಮಾ ಮಾಡಲು ಕಾಯುತ್ತಿದ್ದೇನೆ' ಎಂದು ಉಪೇಂದ್ರ ಅವರು ಹೇಳಿದಾಗ ಒಂದು ಕ್ಷಣ ಇದು ಕನಸೇ ಎಂದೆನಿಸಿತು. ಹೀಗೆ 'ಭಾರ್ಗವ' ಸಿನಿಮಾದಲ್ಲಿ ಅವಕಾಶ ದೊರೆಯಿತು. ಉಪೇಂದ್ರ ಅವರಂತಹ ನಿರ್ದೇಶಕರು ಕರೆ ಮಾಡಿ ನನ್ನ ನಟನೆಯನ್ನು ಗುರುತಿಸಿ ಮಾತನಾಡಿದ್ದಾರೆ ಎನ್ನುವುದೇ ನನಗೆ ಹೆಮ್ಮೆಯ ವಿಷಯ.

• ಅಂಕಿತಾ ಕೈಯಲ್ಲಿರುವ ಹೊಸ ಪ್ರಾಜೆಕ್ಟ್‌ಗಳು...

ನಾನು ಮೊದಲು ಒಪ್ಪಿಕೊಂಡಿದ್ದ 'ಅಬಜಬದಬ' ಶೂಟಿಂಗ್ ಅರ್ಧದಲ್ಲೇ ನಿಂತಿದೆ. ನಟ ಶೈನ್ ಶೆಟ್ಟಿ ಜೊತೆಗಿನ 'ಜಸ್ಟ್ ಮ್ಯಾರೀಡ್' ಸಿನಿಮಾದ ಶೂಟಿಂಗ್, ಡಬ್ಬಿಂಗ್ ಪೂರ್ಣಗೊಂಡು ರಿಲೀಸ್‌ಗೆ ಸಜ್ಜಾಗಿದೆ. ನಿರೂಪ್ ಭಂಡಾರಿ ಜೊತೆಗಿನ 'ಸತ್ಯ ಸನ್ ಆಫ್ ಹರಿಶ್ಚಂದ್ರ' ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದ್ದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಎರಡು ಸ್ಕ್ರಿಪ್ಟ್‌ಗಳು ಮಾತುಕಥೆ ಹಂತದಲ್ಲಿವೆ.

• ಉಪೇಂದ್ರ ಅವರ ಸಿನಿಮಾಗಳ ನೆನಪು...

ಬಾಲ್ಯದಲ್ಲಿ ಶಿವಣ್ಣ ಹಾಗೂ ಉಪೇಂದ್ರ ಅವರ ಸಿನಿಮಾಗಳು ಬಿಡುಗಡೆಯಾಗುತ್ತಿದ್ದ ಸಂದರ್ಭಗಳು ನೆನಪಿನಲ್ಲಿವೆ. ಉದಯ ಮ್ಯೂಸಿಕ್ ಚಾನೆಲ್‌ನಲ್ಲಿ 'ಕುಟುಂಬ' ಸಿನಿಮಾದ 'ತಳುಕ್ಕು ಬಳುಕಿನ..' ಹಾಡು ಬಂದಾಗ ಓಡೋಡಿ ಬಂದು ನೋಡುತ್ತಿದ್ದೆವು. ಉಪೇಂದ್ರ ಅವರ ಸಿನಿಮಾಗಳನ್ನು ಅರ್ಥಮಾಡಿಕೊಂಡಿದ್ದೇ ಪಿಯುಸಿ ನಂತರದ ದಿನಗಳಲ್ಲಿ. ಉಪೇಂದ್ರ ಅವರನ್ನು ಏಕೆ ಜನ ಇಷ್ಟಪಡುತ್ತಾರೆ ಎಂದು ಅರಿವಾಗಿದ್ದೇ ಆವಾಗ. ಒಂದು ಹಂತದವರೆಗೆ ನಮಗೆ ಹೀರೊ, ಹೀರೊಯಿನ್ ಅಷ್ಟೇ ಮುಖ್ಯವಾಗುತ್ತಾರೆ. ಬಳಿಕ ನಿರ್ದೇಶನವೆಂಬ ವಿಷಯ ಹತ್ತಿರವಾಗುತ್ತದೆ. ಸಿನಿಮಾವೊಂದಕ್ಕೆ ನಿರ್ದೇಶನವೆಂಬುವುದು ಎಷ್ಟು ಮುಖ್ಯವೆನ್ನುವುದನ್ನು ತಿಳಿಸಿಕೊಟ್ಟವರಲ್ಲಿ ಉಪೇಂದ್ರ ಅವರೂ ಒಬ್ಬರು. ಅವರಲ್ಲಿ ಇರುವಂತಹ ಭಿನ್ನ ಆಲೋಚನೆ, ಕಥೆ ಹೇಳುವ ಸೂತ್ರ, ವಿಭಿನ್ನವಾಗಿ ಶೀರ್ಷಿಕೆ ಇಡುವ ಯೋಚನೆ, ಅವರ ಮಾತುಗಳು–ಅದರೊಳಗಿನ ಅರ್ಥ ಬಹಳ ಕುತೂಹಲ ಹುಟ್ಟಿಸುತ್ತದೆ.

'ಸೂಪರ್' ಸಿನಿಮಾದ ಆರಂಭಿಕ ದೃಶ್ಯಗಳನ್ನು ನೋಡಿ ನಮ್ಮ ಭಾರತವೂ ಹೀಗೆ ಆಗಬಾರದೇ ಎಂಬ ಆಸೆ ಮೂಡಿತ್ತು. 'ಉಪ್ಪಿ–2' ಸಿನಿಮಾದ 'ಯೋಚನೆ ಮಾಡದೆ ಹೇಳ್ತೀನಿ ಯೋಚನೆ ಮಾಡಬೇಡ' ಎಂಬ ವಾಕ್ಯವು ಬಹಳ ಚಿಂತನೆಗೆ ದೂಡಿತ್ತು. 'ಅನಾಥರು', 'ಕಲ್ಪನಾ' ನಟನೆಯಲ್ಲಿ ಇಷ್ಟವಾದ ಸಿನಿಮಾಗಳು. ಉಪೇಂದ್ರ ಅವರ ಕಣ್ಣಿನ ಚಲನೆಯನ್ನು ಅನುಸರಿಸಲು ಪ್ರಯತ್ನಿಸುತ್ತಿದ್ದ ಸಂದರ್ಭಗಳೂ ನೆನಪಾಗುತ್ತಿವೆ. ❖

ಬರಲಿದೆ ಸೈನೈಡ್ ದಿ ಹ್ಯೂಮನ್ ಬಾಂಬ್

ಎ.ಎಂ.ಆರ್. ರಮೇಶ್ ನಿರ್ದೇಶನದ 'ಸೈನೈಡ್' ಸುಮಾರು 20 ವರ್ಷಗಳ ಹಿಂದೆ ತೆರೆಕಂಡಿತ್ತು. ಇದೀಗ ಈ ಸಿನಿಮಾದ ಪ್ರೀಕ್ವೆಲ್(ಹಿಂದಿನ ಭಾಗ) ನಿರ್ಮಾಣಕ್ಕೆ ನಿರ್ದೇಶಕ ಎ.ಎಂ.ಆರ್. ರಮೇಶ್ ನಿರ್ಧರಿಸಿದ್ದಾರೆ. 'ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರ ಹತ್ಯೆಯ ಬಳಿಕ ನಡೆದ ಘಟನೆಯು 'ಸೈನೈಡ್'ನಲ್ಲಿದೆ. ಪ್ರೀಕ್ವೆಲ್‌ನಲ್ಲಿ ಹತ್ಯೆಗೆ ನಡೆಸಿದ ಯೋಜನೆಯ ಮಾಹಿತಿ ಇರಲಿದೆ' ಎಂದಿರುವ ರಮೇಶ್ ಹೊಸ ಪ್ರಾಜೆಕ್ಟ್‌ನ ವಿವರಗಳನ್ನು ನೀಡುತ್ತಾ 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದರು.

ಎ.ಎಂ.ಆರ್.ರಮೇಶ್

'ಸೈನೈಡ್ ಸಿನಿಮಾ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿತ್ತು. ಅಲ್ಲಿ ನಡೆಯುತ್ತಿದ್ದ ಸಂವಾದದ ಸಂದರ್ಭದಲ್ಲೇ ಪ್ರೀಕ್ವೆಲ್‌ನ ಚರ್ಚೆಯು ಹುಟ್ಟಿಕೊಂಡಿತ್ತು. 'ರಾಜೀವ್ ಗಾಂಧಿಯವರ ಹತ್ಯೆಯ ಬಗ್ಗೆ ಏಕೆ ತೋರಿಸಿಲ್ಲ' ಎಂದು ಕೇಳುತ್ತಿದ್ದರು. ಸಿನಿಮಾವೇನಾದರೂ ನಿಷೇಧವಾದರೆ ಎಂಬ ಭಯ ನನ್ನಲ್ಲಿ ಆಗ ಇತ್ತು. 'ಸೈನೈಡ್' ಮಾಡಿದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು, ರಂಗನಾಥ್-ಮೃದುಲಾ ಅವರಿಂದ ದೊರಕಿದ ಮಾಹಿತಿ ನನ್ನಲ್ಲಿ ಇತ್ತು. ಭಯೋತ್ಪಾದಕರು ಹೇಗೆ ಶ್ರೀಲಂಕಾದಿಂದ ಮದ್ರಾಸ್‌ಗೆ ಬಂದರು, ಎಲ್ಲೆಲ್ಲಿಗೆ ಹೋದರು ಏನೇನು ಮಾಡಿದರು ಎನ್ನುವುದನ್ನು ತೋರಿಸಲು ಕಾರ್ತಿಕೇಯನ್, ಶಿವಾಜಿಯವರಂತಹ ಹಿರಿಯ ಪೊಲೀಸ್ ಅಧಿಕಾರಿಗಳ ಸಂದರ್ಶನ ಮಾಡಿ ಮಾಹಿತಿ ತೆಗೆದುಕೊಳ್ಳಬೇಕಿತ್ತು. 'ಸೈನೈಡ್' ಬಳಿಕ ಸುಮಾರು ಇನ್ನೂರು ಜನರು ನನಗೆ ಸಂದರ್ಶನ ನೀಡಿದ್ದಾರೆ. ಯಾವುದೇ ವ್ಯಕ್ತಿ–ವಿಷಯದ ಪರ ನಿಲ್ಲದೆ ಈತ ಕಥೆಗೆ ನ್ಯಾಯ ದೊರಕಿಸಬಲ್ಲ ಎಂಬ ನಂಬಿಕೆ ಅವರಿಗೆ 'ಸೈನೈಡ್' ಮೂಲಕ ಬಂತು. ಹೀಗಾಗಿ ಪ್ರೀಕ್ವೆಲ್ ಮಾಡಲು ನಿರ್ಧರಿಸಿದೆ' ಎಂದರು ರಮೇಶ್.

'ದಾಳಿಯ ವೇಳೆ ರಾಜೀವ್ ಗಾಂಧಿ ಬದುಕುಳಿದರೆ ಮತ್ತೆ ದಾಳಿ ನಡೆಸಿ ಸಾಯಿಸಲು ಮತ್ತೋರ್ವ ಒಳಗಡೆ ಹೋಗುತ್ತಾನೆ. ಈತ ಯಾರು? ಮುಂತಾದ ವಿಷಯಗಳನ್ನು ಸಂದರ್ಶನಗಳ ಮೂಲಕ ಕಲೆ ಹಾಕಿದ್ದೇನೆ. ನಾನು ತನಿಖಾ ಪತ್ರಕರ್ತನ ರೀತಿಯಲ್ಲಿ ಕಳೆದ ಹಲವು ವರ್ಷಗಳಿಂದ ಈ ನಿಟ್ಟಿನಲ್ಲಿ ಕೆಲಸ ಮಾಡಿದ್ದೇನೆ. ಕಲೆ ಹಾಕಿದ ವಿಷಯಗಳನ್ನು ಸಂದರ್ಶನಗಳ ಮೂಲಕ ಮರುಪರಿಶೀಲಿಸಿದ್ದೇನೆ. ದಾಳಿ ನಡೆಯುವ ದಿನ ರಾಜೀವ್ ಗಾಂಧಿ ಜೊತೆಗೆ ಕಾರಿನಲ್ಲಿ ಪ್ರಯಾಣಿಸಿದ್ದ ಪತ್ರಕರ್ತೆ ನೀನಾ ಗೋಪಾಲ್, ಬಾಂಬ್ ಬ್ಲಾಸ್ಟ್ ಆದ ಸಂದರ್ಭದಲ್ಲಿ ರಾಜೀವ್ ಗಾಂಧಿ ಅವರ ಹತ್ತಿರವೇ ಇದ್ದ ಪೊಲೀಸ್ ಅಧಿಕಾರಿ ಅನುಸೂಯ ಅವರನ್ನೂ ಸಂದರ್ಶಿಸಿದ್ದೇನೆ. ಕನ್ನಡ, ಹಿಂದಿ, ತಮಿಳಿನಲ್ಲಿ ಸ್ಕ್ರಿಪ್ಟ್ ಸಿದ್ಧವಿದೆ. ಮೇ 1ರಂದು ಶ್ರೀಲಂಕಾದಿಂದ 9 ಜನ ಹೇಗೆ ಚೆನ್ನೈಗೆ ಬಂದು ಸೇರಿಕೊಳ್ಳುತ್ತಾರೆ, ಹಲವು ಸಭೆಗಳಿಗೆ ಹೇಗೆ ಹೋಗುತ್ತಾರೆ, ದಾಳಿಯ ಯೋಜನೆ ಹೇಗೆ ರೂಪಿಸುತ್ತಾರೆ, ಬಾಂಬ್ ಹೇಗೆ ಸಿದ್ಧಪಡಿಸುತ್ತಾರೆ, ದಾಳಿಯ ಬಳಿಕ ತಲೆಮರೆಸಿಕೊಂಡು ಹೇಗೆ ಬೆಂಗಳೂರು ಸೇರಿಕೊಳ್ಳುತ್ತಾರೆ ಎನ್ನುವ ಕಥೆ ಪ್ರೀಕ್ವೆಲ್‌ನಲ್ಲಿ ಇರಲಿದೆ. ಜೊತೆಗೆ ರಾಜೀವ್ ಗಾಂಧಿ ಅವರ ಜೀವನದ ಬಗ್ಗೆಯೂ ಕಥೆಯಲ್ಲಿ ಅಂಶಗಳು ಇರಲಿವೆ' ಎಂದರು.

'ಪ್ರೀಕ್ವೆಲ್ ಬಳಿಕ ಪ್ರಭಾಕರನ್ ಜೀವನದ ಬಗ್ಗೆ ವೆಬ್ ಸರಣಿ ಮಾಡಬೇಕು ಎಂದುಕೊಂಡಿದ್ದೇನೆ. 30 ಗಂಟೆಗಳಿಗೆ ಬೇಕಾಗುವಷ್ಟು ಬರವಣಿಗೆಯನ್ನು ಮಾಡಿಕೊಂಡಿದ್ದೇನೆ. ಒಟ್ಟಾರೆ ಮಾಹಿತಿ ಕಲೆ ಹಾಕಲು ಹದಿನಾರು ಜನ ಸುಮಾರು ನಾಲ್ಕೈದು ವರ್ಷ ಕಾರ್ಯನಿರ್ವಹಿಸಿದ್ದೇವೆ. ಸ್ವಿಟ್ಜರ್ಲೆಂಡ್, ಶ್ರೀಲಂಕಾ, ಅಮೆರಿಕ ಹೀಗೆ ಹಲವು ಪ್ರದೇಶಗಳಿಗೆ ಹೋಗಿ ಎಲ್‌ಟಿಟಿಇಯ ಹಲವರನ್ನು ಸಂದರ್ಶಿಸಿದ್ದೇನೆ. ಪ್ರೀಕ್ವೆಲ್‌ಗೆ 'ಸೈನೈಡ್–ದಿ ಹ್ಯೂಮನ್ ಬಾಂಬ್' ಎಂಬ ಶೀರ್ಷಿಕೆ ಇಡಲಿದ್ದೇನೆ. ಇತಿಹಾಸವನ್ನು ಸಿನಿಮಾ ಮೂಲಕ ದಾಖಲಿಸುವ ಪ್ರಯತ್ನವಿದು. ನಾನು ಯಾರ ಪರವೂ ನಿಲ್ಲುವುದಿಲ್ಲ. ಅಂದು ಏನೇನು ಘಟನೆ ನಡೆಯಿತು ಎನ್ನುವುದನ್ನಷ್ಟೇ ಹೇಳಲಿದ್ದೇನೆ. ಯಾರು ಸರಿ ಯಾರು ತಪ್ಪು ಎನ್ನುವುದನ್ನು ಜನರು ತೀರ್ಮಾನಿಸುತ್ತಾರೆ' ಎಂದು ರಮೇಶ್ ವಿವರಿಸಿದರು. ❖

ಜುಲೈ 18ಕ್ಕೆ ರೆಡ್ಡಿ ಪುತ್ರನ 'ಜೂನಿಯರ್'

2022ರ ಮಾರ್ಚ್‌ನಲ್ಲಿ ಸೆಟ್ಟೇರಿದ್ದ ಜನಾರ್ದನ ರೆಡ್ಡಿ ಪುತ್ರ ಕಿರೀಟಿ ನಟನೆಯ ಚೊಚ್ಚಲ ಚಿತ್ರ ರಿಲೀಸ್‌ಗೆ ಸಜ್ಜಾಗಿದೆ. ಜುಲೈ 18ಕ್ಕೆ 'ಜೂನಿಯರ್' ಸಿನಿಮಾ ತೆರೆಕಾಣಲಿದೆ.

ಈ ಪ್ಯಾನ್ ಇಂಡಿಯಾ ಸಿನಿಮಾ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ರಿಲೀಸ್ ಆಗಲಿದೆ. 'ಮಾಯಾಬಜಾರ್' ಸಿನಿಮಾ ಖ್ಯಾತಿಯ ರಾಧಾಕೃಷ್ಣ ರೆಡ್ಡಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ದಕ್ಷಿಣ ಭಾರತದ ಖ್ಯಾತ ನಿರ್ಮಾಣ ಸಂಸ್ಥೆ ವಾರಾಹಿ ಫಿಲ್ಮಂ ಪ್ರೊಡಕ್ಷನ್ ಈ ಚಿತ್ರಕ್ಕೆ ಬಂಡವಾಳ ಹೂಡಿದೆ. ಕ್ರೇಜಿಸ್ಟಾರ್ ರವಿಚಂದ್ರನ್, ಜೆನಿಲಿಯಾ ರಿತೇಶ್ ದೇಶ್‌ಮುಖ್ ಚಿತ್ರದಲ್ಲಿ ನಟಿಸಿದ್ದು, ಕಿರೀಟಿಗೆ ಜೋಡಿಯಾಗಿ ನಟಿ ಶ್ರೀಲೀಲಾ ಬಣ್ಣಹಚ್ಚಿದ್ದಾರೆ.

ಖ್ಯಾತ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಸಂಗೀತ, 'ಬಾಹುಬಲಿ' ಸಿನಿಮಾ ಖ್ಯಾತಿಯ ಕೆ.ಕೆ.ಸೆಂಥಿಲ್ ಕುಮಾರ್ ಛಾಯಾಚಿತ್ರಗ್ರಹಣ, ಪೀಟರ್ ಹೆನ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚಿತ್ರ ಬಿಡುಗಡೆಗೆ ಮುಹೂರ್ತ ಇಟ್ಟಿರುವ ಚಿತ್ರತಂಡ ಪ್ರಚಾರಕ್ಕೂ ಯೋಜನೆ ಹಾಕಿಕೊಂಡಿದೆ. ಇದೇ ತಿಂಗಳ 19ಕ್ಕೆ ಚಿತ್ರದ ಮೊದಲ ಹಾಡು ಬಿಡುಗಡೆ ಮಾಡುವ ಮೂಲಕ ಪ್ರಚಾರಕ್ಕೆ ಚಾಲನೆ ಸಿಗಲಿದೆ. ❖

ಕಿರೀಟಿ, ಶ್ರೀಲೀಲಾ

ನಾಲ್ಕು ಸಿನಿಮಾಗಳು ತೆರೆಗೆ

ಚಂದನವನದಲ್ಲಿ ಇಂದು (ಮೇ 16) ನಾಲ್ಕು ಸಿನಿಮಾಗಳು ತೆರೆಕಾಣುತ್ತಿವೆ.

ಬಂಡೆ ಸಾಹೇಬ್

ಪಿಎಸ್‌ಐ ದಿವಂಗತ ಮಲ್ಲಿಕಾರ್ಜುನ ಬಂಡೆ ಅವರ ಜೀವನಾಧಾರಿತ ಚಿತ್ರವಿದು. ಚಿನ್ಮಯ್ ರಾಮ್ ನಿರ್ದೇಶನದ ಈ ಸಿನಿಮಾದಲ್ಲಿ ನಾಯಕನಾಗಿ ಸಂತೋಷ್ ರಾಮ್ ನಟಿಸಿದ್ದಾರೆ. ಇದು ಚಿನ್ಮಯ್ ಅವರ ಚೊಚ್ಚಲ ಸಿನಿಮಾ. ಗೋಪಣ್ಣ ದೊಡ್ಮನಿ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ನಾಯಕಿಯಾಗಿ ಕಾವ್ಯ ಭಾರದ್ವಾಜ್ ನಟಿಸಿದ್ದಾರೆ. ಮುಂಜಾನೆ ಮಂಜು ಛಾಯಾಚಿತ್ರಗ್ರಹಣ, ಎಂ.ಎಸ್.ತ್ಯಾಗರಾಜ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ವೀರಣ್ಣ ಕೊರಳ್ಳಿ ಅವರೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಚಿತ್ರಕ್ಕಿದೆ.

'ಲವ್ ಯು' ಚಿತ್ರದ ಎಐ ನಾಯಕಿ

ಲವ್ ಯು

ಪೂರ್ಣ ಪ್ರಮಾಣದಲ್ಲಿ ಎಐ ಮೂಲಕವೇ ನಿರ್ಮಾಣಗೊಂಡ ಸಿನಿಮಾವಿದು. ಸಿನಿಮಾದಲ್ಲಿ ಕಲಾವಿದರೆಲ್ಲರೂ ಎಐ ಮೂಲಕವೇ ಸೃಷ್ಟಿಯಾಗಿದ್ದಾರೆ. ಸಂಕಲನಕಾರರನ್ನು ಹೊರತುಪಡಿಸಿದರೆ ಬೇರೆ ಯಾವ ತಂತ್ರಜ್ಞರೂ ಚಿತ್ರದಲ್ಲಿಲ್ಲ. ಈ ಹಿಂದೆ 'ಗರುಡಾಕ್ಷ', 'ಕಂಟೈನರ್' ಸಿನಿಮಾಗಳನ್ನು ಮಾಡಿದ್ದ ಎಸ್. ನರಸಿಂಹಮೂರ್ತಿ ಈ ಸಿನಿಮಾವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ಸುಮಾರು 20 ಎಐ ಟೂಲ್‌ಗಳನ್ನು ಬಳಸಿ ಸಿನಿಮಾ ಸಿದ್ಧಗೊಂಡಿದೆ. 95 ನಿಮಿಷಗಳ ಈ ಸಿನಿಮಾದಲ್ಲಿ ಒಟ್ಟು 12 ಹಾಡುಗಳಿವೆ.

ನಿಖಿತಾ

ಟಕಿಲಾ

ಧರ್ಮಕೀರ್ತಿರಾಜ್

ಶ್ರೀ ಸಿದ್ಧಿವಿನಾಯಕ ಫಿಲಂಸ್ ಲಾಂಛನದಲ್ಲಿ ಮರಡಿಹಳ್ಳಿ ನಾಗಚಂದ್ರ ನಿರ್ಮಾಣ ಮಾಡಿರುವ ಚಿತ್ರವಿದು. ಧರ್ಮ ಕೀರ್ತಿರಾಜ್ ಹಾಗೂ ನಿಖಿತಾ ಸ್ವಾಮಿ ನಟಿಸಿರುವ ಈ ಚಿತ್ರವನ್ನು ಪ್ರವೀಣ್ ನಾಯಕ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

ಮನುಷ್ಯ ಯಾವುದಾದರೂ ಚಟಕ್ಕೆ ಅಂಟಿಕೊಂಡು ಅತಿಯಾದಾಗ ಅದರ ಪರಿಣಾಮ ಏನಾಗುತ್ತದೆ ಎನ್ನುವುದು ಈ ಸಿನಿಮಾದ ಕಥೆ. ಮಾದಕ ವ್ಯಸನದ ಸುಳಿಯಲ್ಲಿ ಸಿಲುಕಿಕೊಳ್ಳುವ ಯುವಜನತೆಯ ಸುತ್ತ ಚಿತ್ರದ ಕಥಾಹಂದರವಿದೆ. ಆ್ಯಕ್ಷನ್ ಮರ್ಡರ್ ಮಿಸ್ಟರಿ ಜಾನರ್‌ನಲ್ಲಿ ಈ ಸಿನಿಮಾವಿದೆ. ಪಿ.ಕೆ.ಎಚ್. ದಾಸ್ ಛಾಯಾಚಿತ್ರಗ್ರಹಣ, ರೇಣು ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ದಿ

ವಿನಯ್ ವಾಸುದೇವ್ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ ಸಿನಿಮಾ ಇದಾಗಿದೆ. ವಿನಯ್ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ವಿ.ಡಿ.ಕೆ. ಸಿನಿಮಾಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ದಿಶಾ ರಮೇಶ್ ನಾಯಕಿಯಾಗಿ ನಟಿಸಿದ್ದು, ಹರಿಣಿ ಶ್ರೀಕಾಂತ್, ನಾಗೇಂದ್ರ ಅರಸ್, ಡಾಲಾ ಶರಣ್, ಕಲಾರತಿ ಮಹಾದೇವ್ ಮುಂತಾದವರು ಚಿತ್ರದ ತಾರಾಬಳಗ ದಲ್ಲಿದ್ದಾರೆ. ಅಲೆನ್ ಭರತ್ ಛಾಯಾಚಿತ್ರಗ್ರಹಣ, ಸಿದ್ಧಾರ್ಥ್ ಆರ್. ನಾಯಕ್ ಸಂಕಲನ, ಯು.ಎಂ. ಸ್ಟೀವನ್ ಸತೀಶ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ವಿನಯ್, ದಿಶಾ

ಪಾಕಿಸ್ತಾನ ಬೆಂಬಲಿಸಿದ ಟರ್ಕಿ, ಅಜರ್‌ಬೈಜಾನ್ ನಡೆಗೆ ಭಾರತ ಅಸಮಾಧಾನ

ಪ್ರವಾಸ, ಚಿತ್ರೀಕರಣ ಕೈಗೊಳ್ಳದಂತೆ ಸೂಚನೆ?

ಜಮ್ಮುವಿನಲ್ಲಿ ರಾಷ್ಟ್ರೀಯ ಬಜರಂಗದಳ ಕಾರ್ಯಕರ್ತರು ಪಾಕಿಸ್ತಾನ, ಟರ್ಕಿ ಹಾಗೂ ಚೀನಾ ವಿರುದ್ಧ ಗುರುವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಪಾಕಿಸ್ತಾನವನ್ನು ಬೆಂಬಲಿಸಿದ ಟರ್ಕಿ ಮತ್ತು ಅಜರ್‌ಬೈಜಾನ್‌ಗೆ ಪ್ರವಾಸ ಕೈಗೊಳ್ಳಬಾರದು ಮತ್ತು ಈ ಎರಡು ದೇಶಗಳಲ್ಲಿ ವಿವಾಹ ಸಮಾರಂಭಗಳನ್ನು ನಡೆಸಬಾರದು ಎಂದು ಭಾರತೀಯರಿಗೆ ಕೇಂದ್ರ ಸರ್ಕಾರ ಸೂಚನೆ ನೀಡುವ ಸಾಧ್ಯತೆ ಇದೆ.

ಕೇಂದ್ರ ಸರ್ಕಾರದ ಈ ನಿರ್ಧಾರದಿಂದ, ಮುಂದಿನ ದಿನಗಳಲ್ಲಿ ಈ ಎರಡು ದೇಶಗಳಲ್ಲಿ ಭಾರತೀಯ ಪ್ರವಾಸಿಗರ ಭೇಟಿ, ಮದುವೆಗಳ ಸಂಭ್ರಮಾಚರಣೆ ಮತ್ತು ಭಾರತೀಯ ಸಿನಿಮಾಗಳ ಚಿತ್ರೀಕರಣವು ಗಮನಾರ್ಹವಾಗಿ ಕಡಿಮೆ ಆಗಬಹುದು ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪ್ರತಿ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಪ್ರವಾಸಿಗರು ಟರ್ಕಿ ಮತ್ತು ಅಜರ್‌ಬೈಜಾನ್‌ಗೆ ಭೇಟಿ ನೀಡುತ್ತಿದ್ದರು. ಇದರಿಂದ ಈ ರಾಷ್ಟ್ರಗಳು ಗಣನೀಯ ಪ್ರಮಾಣದ ಆದಾಯ ಗಳಿಸುತ್ತಿದ್ದವು. ಭಾರತೀಯರು ಈ ದೇಶಗಳಿಗೆ ಭೇಟಿ ನೀಡದಂತೆ ಸೂಚನೆ ನೀಡಲು ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಎರಡೂ ದೇಶಗಳೊಂದಿಗಿನ ಭಾರತದ ವಾಣಿಜ್ಯ ಸಂಬಂಧಗಳು ಮುಂದುವರಿಯಬೇಕೆ ಅಥವಾ ಬೇಡವೇ ಎನ್ನುವುದು ಈಗಾಗಲೇ ಪರಿಶೀಲನೆಯಲ್ಲಿವೆ. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಸೇರಿ ಅನೇಕ ಶಿಕ್ಷಣ ಸಂಸ್ಥೆಗಳು ಟರ್ಕಿಯ ವಿಶ್ವವಿದ್ಯಾಲಯಗಳ ಜೊತೆಗಿನ ತಮ್ಮ ಸಹಯೋಗವನ್ನು ಈಗಾಗಲೇ ಸ್ಥಗಿತಗೊಳಿಸಿವೆ. ಪಾಕಿಸ್ತಾನ ಪರ ನಿಲುವು ಹೊಂದಿರುವ ಟರ್ಕಿಯನ್ನು ಚಿತ್ರೀಕರಣದ ತಾಣವಾಗಿ ಬಳಸಿಕೊಳ್ಳದಂತೆ ಫೆಡರೇಶನ್ ಆಫ್ ಸಿನೆಮಾಟೋಗ್ರಾಫ್ ಎಂಪ್ಲಾಯೀಸ್ ಆಫ್ ದಿ ವೆಸ್ಟ್ ಇಂಡಿಯಾ (ಎಫ್‌ಡಬ್ಲ್ಯುಐಸಿಇ) ಮತ್ತು ಅಸೋಸಿಯೇಷನ್ ಆಫ್ ಫಿಲ್ಮ್ ವರ್ಕರ್ಸ್ ಆಫ್ ಆಲ್ ಇಂಡಿಯಾ (ಎಐಸಿಡಬ್ಲ್ಯುಎ) ಭಾರತೀಯ ಕಲಾವಿದರು ಮತ್ತು ನಿರ್ಮಾಪಕರಿಗೆ ಬುಧವಾರ ಕರೆ ನೀಡಿವೆ.

'ಟರ್ಕಿ ಮತ್ತು ಅಜರ್‌ಬೈಜಾನ್‌ನಲ್ಲಿ ಚಿತ್ರೀಕರಣ ಮಾಡುವ ಚಲನಚಿತ್ರ ನಿರ್ಮಾಪಕರಿಗೆ ಸರ್ಕಾರದ ವತಿಯಿಂದ ಯಾವುದೇ ಬೆಂಬಲ ಇರುವುದಿಲ್ಲ' ಎಂದು ಮೂಲಗಳು ತಿಳಿಸಿವೆ.

ಟರ್ಕಿ ಮತ್ತು ಅಜರ್‌ಬೈಜಾನ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಭಾರತದ ಸಿರಿವಂತರು ಮತ್ತು ಅನಿವಾಸಿ ಭಾರತೀಯರು ಈ ಎರಡು ದೇಶಗಳಲ್ಲಿನ ಸುಂದರ ತಾಣಗಳಲ್ಲಿ ವಿವಾಹ ಸಮಾರಂಭ ನಡೆಸುತ್ತಿರುವುದು ಈಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಇದಕ್ಕಾಗಿ ಕೋಟ್ಯಂತರ ರೂಪಾಯಿ ವ್ಯಯಿಸುತ್ತಿದ್ದು, ಈ ದೇಶಗಳಿಗೆ ಆದಾಯವೂ ಹೆಚ್ಚುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಪ್ರವಾಸಿಗರ ಸಂಖ್ಯೆ

3 ಲಕ್ಷಕ್ಕೂ ಹೆಚ್ಚು
2023ರಲ್ಲಿ ಟರ್ಕಿಗೆ ಭೇಟಿ ನೀಡಿರುವ ಭಾರತೀಯ ಪ್ರವಾಸಿಗರು

2 ಲಕ್ಷಕ್ಕೂ ಹೆಚ್ಚು
2023ರಲ್ಲಿ ಅಜರ್‌ಬೈಜಾನ್‌ಗೆ ಭೇಟಿ ನೀಡಿರುವ ಭಾರತೀಯ ಪ್ರವಾಸಿಗರು

ಉತ್ಪನ್ನಗಳಿಗೆ ಬಹಿಷ್ಕಾರ

ಪುಣೆ (ಪಿಟಿಐ): ಟರ್ಕಿಯಿಂದ ಯಾವುದೇ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳದಿರಲು ಪುಣೆಯ ಎಪಿಎಂಸಿ ಮಾರುಕಟ್ಟೆಯ ವರ್ತಕರು ನಿರ್ಧರಿಸಿದ್ದಾರೆ.

ಟರ್ಕಿಯಿಂದ ಆಮದು ಮಾಡಿಕೊಂಡಿದ್ದ ಸೇಬುಗಳನ್ನು ಗುರುವಾರ ರಸ್ತೆಗೆ ಎಸೆಯುವ ಮೂಲಕ ವರ್ತಕರು ಆಕ್ರೋಶ ವ್ಯಕ್ತಪಡಿಸಿದರು.

ಟರ್ಕಿ ಸಂಸ್ಥೆ ಜೊತೆ ಒಪ್ಪಂದ ರದ್ದು

ಹೈದರಾಬಾದ್: ಟರ್ಕಿಯ ಯೂನುಸ್ ಎಮ್ರೆ ಇನ್‌ಸ್ಟಿಟ್ಯೂಟ್ (ವೈಇಐ) ಜೊತೆ ಮಾಡಿಕೊಂಡಿರುವ ಶೈಕ್ಷಣಿಕ ಒಪ್ಪಂದವನ್ನು ತಕ್ಷಣವೇ ಜಾರಿಗೆ ಬರುವಂತೆ ರದ್ದು ಮಾಡಿದ್ದಾಗಿ ನಗರದ ಮೌಲಾನಾ ಆಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯ (ಎಂಎಎನ್‌ಯು) ಗುರುವಾರ ಘೋಷಿಸಿದೆ.

ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನತೆಯ ಈ ಸಂದರ್ಭದಲ್ಲಿ, ಟರ್ಕಿಯು ಪಾಕಿಸ್ತಾನಕ್ಕೆ ಬೆಂಬಲ ನೀಡುತ್ತಿರುವುದನ್ನು ಪ್ರತಿಭಟಿಸಿ ಈ ತೀರ್ಮಾನ ಕೈಗೊಂಡಿರುವುದಾಗಿ ವಿ.ವಿ. ತಿಳಿಸಿದೆ.

ಟರ್ಕಿ ಭಾಷೆಯಲ್ಲಿ ಡಿಪ್ಲೊಮಾ ಕೋರ್ಸ್ ಆರಂಭಕ್ಕಾಗಿ ವಿಶ್ವವಿದ್ಯಾಲಯವು ವೈಇಐ ಜೊತೆ ಕಳೆದ ವರ್ಷ ಜನವರಿ 2ರಂದು ಐದು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿತ್ತು.

ಸುಧಾಕರನ್ ಹೇಳಿಕೆ: ಇ.ಸಿ ತನಿಖೆ

ಆಲಪ್ಪುಳ (ಕೇರಳ) (ಪಿಟಿಐ): ಆಲಪ್ಪುಳ ಲೋಕಸಭಾ ಕ್ಷೇತ್ರಕ್ಕೆ 1989ರಲ್ಲಿ ನಡೆದ ಚುನಾವಣೆಯಲ್ಲಿ ಅಂಚೆ ಮತಪತ್ರ ತೆರೆದು ನೋಡಲಾಗಿತ್ತು ಎಂದು ಕೇರಳದ ಸಿಪಿಎಂ ನಾಯಕ ಜಿ.ಸುಧಾಕರನ್ ಹೇಳಿಕೆ ನೀಡಿರುವ ಬೆನ್ನಲ್ಲೇ ಚುನಾವಣಾ ಆಯೋಗ (ಇ.ಸಿ) ಈ ಬಗ್ಗೆ ತನಿಖೆ ಆರಂಭಿಸಿದೆ.

ಆ ಚುನಾವಣೆಯಲ್ಲಿ ಎದುರಾಳಿ ಪಕ್ಷದ ಅಭ್ಯರ್ಥಿಗೆ ಯಾರೆಲ್ಲ ಮತ ಚಲಾಯಿಸಿದ್ದಾರೆಂಬುದನ್ನು ಕಂಡುಹಿಡಿಯಲು ಅಂಚೆ ಮತಪತ್ರಗಳನ್ನು ತೆರೆದು ಪರೀಕ್ಷಿಸಲಾಗಿತ್ತು ಎಂದು ಮಾಜಿ ಸಚಿವರೂ ಆದ ಜಿ.ಸುಧಾಕರನ್ ಎನ್‌ಜಿಒ ಒಕ್ಕೂಟದ ಸಮಾರಂಭದಲ್ಲಿ ಬುಧವಾರ ಹೇಳಿದ್ದರು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ತನಿಖೆಯ ಭಾಗವಾಗಿ, ಇಸಿ ಅಧಿಕಾರಿ ಗಳು ಗುರುವಾರ ಸುಧಾಕರನ್ ನಿವಾಸಕ್ಕೆ ಭೇಟಿ ನೀಡಿ ಹೇಳಿಕೆ ದಾಖಲಿಸಿಕೊಂಡರು.

'ಕೆಎಸ್‌ಟಿಎ ನಾಯಕ ಕೆ.ವಿ. ದೇವದಾಸ್ ಅವರು ಆಲಪ್ಪುಳದಿಂದ ಸಂಸತ್ ಚುನಾವಣೆಗೆ ಸ್ಪರ್ಧಿಸಿದಾಗ, ಜಿಲ್ಲಾ ಸಮಿತಿಯ ಕಚೇರಿಯಲ್ಲಿ ಅಂಚೆ ಮತಪತ್ರಗಳನ್ನು ತೆರೆದು ಪರಿಶೀಲಿಸಲಾಗಿತ್ತು. ಶೇ 15ರಷ್ಟು ಜನರು ವಿರೋಧ ಪಕ್ಷದ ಅಭ್ಯರ್ಥಿಗೆ ಮತ ಚಲಾಯಿಸಿರುವುದು ಆಗ ಕಂಡುಬಂದಿತ್ತು. ಅಂಚೆ ಮತಗಳನ್ನು ತೆರೆದು ನೋಡಿ, ಮತ್ತೆ ಮುಚ್ಚುವುದು ಕಷ್ಟವಲ್ಲ' ಎಂದು ಸುಧಾಕರನ್ ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಚುನಾವಣೆಯಲ್ಲಿ ಸಿಪಿಎಂನ ದೇವದಾಸ್ ಅವರು ಕಾಂಗ್ರೆಸ್ ನಾಯಕ ವಕ್ಕಂ ಪುರುಷೋತ್ತಮನ್ ಅವರ ವಿರುದ್ಧ 18,000 ಮತಗಳಿಂದ ಸೋತಿದ್ದರು ಎಂದು ಸುಧಾಕರ್ ಹೇಳಿದ್ದಾರೆ.

'ಈ ರೀತಿ ಹೇಳಿರುವುದಕ್ಕೆ ನನ್ನ ಮೇಲೆ ಪ್ರಕರಣ ದಾಖಲಾದರೂ ನಾನು ಯೋಚಿಸುವುದಿಲ್ಲ. ಎನ್‌ಜಿಒ ಒಕ್ಕೂಟದ ಎಲ್ಲ ಸದಸ್ಯರು ಎದುರಾಳಿ ಅಭ್ಯರ್ಥಿಗೆ ಮತ ಹಾಕಬಾರದು. ಆದರೆ, ಮತಗಳನ್ನು ಮಾರಿಕೊಳ್ಳುವವರು ತಾವು ಯಾರಿಗೆ ಮತ ಹಾಕಿದ್ದೇವೆಂಬುದು ಗೊತ್ತಾಗದು ಎಂದು ಭಾವಿಸಬಾರದು' ಎಂದು ಸುಧಾಕರನ್ ಹೇಳಿರುವ ದೃಶ್ಯದ ತುಣುಕು ವಾಹಿನಿಗಳಲ್ಲಿ ಪ್ರಸಾರವಾಗಿದೆ.

10 ಉಗ್ರರ ಹತ್ಯೆ

ಇಂಫಾಲ್ (ಪಿಟಿಐ): ಮಣಿಪುರದ ಚಾಂಡೇಲ್ ಜಿಲ್ಲೆಯಲ್ಲಿ 10 ಉಗ್ರರನ್ನು ಭದ್ರತಾ ಪಡೆ ಸಿಬ್ಬಂದಿ ಹತ್ಯೆ ಮಾಡಿದ್ದಾರೆ ಎಂದು ಸೇನೆಯ ಪೂರ್ವ ಕಮಾಂಡ್‌ನ ಅಧಿಕಾರಿಗಳು ಗುರುವಾರ ಮಾಹಿತಿ ನೀಡಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, 'ಭಾರತ-ಮ್ಯಾನ್ಮಾರ್ ಗಡಿ ಸಮೀಪದಲ್ಲಿರುವ ನ್ಯೂ ಸಮತಾಲ್ ಗ್ರಾಮದ ಬಳಿ ಶಸ್ತ್ರಸಜ್ಜಿತರಾಗಿ ಉಗ್ರರು ಅಡಗಿರುವ ಬಗ್ಗೆ ಗುಪ್ತಚರ ಮಾಹಿತಿ ಲಭ್ಯವಾಗಿತ್ತು.

ಬೆಂಗಳೂರಿನ 20 ಪ್ರವಾಸಿಗರು ಅಸ್ವಸ್ಥ

ಬಾಲೇಶ್ವರ (ಪಿಟಿಐ): ಒಡಿಶಾದ ಪುರಿಗೆ ಬಸ್‌ನಲ್ಲಿ ತೆರಳುತ್ತಿದ್ದ ಬೆಂಗಳೂರಿನ 20 ಪ್ರವಾಸಿಗರು ಮಾರ್ಗಮಧ್ಯೆ ಅಸ್ವಸ್ಥಗೊಂಡಿದ್ದಾರೆ.

ಈ ಪ್ರವಾಸಿಗರನ್ನು ಸೊರೊ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬುಧವಾರ ರಾತ್ರಿ ಊಟ ಮುಗಿಸಿಕೊಂಡು ಬಸ್‌ನಲ್ಲಿ ಪುರಿಗೆ ತೆರಳುತ್ತಿದ್ದಾರೆ ಬಾಲೇಶ್ವರ ಜಿಲ್ಲೆಯ ಸೊರೊ ಎಂಬಲ್ಲಿ ಈ ಘಟನೆ ನಡೆದಿದೆ.

ಬೆಂಗಳೂರು ಮೂಲದ ಸುಮಾರು 50 ಯಾತ್ರಿಕರು ಬಸ್ ಧಾರ್ಮಿಕ ಕ್ಷೇತ್ರಗಳ ಪ್ರವಾಸ ಕೈಗೊಂಡಿದ್ದರು. ಏಪ್ರಿಲ್ 26ರಂದು ಗಯಾದಿಂದ ಪುರಿಗೆ ಬರುತ್ತಿದ್ದರು. ಸೊರೊ ಎಂಬಲ್ಲಿ ತಾವೇ ತಯಾರಿಸಿದ್ದ ಅನ್ನ ಮತ್ತು ಸಾಂಬಾರ್ ಸೇವಿಸಿದ್ದರು. ಬಸ್ ಸೊರೊ ನಗರ ತಲುಪುವಷ್ಟರಲ್ಲಿ 20 ಪ್ರವಾಸಿಗರು ವಾಂತಿ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರವಾಸಿಗರ ಅಸ್ವಸ್ಥತೆಗೆ ಬಿಸಿಗಾಳಿ ಕಾರಣವಿರಬಹುದು ಎಂದು ವೈದ್ಯರು ಶಂಕೆ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 06/2024–25 ದಿನಾಂಕ: 13.05.2025
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ **KPWD Class-III & above** ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ.–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

Construction of foot bridge (kalu sanka) over Kabbina Halla on the road connecting from Badada Bailu to Andavalli village of Soraba Taluk in Shimoga District. INDENT 2920 ಕಾಮಗಾರಿಯ ಅಂದಾಜು ಮೊತ್ತ ರೂ. 114.63 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 1.46 ಲಕ್ಷಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 16–05–2025 ರಿಂದ 23–05–2025 ಸಂಜೆ 5.30 ರವರೆಗೆ. 2) ಪ್ರಿಬಿಡ್ ಸಭೆಯ ದಿನಾಂಕ: 20–05–2025 ಬೆಳಗ್ಗೆ 11.00 ಗಂಟೆಗೆ (ಸ್ಥಳ:ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕನೀನಿನಿ, ದಂ.ಜ.ಯೋ. ಶಿಕಾರಿಪುರ). 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 26–05–2025 ಬೆಳಗ್ಗೆ 11.00 ಗಂಟೆಗೆ 4)ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ಶಿ/ನಂ.76–05/ ಝೇಂಕಾರ್/2025–26
ಸಹಿ/– ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

TNPL TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.
Ph.: 04324-277001 (10 Lines). Email: purchase.recycle@tnpl.co.in

NOTICE INVITING TENDER

Tender No.	Material Description	Due date
252613 001095	Procurement of 1,000 MT ± 5% Office Waste Paper (White Boards) in Bale form from Karnataka for TNPL Unit - I at Kagithapuram.	23.05.2025

Corrigendum if any will be issued in TNPL Website & NIC Portal. Detailed Terms & conditions, tender fee, EMD etc., are available in the tender document which can be downloaded from websites : **www.tnpl.com / https://tntenders.gov.in/nicgep/app**

DIPR/2275/Tender/2025 *TNPL - Maker of bagasse based eco-friendly Paper*

ಇ–ಆಡಳಿತ ಕೇಂದ್ರ
CEG CENTRE FOR e-GOVERNANCE
(DPAR (ಇ–ಆಡಳಿತ) ಸಚಿವಾಲಯದ ಅಧೀನದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸ್ಥಾಪಿಸಿರುವ ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ, 1960ರ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ), ಕೊಠಡಿ ಸಂಖ್ಯೆ: 146, ಮೊದಲ ಮಹಡಿ, ಎರಡನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001. ದೂರವಾಣಿ ಸಂಖ್ಯೆ: 080–22371090

No: CEG-FIDOADM/20/2025-KUTUMBA (E-1744253) ದಿನಾಂಕ: 15.05.2025

ಅಧಿಸೂಚನೆ

ಇ–ಆಡಳಿತ ಕೇಂದ್ರವು ನಿಯೋಜನೆ ಮೇರೆಗೆ ಕೆಳಕಂಡ ಹುದ್ದೆಯ ಭರ್ತಿಗಾಗಿ ರಾಜ್ಯ ಸರ್ಕಾರದ ಅರ್ಹ ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಸಂಖ್ಯೆ	ವೇತನ ಶ್ರೇಣಿ	ಅರ್ಹತೆ ಮತ್ತು ಅನುಭವ
1	ಹಿರಿಯ ಯೋಜನಾ ವ್ಯವಸ್ಥಾಪಕರು	1	ಅವರದೇ ಸ್ವಂತ ವೇತನ	ಕಂದಾಯ ಅಥವಾ ಅಭಿವೃದ್ಧಿ ಇಲಾಖೆಗಳಲ್ಲಿ 3 ವರ್ಷ ಸೇವಾ ಅನುಭವವುಳ್ಳ ಗ್ರೂಪ್ "ಎ" ಅಧಿಕಾರಿ ಅಥವಾ 5 ವರ್ಷ ಸೇವಾ ಅನುಭವವುಳ್ಳ ಗ್ರೂಪ್ "ಬಿ" ಅಧಿಕಾರಿ. ಕ್ಷೇತ್ರ ಅನುಭವವುಳ್ಳ ಅಧಿಕಾರಿಗೆ ಆದ್ಯತೆ ನೀಡಲಾಗುವುದು. ಇ–ಆಡಳಿತ ಯೋಜನೆಗಳ ಅನುಷ್ಠಾನದಲ್ಲಿ ಅನುಭವವುಳ್ಳ ಅಧಿಕಾರಿಗಳು ಅಪೇಕ್ಷಣೀಯ.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10 ಜೂನ್ 2025

ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: https://ceg.karnataka.gov.in/ ದೂರವಾಣಿ ಸಂಖ್ಯೆ: 080–22373840. ಭರ್ತಿ ಮಾಡಿದ ಅರ್ಜಿಗಳನ್ನು ವಿಜಿಲೆನ್ಸ್ ಕ್ಲಿಯರೆನ್ಸ್ ಮತ್ತು ಕಳೆದ 5 ವರ್ಷ (ಗ್ರೂಪ್ "ಬಿ")/3 (ಗ್ರೂಪ್ "ಎ") ವರ್ಷಗಳ ಕಾರ್ಯನಿರ್ವಹಣಾ ವರದಿಗಳೊಂದಿಗೆ ಇಲಾಖಾ ಮುಖ್ಯಸ್ಥರ ಮುಖಾಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ, ಕೊಠಡಿ ಸಂಖ್ಯೆ: 146, 1ನೇ ಮಹಡಿ, 2ನೇ ದ್ವಾರ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560 001, ಇವರಿಗೆ ಕಳುಹಿಸುವುದು.

Sd/-
Administrative Officer
Centre for e- Governance

ವಾಸಾಸಂಇ/ವಾ.ಪ್ರ/666/ಎಂಎಎ/25–26

ಕೃಷಿ ಇಲಾಖೆ
ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01

ಸಂಖ್ಯೆ: ಜಕೃನಿ(ಬೆ.ಅ)/ಕೃ.ಭಾ/HDPE-GM-RfP-420GSM/2025-26 ದಿನಾಂಕ:15.05.2025

ಅಲ್ಪಾವಧಿ Request for Proposal ಪ್ರಕಟಣೆ

2025–26 ಹಾಗೂ 2026–27ನೇ ಸಾಲಿನ ಕೃಷಿ ಇಲಾಖೆಯ ಕೃಷಿ ಭಾಗ್ಯ ಯೋಜನೆಯಡಿ ನಿರ್ಮಾಣವಾಗುವ ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ) ಗಳಿಗೆ 420 GSM (500 Microns-Type-II) Geo membrane HDPE Sheet (IS: 15351:2015 BIS license ಹೊಂದಿರುವ) ಗಳನ್ನು ಸರಬರಾಜು ಮತ್ತು ಹೊದಿಕೆ ಮಾಡಲು ಇಚ್ಛಿಸುವ ಅರ್ಹ ಮೂಲ ತಯಾರಕರು/ ತಯಾರಕರು/ ಎಂ.ಒ.ಯು ಹೊಂದಿರುವ ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮುಖಾಂತರ ಅಲ್ಪಾವಧಿ Request for Proposal (RfP) ಆಹ್ವಾನಿಸಲಾಗಿದ್ದು, ಆಸಕ್ತ ಸಂಸ್ಥೆಗಳು RfP ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ RfP ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ RfP ಅರ್ಜಿಗಳನ್ನು **ದಿನಾಂಕ 16.05.2025 ರಿಂದ ದಿನಾಂಕ 30.05.2025 ರವರೆಗೆ** ಪಡೆಯಬಹುದು ಹಾಗೂ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 30.05.2025, ಅಪರಾಹ್ನ 5:30 ಗಂಟೆ.**

ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಛೇರಿ, ಬೆಳೆ ಅಭಿವೃದ್ಧಿ ವಿಭಾಗ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001, ರವರನ್ನು ಸಂಪರ್ಕಿಸುವುದು.

ಸಹಿ/–
ಕೃಷಿ ನಿರ್ದೇಶಕರು ಮತ್ತು ಟೆಂಡರ್ ಆಹ್ವಾನ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜಿಎ/695/2025–26

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
4ನೇ ಮಹಡಿ, ಪೂರ್ವ ಭಾಗ, 'ಖನಿಜ ಭವನ', ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–1

ಟೆಂಡರ್‌ಗೆ ಆಹ್ವಾನ
(ಕೆಪಿಪಿ ಪೋರ್ಟಲ್ (https://kppp.karnataka.gov.in) ಮೂಲಕ ಮಾತ್ರ)

ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ವಿಮಾನ ತರಬೇತಿ ಸಂಸ್ಥೆ ಸ್ಥಾಪನೆಗೆ ಏಜೆನ್ಸಿ ಆಯ್ಕೆಗೆ

ಕೆಎಸ್‌ಐಐಡಿಸಿ, ಕರ್ನಾಟಕ ಸರ್ಕಾರ ಇವರು ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ವಿಮಾನ ತರಬೇತಿ ಸಂಸ್ಥೆ ಸ್ಥಾಪನೆಗೆ ಏಜೆನ್ಸಿ ಆಯ್ಕೆಗೆ ಅರ್ಹ ಘಟಕಗಳು/ ಕಂಪನಿಗಳು/ ಸಂಸ್ಥೆಗಳು/ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್ (ದ್ವಿ–ಲಕೋಟೆ ವ್ಯವಸ್ಥೆ) ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಪಡೆಯಬಹುದು.

ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 16.05.2025 ನಂತರ.** ಬಿಡ್ ಪೂರ್ವ ಸಭೆ: **22.05.2025, ಬೆಳಗ್ಗೆ 11.30 ಗಂಟೆ.** ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **16.06.2025 ಸಂಜೆ 5.30 ಗಂಟೆವರೆಗೆ**

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಮತ್ತು ವೆಬ್‌ಸೈಟ್‌ನಿಂದ ಪಡೆಯಬಹುದು. ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಿದ್ದಲ್ಲಿ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnatak.gov.in) ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಯಾವುದೇ ವಿಚಾರಣೆ/ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಿ: ಎಜಿಎಂ(ಐಪಿಡಿ–I) (ಕಛೇರಿ) 080–22258123/9845520837 ಹಾಗೂ ನಾಗರಿಕ ವಿಮಾನಯಾನ ಸಲಹೆಗಾರರು: 9482221795. ಇ–ಮೇಲ್: bic3@ksiidc.com / info@ksiidc.com

ಸಹಿ/– ಪ್ರಧಾನ ವ್ಯವಸ್ಥಾಪಕರು, ಕೆಎಸ್‌ಐಐಡಿಸಿ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ
ರಾಷ್ಟ್ರೀಯ ಪ್ರಾಮುಖ್ಯತಾ ಸಂಸ್ಥೆ
ಹೊಸೂರು ರಸ್ತೆ, ಬೆಂಗಳೂರು–560029 Website: http://www.nimhans.ac.in

ಸಂ.: ಎನ್‌ಐಎಂಹೆಚ್/ಅ&ಇ/ಇಅ1/ಯುಜಿ/ಎವೈ 2025–26 ದಿನಾಂಕ: 16.05.2025

ಪ್ರವೇಶ ಸೂಚನೆ

2025–26ನೇ ಶೈಕ್ಷಣಿಕ ವರ್ಷಕ್ಕೆ ಈ ಕೆಳಗಿನ ಪದವಿಪೂರ್ವ ಕೋರ್ಸ್‌ಗಳ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕೋರ್ಸ್‌ನ ಹೆಸರು	ಒಟ್ಟು ಸೀಟುಗಳು	ಸಂಸ್ಥೆಯ ವಿಭಾಗದಡಿಯಲ್ಲಿ ಸೀಟುಗಳ ಸಂಖ್ಯೆ	ಪ್ರಾಯೋಜಿತ/ ನಿಯೋಜಿತ ವರ್ಗದ ಅಡಿಯಲ್ಲಿ ಸೀಟುಗಳ ಸಂಖ್ಯೆ
	ಬಿಎಸ್ಸಿ ಕೋರ್ಸ್‌ಗಳು			
1	ಬಿಎಸ್ಸಿ ಅನಸ್ತೇಶಿಯಾ ಟೆಕ್ನಾಲಜಿ:	11		
	a. ಅಖಿಲ ಭಾರತ ವರ್ಗ (ಯುಆರ್–03, ಒಬಿಸಿ–01)	04	04	–
	b. ಕರ್ನಾಟಕ ನಿವಾಸಿ ವರ್ಗ (ಯುಆರ್–04, ಒಬಿಸಿ–02, ಎಸ್‌ಸಿ–01)	07	07	–
2	ಬಿಎಸ್ಸಿ ನರ್ಸಿಂಗ್:	85		
	a. ಅಖಿಲ ಭಾರತ ವರ್ಗ (ಯುಆರ್–14, ಇಡಬ್ಲ್ಯೂಎಸ್–03, ಒಬಿಸಿ–09, ಎಸ್‌ಸಿ–06, ಎಸ್‌ಟಿ–03)	35	35	–
	b. ಕರ್ನಾಟಕ ನಿವಾಸಿ ವರ್ಗ (ಯುಆರ್–19, ಇಡಬ್ಲ್ಯೂಎಸ್–05, ಒಬಿಸಿ–14, ಎಸ್‌ಸಿ–08, ಎಸ್‌ಟಿ–04)	50	50	–
3	ಬಿಎಸ್ಸಿ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ	11		
	a. ಅಖಿಲ ಭಾರತ ವರ್ಗ (ಯುಆರ್–02, ಒಬಿಸಿ–01, ಎಸ್‌ಟಿ–01)	04	04	–
	b. ಕರ್ನಾಟಕ ನಿವಾಸಿ ವರ್ಗ (ಯುಆರ್–05, ಒಬಿಸಿ–01, ಎಸ್‌ಟಿ–01)	07	07	–
4	ಬಿಎಸ್ಸಿ ಕ್ಲಿನಿಕಲ್ ನ್ಯೂರೋಫಿಸಿಯೋಲಜಿ ಟೆಕ್ನಾಲಜಿ	07		
	a. ಅಖಿಲ ಭಾರತ ವರ್ಗ (ಯುಆರ್–01, ಇಡಬ್ಲ್ಯೂಎಸ್–01)	02	02	–
	b. ಕರ್ನಾಟಕ ನಿವಾಸಿ ವರ್ಗ (ಯುಆರ್–02, ಒಬಿಸಿ–01, ಎಸ್‌ಸಿ–01)	04	04	–
	c. ಪ್ರಾಯೋಜಿತ ವರ್ಗ	01	–	01
	ಸರ್ಟಿಫಿಕೇಟ್ ಕೋರ್ಸ್			
1	ನರರೋಗಶಾಸ್ತ್ರ ತಂತ್ರಜ್ಞಾನದಲ್ಲಿ ಸರ್ಟಿಫಿಕೇಟ್ ಕೋರ್ಸ್	02	02	–

ಪ್ರವೇಶ ಪರೀಕ್ಷೆಯನ್ನು 27.07.2025ರಂದು (ತಾತ್ಕಾಲಿಕ) ಬೆಂಗಳೂರು ನಗರದಲ್ಲಿ ಮಾತ್ರ ನಡೆಸಲಾಗುವುದು.

ದಯವಿಟ್ಟು ನಿಮ್ಹಾನ್ಸ್ ವೆಬ್‌ಸೈಟ್‌ನಲ್ಲಿ 2025–26ನೇ ಶೈಕ್ಷಣಿಕ ವರ್ಷದ ಪದವಿಪೂರ್ವ ಕೋರ್ಸ್‌ಗಳ ಪ್ರವೇಶ ಅಧಿಸೂಚನೆ ಅಥವಾ ಯುಜಿ ಪ್ರಾಸ್ಪೆಕ್ಟಸ್ 2025–26 ಅನ್ನು ನೋಡಿ. ಹೆಚ್ಚಿನ ವಿವರಗಳಿಗಾಗಿ **http://www.nimhans.ac.in** ಗೆ ಭೇಟಿ ನೀಡಿ.

ಸಹಿ/–, ನಿರ್ದೇಶಕರು

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)
ಇ–ಮೇಲ್: midhly@yahoo.co.in ಫೋ.ನಂ: 08284–220113
ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/4702/2025–26/269 ದಿನಾಂಕ: 13/05/2025

ಅಲ್ಪಾವಧಿ ಟೆಂಡರ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಕೆ.ಡಬ್ಲ್ಯೂ–3&4

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ KW-3 & 4 (ದ್ವಿ–ಲಕೋಟೆ) ಪದ್ಧತಿಯಲ್ಲಿ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಮುಖಾಂತರ ಟೆಂಡರ ಕರೆಯಲಾಗಿದೆ.

(1) ಇಂಟೆಂಡ್ ನಂ: 5353 (2) ಇಂಟೆಂಡ್ ನಂ: 2002 3ನೇ ಕರೆ

ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬ್‌ಸೈಟ್ ವಿಳಾಸ: "https://kppp.karnataka.gov.in" ದಲ್ಲಿ ದಿನಾಂಕ: 15–05–2025 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 29–05–2025 ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: 30–05–2025 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 31–05–2025 ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ–3&4 ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– (ಎಂ. ನಾಗರಾಜ)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)

DIPR/ADK/KSMCA/99/ 23-26 Dt.14.05.2025

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಆಯುಕ್ತರ ಕಛೇರಿ, ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ಇ–ಮೇಲ್: bcwd.hostels@karnataka.gov.in

ಸಂಖ್ಯೆ: BCWD-12022/1/2025-BCWD_HOSTEL-BCWD ದಿನಾಂಕ:15.05.2025

ಪ್ರಕಟಣೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ

ಪ್ರವರ್ಗ–1, ಎಸ್.ಸಿ & ಎಸ್.ಟಿ	ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, 3ಬಿ	ರೂ.1.00 ಲಕ್ಷ

- ವಿದ್ಯಾರ್ಥಿಗಳು https://shp.karnataka.gov.in/bcwd ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.06.2025.
- ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ನ್ನು ನೋಡಬಹುದು.
- ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ / ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು.

ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆಗಳು : 8050770004 ಮತ್ತು 8050770005

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/667/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಜಾಜಿನಗರ ವಿಭಾಗ, ಸರ್ ಎಂ ವಿಶ್ವೇಶ್ವರಯ್ಯ ವಾಣಿಜ್ಯ ಸಂಕೀರ್ಣ, 12ನೇ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010,

ನಂ.: ಕಾಅ/ರಾಜಾಜಿನಗರ/ಇ–ಪ್ರೊಕ್ಯೂರ್/05/2025–26 ದಿನಾಂಕ : 15.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಐಟಂ ದರದ ಆಧಾರದ ಮೇಲೆ ಕೆಡಬ್ಲ್ಯೂ–2/3/4 ಸ್ಟ್ಯಾಂಡರ್ಡ್ ಬಿಡ್ ದಾಖಲೆಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಅಥವಾ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ/ ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಅನುಮೋದಿತ ಕಾಮಗಾರಿಗಳ ಹೆಸರು
1.	ವಾರ್ಡ್ ನಂ.133 ಬಸವೇಶ್ವರ ನಗರದಲ್ಲಿ ಸಿವಿಲ್ ಕಾಮಗಾರಿಗಳು ಸೇರಿದಂತೆ ನೇತಾಜಿ ಸುಭಾಷ್ ಚಂದ್ರ ಬೋಸ್ ಮಿನಿ ಅರಣ್ಯದಲ್ಲಿ ಭಗವಾನ್ ಶ್ರೀ ಬಸವೇಶ್ವರ ಪ್ರತಿಮೆ ನಿರ್ಮಾಣ. ಅಂದಾಜು ವೆಚ್ಚ : ರೂ.30.00 ಲಕ್ಷಗಳು, ಇಎಂಡಿ ಮೊತ್ತ ರೂ. 75,000.00.
2.	ರಾಜಾಜಿನಗರ ವಾರ್ಡ್ ನಂ.132 ರ ಕಾರ್ಡ್ ರಸ್ತೆಯ ಮೋದಿ ಜಂಕ್ಷನ್‌ನಲ್ಲಿ ಬಸವೇಶ್ವರ ಪ್ರತಿಮೆ ನಿರ್ಮಾಣದ ಕಾಮಗಾರಿ. ಅಂದಾಜು ವೆಚ್ಚ : ರೂ.120.00 ಲಕ್ಷಗಳು, ಇಎಂಡಿ ಮೊತ್ತ ರೂ. 1,20,000.00.

ಟೆಂಡರ್‌ನ ಕಾರ್ಯಸೂಚಿ: (ಕ್ರಮ ಸಂಖ್ಯೆ 1) : (1) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯು : **26.05.2025 ರಿಂದ 16:00 ಗಂಟೆಗಳವರೆಗೆ (2)** ಹಣಕಾಸು ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯು: **27.05.2025 ರಂದು 16:00 ಗಂಟೆಗೆ.**

ಟೆಂಡರ್‌ನ ಕಾರ್ಯಸೂಚಿ: (ಕ್ರಮ ಸಂಖ್ಯೆ 2) : (1) ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **26.05.2025 ರಂದು ಸಂಜೆ 16:00 ಗಂಟೆಯವರೆಗೆ. (2)** ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **29.05.2025 ರಂದು 16:00 ಗಂಟೆಗೆ,** ಕಾರ್ಯಪಾಲಕ ಅಭಿಯಂತರರ ಕಛೇರಿ, (ರಾಜಾಜಿನಗರ ವಿಭಾಗ), ಸರ್ ಎಂ ವಿಶ್ವೇಶ್ವರಯ್ಯ ವಾಣಿಜ್ಯ ಸಂಕೀರ್ಣ, 12ನೇ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **02.06.2025 ರಿಂದ 16:00 ಗಂಟೆಗಳವರೆಗೆ (4)** ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **03.06.2025 ರಂದು 16:00 ಗಂಟೆಗೆ (5)** ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ ಹಣಕಾಸು ಬಿಡ್ ಪ್ರಸ್ತಾವನೆಗಳನ್ನು ತೆರೆಯುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ

SANJEEVINI-Karnataka State Rural Livelihood Promotion Society
Skill Development, Entrepreneurship and Livelihood Department
Office of the Mission Director, Sanjeevini-KSRLPS
4, 2nd Floor, MYSUGAR Building, J.C. Road, Near Town Hall
Bengaluru-560002 email: nrlmkarnataka@gmail.com

EXPRESSION OF INTEREST (EOI)

Subject: Inviting Proposals under Captive Employment Deen Dayal Upadhya Grameen Kaushalya Yojana 2.0 (DDU-GKY 2.0) project in the State of Karnataka

Sanjeevini-Karnataka State Rural Livelihood Promotion Society (KSRLPS), under the Skill Development, Entrepreneurship and Livelihood Department, Government of Karnataka is implementing Deen Dayal Upadhya Grameen Kaushalya Yojana (DDU-GKY). Sanjeevini - KSRLPS invites proposals from Agencies who are registered under Ministry of Rural Development (MoRD), Government of India and are having a valid Permanent Registration Number (PRN) for the implementation of Deen Dayal Upadhaya Grameena Kaushalya Yojana 2.0 (DDU-GKY 2.0) project in the State of Karnataka. Captive Employer Agencies must be empaneled as per Notification No. 18/2020, issued by the Ministry of Rural Development (MoRD), Government of India. Guidelines and Standard Operating Procedures (SOP) of a Captive Employment would be applicable for Captive Employment projects.

The agencies having expertise and willingness to impart high quality training and provide placement opportunities in the sectors like IT-ITes, Fashion Technology, BFSI, Food Processing, Domestic Worker, Healthcare, Automotive, Aerospace and Aviation, Green Jobs, Management and Entrepreneurship & Professional, Telecom, People with Disability, Logistics and Supply Chain Management, Media & Entertainment, Retail and Tourism and Hospitality (but not limited to) are encouraged to submit their proposal. For detailed information you may visit the portal **https://ksrlps.karnataka.gov.in**

The Agencies should submit the proposal adhering to the procedures and guidelines of DDU-GKY 2.0 Captive Employment published by MoRD, GoI along with the non- refundable Application fee of Rs. 25,000/- (Twenty-Five Thousand Rupees only) plus applicable GST via MoRD portal online **https//kaushal.rural.gov.in.** After clearing the initial screening, the applicant agencies shall be Intimated to deposit Rs. 1,25,000/- (One Lakh Twenty-Five Thousand Rupees only) plus applicable GST for Quality Appraisal (QA). The Application fee for initial screening of proposal should be paid through NEFT/RTGS in favor of Karnataka State Rural Livelihood Promotion Society (KSRLPS) payable at Bengaluru, with the following Bank detail:

Account Name: Karnataka State Rural Livelihood Promotion Society (KSRLPS)
Account Number: 0431101206814
Bank Name: Canara Bank
IFSC Code: CNRB0000431
Bank Address: 19/7, Maruthi Mansion, Cunningham Road, Bengaluru – 560052.

The last date for submitting the proposal will be on or before **06.06.2025.** For more information and program guidelines you may visit the MoRD portal **kaushal.rural.gov.in.** The State Project Approval Committee (PAC) will be the final decision-making authority.

For any queries, please contact C B Patil, SPM, PIA - C&D, 7406062947, and Narendra K C, SPM, Finance, 9980755516 ddugkysrlmkarnataka@gmail.com, nrlmkarnataka@gmail.com

Sd/-
Mission Director
National Livelihood Mission, Karnataka

DIPR/CP/697/CCL/2025-26

SANJEEVINI-Karnataka State Rural Livelihood Promotion Society Skill Development,
Entrepreneurship and Livelihood Department
#4, 2ND FLOOR, MYSUGAR Building, J.C Road,
Near Town Hall, Bengaluru-560002
Email:nrlmkarnataka@gmail.com Telephone No.080-29540333

Expression of Interest (EoI)

Subject: Inviting Proposals under Deen Dayal Upadhya Grameen Kaushalya Yojana 2.0 (DDU-GKY 2.0) project in the State of Karnataka

Sanjeevini - Karnataka State Rural Livelihood Promotion Society (KSRLPS), under the Skill Development, Entrepreneurship and Livelihood Department, Government of Karnataka is implementing Deen Dayal Upadhya Grameen Kaushalya Yojana (DDU-GKY). Sanjeevini KSRLPS invites proposals from the Agencies who are registered under Ministry of Rural Development, Government of India and are having valid Permanent Registration Number (PRN) for the implementation of Deen Dayal Upadhaya Grameena Kaushalya Yojana 2.0 (DDU-GKY 2.0) project for the target of 3395 candidates in the State of Karnataka.

The agencies having expertise and willingness to impart high quality training and provide placement opportunities in the sectors like IT-ITes, Fashion Technology, BFSI, Food Processing, Domestic Worker, Healthcare, Automotive, Aerospace and Aviation, Green Jobs, Management and Entrepreneurship & Professional, Telecom, People with Disability, Logistics and Supply Chain Management, Media & Entertainment, Retail, Tourism and Hospitality (but not limited to) are encouraged to submit their proposals. For detailed information you may visit the portal **https://ksrlps.karnataka.gov.in.**

The Agencies should submit the proposal online through the Ministry of Rural Development (MoRD) designated portal **https//kaushal.rural.gov.in** adhering to the procedures and guidelines of DDU-GKY 2.0 published by Ministry of Rural Development (MoRD) along with the **non-refundable Application fee of Rs. 25,000/-** (Twenty-Five Thousand Rupees only) **plus applicable GST.** After clearing/passed the initial screening, the applicant agencies shall be intimated to deposit Rs. 1,25,000/- (One Lakh Twenty-Five Thousand Rupees only) plus applicable GST for Quality Appraisal (QA). The Application fee for initial screening of proposal should be paid through **NEFT/RTGS** in favor of **Karnataka State Rural Livelihood Promotion Society (KSRLPS)** payable at Bengaluru, with the following Bank detail:

Account Name: Karnataka State Rural Livelihood Promotion Society (KSRLPS) Account Number: 0431101206814, **Bank Name:** Canara Bank, **IFSC Code:** CNRB0000431, **Bank Address:** 19/7, Maruthi Mansion, Cunningham Road, Bengaluru — 560052.

The last date for submitting the proposal will be on or before 06.06.2025. For more information and program guidelines you may visit the MoRD portal kaushal.rural.gov.in. The State Project Approval Committee (PAC) will be the final decision-making authority.

For any queries, please contact C B Patil, SPM, PIA - C&D, 7406062947, and Narendra K C, SPM, Finance, 9980755516 ddugkysrlmkarnataka@gmail.com, nrlmkamataka@gmail.com

Sd/-
Mission Director
National Livelihood Mission
Karnataka

DIPR/CP/696/AKAR/2025-26

ಸುಭಾಷಿತ

ಹಿರಿಯರು ಹೇಳಿದ ಮಾತೂ ಇರಲಿ, ನಾವೂ ವಿಚಾರ ಮಾಡೋಣ, ತಿಳಿದುಕೊಳ್ಳೋಣ, ತಿಳಿದು ನಡೆಯೋಣ ಎನ್ನುವುದು ಪುನರುಜ್ಜೀವನದ ಲಕ್ಷಣ.

–ಬಿ.ಎಂ.ಶ್ರೀ

ಸೇನಾಧಿಕಾರಿಯ ಬಗ್ಗೆ ಕೀಳು ಮಾತು ಸಚಿವ ವಿಜಯ್ ವಿರುದ್ಧ ಕಠಿಣ ಕ್ರಮ ಆಗಲಿ

ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಬಗ್ಗೆ ಮಾಧ್ಯಮ ಪ್ರತಿನಿಧಿಗಳಿಗೆ ಅಧಿಕೃತವಾದ ಮಾಹಿತಿ ಒದಗಿಸುತ್ತಿದ್ದ ತಂಡದ ಭಾಗವಾಗಿದ್ದ ಕರ್ನಲ್ ಸೋಫಿಯಾ ಖುರೇಷಿ ಅವರ ಬಗ್ಗೆ ಮಧ್ಯಪ್ರದೇಶದ ಬುಡಕಟ್ಟು ವ್ಯವಹಾರಗಳ ಸಚಿವ ವಿಜಯ್ ಶಾ ಅವರು ಆಡಿರುವ ಮಾತುಗಳು ತಪ್ಪು, ಅಷ್ಟೇ ಅಲ್ಲ ಅವು ದ್ವೇಷದಿಂದ ಕೂಡಿವೆ. ಪಾಕಿಸ್ತಾನದಲ್ಲಿನ ಭಯೋತ್ಪಾದಕರಿಗೆ ಅವರ ಸಹೋದರಿಯಿಂದಲೇ ಪಾಠ ಕಲಿಸಲಾಗಿದೆ ಎಂದು ಸಚಿವ ವಿಜಯ್ ಶಾ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುವಾಗ ಹೇಳಿದ್ದಾರೆ. 'ನಮ್ಮ ಹೆಣ್ಣುಮಕ್ಕಳನ್ನು ವಿಧವೆಯರನ್ನಾಗಿಸಿದವರ ಬಳಿ ನಾವು ಅವರದೇ ಸಹೋದರಿ ಒಬ್ಬರನ್ನು ಕಳುಹಿಸಿ ಪಾಠ ಕಲಿಸಿದೆವು' ಎಂದು ಅವರು ಹೇಳಿದ್ದಾರೆ.

ಇಂತಹ ಮಾತುಗಳಿಗೆ ಸಹಜವಾಗಿಯೇ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಮಾತುಗಳನ್ನು ಖಂಡಿಸಲಾಗಿದೆ. ಸಚಿವರ ವಿರುದ್ಧ ಕ್ರಮ ಜರುಗಿಸಬೇಕು ಎಂಬ ಆಗ್ರಹವೂ ಬಂದಿದೆ. ಸಚಿವ ಆಡಿರುವ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿರುವ ಮಧ್ಯಪ್ರದೇಶ ಹೈಕೋರ್ಟ್, ಆ ಮಾತುಗಳು 'ಕ್ಯಾನ್ಸರ್‌ನಂತೆ' ಎಂದೂ 'ಅಪಾಯಕಾರಿ' ಎಂದೂ ಹೇಳಿದೆ. ಸಚಿವ ವಿಜಯ್ ಶಾ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶಿಸಿದೆ. ಅವರ ಮಾತುಗಳನ್ನು ಬಿಜೆಪಿಯ ಮಧ್ಯಪ್ರದೇಶ ಘಟಕ ಕೂಡ ಖಂಡಿಸಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಈ ಮಾತುಗಳ ಬಗ್ಗೆ ಪಕ್ಷದ ರಾಜ್ಯ ಘಟಕದಿಂದ ವರದಿ ತರಿಸಿಕೊಳ್ಳಲು ಮುಂದಾಗಿದ್ದಾರೆ ಎಂದು ಮಾಧ್ಯಮ ವರದಿಗಳು ಹೇಳಿವೆ. ಆಡಿರುವ ಮಾತುಗಳಿಗೆ ಕ್ಷಮೆ ಯಾಚಿಸಿರುವ ವಿಜಯ್ ಶಾ, ಅಂತಹ ಅರ್ಥ ಬರುವ ಮಾತುಗಳನ್ನು ಆಡುವ ಉದ್ದೇಶ ಇರಲಿಲ್ಲ ಎಂದಿದ್ದಾರೆ. ಆದರೆ ಪರಿಸ್ಥಿತಿಯು ಈ ರೀತಿ ಆದಾಗಲೆಲ್ಲ ರಾಜಕೀಯ ಮುಖಂಡರು ಈ ಬಗೆಯಲ್ಲಿ ಕ್ಷಮೆ ಯಾಚಿಸುವುದು ಮಾಮೂಲಾಗಿದೆ, ಇಂತಹ ಗಂಭೀರ ಸಂದರ್ಭಗಳಲ್ಲಿ ಇವುಗಳನ್ನು ನಿಜವಾದ ಕ್ಷಮೆ ಯಾಚನೆ ಎಂದು ಪರಿಗಣಿಸಲು ಆಗದು. ಎಫ್‌ಐಆರ್ ದಾಖಲಿಸುವಂತೆ ಹೈಕೋರ್ಟ್ ನೀಡಿದ ಆದೇಶ ಪ್ರಶ್ನಿಸಿ ವಿಜಯ್ ಶಾ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಇದು ಅವರ ಕ್ಷಮಾಪಣೆಯು ಎಷ್ಟು ಪ್ರಾಮಾಣಿಕವಾದುದು ಎಂಬುದನ್ನು ಹೇಳುತ್ತಿದೆ. ವಿಜಯ್ ಶಾ ಅವರು ದೇಶದ ಸಶಸ್ತ್ರ ಪಡೆಗಳ ಬಗ್ಗೆ ಕೆಟ್ಟ ಮಾತು ಆಡಿದ್ದಾರೆ, ಕೋರ್ಟ್ ಹೇಳಿರುವಂತೆ ದೇಶದ ಸೇನೆಯು ಸಾರ್ವಜನಿಕ ಸೇವೆಯ ಅತ್ಯುತ್ತಮ ಗುಣಗಳನ್ನು ಮೈಗೂಡಿಸಿಕೊಂಡಿರುವ ಮಹಾನ್ ಸಂಸ್ಥೆ. ಅಲ್ಲದೆ, ವಿಜಯ್ ಶಾ ಅವರು ದೇಶದ ಸೇವೆಯಲ್ಲಿ ತೊಡಗಿರುವ ಹೆಣ್ಣುಮಗಳೊಬ್ಬಳ ಬಗ್ಗೆ ಕೀಳಾಗಿ ಮಾತನಾಡಿದ್ದಾರೆ. ಅವರ ಮಾತುಗಳು, ಯಾವುದೇ ಮುಸ್ಲಿಂ ವ್ಯಕ್ತಿಯ ಹೆಸರನ್ನು ಭಯೋತ್ಪಾದನೆಯ ಜೊತೆ ಬೆಸೆಯುವ ಕೆಟ್ಟ ಚಾಳಿಯೊಂದನ್ನು ತೋರಿಸುತ್ತಿವೆ. ಈ ರೀತಿ ಮಾತನಾಡುವುದು ದ್ವೇಷದ ಕೃತ್ಯವಾಗುತ್ತದೆ. 'ಭಯೋತ್ಪಾದನೆಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಪ್ರತಿಯೊಬ್ಬ ಪ್ರಜೆ, ಪ್ರತಿಯೊಂದು ಸಮುದಾಯ, ಪ್ರತಿಯೊಂದು ವರ್ಗ, ಪ್ರತಿಯೊಂದು ರಾಜಕೀಯ ಪಕ್ಷ ಒಗ್ಗಟ್ಟಿನಿಂದ ಏಕಕಂಠದಿಂದ ಆಗ್ರಹಿಸಿದ್ದವು' ಎಂದು ಪ್ರಧಾನಿಯವರು ಹೇಳಿರುವ ಸಂದರ್ಭದಲ್ಲೇ ವಿಜಯ್ ಶಾ ಈ ಕೀಳು ಮಾತು ಆಡಿದ್ದಾರೆ. ವಿಜಯ್ ಶಾ ಅವರನ್ನು ರಾಜ್ಯದ ಸಂಪುಟದಿಂದ ಕೈಬಿಡಬೇಕು. ಆಗ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗಿದೆ ಎಂಬುದು ದೇಶದ ಎಲ್ಲರಿಗೂ ತಿಳಿಯುತ್ತದೆ. ಆಡಿರುವ ಮಾತುಗಳಿಗೆ ಕಾನೂನಿನ ಕ್ರಮ ಎದುರಿಸುವಂತೆ ಮಾಡಬೇಕು.

ದ್ವೇಷದ ಕೃತ್ಯಕ್ಕೆ ಸಮನಾದ ಮಾತುಗಳನ್ನು ಆಡಿರುವ ವಿಜಯ್ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು, ಅವರು ಕಾನೂನಿನ ಕ್ರಮ ಎದುರಿಸುವಂತೆ ಮಾಡಬೇಕು

ಸಚಿವ ವಿಜಯ್ ಆಡಿರುವ ಮಾತುಗಳನ್ನು ಉಪೇಕ್ಷೆ ಮಾಡುವಂತಿಲ್ಲ. ಏಕೆಂದರೆ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮತ್ತು ಅವರ ಮಗಳ ಮೇಲೆ ಆನ್‌ಲೈನ್ ವೇದಿಕೆಗಳ ಮೂಲಕ ಈಚೆಗೆ ವಾಗ್ದಾಳಿ ನಡೆಸಲಾಗಿತ್ತು. ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮದ ಕುರಿತಾಗಿ ಮಿಸ್ರಿ ಅವರು ಮಾಹಿತಿ ಒದಗಿಸಿದ್ದಾರೆ ಎಂಬುದೇ ಇದಕ್ಕೆ ಕಾರಣವಾಗಿತ್ತು. ತಮ್ಮನ್ನು ಗುರಿಯಾಗಿಸಿಕೊಂಡು ಬಂದ ಮಾತಿನ ಬಾಣಗಳ ಕಾರಣದಿಂದಾಗಿ ಮಿಸ್ರಿ ಅವರು ತಮ್ಮ 'ಎಕ್ಸ್' ಖಾತೆಯನ್ನು ಬೇರೊಬ್ಬರ ವೀಕ್ಷಣೆಗೆ ಲಭ್ಯವಾಗದಂತೆ ಮಾಡಬೇಕಾಯಿತು. ಸರ್ಕಾರದ ತೀರ್ಮಾನವನ್ನು ದೇಶವಾಸಿಗಳಿಗೆ ತಿಳಿಸುವ ಕೆಲಸವನ್ನಷ್ಟೇ ಮಿಸ್ರಿ ಮಾಡಿದ್ದರು. ಆದರೆ ಮಿಸ್ರಿ ಅವರನ್ನು ಗುರಿಯಾಗಿಸಿಕೊಂಡು ಅವಹೇಳನಕಾರಿ ಮಾತುಗಳನ್ನು ಬರೆಯಲಾಯಿತು. ತಮ್ಮ ಕರ್ತವ್ಯವನ್ನು ನಿಭಾಯಿಸಿದ, ದೇಶದ ಪ್ರಮುಖ ರಾಜತಾಂತ್ರಿಕರಾದ ಮಿಸ್ರಿ ಅವರ ವಿರುದ್ಧದ ಅವಹೇಳನಕಾರಿ ಮಾತುಗಳಿಗೆ ಪ್ರತಿಕ್ರಿಯೆ ನೀಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡದೇ ಇದ್ದುದು ದುರದೃಷ್ಟಕರ.

'ಗ್ಯಾರಂಟಿ'ಗಳ ಜತೆಗೆ ಅಭಿವೃದ್ಧಿಯ ಖಾತರಿಯೂ ಸರ್ಕಾರದ ಆದ್ಯತೆಯಾಗಲಿ

ಸರ್ಕಾರಕ್ಕೆ ಎರಡು ವರ್ಷ; ಮುಂದೆ...

ಗತಿಬಿಂಬ

ವೈ.ಗ. ಜಗದೀಶ್

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಎರಡು ವರ್ಷ ಪೂರೈಸುವ ಹೊಸ್ತಿಲಿನಲ್ಲಿದೆ. ಬಹುಮತ ಇರುವ ಸರ್ಕಾರವನ್ನು ಅಸ್ಥಿರಗೊಳಿಸುವ ಕ್ಷುದ್ರ ರಾಜಕಾರಣವನ್ನು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ನಡೆಸುತ್ತಲೇ ಬಂದಿದೆ. ಅಂತಹ ವಿಷಮ ಪರಿಸ್ಥಿತಿಯೊಳಗೆ, ಬಲಿಷ್ಠ ಬಿಜೆಪಿಯ ಎದುರಾಳಿ ಪಕ್ಷದ ಸರ್ಕಾರವೊಂದು ಎರಡು ವರ್ಷ ಪೂರ್ಣಗೊಳಿಸುವುದು ಸವಾಲಿನ ಕೆಲಸ. ಅನುದಾನ ಹಂಚಿಕೆಯಲ್ಲಿ ತಾರತಮ್ಯ, ನೀಡಿಕೆಯಲ್ಲಿ ವಿಳಂಬ, ಅಸಹಕಾರದ ನಡುವೆಯೇ ಹಲವು ಏಳು-ಬೀಳುಗಳನ್ನು ಕಂಡಿರುವ ಸರ್ಕಾರ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ. ಈ ಹೊತ್ತಿನೊಳಗೆ ಹಿಂದಣ ಹೆಜ್ಜೆಗಳ ತಪ್ಪುಗಳ ವಿಮರ್ಶೆ, ಮುಂದಣ ನಡೆಯತ್ತ ಬೆಳಕು ಹಾಯಿಸಿಕೊಳ್ಳದೇ ಹೋದರೆ, 2028ರ ವಿಧಾನಸಭೆ ಚುನಾವಣೆ ಕಾಂಗ್ರೆಸ್ ಪಾಲಿಗೆ ಕತ್ತಲೆಯ ಕೂಪವಾದೀತು.

ಸರ್ಕಾರ ನಡೆಸುವವರು ಸಾಗಿ ಬಂದ, ಸಾಗುತ್ತಿರುವ ಹಾದಿ ನೋಡಿದರೆ, ಈ ಸುಡು ಎಚ್ಚರ ಕಾಂಗ್ರೆಸ್‌ನವರಲ್ಲಿ ಕಾಣಿಸುತ್ತಿಲ್ಲ. ನಡೆಯುವವರು–ಓಡುವವರು ಎಡವಿ ಬೀಳುವುದು ಸಹಜ; ಸಚಿವರು, ನಾಯಕರು ಎದುರಿಸಿದ ಆಪಾದನೆಗಳು, ತನಿಖೆಗಳು, ಮೈಮೇಲೆ ಎಳೆದುಕೊಂಡ ವಿವಾದಗಳನ್ನು ಗಮನಿಸಿದರೆ ಕೆಲವು ನಾಯಕರು ಕುಳಿತಲ್ಲೇ ನೆಲಕ್ಕೆ ಬಿದ್ದಿರುವುದು ಕಾಣಿಸುತ್ತದೆ.

ಎರಡೂವರೆ ವರ್ಷದ ಬಳಿಕ ಅಧಿಕಾರ ಹಸ್ತಾಂತರವೆಂಬ ಸೊಲ್ಲು ಆಡಳಿತಾರೂಢರಲ್ಲಿ, ಅಧಿಕಾರಿಗಳಲ್ಲಿ ಹುಟ್ಟಿಸಿದ ಗೊಂದಲ ಹಾಗೂ ಅಪನಂಬಿಕೆ ಸದ್ಯಕ್ಕೆ ಮರೆಗೆ ಸರಿದಂತಿದೆ. ಆದರೆ, ಸುಮಾರು ಒಂದೂವರೆ ವರ್ಷ ಈ ಮಾತಿನ ಸುತ್ತಲೇ ಗಿರಕಿ ಹೊಡೆದ ವಾಗ್ವಾದಗಳು ಆಡಳಿತದ ಮೇಲೆ ದುಷ್ಪರಿಣಾಮ ಬೀರಿದ್ದಂತೂ ಸತ್ಯ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೇ ಎಚ್ಚರಿಕೆ ಕೊಟ್ಟರೂ ಕೆಲವರು ತಮ್ಮ ಮಾತಿನಿಂದ ಬದಿಗೆ ಸರಿಯಲಿಲ್ಲ. ಇನ್ನಿರುವ ಅವಧಿಯಲ್ಲಿ ಯಾದರೂ ಇಂತಹ ಗೊಂದಲಗಳಿಗೆ ಆಸ್ಪದ ಇಲ್ಲದಂತೆ ಆಡಳಿತ ನಡೆಸಬೇಕಾದ ಹೊಣೆ ಅಧಿಕಾರಸ್ಥರ ಮೇಲಿದೆ. ಒಂದು ವೇಳೆ ಇಂತಹ ಒಪ್ಪಂದ ಆಗಿದ್ದೇ ಆದಲ್ಲಿ, ಅದನ್ನು ಹೈಕಮಾಂಡ್ ಮತ್ತು ಶಾಸಕಾಂಗ ಪಕ್ಷದ ಸಭೆಯೊಳಗೆ ಇತ್ಯರ್ಥಪಡಿಸಿಕೊಳ್ಳಬೇಕೇ ವಿನಾ ಹಳ್ಳಿಕಟ್ಟೆಯಲ್ಲಿ ಕಾಲೆಳೆಯುವ ರೀತಿಯ ಹರಟೆಯಾಗದಂತೆ ಎಚ್ಚರ ವಹಿಸಬೇಕು. ಹಾದಿಬೀದಿಯೊಳು ಇನ್ನೊಬ್ಬರ ಹಳಿಯುತ್ತಾ, ತಮ್ಮೊಳಗೆ ಹಳಿಹಳಿಸುತ್ತಾ ಹೋದರೆ ಅದು ಸರ್ಕಾರವನ್ನು, ಪಕ್ಷವನ್ನು ಹಳ್ಳಕ್ಕೆ ದೂಡುತ್ತದೆ. ಹೀಗಾದಲ್ಲಿ, ಅದು ತಮ್ಮ ಮೇಲೆ ನಂಬುಗೆ ಇಟ್ಟು ಮತ ಹಾಕಿದ ರಾಜ್ಯದ ಜನರಿಗೆ ಮಾಡಿದ ದ್ರೋಹಕ್ಕೆ ಸಮ.

'ಬಿಜೆಪಿ ನೇತೃತ್ವದ ಸರ್ಕಾರ ಭ್ರಷ್ಟಾಚಾರದ ಆಗರವಾಗಿದೆ' ಎಂದು ಇದೇ ಕಾಂಗ್ರೆಸ್ಸಿಗರು ತಿಂಗಳು ಗಟ್ಟಲೆ ಹರತಾಳ ನಡೆಸಿದ್ದರು. ಈಗಿನ ಸರ್ಕಾರವೂ ಅದರಿಂದ ಹೊರತಾದ ಶುಭ್ರತೆಯನ್ನೇನೂ ಮೈಗೂಡಿಸಿಕೊಳ್ಳಲಿಲ್ಲ. ವಾಲ್ಮೀಕಿ ನಿಗಮದ ಬಹುಕೋಟಿ ಅಕ್ರಮ, ಸಚಿವ ಬಿ. ನಾಗೇಂದ್ರ ರಾಜೀನಾಮೆಯು ಸರ್ಕಾರಕ್ಕೆ ಆರಂಭದ ಕಪ್ಪುಚುಕ್ಕಿ. ಅದಾದ ಬಳಿಕ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪರ್ಯಾಯ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಎದುರಿಸಬೇಕಾಯಿತು. ಈ ಎರಡು ಸಂಗತಿಗಳು ಸರ್ಕಾರವನ್ನು ಬೆನ್ನು ಬಿಡದೇ ಕಾಡಿದವು. ಬಿಜೆಪಿ ನೇತೃತ್ವದ ಸರ್ಕಾರವನ್ನು ಶೇ 40ರ ಕಮಿಷನ್ ಸರ್ಕಾರ ಎಂದು ಕಾಂಗ್ರೆಸ್ ನಾಯಕರು ಜರೆದಿದ್ದರು. ಕೋವಿಡ್, ಕಾಮಗಾರಿ ಗುತ್ತಿಗೆ ಹಾಗೂ ಪೊಲೀಸ್ ನೇಮಕಾತಿಗಳಲ್ಲಿನ ಅಕ್ರಮದ ಆರೋಪಗಳನ್ನು ಬಿಜೆಪಿ ಹೊತ್ತುಕೊಂಡಿತು. ಇದನ್ನು ಜನರ ಮುಂದಿಟ್ಟೇ ಕಾಂಗ್ರೆಸ್ ಅಧಿಕಾರದ ಗದ್ದುಗೆ ಏರಿತು. ಈ ಎಲ್ಲದರ ಬಗ್ಗೆ ತನಿಖಾ ಆಯೋಗಗಳನ್ನು ಸರ್ಕಾರ ರಚಿಸಿತು. ಶೇ 40ರ ಕಮಿಷನ್ ಆರೋಪದ ಕುರಿತು ದೊಡ್ಡ ಮಟ್ಟದ ದಾಖಲೆಯು ತನಿಖಾ ಆಯೋಗಕ್ಕೆ ಲಭ್ಯವಾದಂತಿಲ್ಲ. ಕೋವಿಡ್ ಅಕ್ರಮದ ಬಗ್ಗೆ ಆಯೋಗ ವರದಿ ಕೊಟ್ಟಿದ್ದರೂ ಸರ್ಕಾರ ಇನ್ನೂ ಕ್ರಮವನ್ನೇ ಕೈಗೊಂಡಿಲ್ಲ. ಈ ಎಲ್ಲದರ ಮಧ್ಯೆಯೇ, ಈಗಿನ ಸರ್ಕಾರದಲ್ಲೂ ಶೇ 40ಕ್ಕಿಂತ ಹೆಚ್ಚು ಕಮಿಷನ್ ಪಡೆಯಲಾಗುತ್ತಿದೆ ಎಂಬ ಆಪಾದನೆಯನ್ನು ಗುತ್ತಿಗೆದಾರರ ಸಂಘ ಮಾಡಿದೆ. ಅದನ್ನೂ ತನಿಖೆಗೆ ವಹಿಸುವ ಜತೆಗೆ, ಹಿಂದೆ ಮಾಡಿದ ಆರೋಪಗಳನ್ನು ಸಾಬೀತುಪಡಿಸುವ ಜವಾಬ್ದಾರಿಯು ಸರ್ಕಾರದ ಮೇಲಿದೆ.

ಎರಡು ವರ್ಷದ ಸಂಭ್ರಮಾಚರಣೆ ವೇಳೆ, 'ನಾಡಿನ ಏಳು ಕೋಟಿ ಜನರ ಬೆಳಕು; ಗ್ಯಾರಂಟಿ ಬದುಕು' ಎಂಬ ಉದ್ಘೋಷವನ್ನು ಸರ್ಕಾರ ಮಾಡಿದೆ. 'ಗ್ಯಾರಂಟಿಗಳಿಂದ ರಾಜ್ಯದ ಆರ್ಥಿಕತೆ ದಿವಾಳಿಯಾಗಲಿದೆ' ಎಂದು ದೇಶದಾದ್ಯಂತ ಡಂಗೂರ ಬಾರಿಸಿದ್ದ ಪ್ರಧಾನಿ ನರೇಂದ್ರ ಮೋದಿಯವರು, ನಂತರ 'ಮೋದಿ ಗ್ಯಾರಂಟಿ' ಎಂದು ಘೋಷಿಸಿಕೊಂಡರು. ಬಳಿಕ ನಡೆದ ವಿವಿಧ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಯೇ 'ಗ್ಯಾರಂಟಿ' ಮೊರೆ ಹೋಗಿದ್ದು, ಈ ದಶಕದ ಅತಿ ದೊಡ್ಡ ವ್ಯಂಗ್ಯ. ಗ್ಯಾರಂಟಿಗಳು ಜನರ ಬಾಳನ್ನು ಹಸನಾಗಿಸಿ, ಬಸವಳಿದಿದ್ದ ಜನರಿಗೆ ನೆಮ್ಮದಿಯ ಉಸಿರಾಡಲು ಆಮ್ಲಜನಕ ಕೊಟ್ಟಿವೆ. ಅದೇ ಹೊತ್ತಿಗೆ ಸರ್ಕಾರವು ಬಸ್ ಪ್ರಯಾಣ ದರ, ವಿವಿಧ ತೆರಿಗೆ, ನೀರು, ವಿದ್ಯುತ್, ಮದ್ಯದ ದರಗಳನ್ನೂ ಏರಿಸಿದೆ. ತನ್ನ ಮೇಲಿನ ಹೊರೆ ತಪ್ಪಿಸಲು ಸೋರಿಕೆ ತಡೆಗಟ್ಟಿ, ಪರ್ಯಾಯ ವರಮಾನ ಮೂಲ ಹುಡುಕಬೇಕಾದ ಸರ್ಕಾರ, ದರ ಏರಿಕೆಯ ದಾರಿ ಹಿಡಿದಿರುವುದು ಜನವಿರೋಧಿ ಕ್ರಮ. ಇನ್ನಾದರೂ ಜನರ ಮೇಲೆ ದರ ಸವಾರಿ ನಿಲ್ಲಿಸಿ, ಸಂಪನ್ಮೂಲಕ್ಕೆ ಅನ್ಯ ಮಾರ್ಗ ಹುಡುಕುವ 'ಆದರ್ಶ ರಾಜ್ಯ'ದ ಹಾದಿ ಹಿಡಿಯಬೇಕು.

ಗ್ಯಾರಂಟಿಗಳ ಜತೆಗೆ ಅಭಿವೃದ್ಧಿಯ ಖಾತರಿಯೂ ಸರ್ಕಾರದ ಆದ್ಯತೆಯಾಗಬೇಕು. ನೀರಾವರಿ, ಮೂಲಸೌಕರ್ಯ, ಕೈಗಾರಿಕೆಯಂತಹ ಕ್ಷೇತ್ರಗಳಲ್ಲಿ ಬೃಹತ್ ಹೂಡಿಕೆಗಳು ಈ ಮಧ್ಯೆ ಕಾಣಿಸುತ್ತಲೇ ಇಲ್ಲ. ಹಸಿವು ನೀಗಿಸುವ ತಕ್ಷಣದ ಯೋಜನೆಗಳ ಜತೆಗೆ, ಉದ್ಯೋಗ ಸೃಷ್ಟಿ, ಬಂಡವಾಳ ಆಕರ್ಷಣೆಯಂತಹ ದೂರಗಾಮಿ ಯೋಜನೆಗಳ ಕಡೆ ಕೈತೋರದಿದ್ದರೆ, ಅಭಿವೃದ್ಧಿಯ ಚಹರೆಗಳೇ ಮಾಯವಾಗಿ ಪ್ರಗತಿಯ ಸೂಚ್ಯಂಕದಲ್ಲಿ ರಾಜ್ಯ ಕೊನೆಯ ಸ್ಥಾನಕ್ಕೆ ಪೈಪೋಟಿ ನಡೆಸುವ ಪರಿಸ್ಥಿತಿ ಬಂದೊದಗುವ ಅಪಾಯವೂ ಇದೆ. ಆಡಳಿತವನ್ನು ಚುರುಕುಗೊಳಿಸಬೇಕಾದ ಸಚಿವರ ಪೈಕಿ ಕೆಲವರು ಉತ್ಸಾಹ ತೋರುತ್ತಿದ್ದರೆ, ಮತ್ತೆ ಕೆಲವರು ತಮಗೆ ವಹಿಸಿದ ಖಾತೆಯ ಬಗ್ಗೆ ಅತೀವ ನಿರ್ಲಕ್ಷ್ಯದಲ್ಲಿದ್ದಾರೆ. ಆಡಳಿತದ ಮೆದುಗತಿಗೆ ಇರುವ ಇಂತಹ ಕಾರಣಗಳನ್ನು ಪತ್ತೆ ಹಚ್ಚಿ, ಮಲಗಿದವರನ್ನು ಎಚ್ಚರಿಸುವ ಕೆಲಸವನ್ನು ಸಿದ್ದರಾಮಯ್ಯ ಮಾಡಲೇಬೇಕಿದೆ.

2023ರ ಚುನಾವಣೆ ಪೂರ್ವದಲ್ಲಿ ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ'ವನ್ನಾಗಿ ಮರು ಸ್ಥಾಪಿಸುವುದಾಗಿ ಕಾಂಗ್ರೆಸ್ ನೇತಾರರು ವಾಗ್ದಾನ ಮಾಡಿದ್ದರು. ಈವರೆಗೂ ಕೋಮುವಾದಿಗಳ ಉಪಟಳಕ್ಕೆ ಕಡಿವಾಣ ಬಿದ್ದಿಲ್ಲ. ಜಾತಿಯ ಹೆಸರಿನ ದೌರ್ಜನ್ಯಗಳು ನಡೆಯುತ್ತಲೇ ಇವೆ. ಬಿಜೆಪಿಯ ಕೆಲವು ಶಾಸಕರು ತುಸು ಲಜ್ಜೆಯೂ ಇಲ್ಲದಂತೆ ವೇದಿಕೆಯ ಮುಂದೆ ನಿಂತು, ಕೋಮುದ್ವೇಷದ ಭಾಷಣ ಮಾಡುತ್ತಲೇ ಇದ್ದಾರೆ. ಹೆಣಗಳ ಮೇಲೆ, ಕೋಮುದ್ವೇಷ ವಿಚಾರದ ಮೇಲೆ ನಡೆಸಿದ ರಾಜಕೀಯವು 2023ರಲ್ಲಿ ಫಲ ಕೊಡದೇ, ಬಿಜೆಪಿ ಹೀನಾಯ ಪೆಟ್ಟು ತಿಂದಿತ್ತು. ಹಾಗಿದ್ದರೂ ಆ ಪಕ್ಷಕ್ಕೆ ಬುದ್ಧಿ ಬಂದಂತಿಲ್ಲ. ಇಂತಹ ಮನುಷ್ಯ ದ್ವೇಷಿಗಳಿಗೆ ಕಡಿವಾಣ ಹಾಕಬೇಕಾದ ದಕ್ಷತೆಯನ್ನು ಗೃಹ ಸಚಿವ ಜಿ. ಪರಮೇಶ್ವರ ತೋರುತ್ತಿಲ್ಲ. ಇನ್ನಾದರೂ ಆ ನಿಟ್ಟಿನಲ್ಲಿ ನಿಷ್ಠುರ ಕ್ರಮವಾಗಬೇಕಿದೆ. ಸಭೆಗಳನ್ನು ನಡೆಸಿ ಎಚ್ಚರಿಕೆ ಕೊಟ್ಟರೆ ಸಾಲದು ಸಿದ್ದರಾಮಯ್ಯನವರೇ; ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದಂತೆ ನಟ್ಟು–ಬೋಲ್ಟು ಬಿಗಿ ಮಾಡುವ ಕೆಲಸ ಖಡಾಖಂಡಿತವಾಗಿ ಆಗಲೇಬೇಕಿದೆ. ಕೋಮುದ್ವೇಷ ಬಿತ್ತುವವರು, ಭ್ರಷ್ಟರು, ಕೆಲಸ ಮಾಡದ ಸಚಿವರು, ಅಧಿಕಾರಿಗಳ ಹಂತದಿಂದಲೇ ಈ ಕೆಲಸ ಆರಂಭಿಸಬೇಕಿದೆ. ಇದೇ 20ರಂದು ಹೊಸಪೇಟೆಯಲ್ಲಿ ನಡೆಯಲಿರುವ ಸಂಭ್ರಮಾಚರಣೆ ವೇಳೆ, ಈ ಘೋಷಣೆಯನ್ನು ಸಿದ್ದರಾಮಯ್ಯನವರು ಮಾಡಲಿ. ಇಲ್ಲದಿದ್ದರೆ ಹೆಚ್ಚೇನೂ ಬೇಡ, ಮೂರೇ ವರ್ಷಗಳಲ್ಲಿ ರಾಜ್ಯದ ಜನರೇ ಕಾಂಗ್ರೆಸ್‌ನ ನಟ್ಟು–ಬೋಲ್ಟು ಬಿಗಿ ಮಾಡುವುದಲ್ಲ; ನಟ್ಟು ಬೋಲ್ಟು, ಟೈರು ಎಲ್ಲವನ್ನೂ ಬಿಚ್ಚಿ ನಡುಬೀದಿಯಲ್ಲಿ ನಿಲ್ಲಿಸುತ್ತಾರೆ!

ಚುರುಮುರಿ

ಸುಳ್ಳುಗಳ ಯುದ್ಧ!

• ಬಿ.ಎನ್. ಮಲ್ಲೇಶ್

'ನಿಜವಾದ ಯುದ್ಧನ ಸೋಲ್ಸಿ ಸುಳ್ಳಿನ ಯುದ್ಧ ಚಾಂಪಿಯನ್ ಆತಂತೆ...' ದುಬ್ಬೀರ ಹೊಸ ಗಾದೆ ಹೊಸೆದ.

'ಸತ್ಯಕ್ಕೆ ಎರಡು ಕಾಲಾದ್ರೆ ಸುಳ್ಳಿಗೆ ಸಾವಿರ ಕಾಲು ಕಣಲೆ, ಮತ್ತೆ ಚಾಂಪಿಯನ್ ಆಗ್ಲೇಬೇಕು. ಎಂತೆಂಥ ಸುಳ್ಳು ಸುದ್ದಿನೋ ಮಾರಾಯ. ವಿಲವಿಲ, ಪುಕಪುಕ, ಗಡಗಡ... ಪಾಕಿಸ್ತಾನ ಚಪಾಟೆದ್ದು ಹೋತು ಅಂತಿದ್ರಪ. ಏನೂ ಆಗ್ಲಿಲ್ಲ' ಗುಡ್ಡೆ ನಕ್ಕ.

'ನಮ್ ಟಿ.ವಿ.ಗಳು, ಮೊಬೈಲ್‌ಗಳು ಬ್ರಹ್ಮೋಸ್ ಕ್ಷಿಪಣಿಗಿಂತ ಸ್ಪೀಡು. ಸೈನಿಕರು ನೂರು ಕ್ಷಿಪಣಿ ಹಾರಿಸೋ ಅಷ್ಟರಲ್ಲಿ ಈ ಸುಳ್ ಸುದ್ದಿ ವೀರರು ಸಾವಿರ ಕ್ಷಿಪಣಿ ಹಾರಿಸಿರ್ತಾರೆ'.

'ಲೇ ತೆಪರ, ಆ ಟ್ರುಂಪಣ್ಣ ಏನೋ ಟ್ರೇಡ್ ನಾಟಕ ಶುರು ಮಾಡಿದಂಗಿತ್ತಲ್ಲೋ' ಮಂಜಮ್ಮ ಕೇಳಿದಳು.

'ಅದಾ... ಟ್ರುಂಪಣ್ಣ ಪಾಕಿಸ್ತಾನಕ್ಕೆ ಫೋನ್ ಮಾಡಿ 'ಆ ಚೀನಾ ಪಟಾಕಿ ಇಟ್ಕಂಡ್ ಏನ್ಮಾಡ್ತೀರಿ, ನಮ್ಮವು ಮಿಸೈಲು, ಬಾಂಬು ತಗಳ್ರಿ, ಗೆಲ್ತೀರಿ' ಅಂದ್ನಂತೆ. ಅದೇ ತರ ಭಾರತಕ್ಕೆ ಫೋನ್ ಮಾಡಿ 'ಆ ಪಾಕಿಸ್ತಾನನ ಒಂದೇ ಸಲಕ್ಕೆ ಢುಂ ಅನ್ಸೋ ಬಾಂಬ್ ಅದಾವೆ ಬೇಕಾ' ಅಂದ್ನಂತೆ. ಭಾರತ ಬ್ಯಾಡ ಅಂದಿದ್ಕೆ 'ಸರಿ ಕದನ ವಿರಾಮ ಮಾಡ್ಕಳಿ' ಅಂದ್ನಂತೆ'.

'ಇದ್ನ ನಿಂಗ್ಯಾರು ಹೇಳಿದ್ರು? ವಾಟ್ಸಾಪ್ ಕತಿನಾ? ನಿನ್ತೆಲಿ. ಮೊನ್ನಿ ವಾಟ್ಸಾಪ್‌ನಾಗೆ ಬೆಂಗಳೂರು ಬಂದರು ನಾಶ, ಗೊರಗುಂಟೆಪಾಳ್ಯದ ವಾಯುನೆಲೆಯಿಂದ ಕ್ಷಿಪಣಿ ಹಾರಿದ್ವು ಅಂತ ಬಂದಿತ್ತು. ಬೆಂಗಳೂರಲ್ಲಿ ಸಮುದ್ರ ಎಲ್ಲೈತಿ? ಗೊರಗುಂಟೆಪಾಳ್ಯದಾಗೆ ವಾಯುನೆಲೆ ಎಲ್ಲೈತಿ?' ಗುಡ್ಡೆಗೆ ನಗು.

'ಅಲ್ಲೋ ಟಿ.ವಿ ಪತ್ರಕರ್ತ ತೆಪರೇಸಿ, ಮೊನ್ನಿ ಕಾಶ್ಮೀರದ ಗಡಿಯಿಂದ ಯುದ್ಧದ ವರದಿ ಮಾಡ್ತಿದ್ದೀನಿ ಅಂತ ನಿಮ್ ಟೀವೀಲಿ ಪುಂಗ್ತಿದ್ನೆಲ್ಲ, ಆಗ ನಿಜವಾಗ್ಲು ಎಲ್ಲಿದ್ದಿ ಹೇಳಲೆ' ದುಬ್ಬೀರ ಕೇಳಿದ.

'ಅವನಾ? ಇಲ್ಲೇ ಗೊರಗುಂಟೆಪಾಳ್ಯದ ಪಕ್ಕ ಯಲಹಂಕದಲ್ಲಿದ್ದ' ಕೊಟ್ರೇಶಿ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

'ಸ್ಮಾರ್ಟ್' ಕೆಲಸ: ಕೇರಳ ಮಾದರಿ

ನಾನು ಕೇರಳದ ಮಹಾನ್ ಅಭಿಮಾನಿಯೇನಲ್ಲ. ಆದರೆ ಅವರು ಕೈಗೊಳ್ಳುವ ಸುಂದರವಾದ ಅಭಿವೃದ್ಧಿ ಕಾರ್ಯಗಳು ಮತ್ತು ಸ್ಮಾರ್ಟ್ ಸಿಟಿ ಯೋಜನೆಯ ನಿಧಿಯನ್ನು ಉತ್ತಮವಾಗಿ ಬಳಸಿಕೊಂಡಿರುವುದನ್ನು ನೋಡಲು ಸಂತೋಷವಾಗುತ್ತದೆ. ಬೆಂಗಳೂರು, ಹೈದರಾಬಾದ್, ಚೆನ್ನೈನಂತೆ ಅಲ್ಲದೆ ತಿರುವನಂತಪುರವು ಸ್ಥಳೀಯ ಸಂಸ್ಥೆ ಮತ್ತು ಕೈಗಾರಿಕೆಗಳಿಂದ ಬರುವ ಅತ್ಯಂತ ಸಣ್ಣ ಪ್ರಮಾಣದ ವರಮಾನ ಹೊಂದಿದೆ. ಅಷ್ಟಾದರೂ ಅವರು ತಮ್ಮ ನಗರಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುತ್ತಾರೆ. ನಾವು ಕಲಿಯಬೇಕಾದುದು ಬಹಳಷ್ಟಿದೆ...

ಅವಿನಾಶ್ ಬೆಂಗಳೂರು, ಸಾಫ್ಟ್‌ವೇರ್ ಎಂಜಿನಿಯರ್

ಕಿಡಿನುಡಿ

ವಾರ್ಷಿಕ ಕನ್ನಡಿಗ ಪ್ರಶಸ್ತಿಯ ಮಾದರಿಯಲ್ಲಿ ಇನ್ಮುಂದೆ ವಾರ್ಷಿಕ ಭ್ರಷ್ಟ ಎಂಬ ಪ್ರಶಸ್ತಿಯನ್ನು ಶುರು ಮಾಡಬೇಕು. ಅತಿ ಹೆಚ್ಚು ಅಂಕ ಪಡೆದ ವ್ಯಕ್ತಿಯನ್ನು ಟೌನ್‌ಹಾಲ್‌ನಲ್ಲಿ ಸನ್ಮಾನಿಸಿ ಗೌರವಿಸಬೇಕು. ಸಮಾಜದಲ್ಲಿ ಅವರದೇ ಆದ ಒಂದು ಘನತೆ ಇದೆ. ಅವರನ್ನು ಬೆಳಕಿಗೆ ತರುವ ಕೆಲಸ ಮಾಡಬೇಕು. ಜೈ ಹೋ ಭ್ರಷ್ಟಾಚಾರಿ!

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಮಂಗಳವಾರ, 16-5-2000

• **'ಇನ್‌ಸ್ಪೆಕ್ಟರ್ ರಾಜ್'ಗೆ ಅವಕಾಶ ಇಲ್ಲ**

ನವದೆಹಲಿ, ಮೇ 15 (ಯುಎನ್‌ಐ)– ಉದ್ಯಮದ ತೀವ್ರ ಪ್ರತಿಭಟನೆಗೆ ಮಣಿದ ಕೇಂದ್ರ ಸರ್ಕಾರ ಇಂದು ಮಾಹಿತಿ ತಂತ್ರಜ್ಞಾನ ಮಸೂದೆಯಿಂದ ಎರಡು ವಿವಾದಾತ್ಮಕ ಅಂಶಗಳನ್ನು ಕೈಬಿಟ್ಟಿತು.

ಪ್ರತಿಯೊಂದು ಇಂಟರ್‌ನೆಟ್ ಪೋರ್ಟಲ್‌ನ ನೋಂದಣಿ ಮತ್ತು ಸೈಬರ್ ಕೆಫೆಗಳ ಮೇಲೆ ಪೊಲೀಸ್ ದಾಳಿಗೆ ಅವಕಾಶ ಮಾಡಿಕೊಡುವ ಮೂಲಕ 'ಇನ್‌ಸ್ಪೆಕ್ಟರ್ ರಾಜ್' ವ್ಯವಸ್ಥೆಯನ್ನು ಜಾರಿಗೆ ತರುವ ಎರಡು ಅಂಶಗಳನ್ನು ಕಿತ್ತುಹಾಕಬೇಕು ಎಂದು ಮಾಹಿತಿ ತಂತ್ರಜ್ಞಾನ ಉದ್ಯಮ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರಿತ್ತು. ಈ ಅಂಶಗಳನ್ನು ಮಸೂದೆಯಲ್ಲಿ ಸೇರಿಸಿದ್ದರೆ ಯಾವುದೇ ವ್ಯಕ್ತಿ ಆರಂಭಿಸುವ ಎಲ್ಲ ಪೋರ್ಟಲ್ ಅಥವಾ ವೆಬ್‌ಸೈಟ್‌ಗಳನ್ನು ಕಂಟ್ರೋಲರ್ ಮುಂದೆ ನೋಂದಣಿ ಮಾಡಬೇಕಿತ್ತು.

• **ಅರಿಸಿನ ಪೇಟೆಂಟ್ ಅಮೆರಿಕದಿಂದ ರದ್ದು**

ನವದೆಹಲಿ, ಮೇ 15 (ಪಿಟಿಐ)– ಗಾಯವನ್ನು ಗುಣಪಡಿಸಲು ಅರಿಸಿನದ ಬಳಕೆಯ ಕುರಿತು ನೀಡಲಾಗಿದ್ದ ಪೇಟೆಂಟ್‌ಗೆ ಭಾರತ ಪ್ರತಿಭಟನೆ ಸೂಚಿಸಿರುವ ಹಿನ್ನೆಲೆಯಲ್ಲಿ ಅದನ್ನು ಅಮೆರಿಕ ರದ್ದುಗೊಳಿಸಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 16-5-1975

• **ಗೃಹ ಶಾಖೆಗೆ 'ಗುಪ್ತ ಸೂಚನೆ'**

ಬೆಂಗಳೂರು, ಮೇ 15– 'ಪೊಲೀಸ್ ಠಾಣೆಯಲ್ಲಿನ ಹೀನ ಕೃತ್ಯಗಳಿಗೆ ಉನ್ನತ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು'.

ರಾಜ್ಯದ ಗೃಹ ಶಾಖೆಗೆ ಈಚೆಗೆ ಮುಖ್ಯಮಂತ್ರಿ ಅರಸು ಕಳಿಸಿರುವ 'ಗುಪ್ತ ಸೂಚನೆ' ಇದು.

ಮಾರ್ಗರೆಟ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಪೇದೆಗಳಿಗೆ ವಿಧಿಸಿದ ಶಿಕ್ಷೆಯನ್ನು ಪ್ರಸ್ತಾಪಿಸಿ 'ಇದು ತೀರಾ ಸಾಮಾನ್ಯ ಶಿಕ್ಷೆ' ಎಂದು ಅಭಿಪ್ರಾಯಪಟ್ಟಿರುವ ಮುಖ್ಯಮಂತ್ರಿಯವರು, 'ಸಂಬಂಧಿಸಿದ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್‌ನನ್ನು ತತ್‌ಕ್ಷಣ ಸಸ್ಪೆಂಡ್ ಮಾಡಬೇಕಾಗಿತ್ತು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಉನ್ನತ ಅಧಿಕಾರಿಗಳು ತಮ್ಮ ಕೈಕೆಳಗಿನ ಅಧಿಕಾರಿಗಳ ಮೇಲೆ ಸಾಕಷ್ಟು ನಿಗಾ ಇಟ್ಟಂತೆ ಕಂಡುಬರುವುದಿಲ್ಲ. ಉನ್ನತ ಅಧಿಕಾರಿಗಳು ತಮ್ಮ 'ದುಷ್ಕೃತ್ಯ'ಗಳಿಗೆ ಪೊಲೀಸ್ ಪೇದೆಗಳನ್ನು ಉಪಯೋಗಿಸುತ್ತಾರೆ' ಎಂದೂ ಅವರು ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

• **ತಾಯಿಗೆ ಮಾರ್ಗರೆಟ್ ಬರೆದ ಪತ್ರ**

ಬೆಂಗಳೂರು, ಮೇ 15– 'ನಾನು ಸಾಯಲು ಸಿದ್ಧ. ಆದರೆ ಪೊಲೀಸರು ನೆಮ್ಮದಿಯಿಂದ ಇರಲಾರರು ಎಂದು ಭಾವಿಸಿರುವೆ'.

–ಹೀಗೆ, 14 ವರ್ಷ ವಯಸ್ಸಿನ ಮುಗ್ಧ ಬಾಲಕಿ ಮಾರ್ಗರೆಟ್, ಅಲಸೂರಿನ ಕೆರೆಗೆ ಧುಮುಕಿ ಸಾಯುವುದಕ್ಕಿಂತ ಮುಂಚೆ ತನ್ನ ತಾಯಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾಳೆ.

ಪೊಲೀಸ್ ಠಾಣೆಯಲ್ಲಿ ವ್ಯಕ್ತಿಯೊಬ್ಬ ತನಗೆ ಲೈಂಗಿಕ ಕಿರುಕುಳ ನೀಡಿದ್ದಾಗಿ ಪತ್ರದಲ್ಲಿ ವಿವರಿಸಿದ್ದಾಳೆ.

ಸಂಗತ

ಬೆಳಕು ಎಂಬ ತಮಸ್ಸಿನ ವೈದ್ಯ

ಇಂದು (ಮೇ 16) ಸಮೃದ್ಧ ಬದುಕಿಗೆ ಅವಕಾಶ ಕಲ್ಪಿಸುವ ಬೆಳಕಿನ ಹಬ್ಬ

• ಬಿ.ಎಸ್. ಭಗವಾನ್

ಬೆಳಕು ಇಲ್ಲದಿದ್ದರೆ ನಮ್ಮ ಭೂಗ್ರಹವು ಶೈತ್ಯ ಮತ್ತು ಬಂಜರು ಸ್ಥಳವಾಗಿರುತ್ತಿತ್ತು. ಬೆಳಕಿರುವಲ್ಲಿ ಸಮೃದ್ಧ ಬದುಕಿರುತ್ತದೆ. ಬೆಳಕು ಜ್ಞಾನದ ಪ್ರತೀಕ. ಸರಿಯಾದ ಬೆಳಕಿನಲ್ಲಿ ಸರಿಯಾದ ಸಮಯದಲ್ಲಿ ಪ್ರತಿಯೊಂದೂ ಅಸಾಮಾನ್ಯ ಎಂಬ ನುಡಿಯಿದೆ. ಜಗತ್ತನ್ನು ಬೆಳಕೆಂಬ ಮಸೂರದ ಮೂಲಕವೇ ನೋಡಿ ತಿಳಿಯಲು ಸಾಧ್ಯ. ಶಕ್ತಿಯ ಸ್ವರೂಪವಾದ ಬೆಳಕು ಬಹು ಶುದ್ಧ. ಅನನ್ಯ ವೇಗದ ಸಂಪರ್ಕ ಕಲ್ಪಿಸುವ ಅದು ಭವಿಷ್ಯವನ್ನು ಸಾಧ್ಯವಾಗಿಸುವ ಚೈತನ್ಯ. ಕತ್ತಲೆಯಲ್ಲಿ ಭೇಟಿಯಾಗುವ ಅಪೂರ್ವ ಅತಿಥಿ, ತಮಸ್ಸಿನ ವೈದ್ಯ, ಬೆಳಕು ಕಿರಿದಾದರೇನು ದಟ್ಟ ಕತ್ತಲನ್ನು ಬೆಳಗಲು... ಹೀಗೆ ಬೆಳಕಿಗೆ ಅದೆಷ್ಟು ವಿಶೇಷಣಗಳು.

ಕತ್ತಲೆಯ ನಿವಾರಣೆಗೆ ಅನಾದಿಕಾಲದಲ್ಲಿ ಪ್ರಾಣಿಗಳ ಕೊಬ್ಬು, ಕಟ್ಟಿಗೆ, ದೀಪ, ಮೋಂಬತ್ತಿಯಂತಹ ವಸ್ತುಗಳನ್ನು ಉರಿಸುತ್ತಿದ್ದರು. ಅಮೆರಿಕದ ಭೌತವಿಜ್ಞಾನಿ ಥಿಯೋಡರ್ ಮೈಮನ್ 1960ರ ಮೇ 16ರಂದು ತಾವು ಆವಿಷ್ಕರಿಸಿದ ಲೇಸರ್ ಅನ್ನು (ಲೈಟ್ ಆ್ಯಂಪ್ಲಿಫಿಕೇಷನ್ ಬೈ ಸ್ಟಿಮ್ಯುಲೇಟೆಡ್ ಎಮಿಷನ್ ಆಫ್ ರೇಡಿಯೇಷನ್) ಮೊದಲಿಗೆ ಶಸ್ತ್ರಕ್ರಿಯೆಗೆ ಯಶಸ್ವಿಯಾಗಿ ಬಳಸಿದರು. ಯುನೆಸ್ಕೊ 2018ರಲ್ಲಿ ಪ್ರತಿವರ್ಷ ಮೇ 16ರಂದು 'ಅಂತರರಾಷ್ಟ್ರೀಯ ಬೆಳಕಿನ ದಿನ'ವನ್ನಾಗಿ ಆಚರಿಸಲು ಕರೆ ನೀಡಿತು. ಶಸ್ತ್ರಚಿಕಿತ್ಸೆ, ಮುದ್ರಣ, ಬೆಸುಗೆ, ದ್ಯುತಿ ಸಂವಹನಕ್ಕೆ ವಿವಿಧ ಲೇಸರ್‌ಗಳನ್ನು ಬಳಸಲಾಗುತ್ತದೆ. ಬೆಳಕು ಆಧಾರಿತ ತಂತ್ರಜ್ಞಾನದಲ್ಲಿ ಲೇಸರ್ ಅದ್ಭುತ ಮೈಲಿಗಲ್ಲು. ಬೆಳಕಿನ ಮಹತ್ವದ ಕುರಿತು ಜನಜಾಗೃತಿ ಮೂಡಿಸುವ ಸಲುವಾಗಿ ಯುನೆಸ್ಕೊ ಈ ವಾರ್ಷಿಕ ಸಡಗರವನ್ನು ಆಯೋಜಿಸಿದೆ. ಈ ಜಾಗತಿಕ ಬೆಳಕಿನ ಹಬ್ಬವು ಬೆಳಕನ್ನು ಮೆಚ್ಚುವ ಮತ್ತು ವಿಜ್ಞಾನ, ಸಂಸ್ಕೃತಿ, ಕಲೆ, ಶಿಕ್ಷಣ ಕ್ಷೇತ್ರಗಳಲ್ಲಿ ಅದರ ಪಾತ್ರವನ್ನು ಅರಿಯುವ ಸಂದರ್ಭವಾಗಿದೆ.

'ಬೆಳಕಿನ ನಾವೀನ್ಯ ಮತ್ತು ಸಮಾಜ' ಈ ಬಾರಿಯ ಸಂಭ್ರಮದ ಧ್ಯೇಯವಾಕ್ಯವಾಗಿದೆ. ಹಾಗಾಗಿ, ಮಕ್ಕಳಿಗೆ ಬೆಳಕಿನ ವಿದ್ಯಮಾನವನ್ನು ಸ್ವಾರಸ್ಯಕರವಾಗಿ ವಿವರಿಸಲು ಈ ಸನ್ನಿವೇಶವು ಅವಕಾಶವಾಗಲಿ. ಅವರನ್ನು ವಿಜ್ಞಾನ ವಸ್ತುಪ್ರದರ್ಶನಕ್ಕೆ, ಉಪನ್ಯಾಸಕ್ಕೆ, ಕಮ್ಮಟಗಳಿಗೆ ಶಿಕ್ಷಕರು, ಹಿರಿಯರು ಕರೆದೊಯ್ಯಬಹುದು. ಮನೆಯಲ್ಲೇ ಪೆರಿಸ್ಕೋಪ್, ಕಾಮನಬಿಲ್ಲು, ಏಳು ಬಣ್ಣಗಳುಳ್ಳ ಚಕ್ರದಂತಹ ವಿನ್ಯಾಸಗಳನ್ನು ತಯಾರಿಸಲು ನಿರ್ದೇಶಿಸಬಹುದು.

ದೈನಂದಿನ ಬದುಕಿಗೆ ಮಾತ್ರವಲ್ಲ ತಂತ್ರಜ್ಞಾನದ ಅಭಿವೃದ್ಧಿಗೂ ಬೆಳಕು ಬೇಕು. ಫೈಬರ್ ಆಪ್ಟಿಕ್ ಕೇಬಲ್‌ಗಳು ದಟ್ಟ ಸಾಗರಗಳ ಮೂಲಕ ಬೆಳಕಿನ ವೇಗದಲ್ಲಿ ಮಾಹಿತಿಗಳನ್ನು ವಿಶ್ವದ ಒಂದೆಡೆಯಿಂದ ಇನ್ನೊಂದೆಡೆಗೆ ರವಾನಿಸುತ್ತವೆ. ಬೆಳಕಿನ ವಿಜ್ಞಾನ ನಮ್ಮ ಕಲ್ಪನೆಯನ್ನು ಮೀರಿ ಗ್ರಹ, ನಕ್ಷತ್ರ, ಗೆಲಾಕ್ಸಿಗಳಾಚೆಗಿನ ಬ್ರಹ್ಮಾಂಡದ ಶೋಧಕ್ಕೆ ಅನುವು ಮಾಡಿದೆ. ಬೆಳಕು ಸಂಬಂಧಿ ತಂತ್ರಜ್ಞಾನವು ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಮಂದಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿದೆ.

ಯಾವುದೇ ವಸ್ತುವಾಗಲಿ, ಶಕ್ತಿಯಾಗಲಿ ಬೆಳಕಿಗಿಂತ ವೇಗವಾಗಿ ಚಲಿಸುವುದು ಅಸಂಭವವೆಂದೇ ಪರಿಭಾವಿಸಲಾಗಿದೆ. ಎಂದಮೇಲೆ ಬೆಳಕಿಗೂ ತ್ವರಿತವಾಗಿ ಸುದ್ದಿ ಮುಟ್ಟಿಸುವ ಟಪಾಲಿನವ ಇನ್ನೊಬ್ಬನಿಲ್ಲ. ಒಂದು ವೇಳೆ ಬೆಳಕಿನ ವೇಗ ಈಗಿರುವುದರ ಮೂರನೇ ಎರಡರಷ್ಟು ಇದ್ದಿದ್ದರೆ, ಆಗ ಪರಮಾಣುವಿನ ಸ್ಫೋಟದಲ್ಲಿ ಬಿಡುಗಡೆಯಾಗುವ ಶಕ್ತಿ ಬರೀ ಒಂದು ಭಿನ್ನರಾಶಿಯಷ್ಟಿರುತ್ತಿತ್ತು!



ಭಾರತದ ಸರ್ ಸಿ.ವಿ. ರಾಮನ್ ಅವರೂ ಸೇರಿದಂತೆ ಜಗತ್ತಿನ ಹಲವು ಭೌತವಿಜ್ಞಾನಿಗಳು ಬೆಳಕಿನ ಬೆನ್ನಟ್ಟಿದವರೇ. ಹೈಗನ್, ಫೌಕಾಲ್ಟ್, ಫಿಜೋ, ನ್ಯೂಟನ್ ಅವರಂತಹ ಅತಿರಥರು ದ್ಯುತಿ ವಿಜ್ಞಾನದ ಸಂಶೋಧನೆಗೆ ತಮ್ಮ ಜೀವಮಾನವನ್ನೇ ಮುಡಿಪಿಟ್ಟರು. ಆಲ್ಬರ್ಟ್ ಐನ್‌ಸ್ಟೀನ್ ಅವರ ಅಮೋಘ ಸಾಧನೆಗಳಿಗೆ ಬೆಳಕೇ ಅಂಬಾರಿ. ಬೆಳಕಿನ ಬಹುದೊಡ್ಡ ವಿಸ್ಮಯವೆಂದರೆ ಅದೊಂದು ವಿದ್ಯುತ್ಕಾಂತ ತರಂಗ. ವಿದ್ಯುತ್ ಮತ್ತು ಕಾಂತಕ್ಷೇತ್ರದ ಎರಡು ಅಂತರಾವಲಂಬಿ ಅಲೆಗಳ ತರಂಗವದು. ಮುಕ್ತ ಆಕಾಶದಲ್ಲಿ ಬೆಳಕಿನಷ್ಟೇ ವೇಗದಲ್ಲಿ ವಿದ್ಯುತ್ಕಾಂತ ತರಂಗ ಚಲಿಸುತ್ತದೆ. ಶಬ್ದವು ಸಾಗುವುದು ವಿದ್ಯುತ್ಕಾಂತ ತರಂಗವಾಗಿಯೆ. ಬಹಳಷ್ಟು ಹಿಂದೆ ಡೆನ್ಮಾರ್ಕಿನ ವಿಜ್ಞಾನಿ ರೋಮರ್ ಬೆಳಕಿನ ವೇಗವನ್ನು ಅಳೆಯಲೆತ್ನಿಸುವ ತನಕ ಬೆಳಕಿನ ವೇಗ ಅನಂತ ಎಂದೇ ತಿಳಿಯಲಾಗಿತ್ತು.

ಮರ ಅಥವಾ ಕಟ್ಟಡದ ನೆರಳಿದ್ದರೆ ಸಸಿಗಳು ಬೆಳೆಯವು ಎನ್ನುವುದು ಅನುಭವವೇದ್ಯ. ಸಸ್ಯಗಳು ದ್ಯುತಿ ಸಂಶ್ಲೇಷಣೆ ಪ್ರಕ್ರಿಯೆಯಲ್ಲಿ ಸೂರ್ಯನ ಬೆಳಕಿನ ಶಕ್ತಿಯನ್ನು ರಾಸಾಯನಿಕ ಶಕ್ತಿಯಾಗಿ ಪರಿವರ್ತಿಸಿಕೊಳ್ಳುತ್ತವೆ. ನೀರಿನ ಅಣುಗಳನ್ನು ವಿಭಜಿಸಿ ಉಪಉತ್ಪನ್ನವಾಗಿ ಆಮ್ಲಜನಕವನ್ನು ಪಡೆದುಕೊಳ್ಳುತ್ತವೆ. ಬೆಳಕಿನ ದಿನದ ಸಂಭ್ರಮದಲ್ಲಿ 'ನಮ್ಮೊಳಗೆ ಪ್ರಜ್ವಲಿಸುವ ಬೆಳಕೇ ಅತ್ಯಂತ ಪ್ರಖರ' ಎಂಬ ಸತ್ಯವನ್ನು ಮರೆಯುವಂತಿಲ್ಲ.

ಕಣ್ಣು ಕೋರೈಸುವ ಬೆಳಕು ಎಂದಿಗೂ ಅಪಾಯಕಾರಿ. ಬೆಳಕಿನ ಮಾಲಿನ್ಯದಿಂದ ಇರುಳಾಗಸದ ವೈಭವವನ್ನು ಕಣ್ತುಂಬಿಕೊಳ್ಳಲಾಗದು. ಬೆಳಕಿನ ತೀವ್ರತೆ ಕತ್ತಲೆಯ ಮೌಲ್ಯವನ್ನು ಕಳೆಯಬಾರದು. ಬರಿಗಣ್ಣಿನಿಂದ ಖಗೋಳ ವಿದ್ಯಮಾನಗಳ ವೀಕ್ಷಣೆಗೆ ಮಹಾನಗರದಿಂದ ಕತ್ತಲೆ ಅರಸಿ ಹಲವು ಕಿ.ಮೀ.ಗಳವರೆಗೆ ಹೊರಹೋಗಬೇಕೇ? ಅಂದಹಾಗೆ ಯಾವುದೇ ಅದ್ದೂರಿಗೆ ಪಾರಂಪರಿಕ ಕಟ್ಟಡ, ನೆಲಹರವು, ಜಲಪಾತ, ವೃಕ್ಷಗಳನ್ನು ವಿದ್ಯುದ್ದೀಪಗಳಿಂದ ಅಲಂಕರಿಸಿ ಪ್ರಾಣಿಪಕ್ಷಿಗಳ ಬದುಕಿನ ಲಯ ತಪ್ಪಿಸಬಾರದಲ್ಲವೇ?

ವಾಚಕರ ವಾಣಿ

ಇಂಥ ಮಕ್ಕಳ ಸಂತತಿ ಹೆಚ್ಚಲಿ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಈಚಘಟ್ಟ ಗ್ರಾಮದಲ್ಲಿ ಇತ್ತೀಚೆಗೆ ಬಸವಣ್ಣನವರ ಜಯಂತ್ಯುತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ, ಪ್ರಸಕ್ತ ಸಾಲಿನ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ಗ್ರಾಮದ ವಿದ್ಯಾರ್ಥಿಗಳನ್ನು ಅಭಿನಂದಿಸುವ ಕಾರ್ಯಕ್ರಮ ಇತ್ತು. ಅದು ಮುಗಿಯುತ್ತಿದ್ದಂತೆಯೇ, ಎಸ್‌ಎಲ್‌ಎಲ್‌ಸಿಯಲ್ಲಿ ಶೇ 92 ಅಂಕ ಗಳಿಸಿ ಅಭಿನಂದನೆ ಸ್ವೀಕರಿಸಿದ್ದ ವಿದ್ಯಾರ್ಥಿನಿಯೊಬ್ಬಳು ತನ್ನನ್ನು ಬೇಗ ಬಸ್ಸಿಗೆ ಹತ್ತಿಸುವಂತೆ ಅಪ್ಪನನ್ನು ಒಂದೇ ಸಮನೆ ಒತ್ತಾಯಿಸುತ್ತಿದ್ದಳು. ಕಾರಣ ಕೇಳಿದಾಗ, ಆಕೆಯೊಂದಿಗೆ ಓದುತ್ತಿದ್ದ ಸ್ನೇಹಿತೆಯೊಬ್ಬಳು ನಪಾಸಾಗಿದ್ದಳು. ಆಕೆಯನ್ನು ಚೆನ್ನಾಗಿ ಓದಿಸಿ, ಬರುವ ಮರುಪರೀಕ್ಷೆಯಲ್ಲಿ ಉತ್ತೀರ್ಣಳಾಗುವಂತೆ ಮಾಡಿ, ಮುಂದಿನ ತರಗತಿಗೆ ತನ್ನೊಂದಿಗೆ ಪ್ರವೇಶ ಪಡೆದುಕೊಳ್ಳಬೇಕೆಂಬ ಮಹದಾಸೆ ಆಕೆಗಿತ್ತು. ಅದಕ್ಕಾಗಿ ತರಬೇತಿ, ಓದಿನ ಬಗ್ಗೆ ಮಾರ್ಗದರ್ಶನ, ಧೈರ್ಯ ತುಂಬಲು ತಾನು ಅವಳೊಂದಿಗಿರಬೇಕು ಎಂಬ ಕಾರಣಕ್ಕೆ ತುರ್ತಾಗಿ ಹೋಗಬೇಕೆಂದು ಬಯಸುತ್ತಿರುವುದಾಗಿ ಆಕೆಯ ತಂದೆ ಹೇಳಿದರು.

ಇದನ್ನು ಕೇಳಿದಾಗ, ಇಂತಹ ವಿದ್ಯಾರ್ಥಿಗಳು ಈಗಲೂ ಇದ್ದಾರೆಯೇ ಎನಿಸಿ ಅಚ್ಚರಿಯಾಯಿತು. ಚೆನ್ನಾಗಿ ಓದುವವರನ್ನು ಕಂಡರೆ ಜೊತೆಗಾರರು ಅಸೂಯೆ, ದ್ವೇಷ, ಮತ್ಸರ ಪಡುವುದೇ ಹೆಚ್ಚು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿಗೆ ಅಹಂಭಾವ ಇರುವುದುಂಟು. ಆದರೆ ಈ ಹೆಣ್ಣುಮಗಳು ಅದಕ್ಕಿಂತ ಭಿನ್ನವಾಗಿ ಕಂಡಳು. ಸ್ನೇಹಕ್ಕೆ ಆಕೆ ಕೊಟ್ಟಿರುವ ಮಹತ್ವ ಕಂಡು ಹೆಮ್ಮೆ ಎನಿಸಿತು. ಇಂತಹ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಬೇಕು. ಮನೆ ಹಾಗೂ ಶಾಲೆಯ ವಾತಾವರಣವೂ ಇಂತಹುದಕ್ಕೆ ಪೂರಕವಾಗಿ ಇರಬೇಕು.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಹೃದಯದ ಸಮಸ್ಯೆ: ಸಂಶೋಧನೆ ಅಗತ್ಯ

ಯುವಕರು, ನಡುವಯಸ್ಸಿನವರು, ಮಕ್ಕಳು ಹೃದಯಾಘಾತಕ್ಕೆ ಒಳಗಾಗುವ ಪ್ರಕರಣಗಳು ಇತ್ತೀಚೆಗೆ ತುಸು ಹೆಚ್ಚಿಗೆ ಕಂಡುಬರುತ್ತಿವೆ. ಚಿಕಿತ್ಸೆ ದೊರೆಯುವುದಕ್ಕೆ ಮೊದಲೇ ಕೆಲವರು ನಿಧನರಾಗುತ್ತಿರುವುದು ಆತಂಕ ಉಂಟುಮಾಡಿದೆ. ಇದರಿಂದ ಅನೇಕ ಕುಟುಂಬಗಳು ಅನಾಥವಾಗುತ್ತಿವೆ. ಕೆಲವರು ಇದಕ್ಕೆ ಕೊರೊನಾ ಲಸಿಕೆ ಕಾರಣ ಎಂದರೆ, ಕೆಲವರು ನಾವು ತಿನ್ನುವ ಆಹಾರವೇ ಕಾರಣ ಎನ್ನುತ್ತಾರೆ. ಯಾವುದಕ್ಕೂ ಖಚಿತವಾದ ಆಧಾರಗಳಿಲ್ಲ. ಆರೋಗ್ಯ ಇಲಾಖೆ ಹಾಗೂ ವಿವಿಧ ಸಂಶೋಧನಾ ಸಂಸ್ಥೆಗಳು ಇದಕ್ಕೆ ಕಾರಣವನ್ನು ಕಂಡುಹಿಡಿದು, ಜನಸಾಮಾನ್ಯರಿಗೆ ಸೂಕ್ತವಾದ ಆರೋಗ್ಯ ಮಾಹಿತಿಯನ್ನು ನೀಡಬೇಕು. ಈ ಮೂಲಕ ಜೀವ ರಕ್ಷಣೆಗೆ ಮುಂದಾಗಬೇಕು.

ಈ.ಬಸವರಾಜು, ಬೆಂಗಳೂರು

ಸಮ್ಮೇಳನ ವಿವಾದ: ಮುಕ್ತ ಚರ್ಚೆ ನಡೆಯಲಿ

ಮಂಡ್ಯದಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರವಾಗಿ ಅನೇಕ ಸಾಹಿತಿಗಳು, ವಿಚಾರವಂತರು ಹಾಗೂ ಪ್ರಗತಿಪರ ಸಂಘಟನೆಗಳ ನಡುವೆ ಮುಸುಕಿನ ಗುದ್ದಾಟ ನಡೆದಿತ್ತು. ಅದು ಈಗ ಬಹಿರಂಗಗೊಂಡು ಬೀದಿರಂಪವಾಗಿರುವುದು ಖೇದಕರ. ಏಕೆಂದರೆ, ಕನ್ನಡ ಸಾಹಿತ್ಯ ಪರಿಷತ್ತಿಗೆ ತನ್ನದೇ ಆದ ಘನತೆ, ಗೌರವವಿದೆ. ಹಾಗಾಗಿ ಅದರ ಘನತೆಯನ್ನು ಕಾಪಾಡಬೇಕಾದ ಹೊಣೆ ನಮ್ಮೆಲ್ಲರ ಮೇಲೆ, ಹೆಚ್ಚಾಗಿ ಕನ್ನಡ ಲೇಖಕರು, ವಿದ್ವಾಂಸರ ಮೇಲಿದೆ. ಅತ್ಯಂತ ಅದ್ದೂರಿ ಪ್ರಚಾರದೊಂದಿಗೆ ಈ ಬಾರಿ ಮಂಡ್ಯದಲ್ಲಿ ನಡೆದ ಸಮ್ಮೇಳನ ಬಹುತೇಕ ಯಶಸ್ವಿಯಾದರೂ ಎಲ್ಲವೂ ಸರಿಯಾಗಿ ನಡೆದಿಲ್ಲವೆಂಬುದು ಮೇಲ್ನೋಟಕ್ಕೆ ಗೋಚರವಾಗುತ್ತದೆ.

ಸಾಹಿತ್ಯ ಸಮ್ಮೇಳನದ ಖರ್ಚುವೆಚ್ಚ ಹಾಗೂ ಸಮ್ಮೇಳನದ ಸ್ಮರಣಸಂಚಿಕೆ ಬಿಡುಗಡೆ ವಿಳಂಬವು ಸಮಸ್ಯೆಯ ಕೇಂದ್ರಬಿಂದು. ಕಸಾಪ ಅಧ್ಯಕ್ಷರ ಬಗ್ಗೆಯೂ ಆರೋಪಗಳು ಕೇಳಿಬಂದಿವೆ. ಯಾವುದೇ ಸಮಸ್ಯೆ ಬಂದಾಗ ಚರ್ಚೆ ಮಾಡಿ ಪರಿಹರಿಸಿಕೊಳ್ಳುವುದು ಉತ್ತಮ. ಜಿಲ್ಲೆಯ ಎಲ್ಲ ಪ್ರಗತಿಪರ ಸಂಘಟನೆಗಳ ಮುಖಂಡರು, ಬುದ್ಧಿಜೀವಿಗಳು ಹಾಗೂ ಲೇಖಕರು ಕಸಾಪ ಅಧ್ಯಕ್ಷರನ್ನು ಮಂಡ್ಯಕ್ಕೆ ಬರಮಾಡಿಕೊಂಡು, ಒಂದೆಡೆ ಕುಳಿತು ಚರ್ಚಿಸಲಿ. ಅವರಿಂದ ಏನು ಉತ್ತರ ಬರುತ್ತದೆ ಎಂಬುದನ್ನು ಮನಗಂಡು ತದನಂತರ ಮುಂದಿನ ನಡೆ ಬಗ್ಗೆ ತೀರ್ಮಾನಿಸಲಿ. ಮುಕ್ತ ಚರ್ಚೆಗೆ ಅನುವು ಮಾಡಿಕೊಟ್ಟರೆ ಸಮಸ್ಯೆ ಬಗೆಹರಿಯುವುದರ ಜೊತೆಗೆ ಜಿಲ್ಲೆಯ ಕನ್ನಡಿಗರ ಸ್ವಾಭಿಮಾನವನ್ನು ಎತ್ತಿ ಹಿಡಿದಂತೆಯೂ ಆಗುತ್ತದೆ.

ಕೆ.ಎಂ.ಕೃಷ್ಣ, ಕೀಳಘಟ್ಟ, ಮದ್ದೂರು

ಅಗ್ಗದ ಹೇಳಿಕೆಗಳಿಂದ ಇತಿಹಾಸ ಬದಲಾಗದು

ಮಹಾತ್ಮ ಗಾಂಧಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಕ್ಕಾಗಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ವಿರುದ್ಧ ದೂರು ದಾಖಲಾಗಿರುವ ಬಗ್ಗೆ ವರದಿಯಾಗಿದೆ. ಯತ್ನಾಳ ಅವರಿಗೆ ಸದಾ ಯಾರನ್ನಾದರೂ ಉದ್ದೇಶಿಸಿ ಕೆಟ್ಟ ಭಾಷೆ ಬಳಸಿ ಮಾತನಾಡದಿದ್ದರೆ ಸಮಾಧಾನವಾಗುವಂತೆ ಕಾಣದು. ತಮ್ಮ ರಾಜಕೀಯ ಸಹೋದ್ಯೋಗಿಗಳು, ಎದುರಾಳಿಗಳ ಕುರಿತು ಅವಹೇಳನಕಾರಿ ಮಾತುಗಳನ್ನು ಆಡುವ ಮೂಲಕ ಪಕ್ಷದಿಂದ ಉಚ್ಚಾಟನೆಗೊಂಡಿದ್ದರೂ ಅವರು ಬದಲಾದಂತೆ ಕಾಣುವುದಿಲ್ಲ. ರಾಜಕೀಯ ಜೀವನದಲ್ಲಿ ಪಕ್ಷಾತೀತವಾಗಿ ಸಭ್ಯತೆ, ಸದಾಚಾರ, ಸನ್ನಡತೆ ಎನ್ನುವುದು ಇತ್ತೀಚಿನ ದಿನಗಳಲ್ಲಿ ಮಾಯವಾಗುತ್ತಿದೆ. ಈಗ ಯತ್ನಾಳ ಅವರ ಅವಹೇಳನಕಾರಿ ಮಾತುಗಳು ಗಾಂಧೀಜಿಯ ಕಡೆಗೆ ತಿರುಗಿವೆ.

ದೇಶ ವಿಭಜನೆ ವಿರುದ್ಧ ಗಾಂಧೀಜಿಯ ನಿಲುವು ಮತ್ತು ದೇಶದ ವಿಭಜನೆ ತಡೆಯಲು ಅವರು ಕೊನೇ ಗಳಿಗೆಯವರೆಗೆ ನಡೆಸಿದ ಪ್ರಯತ್ನಗಳು, ಹಿಂದೂ– ಮುಸ್ಲಿಂ ಏಕತೆಗಾಗಿ ಅವರ ಸತತ ಪ್ರಯತ್ನ, ದೇಶ ವಿಭಜನೆ ಅನಿವಾರ್ಯವಾಗುವಂತಹ ಬೆಳವಣಿಗೆಗಳು, ಅದಕ್ಕಾಗಿ ದೇಶ ತೆತ್ತ ಬೆಲೆ ಏನೆಂಬುದು ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಓದಿದರೆ ತಿಳಿಯುತ್ತದೆ. ಆದರೆ ಇಂದಿನ ಬಹುತೇಕ ರಾಜಕಾರಣಿಗಳು ಓದುವುದನ್ನೇ ಮರೆತಿದ್ದಾರೆ ಮತ್ತು ಅವರಿಗೆ ಸತ್ಯ ಬೇಕಾಗಿಲ್ಲ. ಬರೀ ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯದಲ್ಲಿನ ತಿರುಚಿದ ಇತಿಹಾಸವನ್ನು ಓದುತ್ತಾ, ಗಾಂಧೀಜಿ ಅಂಥವರನ್ನು ಹೀಯಾಳಿಸಿ ಮಾತನಾಡುವುದೇ ಇಂಥವರ ರಾಜಕೀಯ ಧರ್ಮವಾಗಿದೆ. ಅಂತಹ ಮಾತುಗಳು, ಹೇಳಿಕೆಗಳು ಯಾರನ್ನೋ ತೃಪ್ತಿಪಡಿಸಲು ಇರಬಹುದು. ಆದರೆ ಅಗ್ಗದ ಹೇಳಿಕೆಗಳ ಮೂಲಕ ದೇಶದ ಇತಿಹಾಸವನ್ನು ಬದಲಿಸುವುದಕ್ಕೆ ಆಗದು. ಗಾಂಧೀಜಿಯ ವ್ಯಕ್ತಿತ್ವಕ್ಕೂ ಕಳಂಕ ತಗುಲದು.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ–ಪಾಕಿಸ್ತಾನ ಸಂಘರ್ಷ

ದಿ ನ್ಯೂಯಾರ್ಕ್ ಟೈಮ್ಸ್ ಕಂಡಂತೆ...

ನಿಖರ ದಾಳಿಯಲ್ಲಿ ಭಾರತದ ಮೇಲುಗೈ: ವರದಿಯಲ್ಲಿ ಉಲ್ಲೇಖ

ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ತಕ್ಷಣಕ್ಕೆ ನಿಂತಿದೆ. ಸಂಘರ್ಷದ ಬಗ್ಗೆ ಅಮೆರಿಕದ 'ದಿ ನ್ಯೂಯಾರ್ಕ್ ಟೈಮ್ಸ್' (ಎನ್‌ವೈಟಿ) ಪತ್ರಿಕೆಯು ವಿಶೇಷ ವರದಿ ಪ್ರಕಟಿಸಿದೆ. ದಾಳಿ, ಪ್ರತಿದಾಳಿಯಲ್ಲಿ ಯಾವ ದೇಶಕ್ಕೆ ಎಷ್ಟು ಹಾನಿಯಾಗಿದೆ ಎನ್ನುವುದನ್ನು ಉಪಗ್ರಹದಿಂದ ತೆಗೆಯಲಾದ ಚಿತ್ರಗಳೊಂದಿಗೆ ದಾಖಲಿಸಿದೆ. ಪತ್ರಿಕೆಯು ಎರಡೂ ದೇಶಗಳ ಪ್ರತಿಪಾದನೆಗಳನ್ನು ವಿಶ್ಲೇಷಿಸಿದ್ದು, ವಾಯುನೆಲೆಗಳ ಮೇಲಿನ ದಾಳಿಯ ವಿಚಾರದಲ್ಲಿ ಯಾವ ದೇಶ ಎಷ್ಟರ ಮಟ್ಟಿಗೆ ತನ್ನ ಗುರಿ ಮುಟ್ಟಿದೆ ಎನ್ನುವುದನ್ನೂ ವಿವರಿಸಿದೆ. ನಾಲ್ಕು ದಿನ ನಡೆದ ಸಂಘರ್ಷದಲ್ಲಿ ಭಾರತವು ಮೇಲುಗೈ ಸಾಧಿಸಿತ್ತು ಎಂದು ಅದು ಹೇಳಿದೆ



ಪಾಕಿಸ್ತಾನದ ಭೋಲಾರಿ ವಾಯುನೆಲೆಯ ಮೇಲೆ ಭಾರತ ನಡೆಸಿದ ದಾಳಿಯಲ್ಲಿ ವಾಯುಪಡೆಗೆ ಸೇರಿದ ಕಟ್ಟಡ ಹಾನಿಗೀಡಾಗಿದೆ



ನಕ್ಷೆ: ಗೂಗಲ್ ಅರ್ಥ್

ಪಾಕಿಸ್ತಾನದ ನೂರ್‌ಖಾನ್ ವಾಯುನೆಲೆಯ ಕಟ್ಟಡಕ್ಕೆ ಹಾನಿಯಾಗಿದೆ

ಪ್ರಜಾವಾಣಿ ವಾರ್ತೆ

ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಭಾರತದ ರಕ್ಷಣಾ ಪಡೆಗಳು ನಡೆಸಿದ 'ಆಪರೇಷನ್ ಸಿಂಧೂರ' ಹಾಗೂ ಪಾಕಿಸ್ತಾನವು ಪ್ರತಿದಾಳಿಗೆ ನಡೆಸಿದ ಪ್ರಯತ್ನದಿಂದಾಗಿ ಸೇನಾ ಸಂಘರ್ಷ ತೀವ್ರ ಸ್ವರೂಪ ಪಡೆಯುವ ಸೂಚನೆಗಳಿದ್ದವು. ಎರಡೂ ಅಣ್ವಸ್ತ್ರ ಹೊಂದಿರುವ ರಾಷ್ಟ್ರಗಳಾಗಿರುವುದರಿಂದ ಸಂಘರ್ಷವು ಯಾವ ಮಟ್ಟಕ್ಕಾದರೂ ಹೋಗಬಹುದು ಎನ್ನಲಾಗಿತ್ತು. ಆದರೆ, ನಾಲ್ಕು ದಿನಗಳ ನಂತರ ದಿಢೀರ್ ಕದನ ವಿರಾಮ ಏರ್ಪಟ್ಟಿತು. ಸಂಘರ್ಷದಿಂದಾಗಿ ಉಭಯ ದೇಶಗಳಲ್ಲಿ ಆಗಿರುವ ಹಾನಿಯ ಬಗ್ಗೆ ವಿಶ್ಲೇಷಿಸಲಾಗುತ್ತಿದೆ. ಪರಸ್ಪರರಿಗೆ ಭಾರಿ ಹಾನಿ ಉಂಟುಮಾಡಿದ್ದೇವೆ ಎಂದು ಎರಡೂ ದೇಶಗಳು ಪ್ರತಿಪಾದಿಸುತ್ತಿವೆ. ಅಮೆರಿಕದ ಪ್ರಮುಖ ಪತ್ರಿಕೆ 'ದಿ ನ್ಯೂಯಾರ್ಕ್ ಟೈಮ್ಸ್' ಈ ವಾದಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದು, ಈ ಬಗ್ಗೆ ವಿಶೇಷ ಲೇಖನ ಪ್ರಕಟಿಸಿದೆ. ಉಪಗ್ರಹ ತೆಗೆದ ಹೆಚ್ಚು ರೆಸಲ್ಯೂಷನ್ ಇರುವ ಚಿತ್ರಗಳನ್ನು ತನ್ನ ವಿಶ್ಲೇಷಣೆಗೆ ಪೂರಕವಾಗಿ ಬಳಸಿಕೊಂಡಿದೆ. ಭಾರತ ನಡೆಸಿರುವ ದಾಳಿಯಲ್ಲಿ ಪಾಕಿಸ್ತಾನದ ಪ್ರಮುಖ ವಾಯುನೆಲೆಗಳಿಗೆ ಹಾನಿಯಾಗಿದೆ ಎಂದು ಹೇಳಿದೆ. ಭಾರತದ ಎರಡು ಯುದ್ಧವಿಮಾನಗಳು ಪತನಗೊಂಡಿರುವ ಬಗ್ಗೆಯೂ ಪ್ರಸ್ತಾಪಿಸಿದೆ.

ಸಂಘರ್ಷಕ್ಕೆ ಎರಡೂ ರಾಷ್ಟ್ರಗಳು ಡ್ರೋನ್ ಮತ್ತು ಕ್ಷಿಪಣಿಗಳನ್ನು ಬಳಸಿದ್ದವು. ತಮ್ಮ ವಾಯುಸೇನೆ ಸಾಮರ್ಥ್ಯ ಪಣಕ್ಕಿಟ್ಟು, ವಿರೋಧಿ ರಾಷ್ಟ್ರದ ವಾಯುನೆಲೆಗಳನ್ನು ಗುರಿ ಮಾಡಿ ದಾಳಿ ನಡೆಸಿದ್ದವು. ಅತ್ಯಾಧುನಿಕ ತಾಂತ್ರಿಕತೆಯ ನೆರವಿನಿಂದ ವಾಯುನೆಲೆ ಮತ್ತು ಸೇನಾ ನೆಲೆಗಳನ್ನಷ್ಟೇ ಗುರಿಯಾಗಿಸಿ ದಾಳಿ ಮಾಡಿದ್ದವು. ವಿರೋಧಿ ರಾಷ್ಟ್ರದಲ್ಲಿ ಭಾರಿ ಹಾನಿ ಆಗಿದೆ ಎಂದೇ ಎರಡೂ ರಾಷ್ಟ್ರಗಳು ಪ್ರತಿಪಾದಿಸಿದ್ದವು. ಪತ್ರಿಕೆಯು, ಉಪಗ್ರಹದಿಂದ ತೆಗೆದ ಚಿತ್ರಗಳನ್ನು ಬಳಸಿ ಹಾನಿಯ ಪ್ರಮಾಣವನ್ನು ಅಂದಾಜಿಸಿದೆ. ಹಲವು ಕಡೆ ದಾಳಿಗಳು ನಡೆದಿರುವುದು ನಿಜವಾದರೂ ಹೇಳಿಕೊಳ್ಳುವಂಥ ಹಾನಿ ಸಂಭವಿಸಿಲ್ಲ ಎಂದು ವರದಿಯಲ್ಲಿ ಹೇಳಿದೆ.

ದಾಳಿಗಳಿಂದ ಎರಡೂ ಕಡೆ ಸಾವು ನೋವು ಸಂಭವಿಸಿರುವುದನ್ನು ವರದಿ ಖಚಿತ ಪಡಿಸಿದೆ. ಸಂಘರ್ಷದಲ್ಲಿ ತನ್ನ ಐವರು ಯೋಧರು ಮೃತಪಟ್ಟಿರುವುದಾಗಿ ಭಾರತ ಹೇಳಿದ್ದರೆ, ತನ್ನ 11 ಸೈನಿಕರು ಸಾವಿಗೀಡಾಗಿರುವುದಾಗಿ ಪಾಕಿಸ್ತಾನ ಹೇಳಿದೆ.

ಭಾರತದಿಂದ ನಿಖರ ದಾಳಿ: ಆರಂಭದ ಮಾತಿನ ಸಮರ, ಬೆದರಿಕೆ, ಎಚ್ಚರಿಕೆಗಳ ವಿನಿಮಯದ ನಂತರ ಭಾರತವು ಪಾಕಿಸ್ತಾನದ ಸೇನಾ ನೆಲೆಗಳು ಮತ್ತು ವಾಯುನೆಲೆಗಳ ಮೇಲೆ ನಿಖರ ದಾಳಿ ಮಾಡುವ ಮೂಲಕ ಮೇಲುಗೈ ಸಾಧಿಸಿತು ಎಂದು ವರದಿ ಹೇಳಿದೆ. ಅದರ ಪ್ರಕಾರ, ಭಾರತವು ಸಣ್ಣ ಪ್ರಮಾಣದಲ್ಲಿ ದಾಳಿ ನಡೆಸಿದರೂ ಅದು ನಿರ್ದಿಷ್ಟವಾಗಿತ್ತು ಮತ್ತು ನೇರವಾಗಿ ಗುರಿಯನ್ನು ಕೇಂದ್ರೀಕರಿಸಿತ್ತು. ಭಾರತದ ದಾಳಿಗಳಿಂದ ಪಾಕಿಸ್ತಾನದಲ್ಲಿ ಸಂಭವಿಸಿರುವ ಹಾನಿಯು ಉಪಗ್ರಹವು ತೆಗೆದ ಚಿತ್ರಗಳಿಂದ ದೃಢಪಟ್ಟಿದೆ. ದಾಳಿಗೆ ಮುಂಚೆ ಆ ಸ್ಥಳಗಳು ಹೇಗಿದ್ದವು, ದಾಳಿಯ ನಂತರ ಹೇಗಾಗಿವೆ ಎನ್ನುವುದನ್ನು ವರದಿಯಲ್ಲಿ ತೋರಿಸಲಾಗಿದೆ.

ಪಾಕಿಸ್ತಾನದ ಬಂದರು ನಗರಿ ಕರಾಚಿಯಿಂದ 100 ಮೈಲಿ ದೂರವಿರುವ ಭೋಲಾರಿ ವಾಯುನೆಲೆಯ ವಿಮಾನಗಳನ್ನು ನಿಲ್ಲಿಸುವ ಭಾರಿ ಕಟ್ಟಡವನ್ನು ನಿಖರ ದಾಳಿಯ ಮೂಲಕ ಹಾನಿಗೊಳಿಸಿದ್ದಾಗಿ ಭಾರತದ ರಕ್ಷಣಾ ಪಡೆಯ ಅಧಿಕಾರಿಗಳು ಹೇಳಿದ್ದರು. ವರದಿಯಲ್ಲಿರುವ ಉಪಗ್ರಹ ಆಧರಿತ ಚಿತ್ರಗಳು ಅದನ್ನು ಸಾಬೀತುಪಡಿಸುವಂತಿವೆ.

ಭಾರತವು ದಾಳಿ ಮಾಡಿದ ಅತ್ಯಂತ ಸೂಕ್ಷ್ಮ ಹಾಗೂ ಪ್ರಮುಖ ಸ್ಥಳ ಎಂದರೆ, ನೂರ್ ಖಾನ್ ವಾಯುನೆಲೆ. ಇದು ಪಾಕಿಸ್ತಾನ ಸೇನೆಯ ಪ್ರಧಾನ ಕಚೇರಿ ಹಾಗೂ ಪ್ರಧಾನಿಯವರ ಕಚೇರಿಗೆ 15 ಮೈಲಿ ದೂರದಲ್ಲಿದೆ. ಅದಕ್ಕಿಂತಲೂ ಮುಖ್ಯವಾಗಿ, ಪಾಕಿಸ್ತಾನವು ಅಣ್ವಸ್ತ್ರಗಳನ್ನು ಸಂಗ್ರಹಿಸಿಟ್ಟಿರುವ ಜಾಗದ ಸನಿಹದಲ್ಲಿದೆ.

ಪಾಕ್‌ನ ಪ್ರಮುಖ ವಾಯುನೆಲೆಗಳ ರನ್ ವೇಗಳನ್ನು ವಿಶೇಷವಾಗಿ ಗುರಿಯಾಗಿಸಿಕೊಳ್ಳಲಾಗಿತ್ತು ಎಂದು ಭಾರತದ ಸೇನೆ ಹೇಳಿತ್ತು. ಈ ಹೇಳಿಕೆಗೆ ವಾಯುನೆಲೆಗಳಲ್ಲಿ ಸಂಭವಿಸಿದ ಹಾನಿಯ ಚಿತ್ರಗಳು ಪೂರಕವಾಗಿವೆ ಎಂದು ಎನ್‌ವೈಟಿ ವರದಿ ಹೇಳಿದೆ. ಹೀಗಾಗಿಯೇ ಪಾಕಿಸ್ತಾನವು ರಹೀಂ ಯಾರ್ ಖಾನ್ ವಾಯುನೆಲೆಯ ರನ್ ವೇ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಮೇ 10ರಂದು ಪ್ರಕಟಿಸಿತ್ತು. ಇದೇ ರೀತಿ ಪಂಜಾಬ್ ಪ್ರಾಂತ್ಯದ ಸರ್ಗೋಧಾ ವಾಯುನೆಲೆಯಲ್ಲಿನ ರನ್‌ವೇಯ ಎರಡೂ ಪಾರ್ಶ್ವಗಳಿಗೆ ನಿಖರ ದಾಳಿಯ ಮೂಲಕ ಹಾನಿ ಮಾಡಲಾಗಿದೆ ಎಂದು ಭಾರತದ ಸೇನೆ ಹೇಳಿದೆ. ವಾಯುನೆಲೆಯ ರನ್‌ವೇ ಎರಡು ಕಡೆಗಳಲ್ಲಿ ಕುಳಿ ಬಿದ್ದಿರುವುದು ಉಪಗ್ರಹಗಳ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ ಎಂದು ವರದಿ ವಿವರಿಸಿದೆ.

ರಹೀಂ ಯಾರ್ ಖಾನ್ ಏರ್‌ಫೀಲ್ಡ್‌ನ ರನ್‌ವೇಗೆ ಹಾನಿಯಾಗಿದೆ

ಭಾರತ ನಡೆಸಿರುವ ದಾಳಿಯಲ್ಲಿ ಪಾಕಿಸ್ತಾನದ ಸರ್ಗೋಧಾ ವಾಯುನೆಲೆಯಲ್ಲಿರುವ ರನ್‌ವೇಯ ಎರಡು ಕಡೆಗಳಲ್ಲಿ ಕುಳಿ ಬಿದ್ದಿದೆ

ಚಿತ್ರಗಳು: ಮ್ಯಾಕ್ಸರ್ ಟೆಕ್ನಾಲಜೀಸ್ ಮತ್ತು ಪ್ಲಾನೆಟ್ ಲ್ಯಾಬ್ಸ್

ಭಾರತಕ್ಕೆ ಏನೇನು ಹಾನಿ?

ಪಾಕಿಸ್ತಾನ ನಡೆಸಿರುವ ದಾಳಿಯಲ್ಲಿ ಭಾರತದ ಸೇನಾ ನೆಲೆಗಳಿಗೆ ಹೆಚ್ಚಿನ ಹಾನಿಯಾಗದಿದ್ದರೂ, ಐವರು ಯೋಧರು ಹುತಾತ್ಮರಾಗಿರುವುದನ್ನು ಭಾರತ ಒಪ್ಪಿಕೊಂಡಿದೆ. ಭಾರತವು ಯುದ್ಧವಿಮಾನಗಳನ್ನು ಕಳೆದುಕೊಂಡಿರುವುದು ದೇಶಕ್ಕೆ ಆಗಿರುವ ದೊಡ್ಡ ನಷ್ಟದಂತೆ ತೋರುತ್ತಿದೆ. ಎಷ್ಟು ವಿಮಾನಗಳು ಪತನಗೊಂಡಿವೆ ಎಂಬುದನ್ನು ಭಾರತ ಸರ್ಕಾರ ಅಧಿಕೃತವಾಗಿ ತಿಳಿಸಿಲ್ಲ. ಆದರೆ, ಅಧಿಕಾರಿಗಳು ಮತ್ತು ರಾಜತಾಂತ್ರಿಕರು, 'ಕನಿಷ್ಠ ಎರಡು ಯುದ್ಧವಿಮಾನಗಳನ್ನು ಕಳೆದುಕೊಂಡಿದ್ದೇವೆ' ಎಂದು ಹೇಳುತ್ತಿದ್ದಾರೆ. ಇದಕ್ಕಿಂತ ಹೆಚ್ಚು ವಿಮಾನಗಳನ್ನು ಕಳೆದುಕೊಂಡಿರುವ ಸಾಧ್ಯತೆಯೂ ಇದೆ ಎಂದು ಪತ್ರಿಕೆಯ ವರದಿ ತಿಳಿಸಿದೆ.

ಭಾರತದ 24 ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವುದಾಗಿ ಪಾಕಿಸ್ತಾನದ ಸೇನೆ ಹೇಳಿದೆ. ಆದರೆ, ಭಾರತದ ಅಧಿಕಾರಿಗಳು ನಾಲ್ಕು ವಾಯುನೆಲೆಗಳಿಗೆ ಕಡಿಮೆ ಪ್ರಮಾಣದಲ್ಲಿ ಹಾನಿಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನೂ ನೀಡಿದ್ದಾರೆ. ಪಾಕಿಸ್ತಾನ ಹೇಳಿದ ಸ್ಥಳಗಳ ಉಪಗ್ರಹಗಳ ಚಿತ್ರಗಳನ್ನು ಪರಿಶೀಲಿಸಿದಾಗ, ಅದರ ದಾಳಿಯಿಂದಾಗಿ ಆಗಿರುವ ಹಾನಿಯ ಯಾವ ಕುರುಹು ಕೂಡ ಸ್ಪಷ್ಟವಾಗಿ ಕಾಣಿಸುವುದಿಲ್ಲ.

ಪಾಕ್ ಸೇನೆಯು ಭಾರತದ ಉಧಂಪುರ ವಾಯುನೆಲೆಯನ್ನು ಸಂಪೂರ್ಣವಾಗಿ 'ನಾಶ' ಪಡಿಸಿದೆ ಎಂದು ಅಲ್ಲಿನ ಅಧಿಕಾರಿಗಳು ಹೇಳಿರುವುದಾಗಿ ಸರ್ಕಾರಿ ಸ್ವಾಮ್ಯದ ಮಾಧ್ಯಮ ವರದಿ ಮಾಡಿದೆ. ಆ ವಾಯುನೆಲೆಯಲ್ಲಿ ಕರ್ತವ್ಯದಲ್ಲಿದ್ದ ಒಬ್ಬ ಯೋಧ ಮೃತಪಟ್ಟಿರುವುದನ್ನು ಅವರ ಕುಟುಂಬದವರು ದೃಢಪಡಿಸಿದ್ದಾರೆ. ಆದರೆ, ಮೇ 12ರಂದು ಉಪಗ್ರಹದ ಮೂಲಕ ಸೆರೆಹಿಡಿದಿರುವ ಉಧಂಪುರ ವಾಯುನೆಲೆಯ ಚಿತ್ರದಲ್ಲಿ ಹಾನಿಯಾಗಿರುವ ಯಾವ ಕುರುಹು ಕೂಡ ಇಲ್ಲ ಎಂದು 'ದಿ ನ್ಯೂಯಾರ್ಕ್ ಟೈಮ್ಸ್' ವರದಿ ಹೇಳಿದೆ.

ಮೇ 12ರಂದು ತೆಗೆದಿರುವ ಉಧಂಪುರ ವಾಯುನೆಲೆಯ ಉಪಗ್ರಹ ಚಿತ್ರ. ವಾಯುನೆಲೆಗೆ ಯಾವುದೇ ಹಾನಿ ಆಗಿಲ್ಲ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತ ಮತ್ತು ಪಾಕಿಸ್ತಾನದ ನಡುವಿನ ಸೇನಾ ಸಂಘರ್ಷದ ಸಮಯದಲ್ಲಿ ಭಾರತೀಯ ಸೇನೆಯು ಪಾಕಿಸ್ತಾನದ ರಾವಲ್ಪಿಂಡಿಯ ಕ್ರಿಕೆಟ್ ಮೈದಾನದ ಮೇಲೆ ಡ್ರೋನ್ ದಾಳಿ ನಡೆಸಿ, ಇಡೀ ಮೈದಾನವನ್ನೇ ನಾಶ ಪಡಿಸಿದೆ ಎಂದು ಪ್ರತಿಪಾದಿಸುತ್ತಾ ಕ್ರೀಡಾಂಗಣವೊಂದು ಸಂಪೂರ್ಣವಾಗಿ ಹಾನಿಗೀಡಾದ ಫೋಟೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ. ಕ್ರೀಡಾಂಗಣದ ಚಿತ್ರ ನಿಜವಾದ್ದಲ್ಲ.

ಗೂಗಲ್‌ನಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ರಾವಲ್ಪಿಂಡಿ ಕ್ರೀಡಾಂಗಣದ ಬಗ್ಗೆ ಹುಡುಕಾಟ ನಡೆಸಿದಾಗ ಇಎಸ್‌ಪಿಎನ್‌ಕ್ರಿಕ್‌ಇನ್ಫೊ ವೆಬ್‌ಸೈಟ್ ಹಂಚಿಕೊಂಡಿದ್ದ ರಾವಲ್ಪಿಂಡಿ ಕ್ರೀಡಾಂಗಣದ ಹಲವು ಚಿತ್ರಗಳು ಸಿಕ್ಕಿದವು. ಆ ಪೈಕಿ ಪೋಸ್ಟ್‌ನಲ್ಲಿರುವ ಚಿತ್ರ ಮತ್ತು ವೆಬ್‌ಸೈಟ್‌ನಲ್ಲಿರುವ ಮೂಲ ಚಿತ್ರವೊಂದನ್ನು ಪರಸ್ಪರ ಹೋಲಿಸಲಾಯಿತು. ಆದರೆ, ಎರಡೂ ಚಿತ್ರಗಳು ಭಿನ್ನವಾಗಿರುವುದು ದೃಢಪಟ್ಟಿತು. ನಾಶ ಮಾಡಲಾದ ಕ್ರೀಡಾಂಗಣದ ಚಿತ್ರ ಎಂದು ಹೇಳಲಾದ ಚಿತ್ರವನ್ನು ಕೂಲಂಕಷ ಪರಿಶೀಲನೆಗೆ ಒಳಪಡಿಸಿದಾಗ, ಅದು ಕೃತಕ ಬುದ್ಧಿಮತ್ತೆ (ಎಐ) ಚಿತ್ರ ಆಗಿರಬಹುದು ಎಂಬ ಅನುಮಾನ ಮೂಡಿತು. ಎಐ ಚಿತ್ರವನ್ನು ಪತ್ತೆ ಹಚ್ಚುವ 'ವಾಸ್‌ಇಟ್‌ಎಐ' ಎಂಬ ಟೂಲ್‌ನಲ್ಲಿ ಚಿತ್ರವನ್ನು ಅದು ಹಾಕಿದಾಗ ಅದು ಎಐ ಚಿತ್ರ ಎಂಬುದು ದೃಢಪಟ್ಟಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಎದೆಯೊಳಗೆ ದೇವನ ಬೆಳಕು ಇರಬೇಕು

ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ

196

ಮನಸ್ಸಿನಲ್ಲಿ ದೇವರ ಭಾವ ಇರಬೇಕು. ಎಲ್ಲವೂ ನಿನ್ನದು ಎನ್ನುವ ಭಾವ ಬರಬೇಕು. 'ಅಲ್ರೀ ಎಲ್ಲದೂ ದೇವರದ್ದು ಅಂದ್ರ ನಮ್ಮದು ಅನ್ನುವುದು ಯಾವಾಗ' ಅಂತ ನೀವು ಕೇಳಬಹುದು. ನೀವು ಎಲ್ಲವೂ ನಿಮ್ಮದು ಎಂದು ಹೇಳಿ ನೋಡಿ. ಬೆಳಿಗ್ಗೆ ಎದ್ದಾಗ ದೇವರಿಗೆ ಕೈ ಮುಗಿದು ಇದು ಎಲ್ಲ ನಿನ್ನದು ಎನ್ನಬೇಕು. ಸ್ನೇಹಿತರು ಸಿಕ್ಕಾಗ ನಂದೇನೂ ಇಲ್ಲ, ಎಲ್ಲ ನಿಮ್ಮದು ಅನ್ನಬೇಕು. ಮನೆಯಲ್ಲಿ ಮಕ್ಕಳಿಗೆ ಎಲ್ಲ ನಿಮ್ಮದು ಅನ್ನಬೇಕು. ಹೆಣ್ಣುಮಕ್ಕಳಿಗೂ ಹಾಗೆಯೇ ಹೇಳಬೇಕು. ಎಲ್ಲರಿಗೂ ನಿನ್ನದು, ನಿನ್ನದು ಎಂದು ಹೇಳಿದರೆ ನನ್ನದು ಎನ್ನುವುದು ಯಾವಾಗ? ಎಲ್ಲ ಮುಗಿದ ನಂತರ ಕೋಣೆಯ ಹಾಸಿಗೆಯಲ್ಲಿ ಮಲಗಿ ಚಾದರ ಹೊದ್ದುಕೊಂಡು ಇದೆಲ್ಲ ನಂದು ಅಂತ ಹೇಳಿ ಗಪ್ಪಾಗಿ ಮಲಗಿಕೊಳ್ಳಬೇಕು. ಆಗ ಎಲ್ಲ ಅರಾಂ ಇರುತ್ತದೆ.

ತಾಯಿಯ ಗರ್ಭದಿಂದ ಮಗು ಭೂಮಿಗೆ ಬಂತಲ್ಲ. ಆಗ ಮಗುವಿನ ಮನಸ್ಸು ಸ್ವಚ್ಛ ಪಾಟಿ ಇದ್ದ ಹಾಗೆ ಇತ್ತು. ಆ ಸ್ವಚ್ಛ ಪಾಟಿಯ ಮೇಲೆ ಮಗು ಅ ಎಂದು ಬರೀತು, ಆ ಅಂತ ಬರೀತು, ಔ ಅಂತ ಬರೀತು, ಅಪ್ಪ ಅಂತ ಬರೀತು. ಅಣ್ಣ, ತಮ್ಮ, ಗಂಡ, ಹೆಂಡತಿ, ಮನೆ, ಮಗ ಅಂತ ಬರೀತು. ಕೊನೆಗೆ ನಂದು ಎಂದು ಬರೀತು. ಅಲ್ಲೇ ದುಃಖ ಶುರುವಾಯಿತು ಮನುಷ್ಯನಿಗೆ. ಯಾವಾಗ ಮನುಷ್ಯನಲ್ಲಿ ನಂದು ಎನ್ನುವ ಭಾವ ಬಂತು, ಯುದ್ಧ ಶುರು. ಮಹಾಭಾರತದ ಯುದ್ಧ ಆಗಿದ್ದೂ ನಂದು ನಿಂದು ಬ್ಯಾರೆ ಎಂದಿದ್ದಕ್ಕೇ. ಮನೆಯಲ್ಲಿ ಅಣ್ಣ ತಮ್ಮಂದಿರಿಗೆ ಜಗಳ ಶುರುವಾಗಿದ್ದೂ ಇದು ನಂದು ಇದು ನಿಂದು ಎಂಬ ಕಾರಣಕ್ಕಾಗಿಯೇ. ಒಂದು ಮಾತು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಮನುಷ್ಯ. ಪೇಪರ್‌ನಲ್ಲಿ ನಮ್ಮ ಹೆಸರು ಇರಬೇಕು. ಆದರೆ ಮನಸ್ಸಿನಲ್ಲಿ ಭಗವಂತನ ಉಸಿರಿರಬೇಕು. ಇದನ್ನು ಕಲಿಯಬೇಕು ಮನುಷ್ಯ. ಹೊಲ ಇರಬೇಕು, ಮನೆ ಇರಬೇಕು, ಸಂಸಾರ ಇರಬೇಕು, ಹೊರಗೆ ವ್ಯವಹಾರದ ಬಳಕೆ ಇರಬೇಕು, ಎದೆಯೊಳಗೆ ದೇವನ ಬೆಳಕು ಇರಬೇಕು. ಅವ ಸತ್ಸಂಗಿ. ಅವ ಅಧ್ಯಾತ್ಮಿ. ಇಲ್ಲಿ ನನ್ನದು ಎನ್ನುವುದು ಯಾವುದು ಇಲ್ಲ. ಯಾವುದೂ ನಮ್ಮ ಜೊತೆ ಬರುವುದಿಲ್ಲ. ನಾವು ಎಷ್ಟೇ ಕಷ್ಟಪಟ್ಟು ಗಳಿಸಿದರೂ ಒಂದು ದಿನ ಎಲ್ಲ ಬಿಟ್ಟು ಹೋಗಲೇಬೇಕು. ಯಾರು ಮಾಡಿದ್ದೂ ಉಳಿಯುವುದಿಲ್ಲ.

ಶಿಲಾಶಾಸನಗಳೇ ಹೋಗಿದ್ದಾವೆ. ಶಿಲಾನ್ಯಾಸಗಳೂ ಉಳಿಯುವುದಿಲ್ಲ. ಸುಮ್ಮನೆ ನಮಗೆ ಭ್ರಮೆ ಇರುತ್ತದೆ. ಡಾಲರ್ ಕೊಡ್ತೀವಿ ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಅಂದ್ರೆ ನಡೆಯುವುದಿಲ್ಲ. ಪೌಂಡ್ ಕೊಡ್ತೀನಿ ಅಂದರೂ ನಡೆಯುವುದಿಲ್ಲ. ಈ ದೇಹವನ್ನು ಬಿಟ್ಟು ಹೋಗುವಾಗ ನಮ್ಮ ಜೊತೆಗೆ ಬರುವುದು ನಮ್ಮ ಪುಣ್ಯದ ನಾಣ್ಯ ಮಾತ್ರ. ಹಿಮಾಲಯವನ್ನು ನಿರ್ಮಿಸಿದವರು ಯಾರು? ಸಾಗರದಲ್ಲಿ ನೀರು ತುಂಬಿದವರು ಯಾರು? ಬೆಟ್ಟಗುಡ್ಡಗಳನ್ನು ಕಟ್ಟಿದವರು ಯಾರು? ಸೂರ್ಯ ಚಂದ್ರರಂತಹ ಆರದ ದೀಪ ಹಚ್ಚಿಟ್ಟಿದ್ದಾನಲ್ಲ ಅವನದ್ದು ನಿತ್ಯ ಕಾರ್ತಿಕೋತ್ಸವ. ಅವ ಬೆಳಕು ತುಂಬಿದವನು. ಇದನ್ನು ಅರಿತು ಬಾಳಬೇಕು. ಈ ಜಗತ್ತು ದೇವರ ಶೋ ರೂಂ. ಮುಂದೆ ಇರುವುದೆಲ್ಲ ಒಂದು ದಿನ ಹಿಂದಕ್ಕೆ ಹೋಗಬೇಕು ಎನ್ನುವುದು ಗೊತ್ತಿರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಮೇ 16, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ಥಿ ಗಂ. 29-14 ನಕ್ಷತ್ರ: ಮೂಲ ಗಂ. 16-08 ಯೋಗ: ಸಿದ್ಧ ಗಂ. 7-14 ಕರಣ: ಬವ ಗಂ. 16-42, ವೃಷಭ ಮಾಸದ 02 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-08 ಸೂರ್ಯಾಸ್ತ : 06-46
ಮುಸ್ಲಿಂ ದಿನಾಂಕ : 17 ಜುಲ್ಕಾಯದ್
ದಿನ ವಿಶೇಷ : ಸಂಕಷ್ಟಹರ ಚತುರ್ಥಿ, ಅದೃಷ್ಟ ಸಂಖ್ಯೆ : 5, 11

ಮೇಷ: ಇತರರ ಭಾವನೆಗಳಿಗೆ ಬೆಲೆ ಕೊಡುವುದು ಮತ್ತು ಸಹನೆಯಿಂದ ಕೇಳುವುದನ್ನು ರೂಢಿಸಿಕೊಳ್ಳುವಿರಿ. ಕಂದಾಯ ಇಲಾಖೆಯವರಿಗೆ ಬಿಡುವಿಲ್ಲದ ಕೆಲಸಗಳು ಇರಲಿವೆ. ಅಭಿರುಚಿಗೆ ತಕ್ಕ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳಿರಿ.

ವೃಷಭ: ಕಲೆ, ಸಾಹಿತ್ಯವನ್ನು ಪ್ರವೃತ್ತಿಯಾಗಿ ಹೊಂದಿದವರಿಗೆ ಹಿನ್ನಡೆ ತೋರಿ ಬಂದರೂ ಸ್ಥಾನ-ಮಾನ, ಗೌರವಕ್ಕೆ ಚ್ಯುತಿ ಬರುವುದಿಲ್ಲ. ಸಾಂಸಾರಿಕ ಬದುಕಿನಲ್ಲಿ ನೆಮ್ಮದಿ ಇರಲಿದೆ. ಧರ್ಮ-ಕರ್ಮದಂತಹ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು.

ಮಿಥುನ: ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ಆದೇಶವಾಗುವುದು. ಕೆಂಪು ಬಣ್ಣವು ಜಯ ತರಲಿದೆ. ಶುಭ ಕಾರ್ಯಗಳಿಗೆ ಅಡ್ಡಿ ಬಾರದಂತೆ ದೇವರ ಸೇವೆ ಮಾಡುವುದು ಉತ್ತಮ.

ಕರ್ಕಾಟಕ: ನೀವೇ ಮಿಶ್ರ ಮಾಡಿದ ಸುಣ್ಣದ ನೀರನ್ನು ನೀವೇ ಹಾಲೆಂದು ಒಪ್ಪಿಕೊಳ್ಳಲೇಬೇಕಾದ ಪರಿಸ್ಥಿತಿ ನಿಮ್ಮದಾಗಿರುತ್ತದೆ. ಕೆಲಸ ಕಾರ್ಯಗಳಿಗೆ ಅಧಿಕಾರಿ ವರ್ಗಗಳ ವಿರೋಧ ವ್ಯಕ್ತವಾಗಲಿದೆ.

ಸಿಂಹ: ಕೌಟುಂಬಿಕ ವಿಚಾರಗಳ ಹೊಸ ಚಿಂತನೆಗೆ ಪೂರಕ ವಾತಾವರಣ ಮೂಡುತ್ತದೆ. ತಾಂತ್ರಿಕ ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ಅಧಿಕ ಪರಿಶ್ರಮ ಹಾಕಿದ್ದರೂ ಅದೃಷ್ಟವು ಕೈ ಕೊಡಲಿದೆ. ಅನಾರೋಗ್ಯವನ್ನು ನಿರ್ಲಕ್ಷಿಸಬೇಡಿ.

ಕನ್ಯಾ: ಬ್ಯಾಂಕ್ ಉದ್ಯೋಗಿಗಳಿಗೆ ಶುಭಸುದ್ದಿ ಕೇಳಿಬರಲಿದೆ. ಆಫೀಸಿನ ಕೆಲಸದಲ್ಲಿ ಅಧಿಕಾರಿಗಳ ಮಾತನ್ನು ತಾಳ್ಮೆಯಿಂದ ಕೇಳಿರಿ. ಮನೆಯಲ್ಲಿ ನೆಮ್ಮದಿಯ ವಾತಾವರಣವಿರುವುದು. ವನಸ್ಪತಿ ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ.

ತುಲಾ: ಅಭಿಪ್ರಾಯಗಳಿಗೆ ಮನ್ನಣೆ ಇದೆ ಎಂಬುದನ್ನು ಮೊದಲು ಖಚಿತಪಡಿಸಿಕೊಂಡು ಹಿತವಚನಗಳನ್ನು ಹೇಳಲು ಮುಂದುವರಿಯುವುದು ಉತ್ತಮ. ಸ್ವತಂತ್ರವಾಗಿ ವ್ಯವಹಾರ ಮಾಡುವವರಿಗೆ ಉತ್ತಮ.

ವೃಶ್ಚಿಕ: ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು. ಸ್ನೇಹಿತರೊಂದಿಗೆ ಅಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ. ಕೆಲವು ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ.

ಧನು: ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ಜರುಗಲಿವೆ. ಸಮೀಪವರ್ತಿಗಳ ಸಹಾಯದಿಂದ ಬಾಕಿ ಇದ್ದ ಕೆಲಸ ಪೂರ್ತಿಗೊಳಿಸುವಿರಿ. ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಬಗ್ಗೆ ಮಾತಾಡಿ.

ಮಕರ: ಮಕ್ಕಳಿಗೆ ವಿದೇಶದಲ್ಲಿ ಉನ್ನತ ಶಿಕ್ಷಣ ಕೊಡಿಸಲು ಸಂಘ ಸಂಸ್ಥೆಗಳು ನೆರವಾಗುವುದು. ವಾಹನ ಕೊಡು ಕೊಳ್ಳುವಿಕೆಯಲ್ಲಿ ಲೆಕ್ಕ ಪತ್ರಗಳಲ್ಲಿ ಗಮನ ಇರಲಿ. ಮನೆ ಕೊಳ್ಳುವ ಯೋಗ ಅಥವಾ ಭೂಮಿ ಖರೀದಿಯ ಯೋಗವಿದೆ.

ಕುಂಭ: ಮಧ್ಯಾಹ್ನದ ಸಮಯದವರೆಗೆ ಕೆಲಸಗಳು ಕುಂಠಿತವಾಗಿ ಸಾಗಿದರೂ ಉತ್ತರಾರ್ಧದ ವೇಳೆಗೆ ಸಮರ್ಪಕವಾಗಿ ಮಾಡಿ ಮುಗಿಸಿದ ತೃಪ್ತಿ ನಿಮ್ಮಲ್ಲಿ ಉಂಟಾಗಲಿದೆ. ಕ್ರೀಡಾಕ್ಷೇತ್ರದಲ್ಲಿ ಹೆಸರು ಮಾಡುವ ಅವಕಾಶವಿದೆ.

ಮೀನ: ವಾಸ್ತು, ಶಿಲ್ಪಕೆತ್ತನೆಯ ಕೆಲಸಗಾರರಿಗೆ, ಕಟ್ಟಡ ಕಾರ್ಮಿಕರಿಗೆ ಅನುಕೂಲ ಇರಲಿದೆ. ವೃತ್ತಿಯನ್ನು ಅಭಿವೃದ್ಧಿ ಮಾಡುವ ಸಂಕಲ್ಪದಿಂದ ಬಂಡವಾಳ ಹಾಕಿದರೆ ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು.

ಪದಬಂಧ 6044

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಕ್ರೀಡಿಸುವಾಗ ಕಾಣಿಸಿದ ಮೇಕೆ (2)
3.ಸಂಪೂರ್ಣ ಹಾನಿಯಿದು (4)
5.ಹಾಯಲು ಬಂದಾಗ ನೀಡಿದ ನೆರವು! (3)
6.ವನದಲ್ಲಿ ತಿಳಿಸಿರುವ ಸುದ್ದಿ (4)
8.ಬಹಳ ಒಜ್ಜೆಯನ್ನು ಹೀಗೆನ್ನುವರು (4)
12.ಭೂಮಿಗೂ ಆಕಾಶಕ್ಕೂ ನಡುವಣ ಪ್ರದೇಶ (4)
14.ಒಪ್ಪವಾಗಿ ರಾಗದೊಡನೆ ಬಂದಿರುವ ಪ್ರೀತಿ (4)
15.ಉತ್ತರದ ಕಡೆಯವನು ಪಡೆದುಕೊಂಡ ಸಂಬಳ (3)
16.ಸಭೆಯನ್ನು ವಿಸರ್ಜಿಸುವುದು (4)
17.ಜಾಗರಣೆ ಮಾಡಿದ ಬುದ್ಧಿವಂತೆ !(2)

ಮೇಲಿಂದ ಕೆಳಕ್ಕೆ
1.ಒಳ್ಳೆಯ ನಡತೆಯಿಲ್ಲದಿರುವಿಕೆ (5)
2.ಆದಾಯ ಮತ್ತು ಖರ್ಚು (4)
3.ಸರ ಬಿದ್ದಿರುವ ಕೊಳ (4)
4.ರೋಗ ಮೊದಲಾದವನ್ನು ಗುಣಪಡಿಸುವಿಕೆ (3)
7.ಕಾಫಿ ಕುಡಿದ ನಂತರ ತಪ್ಪನ್ನು ಮನ್ನಿಸುವುದು! (2)
9.ಒಜ್ಜೆಯನ್ನು ಹೊತ್ತಿರುವ ನಮ್ಮ ದೇಶ (3)
10.ಕೆಲಸಕ್ಕೆ ಬಾರದ ಮಾತಿದು (5)
11.ಪುಸ್ತಕದ ಪುಟ (2)
12.ಅಂಗಾಗಗಳಿಗೆಲ್ಲಾ ಸುಗಂಧ ಲೇಪನ (4)
13.ಕ್ಷಮೆಯನ್ನು ಯಾಚಿಸುವುದು (4)
14.ಆಗಸದತ್ತ ಮುಖ ಮಾಡಿರುವ ಮಡಿವಾಳ (3)



6043ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಸತತ 7.ವಿಲೋಮ
9.ಪಾಯಸ 11.ಸಹಗಮನ
12.ಮರಣ 14.ಕಲಹ
16.ತಕಲಿ

ಮೇಲಿಂದ ಕೆಳಕ್ಕೆ:
1.ಆಭ್ಯಾಸ 2.ನಿಶ್ಚಿತ
3.ಪಲುಲೋ 4.ಸಂದಾಯ
6.ತಲೆಗಡಿಕ 7.ವಿರಾಮ
8.ಮಸಣ 9.ಪಾನಕ
10.ಸನ್ನಾಹ 13.ರಥಾಂಗ 15.ಲಶುನ
16.ತರ್ಜನಿ 17.ಲಿಲಾವು

ಸುಡೊಕು 6428

	4				7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6427 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಮುಂಬೈ ಧಾರಣೆ

ಶೇಂಗಾ

15-05-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1385 (1390)
ಒಂದು ವಾರದ ಡೆಲಿವರಿ	1380 (1385)
ಪಾಮ್ ವಾರದ ಡೆಲಿವರಿ	1238 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1305 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹92,200 (93,100)

ಬೆಳ್ಳಿ ಕೆ.ಜಿ ₹94,500 (96,500)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,666
ಇಂದಿನ ಅಂತ್ಯ	25,062
▲	395
ದಿನದ ಗರಿಷ್ಠ	25,116

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹575
12 ಕ್ಕೆ	₹76
ಮೈಸೂರು	
100ಕ್ಕೆ	₹588

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1375 (1380)
ಸೋಯಾ (ರಿಫೈನ್ಡ್)	₹1275 (1300)
ಸೂರ್ಯಕಾಂತಿ (ರಿಫೈನ್ಡ್)	₹1385 (1400)
ಪಾಮೋಲಿನ್	₹1240 (1255)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹192.50
ಆರ್‌ಎಸ್‌ಎಸ್-5	₹187.50
ಗುಡ್ ಲಾಟ್	₹177.50

ಈರುಳ್ಳಿ



(ಕ್ವಿಂಟಲ್‌ಗೆ)

ದಪ್ಪ	₹1,000-1,400
ಮಧ್ಯಮ	₹600-1,000
ಸಣ್ಣ	₹300-600

ವಿನಿಮಯ ದರ

$ ಡಾಲರ್	85.50
£ ಪೌಂಡ್	113.70
€ ಯುರೊ	95.85
¥ ಯೆನ್ (100ಕ್ಕೆ)	58

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	53639-54069
ಬೆಟ್ಟೆ	29429-29859
ಕೆಂಪುಗೋಟು	20609-21010
ರಾಶಿ	53149-53599
ಕಾರ್ಕಳ	
ಹೊಸತು	25000-46000
ಹಳತು	30000-49000
ಕುಮಟ	
ಚಾಲಿ	35269-42698
ಚಿಪ್ಪು	20209-33269
ಕೋಕ	10100-26171
ಹೊಸಚಾಲಿ	30000-42999
ಪುತ್ತೂರು	
ಕೋಕ	20000-30500
ಹೊಸತು	26000-46000
ಶಿವಮೊಗ್ಗ	
ಬೆಟ್ಟೆ	48599-58699
ಗೊರಬಲು	18469-32799
ರಾಶಿ	46338-57000
ಸರಕು	51000-92896
ಸಿದ್ದಾಪುರ	
ಬಿಳಿಗೋಟು	25489-31800
ಚಾಲಿ	36769-40709
ಕೋಕ	16019-24689
ಕೆಂಪುಗೋಟು	18399-22599
ರಾಶಿ	42469-46599
ತಟ್ಟಿಬೆಟ್ಟೆ	32809-39099
ಶಿರಸಿ	
ಬೆಟ್ಟೆ	27699-44209
ಬಿಳಿಗೋಟು	19099-31826
ಚಾಲಿ	35099-42799
ಕೆಂಪುಗೋಟು	20869-23721
ರಾಶಿ	40809-48499
ಯಲ್ಲಾಪುರ	
ಅಪಿ	60269-61800
ಬಿಳಿಗೋಟು	14699-32501
ಚಾಲಿ	32899-41651
ಕೋಕ	7317-19499
ಕೆಂಪುಗೋಟು	16509-26899
ರಾಶಿ	39309-54119
ತಟ್ಟಿಬೆಟ್ಟೆ	27399-38169

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯಸ್ಮರಣೆ

ಶ್ರೀ. ತಿಪ್ಪೇಸ್ವಾಮಿ, ನಿವೃತ್ತ ಶಿಕ್ಷಕರು,
ಚಂಗಾವರ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ
ಪುಣ್ಯಸ್ಮರಣೆಯನ್ನು ದಿ. 16.05.2025 ರಂದು ನೆರವೇರಿಸಲಾಗುವುದು
ನೀವು ನಮ್ಮನಗಲಿ ಇಂದಿಗೆ 5 ವರ್ಷವಾಯಿತು ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಸದಾ ಹಚ್ಚಹಸಿರಾಗಿರುತ್ತದೆ
ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತುಕುಟುಂಬದವರು

ನಷ್ಟದಿಂದ ಪಾರಾಗಲು ಬೆಂಬಲ ಬೆಲೆ ಅಡಿ ತೊಗರಿ ಮಾರಾಟ: ಆರೋಪ

ವರ್ತಕರ ಮೇಲೆ ಹದ್ದಿನ ಕಣ್ಣು

• ಮಲ್ಲಿಕಾರ್ಜುನ ನಾಲವಾರ/ ಇಮಾಮ್‌ಹುಸೇನ್ ಗೂಡುನವರ

ಕಲಬುರಗಿ/ ಬೆಳಗಾವಿ: ಮುಕ್ತ ಮಾರುಕಟ್ಟೆಯಲ್ಲಿ ತೊಗರಿ ಧಾರಣೆ ಕುಸಿದಿದೆ. ಈ ನಷ್ಟದ ಹೊರೆಯಿಂದ ಪಾರಾಗಲು ಕೆಲವು ವರ್ತಕರು ಅನ್ಯಮಾರ್ಗದ ಮೂಲಕ ತೊಗರಿ ಮಾರಾಟಕ್ಕೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೆರೆದಿರುವ ಖರೀದಿ ಕೇಂದ್ರಗಳನ್ನು ಎಡತಾಕುತ್ತಿದ್ದಾರೆ. ಇಂತಹವರ ಮೇಲೆ ಕೃಷಿ ಮಾರಾಟ ಇಲಾಖೆಯು ಹದ್ದಿನ ಕಣ್ಣು ನೆಟ್ಟಿದೆ.

ಸದ್ಯ ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್ ತೊಗರಿಗೆ ₹6,500ರಿಂದ ₹7,000 ದರವಿದೆ. ಕೇಂದ್ರ ಸರ್ಕಾರ ಬೆಂಬಲ ಬೆಲೆ ಅಡಿ ಕ್ವಿಂಟಲ್‌ಗೆ ₹7,550 ದರ ನಿಗದಿಪಡಿಸಿದೆ. ರಾಜ್ಯ ಸರ್ಕಾರವು ಪ್ರತಿ ಕ್ವಿಂಟಲ್‌ಗೆ ₹450 ಪ್ರೋತ್ಸಾಹ ಧನ ಘೋಷಿಸಿದೆ. ಒಟ್ಟಾರೆ ಕ್ವಿಂಟಲ್‌ಗೆ ₹8 ಸಾವಿರ ಬೆಲೆ ದೊರೆಯಲಿದೆ.

ಹಾಗಾಗಿ, ಕೆಲವು ವರ್ತಕರು ಖರೀದಿ ಕೇಂದ್ರಗಳಲ್ಲಿ ಈಗಾಗಲೇ ಹೆಸರು ನೋಂದಣಿ ಮಾಡಿಕೊಂಡಿರುವ ಕೃಷಿಕರಿಗೆ ಕಮಿಷನ್ ನೀಡಿ ಅವರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಆ ರೈತರ ಹೆಸರಿನಲ್ಲಿ ಎಂಎಸ್‌ಪಿ ಅಡಿ ತೊಗರಿ ಮಾರುತ್ತಿದ್ದಾರೆ ಎಂದು ರೈತ ಮುಖಂಡರು ದೂರಿದ್ದಾರೆ.

ತೊಗರಿ ಖರೀದಿಗೆ ರಾಜ್ಯದಲ್ಲಿ 516 ಕೇಂದ್ರ ತೆರೆಯಲಾಗಿದ್ದು, 1,64,774 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ ಇಲ್ಲಿಯವರೆಗೆ 1,38,974 ರೈತರಿಂದ 20.15 ಲಕ್ಷ ಕ್ವಿಂಟಲ್ ಖರೀದಿಸಲಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಚಿಂಚೋಳಿ ಗ್ರಾಮದ ಖರೀದಿ ಕೇಂದ್ರದಲ್ಲಿ ತೊಗರಿ ಸ್ವಚ್ಛತೆಯಲ್ಲಿ ರೈತರು ನಿರತರಾಗಿದ್ದರು

> **ರೈತರ ಹೆಸರಿನಲ್ಲಿ ವ್ಯಾಪಾರಿಗಳು ನಮ್ಮಲ್ಲಿ ತೊಗರಿ ಮಾರಾಟ ಮಾಡದಂತೆ ತಡೆಯಲು ಅಗತ್ಯ ಕ್ರಮ ವಹಿಸಲಾಗಿದೆ**
> **ವೆಂಕಣ್ಣ ಅಸ್ಕಿ,** ಅಧ್ಯಕ್ಷ, ಪಿಕೆಪಿಎಸ್, ಕನ್ನಾಳ

> **ವರ್ತಕರು ಕೆಲವು ರೈತರಿಗೆ ಕ್ವಿಂಟಲ್ ಲೆಕ್ಕದಲ್ಲಿ ಕಮಿಷನ್ ನೀಡಿ ಅವರ ಹೆಸರನ್ನು ನೋಂದಣಿ ಮಾಡಿಸಿ ತೊಗರಿ ಮಾರಾಟ ಮಾಡುವುದು ಸಕ್ರಿಯವಾಗಿದೆ**
> **ರಾಮಚಂದ್ರ,** ರೈತ, ಅಫಜಲಪುರ

ಪ್ರತಿ ರೈತರಿಂದ ಎಕರೆಗೆ ಗರಿಷ್ಠ 4 ಕ್ವಿಂಟಲ್‌ನಂತೆ, 10 ಎಕರೆಗೆ 40 ಕ್ವಿಂಟಲ್ ತೊಗರಿ ಮಾರಾಟಕ್ಕೆ ಅವಕಾಶವಿದೆ.

ಒಟ್ಟು ಕೇಂದ್ರಗಳ ಪೈಕಿ ಶೇ 36ರಷ್ಟು ಕೇಂದ್ರಗಳು (189) ಕಲಬುರಗಿ ಜಿಲ್ಲೆಯಲ್ಲಿವೆ. ಕಲಬುರಗಿಯಲ್ಲಿ ನೋಂದಾಯಿತ ಒಟ್ಟು 48,248 ರೈತರ ಪೈಕಿ 38,223 ರೈತರು ಈಗಾಗಲೇ 5.88 ಲಕ್ಷ ಕ್ವಿಂಟಲ್ ಮಾರಾಟ ಮಾಡಿದ್ದಾರೆ. ಉಳಿದ 10,025 ರೈತರಿಗೆ ತಮ್ಮ ಬಳಿಯ ತೊಗರಿ ಮಾರಲು ಮೇ 31ರ ವರೆಗೆ ಅವಕಾಶ ನೀಡಲಾಗಿದೆ.

ಕೇಂದ್ರ ಸರ್ಕಾರವು ಬೆಂಬಲ ಬೆಲೆ ಘೋಷಿಸಿದ್ದ ವೇಳೆ ಮುಕ್ತ ಮಾರುಕಟ್ಟೆಯಲ್ಲಿ ತೊಗರಿಗೆ ಹೆಚ್ಚಿನ ದರವಿತ್ತು. ಹಾಗಾಗಿ, ಖರೀದಿ ಕೇಂದ್ರಗಳು ರೈತರಿಲ್ಲದೆ ಬಿಕೋ ಎನ್ನುತ್ತಿದ್ದವು. ಈ ಮಧ್ಯೆ ರಾಜ್ಯ ಸರ್ಕಾರ ಪ್ರೋತ್ಸಾಹ ಧನ ಘೋಷಿಸಿತು. ಕ್ವಿಂಟಲ್ ದರ ₹8 ಸಾವಿರಕ್ಕೆ ಮುಟ್ಟಿತು. ಮತ್ತೊಂದೆಡೆ ಮುಕ್ತ ಮಾರುಕಟ್ಟೆಯಲ್ಲಿ ತೊಗರಿ ದರ ಕುಸಿದಿದ್ದರಿಂದ ಖರೀದಿ ಕೇಂದ್ರಗಳಲ್ಲಿ ನೋಂದಣಿ ಪ್ರಕ್ರಿಯೆ ಚುರುಕು ಪಡೆದಿತ್ತು.

'ದರ ಕುಸಿತದಿಂದಾಗಿ ಆರ್ಥಿಕ ಹೊರೆಯಿಂದ ಪಾರಾಗಲು ಕೆಲವು ವ್ಯಾಪಾರಿಗಳು ಪರಿಚಿತ ರೈತರ ದಾಖಲಾತಿ ಪಡೆದು ಅವರ ಹೆಸರನ್ನು ಎಂಎಸ್‌ಪಿ ಅಡಿ ನೋಂದಾಯಿಸುತ್ತಾರೆ. ಮಾರುಕಟ್ಟೆಯಲ್ಲಿ ಏಕಾಏಕಿ ದರ ಇಳಿಕೆಯಾದಾಗ ರೈತರ ಹೆಸರಿನಡಿ ತೊಗರಿ ಮಾರಾಟ ಮಾಡುತ್ತಾರೆ. ದಾಖಲಾತಿ ನೀಡಿದ ರೈತರಿಗೆ ಕಮಿಷನ್ ಕೊಡುತ್ತಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಚಿಂಚೋಳಿ ತಾಲ್ಲೂಕಿನ ವ್ಯಾಪಾರಿಯೊಬ್ಬರು ಹೇಳಿದರು.

'ಖಾತರಿಪಡಿಸಿಕೊಂಡೇ ಖರೀದಿ'

'ಕನಿಷ್ಠ ಬೆಂಬಲ ಬೆಲೆ ಅಡಿ ತೊಗರಿ ಮಾರಲು ಏಪ್ರಿಲ್ 24ರ ವರೆಗೆ ನೋಂದಣಿಗೆ ಅವಕಾಶವಿತ್ತು. ಅಷ್ಟರೊಳಗೆ ನೋಂದಾಯಿಸಿಕೊಂಡ ರೈತರಿಂದ ಮೇ 31ರ ವರೆಗೆ ಖರೀದಿ ಮಾಡುತ್ತೇವೆ' ಎಂದು ಬೆಳಗಾವಿಯ ಜಿಲ್ಲಾ ಕೃಷಿ ಮಾರಾಟ ಇಲಾಖೆಯ ಉಪ ನಿರ್ದೇಶಕ ಮಹಾದೇವಪ್ಪ ಚಬನೂರ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಳಗಾವಿ ಜಿಲ್ಲೆಯ 6 ಕೇಂದ್ರಗಳಿಗೆ ಬರುತ್ತಿರುವ ತೊಗರಿ ರೈತರದ್ದೇ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ ಖರೀದಿಸುವಂತೆ ಸೂಚಿಸಲಾಗಿದೆ' ಎಂದು ಹೇಳಿದರು.

ಹೊಂದಾಣಿಕೆ ವ್ಯವಹಾರ

ತೊಗರಿ ಮಾರುಕಟ್ಟೆಗೆ ಬರುವ ಮೊದಲೇ ಕೆಲವು ವರ್ತಕರು ರೈತರಿಗೆ ಬಿತ್ತನೆ ಕಾರ್ಯ ಸೇರಿ ಇತರೆ ಕೃಷಿ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಿರುತ್ತಾರೆ. ರೈತರು ಸಹ ಪಹಣಿ, ಬ್ಯಾಂಕ್ ಖಾತೆ, ಆಧಾರ್ ಕಾರ್ಡ್ ಅನ್ನು ಅಂತಹ ವರ್ತಕರಿಗೆ ನೀಡಿರುತ್ತಾರೆ.

ವರ್ತಕರು ಈ ದಾಖಲೆಗಳ ಮೂಲಕ ಖರೀದಿ ಕೇಂದ್ರಗಳಲ್ಲಿ ರೈತನ ಹೆಸರಿನಲ್ಲಿಯೇ ನೋಂದಣಿ ಮಾಡಿಸುತ್ತಾರೆ. ತೊಗರಿ ಮಾರಾಟದ ದುಡ್ಡು ರೈತನ ಖಾತೆಗೆ ಜಮೆ ಆಗುತ್ತದೆ. ಆ ದುಡ್ಡನ್ನು ರೈತ ವರ್ತಕನಿಗೆ ಕೊಡುತ್ತಾನೆ. ಇದೊಂದು ರೈತ ಮತ್ತು ವ್ಯಾಪಾರಿ ನಡುವಿನ ಹೊಂದಾಣಿಕೆಯಲ್ಲಿ ನಡೆಯುವ ವ್ಯವಹಾರವಾಗಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸೆನ್ಸೆಕ್ಸ್ 1,200 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಸತತ ಎರಡನೇ ದಿನವಾದ ಗುರುವಾರವೂ ಗೂಳಿ ಓಟದಿಂದಾಗಿ ಸೂಚ್ಯಂಕಗಳು ಏರಿಕೆ ಕಂಡಿವೆ. ಏಳು ತಿಂಗಳ ಬಳಿಕ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಮತ್ತೆ 25,000 ಅಂಶದ ಗಡಿ ಮುಟ್ಟಿದೆ.

ಹೂಡಿಕೆದಾರರಿಂದ ಷೇರುಗಳ ಖರೀದಿ ಹೆಚ್ಚಳ ಹಾಗೂ ವಿದೇಶಿ ಬಂಡವಾಳದ ಒಳಹರಿವಿನ ಏರಿಕೆಯು ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟಿಗೆ ನೆರವಾಯಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,200 ಅಂಶ ಹೆಚ್ಚಳ ಕಂಡು, ಏಳು ತಿಂಗಳ ಗರಿಷ್ಠ ಮಟ್ಟವಾದ 82,530 ಅಂಶಗಳಲ್ಲಿ ಸ್ಥಿರಗೊಂಡಿತು. ನಿಫ್ಟಿ 395 ಅಂಶ ಏರಿಕೆಯಾಗಿ 25,062 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಾಟಾ ಮೋಟರ್ಸ್, ಎಚ್‌ಸಿಎಲ್ ಟೆಕ್, ಅದಾನಿ ಪೋರ್ಟ್ಸ್, ಎಟರ್ನಲ್, ಮಾರುತಿ, ರಿಲಯನ್ಸ್ ಇಂಡಸ್ಟ್ರೀಸ್, ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯ ಏರಿಕೆಯಾಗಿದೆ. ಇಂಡಸ್ ಇಂಡ್ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 3.65ರಷ್ಟು ಕಡಿಮೆಯಾಗಿದೆ. ಪ್ರತಿ ಬ್ಯಾರೆಲ್ 63.68 ಡಾಲರ್ ಆಗಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹308-563
ದ್ವಿತಳಿ (ಬಿ.ವಿ)	₹389-688

TRAVEL CORNER

6 ದಿನಗಳ
Orchid TRAVEL & TOURS
ಬ್ಯೂಟಿಫುಲ್
ಬಾಲಿ
Bali (Indonesia Special)
ಕನ್‌ಫರ್ಮ್ ಗ್ರೂಪ್ ಡಿಪಾರ್ಚರ್
ವಿಶೇಷ ರಿಯಾಯಿತಿ ದರದಲ್ಲಿ
ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
99000 99252

ನಿರುದ್ಯೋಗ ದರ ಶೇ 5.1ರಷ್ಟು ದಾಖಲು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಇದೇ ಮೊದಲ ಬಾರಿಗೆ ಏಪ್ರಿಲ್‌ನಿಂದ ನಿರುದ್ಯೋಗ ದರ ಕುರಿತಂತೆ ಮಾಸಿಕವಾರು ಅಂಕಿಅಂಶ ಬಿಡುಗಡೆಗೆ ಮುಂದಾಗಿದೆ.

ಏಪ್ರಿಲ್‌ನಲ್ಲಿ 15 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯೋಮಾನದವರ ನಿರುದ್ಯೋಗದ ಪ್ರಮಾಣವು ಶೇ 5.1ರಷ್ಟಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದಿಂದ ಗುರುವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಈ ಪೈಕಿ 15ರಿಂದ 29 ವರ್ಷದೊಳಗಿನವರ ನಿರುದ್ಯೋಗದ ಪ್ರಮಾಣ ಶೇ 13.8ರಷ್ಟಿದೆ. ನಗರ ಪ್ರದೇಶದಲ್ಲಿ ಈ ವಯೋಮಾನದವರ ನಿರುದ್ಯೋಗ ಪ್ರಮಾಣ ಶೇ 17.2ರಷ್ಟಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ 12.3ರಷ್ಟಿದೆ ಎಂದು ತಿಳಿಸಿದೆ.

ಈ ಮೊದಲು ಸರ್ಕಾರವು ತ್ರೈಮಾಸಿಕ ಮತ್ತು ವಾರ್ಷಿಕವಾಗಿ ನಿರುದ್ಯೋಗ ದರದ ಅಂಕಿ ಅಂಶಗಳನ್ನು ಬಿಡುಗಡೆ ಮಾಡುತ್ತಿತ್ತು. ಈ ಮಾಹಿತಿಯ ಅಸ್ಪಷ್ಟ ಚಿತ್ರಣ ನೀಡುತ್ತದೆ ಎಂಬ ದೂರು ಕೇಳಿಬಂದಿದ್ದರಿಂದ ಮಾಸಿಕವಾರು ಬಿಡುಗಡೆಗೆ ಮುಂದಾಗಿದೆ.

ಚಿನ್ನದ ದರ ₹1,800 ಇಳಿಕೆ

ನವದೆಹಲಿ (ಪಿಟಿಐ): ಸತತ ಎರಡನೇ ದಿನವಾದ ಗುರುವಾರದ ವಹಿವಾಟಿನಲ್ಲಿ ಚಿನ್ನದ ಬೆಲೆಯು ಇಳಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕ ಮತ್ತು ಚೀನಾವು ಸುಂಕ ಸಮರಕ್ಕೆ 90 ದಿನಗಳವರೆಗೆ ತಾತ್ಕಾಲಿಕ ವಿರಾಮ ನೀಡಿವೆ. ಇದರಿಂದ ಜಾಗತಿಕ ಮಟ್ಟದಲ್ಲಿ ತಲೆದೋರಿದ್ದ ಸುಂಕ ಸಮರದ ಭೀತಿ ಕ್ಷೀಣಿಸಿದೆ. ಹಾಗಾಗಿ, ಹಳದಿ ಲೋಹದ ಬೆಲೆಯು ಇಳಿಕೆಯ ಹಾದಿ ಹಿಡಿದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1,800 ಇಳಿಕೆಯಾಗಿದ್ದು, ₹95,050 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿದ್ದು, ₹94,600ಕ್ಕೆ ಮಾರಾಟವಾಗಿದೆ.

ಸತತ ನಾಲ್ಕನೇ ದಿನದ ವಹಿವಾಟಿನಲ್ಲಿ ಬೆಳ್ಳಿ ಧಾರಣೆಯು ಇಳಿಕೆಯಾಗಿದೆ. ಪ್ರತಿ ಕೆ.ಜಿಗೆ ₹1 ಸಾವಿರ ದರ ಇಳಿಕೆಯಾಗಿದ್ದು, ₹97 ಸಾವಿರ ಆಗಿದೆ.

ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆ ತಣ್ಣಗಾಗಿದೆ. ಸಿರಿಯಾ ಮೇಲೆ ಹೇರಿದ್ದ ನಿರ್ಬಂಧಗಳನ್ನು ತೆರವುಗೊಳಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಜಾಗತಿಕ ಬೆಳವಣಿಗೆಯು ಹಳದಿ ಲೋಹದ ಬೆಲೆ ಇಳಿಕೆಗೆ ಕಾರಣವಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲೂ ಚಿನ್ನದ ಧಾರಣೆಯು ಇಳಿಕೆಯಾಗಿದೆ. ಪ್ರತಿ ಔನ್ಸ್ (28.34 ಗ್ರಾಂ) ಬಂಗಾರದ ದರವು ಶೇ 0.53ರಷ್ಟು ಇಳಿಕೆಯಾಗಿದೆ. ಪ್ರತಿ ಔನ್ಸ್ ಬೆಲೆ 3,160 ಡಾಲರ್ (₹2.70 ಲಕ್ಷ) ಆಗಿದೆ.

ವ್ಯಾಪಾರ ಕೊರತೆ ಅಂತರ 5 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಾಗಿದ್ದು, ವಿದೇಶಿ ವ್ಯಾಪಾರದ ಕೊರತೆ ಅಂತರವು ಐದು ತಿಂಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಈ ತಿಂಗಳಿನಲ್ಲಿ ₹3.29 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ. ಈ ಪೈಕಿ ಎಲೆಕ್ಟ್ರಾನಿಕ್ಸ್ ಮತ್ತು ಎಂಜಿನಿಯರಿಂಗ್ ಸರಕುಗಳು ಹೆಚ್ಚು ರಫ್ತಾಗಿವೆ.

ಇದೇ ತಿಂಗಳಿನಲ್ಲಿ ₹5.49 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಒಟ್ಟು ವ್ಯಾಪಾರ ಕೊರತೆ ಅಂತರವು ₹2.20 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ಮಂಗಳನಲ್ಲಿ ಧ್ರುವಪ್ರಭೆ ಪತ್ತೆ ಮಾಡಿದ ನಾಸಾ ರೋವರ್

ನ್ಯೂಯಾರ್ಕ್(ಎಪಿ): ಮಂಗಳ ಗ್ರಹ ಅಧ್ಯಯನಕ್ಕಾಗಿ ನಾಸಾ ಉಡ್ಡಯನ ಮಾಡಿರುವ 'ಪರ್ಸೆವರೆನ್ಸ್' ರೋವರ್, ಅಲ್ಲಿನ ಆಗಸದಲ್ಲಿ ಹಸಿರು ವರ್ಣದ ಧ್ರುವಪ್ರಭೆಯನ್ನು (ಅರೋರಾ) ಪತ್ತೆ ಮಾಡಿದೆ.

ಅಂಗಾರಕನಲ್ಲಿ ಕಂಡುಬಂದಿರುವ ಈ ಧ್ರುವಪ್ರಭೆ ಬರಿಗಣ್ಣಿಗೆ ಕಾಣಲಿದೆ ಎಂಬುದು ವಿಶೇಷ. ಹೀಗಾಗಿ, ಭವಿಷ್ಯದಲ್ಲಿ ಅಂತರಿಕ್ಷಯಾನ ಕೈಗೊಳ್ಳುವ ಗಗನಯಾತ್ರಿಗಳು ಮಂಗಳ ಗ್ರಹದಲ್ಲಿನ ಈ ವಿದ್ಯಮಾನವನ್ನು ಕಣ್ತುಂಬಿಕೊಳ್ಳಬಹುದಾಗಿದೆ.

ಭೂಮಿ ಹೊರತುಪಡಿಸಿದಂತೆ, ಸೌರ ಮಂಡಲದ ಬೇರೆ ಗ್ರಹದಲ್ಲಿ ಇದೇ ಮೊದಲ ಬಾರಿಗೆ ಧ್ರುವಪ್ರಭೆಯನ್ನು ಪತ್ತೆ ಮಾಡಿದಂತಾಗಿದೆ ಎಂದು ಸಂಶೋಧಕರು ಹೇಳಿದ್ದಾರೆ.

ಮಂಗಳನಲ್ಲಿ ಉತ್ತರ ಧ್ರುವಪ್ರಭೆ ಮತ್ತು ದಕ್ಷಿಣ ಧ್ರುವಪ್ರಭೆ ಕಂಡುಬರುವುದನ್ನು ಮುಂಚಿತವಾಗಿಯೇ ಪತ್ತೆ ಮಾಡುವುದು ಸಾಧ್ಯ ಎಂಬುದನ್ನು ಈ ಅಧ್ಯಯನ ದೃಢಪಡಿಸಿದೆ. ಇದು, ಬಾಹ್ಯಾಕಾಶ ವಾತಾವರಣ ಅಧ್ಯಯನಕ್ಕೆ ಅನುಕೂಲ ಮಾಡಿಕೊಡುತ್ತದೆ ಎಂದು ಒಸ್ಲೊ ವಿಶ್ವವಿದ್ಯಾಲಯದ ಬಾಹ್ಯಾಕಾಶ ವಿಜ್ಞಾನಿ ಎಲೀಸ್ ರೈಟ್ ನಟ್ಸೆನ್ ಹೇಳುತ್ತಾರೆ. ಅವರ ಸಂಶೋಧನಾ ವರದಿ 'ಸೈನ್ಸ್ ಅಡ್ವಾನ್ಸಸ್' ನಿಯತಕಾಲಿಕದಲ್ಲಿ ಬುಧವಾರ ಪ್ರಕಟವಾಗಿದೆ.

'ದೂಳಿನ ಕಣಗಳಿಂದಾಗಿ ಈ ಧ್ರುವಪ್ರಭೆಯ ಹೊಳಪು ಕ್ಷೀಣಿಸಿತ್ತು. ಈ ಕಣಗಳು ಇಲ್ಲದಿದ್ದರೆ ಹಾಗೂ ಉತ್ತಮ ಗೋಚರಕ್ಕೆ ಅನುಕೂಲಕರ ವಾತಾವರಣ ಇದ್ದಾಗ, ಭವಿಷ್ಯದಲ್ಲಿ ಗಗನಯಾನಿಗಳು ಈ ಧ್ರುವಪ್ರಭೆಯನ್ನು ಸ್ಪಷ್ಟವಾಗಿ ನೋಡಬಹುದು' ಎಂದು ಸಂಶೋಧಕರು ಹೇಳಿದ್ದಾರೆ.

'ಪರ್ಸೆವರೆನ್ಸ್' ರೋವರ್ ಅನ್ನು 2020ರಲ್ಲಿ ಉಡ್ಡಯನ ಮಾಡಲಾಗಿದೆ. 2021ರಿಂದ ಈ ರೋವರ್, ಮಂಗಳ ಗ್ರಹದ ಜೆಜೆರೊ ಕುಳಿ (ಜೆಜೆರೊ ಕ್ರೇಟರ್) ಕುರಿತು ಅಧ್ಯಯನ ನಡೆಸುತ್ತಿದೆ. ಅಲ್ಲಿನ ದೂಳು ಹಾಗೂ ಶಿಲೆಯ ಮಾದರಿಗಳನ್ನು ಈ ರೋವರ್ ಮರಳಿ ಭೂಮಿಗೆ ತರಲಿದೆ.

ಜೆಜೆರೊ ಕುಳಿಯು ಈ ಹಿಂದೆ ಸರೋವರವಾಗಿತ್ತು. ಮಂಗಳ ಗ್ರಹದಲ್ಲಿ ಲಕ್ಷಾಂತರ ವರ್ಷಗಳ ಹಿಂದೆ ಸೂಕ್ಷ್ಮಾಣುಜೀವಿಗಳು ಇದ್ದವು ಎಂಬುದಕ್ಕೆ ಈ ಕುಳಿ ಪುರಾವೆಯಾಗಬಹುದು ಎಂದು ವಿಜ್ಞಾನಿಗಳು ವಿಶ್ಲೇಷಿಸುತ್ತಾರೆ.

ಸಂಕ್ಷಿಪ್ತ ಸುದ್ದಿ

'ಬುದ್ಧನ ತತ್ವ ಈಗ ಹೆಚ್ಚು ಪ್ರಸ್ತುತ'

ವಿಶ್ವಸಂಸ್ಥೆ (ಪಿಟಿಐ) ಭಗವಾನ್ ಬುದ್ಧನ 'ಮಧ್ಯಮ ಮಾರ್ಗ' ತತ್ವವು ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಸ್ತುತವಾಗಿದೆ ಎಂದು ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಪ್ರತಿಪಾದಿಸಿದ್ದಾರೆ.

ಬುದ್ಧ ಪೂರ್ಣಿಮೆ ಅಂಗವಾಗಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜಗತ್ತಿನಲ್ಲಿ ತಲೆದೋರಿರುವ ಅನಿಶ್ಚಿತತೆಯ ಈ ಸಂದರ್ಭದಲ್ಲಿ ಬುದ್ಧನ ಬೋಧನೆಗಳು ಮಾರ್ಗದರ್ಶಿಯಾಗಬಹುದು. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಮರೆತು, ಪ್ರೀತಿ ಮತ್ತು ದಯೆಯನ್ನು ಅಳವಡಿಸಿಕೊಳ್ಳಲು ನಮ್ಮನ್ನು ಪ್ರೋತ್ಸಾಹಿಸುತ್ತವೆ' ಎಂದರು.

ಬೌದ್ಧಧರ್ಮವು ಭಾರತದಲ್ಲಿ ಹುಟ್ಟು ಪಡೆದಿದೆ ಎಂಬುದನ್ನು ಒತ್ತಿ ಹೇಳಿದ ಅವರು, 'ಬೌದ್ಧ ಧರ್ಮದ ಪರಂಪರೆಯನ್ನು ಆಚರಿಸಲು ನಮಗೆ ಈ ಕಾರ್ಯಕ್ರಮ ಒಂದು ವೇದಿಕೆಯಾಗಿದೆ' ಎಂದು ತಿಳಿಸಿದರು.

ವೆಸಕ್ ದಿನಾಚರಣೆ ಕಾರ್ಯಕ್ರಮದ ಸಹ ಆಯೋಜಕ ರಾಷ್ಟ್ರಗಳಾದ ಥಾಯ್ಲೆಂಡ್ ಮತ್ತು ಶ್ರೀಲಂಕಾದ ಕಾಯಂ ಪ್ರತಿನಿಧಿಗಳಿಗೆ ಹರೀಶ್ ಧನ್ಯವಾದ ಸಲ್ಲಿಸಿದರು.

ಪರ್ವತಾರೋಹಣ: ಭಾರತ ಮೂಲದ ಟೆಕಿ ಸೇರಿ ಮೂವರ ಸಾವು

ನ್ಯೂಯಾರ್ಕ್(ಪಿಟಿಐ): ಅಮೆರಿಕದ ವಾಷಿಂಗ್ಟನ್‌ನ ಉತ್ತರ ಕ್ಯಾಸ್ಕೇಡ್ಸ್ ರೇಂಜ್‌ನಲ್ಲಿ ಪರ್ವತಾರೋಹಣ ವೇಳೆ ಬಿರುಗಾಳಿಯಿಂದ ಸಂಭವಿಸಿದ ಅವಘಡದಲ್ಲಿ ಭಾರತ ಮೂಲದ ಟೆಕಿ ವಿಷ್ಣು ಇರಿಗಿರೆಡ್ಡಿ (48) ಸೇರಿ ಮೂವರು ಮೃತಪಟ್ಟಿದ್ದಾರೆ.

ಸಿಯಾಟಲ್ ನಿವಾಸಿಯಾಗಿರುವ ವಿಷ್ಣು ಅವರು ತಮ್ಮ ಮೂವರು ಸ್ನೇಹಿತರೊಂದಿಗೆ ಕ್ಯಾಸ್ಕೇಡ್ಸ್‌ನಲ್ಲಿ ಪರ್ವತಾರೋಹಣಕ್ಕೆ ತೆರಳಿದ್ದ ವೇಳೆ ಶನಿವಾರ ಬಿರುಗಾಳಿ ಬೀಸಿದೆ. ಇದನ್ನು ಗಮನಿಸಿದ ಅವರು ಪರ್ವತದಿಂದ ಕೆಳಗಿಳಿಯಲು ಯತ್ನಿಸಿದ್ದಾರೆ. ಸುರಕ್ಷಿತವಾಗಿ ಏರಲು ಅಥವಾ ಇಳಿಯಲು ಆಧಾರವಾಗಿ ಬಳಸುವ ಉಪಕರಣವು ವಿಫಲವಾಗಿದೆ. ಇದರಿಂದ ನಾಲ್ವರೂ ಸುಮಾರು 200 ಅಡಿಗಳಷ್ಟು ಕೆಳಗೆ ಬಿದ್ದಿದ್ದಾರೆ. ಈ ವೇಳೆ ಮೂವರು ಮೃತಪಟ್ಟಿದ್ದು, ಒಬ್ಬ ಪರ್ವತಾರೋಹಿ ಬದುಕುಳಿದಿದ್ದಾರೆ.

ವಿಷ್ಣು ಅವರು ಅನುಭವಿ ಪರ್ವತಾರೋಹಿಯಾಗಿದ್ದರು ಎಂದು ಅವರ ಸ್ನೇಹಿತರು ಮತ್ತು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಗಾಜಾ ಮೇಲೆ ದಾಳಿ 54 ಜನ ಸಾವು

ಖಾನ್ ಯೂನಿಸ್ (ಎಪಿ): ದಕ್ಷಿಣ ಗಾಜಾದ ಖಾನ್ ಯೂನಿಸ್ ನಗರದ ಮೇಲೆ ಸತತ 2ನೇ ದಿನವೂ ವೈಮಾನಿಕ ದಾಳಿ ನಡೆದಿದ್ದು 54 ಮಂದಿ ಮೃತಪಟ್ಟಿದ್ದಾರೆ.

ವರದಿಗಳ ಪ್ರಕಾರ, ಬುಧವಾರ ರಾತ್ರಿ 10 ಬಾರಿ ದಾಳಿ ನಡೆದಿದ್ದು, ನಾಸ್ಸರ್ ಆಸ್ಪತ್ರೆಯ ಶವಾಗಾರಕ್ಕೆ ಸಾಲು ಸಾಲು ಮೃತದೇಹಗಳನ್ನು ಸಾಗಿಸಲಾಗಿದೆ. ಹಲವು ದೇಹಗಳನ್ನು ಛಿದ್ರಗೊಂಡ ಸ್ಥಿತಿಯಲ್ಲೇ ತರಲಾಯಿತು ಎಂದು ಶವಾಗಾರದ ಅಧಿಕಾರಿಗಳು ದೃಢಪಡಿಸಿದ್ದಾರೆ.

ತಮಿಳುನಾಡು: 9 ವಿ.ವಿಗಳಿಗೆ ಕುಲಪತಿ ನೇಮಕ ಪ್ರಕ್ರಿಯೆ ಆರಂಭ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ರಾಜ್ಯ ಸರ್ಕಾರದ ಆರ್ಥಿಕ ನೆರವಿನ ಒಂಬತ್ತು ವಿಶ್ವವಿದ್ಯಾಲಯಗಳಿಗೆ ಕುಲಪತಿ ನೇಮಕಕ್ಕಾಗಿ ಹೆಸರು ಶಿಫಾರಸು ಮಾಡಲು ಡಿಎಂಕೆ ಸರ್ಕಾರ ಶೋಧನಾ ಸಮಿತಿಗಳನ್ನು ಪುನರ್ ರಚಿಸಿದೆ.

ರಾಜ್ಯ ಸರ್ಕಾರ ಮತ್ತು ರಾಜ್ಯಪಾಲ ಆರ್.ಎನ್.ರವಿ ನಡುವಣ ತಿಕ್ಕಾಟದ ಹಿನ್ನೆಲೆಯಲ್ಲಿ ಈ ವಿಶ್ವವಿದ್ಯಾಲಯಗಳು ಸೇರಿದಂತೆ 11 ವಿ.ವಿಗಳ ಕುಲಪತಿ ಸ್ಥಾನ ಒಂದು ವರ್ಷದಿಂದ ಖಾಲಿ ಉಳಿದಿತ್ತು.

ಕುಲಪತಿಯವರನ್ನು ನೇಮಿಸುವ ಅಧಿಕಾರ ರಾಜ್ಯ ಸರ್ಕಾರದ್ದು ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿತ್ತು. ಈ ಹಿನ್ನಲೆಯಲ್ಲಿ ಸರ್ಕಾರ ಈಗ ಪ್ರಕ್ರಿಯೆಯನ್ನು ಆರಂಭಿಸಿದೆ.

'ಶೋಧನಾ ಸಮಿತಿಗಳು ತಮ್ಮ ಶಿಫಾರಸುಗಳನ್ನು ಉನ್ನತ ಶಿಕ್ಷಣ ಇಲಾಖೆಗೆ ನೀಡಬೇಕು. ಈ ಹಿಂದೆ ಇದ್ದಂತೆ ರಾಜ್ಯಪಾಲರಿಗೆ ಅಲ್ಲ' ಎಂದು ಸರ್ಕಾರ ಈ ಕುರಿತ ಆದೇಶದಲ್ಲಿ ಸೂಚಿಸಿದೆ.

ಅಣ್ಣಾ, ಅಣ್ಣಾಮಲೈ, ಮಧುರೈ ಕಾಮರಾಜ, ತಮಿಳುನಾಡು ಶಿಕ್ಷಕರ ಶಿಕ್ಷಣ ವಿಶ್ವವಿದ್ಯಾಲಯ ಸೇರಿದಂತೆ 9 ವಿ.ವಿ.ಗಳಿಗೆ ಕುಲಪತಿ ನೇಮಕ ಸಂಬಂಧ ಶೋಧನಾ ಸಮಿತಿ ಪುನರ್ ರಚಿಸಿ ಸರ್ಕಾರ ಪ್ರತ್ಯೇಕ ಆದೇಶ ಹೊರಡಿಸಿದೆ.

ಈ ವಿ.ವಿಗಳಿಗೆ ಆಗಸ್ಟ್ ಒಳಗೆ ಕುಲಪತಿ ನೇಮಕ ಆಗಬಹುದು ಎಂದು ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಇಸ್ತಾಂಬುಲ್‌ನಲ್ಲಿ ಉಕ್ರೇನ್-ರಷ್ಯಾ ಶಾಂತಿ ಮಾತುಕತೆ

ಟರ್ಕಿಗೆ ಬಂದ ಝೆಲೆನ್‌ಸ್ಕಿ; ಪುಟಿನ್ ಗೈರು



ಝೆಲೆನ್‌ಸ್ಕಿ

ಇಸ್ತಾಂಬುಲ್ (ಟರ್ಕಿ) (ಎಪಿ): ಉಕ್ರೇನ್– ರಷ್ಯಾ ನಡುವಿನ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಮಾತುಕತೆ ನಡೆಸಲು ಉಭಯ ದೇಶಗಳ ನಿಯೋಗಗಳು ಗುರುವಾರ ಟರ್ಕಿಗೆ ಬಂದಿಳಿದಿವೆ.

ಆದರೆ, ಮಾತುಕತೆ ವೇಳೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಪರಸ್ಪರ ಭೇಟಿಯಾಗುವ ನಿರೀಕ್ಷೆ ಹುಸಿಯಾಗಿದೆ. ಝೆಲೆನ್‌ಸ್ಕಿ ಅವರು ಗುರುವಾರ ಟರ್ಕಿಗೆ ಬಂದಿಳಿದರೂ, ಮಾತುಕತೆ ನಡೆಸಲಿರುವ ರಷ್ಯಾದ ನಿಯೋಗದ ಜತೆ ಪುಟಿನ್ ಬಂದಿಲ್ಲ.

ಉಕ್ರೇನ್‌ನೊಂದಿಗೆ ಶಾಂತಿ ಮಾತುಕತೆಗಾಗಿ ಸರ್ಕಾರದ ಕೆಳಹಂತದ ಅಧಿಕಾರಿಗಳನ್ನೊಳಗೊಂಡ ರಷ್ಯಾದ ನಿಯೋಗ ಇಸ್ತಾಂಬುಲ್‌ಗೆ ಆಗಮಿಸಿದೆ ಎಂದು ರಷ್ಯಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮರಿಯಾ ಜಖರೋವಾ ಗುರುವಾರ ತಿಳಿಸಿದ್ದಾರೆ. ಝೆಲೆನ್‌ಸ್ಕಿ ನೇತೃತ್ವದ ಉಕ್ರೇನ್‌ನ ನಿಯೋಗ ಟರ್ಕಿಯ ರಾಜಧಾನಿ ಅಂಕಾರಾಗೆ ಬಂದಿಳಿಯಿತು.

ತನ್ನ ನಿಯೋಗದಲ್ಲಿರುವ ಅಧಿಕಾರಿಗಳ ಹೆಸರುಗಳನ್ನು ರಷ್ಯಾ ಬುಧವಾರ ಬಿಡುಗಡೆ ಮಾಡಿತ್ತು. ಈ ಪಟ್ಟಿಯಲ್ಲಿ ಪುಟಿನ್ ಹೆಸರು ಇರಲಿಲ್ಲ. ರಷ್ಯಾ, ಶಾಂತಿ ಮಾತುಕತೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬ ಟೀಕೆಯೂ ಕೇಳಿಬಂದಿದೆ.

ಪುಟಿನ್ ಅವರ ಆಪ್ತರಾದ ವ್ಲಾದಿಮಿರ್ ಮೆಡಿನ್‌ಸ್ಕಿ ಅವರು ರಷ್ಯಾ ನಿಯೋಗದ ನೇತೃತ್ವ ವಹಿಸಿದ್ದು, ಇತರ ಮೂವರು ಹಿರಿಯ ಅಧಿಕಾರಿಗಳು ಜತೆಗಿದ್ದಾರೆ. ಸರ್ಕಾರದ ಕೆಳ ಹಂತದ ನಾಲ್ವರು ಅಧಿಕಾರಿಗಳು ಕೂಡ ತಂಡದಲ್ಲಿದ್ದಾರೆ.

ಮೂರು ವರ್ಷಗಳ ಯುದ್ಧವನ್ನು ಕೊನೆಗೊಳಿಸುವ ಕುರಿತು ಮಾತನಾಡಲು ಟರ್ಕಿಯಲ್ಲಿ ವೈಯಕ್ತಿಕವಾಗಿ ಭೇಟಿಯಾಗುವಂತೆ ಝೆಲೆನ್‌ಸ್ಕಿ ಅವರು ರಷ್ಯಾ ಅಧ್ಯಕ್ಷರಿಗೆ ಸವಾಲು ಹಾಕಿದ್ದರು. 'ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಅವರನ್ನು ಭೇಟಿಯಾಗಲು ಅಂಕಾರಾಗೆ ಪ್ರಯಾಣಿಸುತ್ತೇನೆ ಮತ್ತು ಅಲ್ಲಿ ಪುಟಿನ್ ಅವರಿಗಾಗಿ ಕಾಯುತ್ತೇನೆ' ಎಂದಿದ್ದರು.

'ಝೆಲೆನ್‌ಸ್ಕಿ ಅವರು ಪುಟಿನ್ ಜತೆ ಮಾತ್ರ ಮಾತುಕತೆ ನಡೆಸುವರು. ರಷ್ಯಾದ ನಿಯೋಗದ ಇತರ ಅಧಿಕಾರಿಗಳ ಜತೆ ಮಾತನಾಡಲು ಸಿದ್ಧರಿಲ್ಲ' ಎಂದು ಉಕ್ರೇನ್ ಈಚೆಗೆ ಹೇಳಿತ್ತು.

ಅಚ್ಚರಿಯಾಗಿಲ್ಲ: ಡೊನಾಲ್ಡ್ ಟ್ರಂಪ್

ದೋಹಾ (ಕತಾರ್): ಉಕ್ರೇನ್ ಜತೆಗಿನ ಮಾತುಕತೆಯಲ್ಲಿ ವ್ಲಾದಿಮಿರ್ ಪುಟಿನ್ ಅವರು ಪಾಲ್ಗೊಳ್ಳದಿರುವುದು ತಮಗೆ ಅಚ್ಚರಿ ಉಂಟುಮಾಡಿಲ್ಲ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಹೇಳಿದ್ದಾರೆ.

ಇಸ್ತಾಂಬುಲ್‌ನಲ್ಲಿ ನಡೆಯುವ ಮಾತುಕತೆಯಲ್ಲಿ ಪರಸ್ಪರ ಭೇಟಿಯಾಗಬೇಕು ಎಂದು ಟ್ರಂಪ್ ಅವರು ಝೆಲೆನ್‌ಸ್ಕಿ ಹಾಗೂ ಪುಟಿನ್‌ಗೆ ಒತ್ತಾಯಿಸಿದ್ದರು. ಆದರೆ, ಪುಟಿನ್ ಅವರ ಗೈರುಹಾಜರಿ ನಿರೀಕ್ಷಿತವೇ ಆಗಿತ್ತು ಎಂಬ ಧಾಟಿಯಲ್ಲಿ ಟ್ರಂಪ್ ಮಾತನಾಡಿದ್ದಾರೆ.

'ನಾನು ಇಲ್ಲದಿದ್ದರೆ ಪುಟಿನ್ ಅಲ್ಲಿಗೆ (ಇಸ್ತಾಂಬುಲ್) ಹೋಗುತ್ತಾರೆ ಎಂದು ಭಾವಿಸಿರಲಿಲ್ಲ' ಎಂದು ದೋಹಾ ಭೇಟಿಯಲ್ಲಿರುವ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Hassan

ಕಮರ್ಷಿಯಲ್ ನಾರ್ತ್ ಈಸ್ಟ್ ಕಾರ್ನರ್ KHB ಸೈಟ್ ಮಾರಾಟಕ್ಕೆ ಇದೆ, ಹೊಸ ಬಸ್ ನಿಲ್ದಾಣದ ಎದುರು ಹಾಸನ ಸಂಪರ್ಕಿಸಿ 6361444146

ಉದ್ಯೋಗಾವಕಾಶ

Cook

ಅನುಭವವುಳ್ಳ ಸೌತ್ ಇಂಡಿಯನ್ ಚೆಫ್ ಬೇಕಾಗಿದ್ದಾರೆ. ಸಂಪರ್ಕಿಸಿ: +91 9019793857, +91 9986666778. ಗ್ರೀನ್ ಪಾತ್ ರೆಸ್ಟೋರೆಂಟ್, ಮಂತ್ರಿಮಾಲ್ ಮೆಟ್ರೊಸ್ಟೇಷನ್ ಮುಂಭಾಗ, ಮಲ್ಲೇಶ್ವರಂ.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ. 14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಭವಿಷ್ಯ

Astrology

(ಪ್ರೇಮ ಭವಿಷ್ಯ) LOVE BREAKUP ಸ್ತ್ರೀಲೈಂಗಿಕ ಸಂಭೋಗ ವಶೀಕರಣ ಶತ್ರುಉಚ್ಚಾಟನೆ ಶತ್ರುಸ್ತಂಭನ ಶತ್ರುಸರ್ವನಾಶ ಇಷ್ಟಪಟ್ಟವರು ನಿಮ್ಮಂತೆ ಆಗಲು ಗಂಡಹೆಂಡತಿ ಸಮಸ್ಯೆ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಕುತೂಹಲ ಕೆರಳಿಸಿದ ಪುನರಾರಂಭದ ಹಂತ • ಹಾಲಿ ಚಾಂಪಿಯನ್ ಕೋಲ್ಕತ್ತ ಮೇಲೆ ತೂಗುಗತ್ತಿ

ಬೆಂಗಳೂರಿಗೆ ಪ್ಲೇಆಫ್ ಹಾದಿ ಕಷ್ಟವಲ್ಲ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ಬಹಳಷ್ಟು ಸಲ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ಲೇಆಫ್ ಹಂತವನ್ನು ಪ್ರವೇಶಿಸಲು ಪ್ರಯಾಸಪಟ್ಟಿದೆ. ಅಂಕ ಮತ್ತು ನೆಟ್ ರನ್‌ರೇಟ್ ಏರಿಳಿತಗಳ ಲೆಕ್ಕಾಚಾರದ ಮೇಲೆ ಅವಲಂಬಿತವಾಗಿದ್ದೇ ಹೆಚ್ಚು. ಆದರೆ ಈ ಬಾರಿ ಪರಿಸ್ಥಿತಿ ತದ್ವಿರುದ್ಧವಾಗಿದೆ. ಆರ್‌ಸಿಬಿ ತಂಡದ ಪ್ಲೇ ಆಫ್ ಹಾದಿ ಮೇಲ್ನೋಟಕ್ಕೆ ಸರಳವಾಗಿ ಕಾಣುತ್ತಿದೆ. ಅಲ್ಲದೇ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು 'ದುಬಾರಿ' ಮೌಲ್ಯ ಪಡೆದ ರಿಷಭ್ ಪಂತ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡಗಳ ಹಣೆಬರಹ ನಿರ್ಧರಿಸುವ ಸ್ಥಾನದಲ್ಲಿ ಈಗ ಬೆಂಗಳೂರು ತಂಡವಿದೆ.

ಭಾರತ ಮತ್ತು ಪಾಕಿಸ್ತಾನ ಸಂಘರ್ಷದ ಕಾರಣದಿಂದ ಒಂದು ವಾರ ಸ್ಥಗಿತಗೊಂಡಿದ್ದ ಟೂರ್ನಿ ಶನಿವಾರ ಪುನರಾರಂಭವಾಗಲಿದೆ. ಒಟ್ಟು 13 ಲೀಗ್ ಪಂದ್ಯಗಳು ಈ ಸುತ್ತಿನಲ್ಲಿ ನಡೆಯಲಿವೆ. ಈಗಾಗಲೇ ಸನ್‌ರೈಸರ್ಸ್ ಹೈದರಾಬಾದ್, ರಾಜಸ್ಥಾನ ರಾಯಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿವೆ. ಉಳಿದ ಏಳು ತಂಡಗಳಲ್ಲಿ ಗುಜರಾತ್ ಟೈಟನ್ಸ್ ಮತ್ತು ಆರ್‌ಸಿಬಿ ತಂಡಗಳು ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿವೆ. ಆದರೂ ಪ್ಲೇ ಆಫ್ ಖಚಿತವಾಗಿಲ್ಲ. ಅದರಿಂದಾಗಿಯೇ ಲೀಗ್ ಹಂತದ ಉಳಿದ ಪಂದ್ಯಗಳು ಕುತೂಹಲ ಕೆರಳಿಸಿವೆ.

ಗುಜರಾತ್ ಟೈಟನ್ಸ್

ಬಾಕಿ ಪಂದ್ಯಗಳು: ಡೆಲ್ಲಿ, ಲಖನೌ, ಚೆನ್ನೈ


ಶುಭಮನ್ ಗಿಲ್

ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡವು ಈಗ ಪಾಯಿಂಟ್‌ಪಟ್ಟಿಯ ಅಗ್ರಸ್ಥಾನದಲ್ಲಿದೆ. ತನ್ನ 11ನೇ ಪಂದ್ಯದಲ್ಲಿ ಮುಂಬೈ ಎದುರು ರೋಚಕ ಜಯ ಸಾಧಿಸುವ ಮೂಲಕ ಮೊದಲ ಸ್ಥಾನಕ್ಕೇರಿತ್ತು. ಈಗ ತನ್ನ ಪಾಲಿನ 3 ಪಂದ್ಯಗಳಲ್ಲಿ ಒಂದರಲ್ಲಿ ಜಯಿಸಿದರೂ 18 ಅಂಕ ಮುಟ್ಟಲಿದೆ. ಆ ಮೂಲಕ ಅಗ್ರ 4ರಲ್ಲಿ ಸ್ಥಾನ ಖಚಿತಪಡಿಸಿಕೊಳ್ಳುವ ಅವಕಾಶ ಇದೆ. ಎಲ್ಲ ಪಂದ್ಯಗಳಲ್ಲಿ ಗೆದ್ದರಂತೂ ಅಗ್ರಸ್ಥಾನಕ್ಕೆ ಲಗ್ಗೆ ಇಡುವ ಸಾಧ್ಯತೆ ಇದೆ. ಆದರೆ ಈ ಹಂತದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ತಂಡಗಳಿಗೂ ಪೈಪೋಟಿಯಲ್ಲಿ ಉಳಿಯಲು ಗುಜರಾತ್ ಎದುರು ಜಯಿಸಲೇಬೇಕು. ಚೆನ್ನೈ ತಂಡವು ಈಗಾಗಲೇ ಹೊರಬಿದ್ದಿದ್ದರೂ ಗಿಲ್ ಬಳಗದ ಓಟಕ್ಕೆ ಅಡ್ಡಿಪಡಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಬಾಕಿ ಪಂದ್ಯ: ಲಖನೌ, ಹೈದರಾಬಾದ್, ಕೋಲ್ಕತ್ತ

ಬಿಡುವಿಗೂ ಮುನ್ನ ಸತತ ನಾಲ್ಕು ಪಂದ್ಯಗಳಲ್ಲಿ ಆರ್‌ಸಿಬಿ ಜಯಿಸಿತ್ತು. ಅದರಿಂದಾಗಿ ಭರ್ತಿ ಆತ್ಮವಿಶ್ವಾಸದಲ್ಲಿದೆ. ಇನ್ನೊಂದು ಪಂದ್ಯದಲ್ಲಿ ಗೆದ್ದರೆ 18 ಅಂಕ ಪೂರೈಸಿ ಪ್ಲೇ ಆಫ್ ಪ್ರವೇಶಿಸಬಹುದು. ಒಂದೊಮ್ಮೆ ತನ್ನ ಪಾಲಿನ ಎಲ್ಲ ಪಂದ್ಯಗಳನ್ನು ಸೋತರೆ ಸ್ಪರ್ಧೆಯಿಂದ ಹೊರಬೀಳುವ ಆತಂಕವೂ ಇದೆ. ಆರ್‌ಸಿಬಿಯು ಇನ್ನುಳಿದಿರುವ ಎರಡು ಪಂದ್ಯಗಳನ್ನು ತವರಿನಲ್ಲಿ ಆಡಲಿದೆ. ಮತ್ತೊಂದು ಲಖನೌನಲ್ಲಿ ನಡೆಯಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದುವರೆಗೆ ಆಡಿರುವ ಐದು ಪಂದ್ಯಗಳ ಪೈಕಿ ಆರ್‌ಸಿಬಿಯು ಎರಡರಲ್ಲಿ ಜಯಿಸಿ, ಉಳಿದದ್ದರಲ್ಲಿ ಸೋತಿದೆ. ಆದರೆ ತವರಿನಾಚೆ ಅಜೇಯವಾಗಿದೆ. ಪುನರಾರಂಭದ ಮೊದಲ ಪಂದ್ಯವು ಚಿನ್ನಸ್ವಾಮಿಯಲ್ಲಿ ಆರ್‌ಸಿಬಿಯು ಕೋಲ್ಕತ್ತ ವಿರುದ್ಧ ಆಡಲಿದೆ. ಈ ಪಂದ್ಯದಲ್ಲಿ ಗೆದ್ದರೆ ಬೆಂಗಳೂರು ಹಾದಿ ಸುಗಮ. ಕೋಲ್ಕತ್ತ ಕತೆ ಮುಕ್ತಾಯ.

ರಜತ್ ಪಾಟೀದಾರ್

ಪಂಜಾಬ್ ಕಿಂಗ್ಸ್

ಬಾಕಿ ಪಂದ್ಯಗಳು: ಡೆಲ್ಲಿ, ಮುಂಬೈ, ರಾಜಸ್ಥಾನ

ಶ್ರೇಯಸ್ ಅಯ್ಯರ್

ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡಕ್ಕೆ ಪ್ಲೇ ಆಫ್ ಹಾದಿ ಕಷ್ಟವೇನಲ್ಲ. ಸದ್ಯ ಮೂರನೇ ಸ್ಥಾನದಲ್ಲಿರುವ ತಂಡವು ಇನ್ನೊಂದು ಪಂದ್ಯ ಗೆದ್ದರೂ 17 ಅಂಕ ಮುಟ್ಟಲಿದೆ. ಇದರಿಂದ ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯುವುದು ನಿಚ್ಚಳವಾಗಲಿದೆ. ಪಂಜಾಬ್ ತಂಡವು ತನ್ನ ಮೂರು ಪಂದ್ಯಗಳನ್ನೂ ಜೈಪುರದಲ್ಲಿ ಆಡಲಿದೆ. ಪಂಜಾಬ್ ತನ್ನ ತವರಿನ ತಾಣಗಳಾಗಿರುವ ಚಂಡೀಗಡ ಮತ್ತು ಧರ್ಮಶಾಲಾದಲ್ಲಿ ಪಂದ್ಯಗಳನ್ನು (ಭಾರತ–ಪಾಕ್ ಗಡಿ ಸಂಘರ್ಷದ ಕಾರಣ) ನಡೆಸುವಂತಿಲ್ಲ. ಆದ್ದರಿಂದ ಕಿಂಗ್ಸ್ ತಟಸ್ಥ ತಾಣದಲ್ಲಿ ಆಡಲಿದೆ. ಡೆಲ್ಲಿ ಮತ್ತು ಮುಂಬೈ ತಂಡಗಳು ಕಠಿಣ ಪೈಪೋಟಿಯನ್ನೂ ಒಡ್ಡುವ ನಿರೀಕ್ಷೆ ಇದೆ.

ಮುಂಬೈ ಇಂಡಿಯನ್ಸ್

ಬಾಕಿ ಪಂದ್ಯ: ಪಂಜಾಬ್ ಮತ್ತು ಡೆಲ್ಲಿ

ಹಾರ್ದಿಕ್ ಪಾಂಡ್ಯ

ಟೂರ್ನಿಯ ಆರಂಭಿಕ ಹಂತದಲ್ಲಿ ನಾಲ್ಕು ಪಂದ್ಯ ಸೋತಿದ್ದ ಮುಂಬೈ ನಂತರದಲ್ಲಿ ಪುಟಿದೆದ್ದ ರೀತಿ ಅಮೋಘ. ಸತತ ಆರು ಪಂದ್ಯಗಳನ್ನು ಜಯಿಸಿದ್ದ ಹಾರ್ದಿಕ್ ಪಾಂಡ್ಯ ಬಳಗವು ಈಚೆಗೆ ಗುಜರಾತ್ ಟೈಟನ್ಸ್ ಎದುರು ಸೋತಿತ್ತು. ಆದರೆ ಇದರಿಂದ ಮುಂಬೈ ತಂಡದ ಪ್ಲೇಆಫ್ ಅವಕಾಶ ಕೈತಪ್ಪಿಲ್ಲ. ತಂಡಕ್ಕೆ ಇನ್ನುಳಿದಿರುವುದು ಎರಡು ಪಂದ್ಯಗಳು ಮಾತ್ರ. ಈ ಪಂದ್ಯಗಳಲ್ಲಿ ಜಯಿಸಿದರೆ ಒಟ್ಟು 18 ಅಂಕ ಗಳಿಸಬಹುದು. ಇದರಿಂದ ಅಗ್ರ 4ರಲ್ಲಿ ಸ್ಥಾನ ಖಚಿತವಾಗಬಹುದು. ಆದರೆ ಒಂದರಲ್ಲಿ ಗೆದ್ದು, ಇನ್ನೊಂದು ಸೋತರೆ ಉಳಿದ ತಂಡಗಳ ಪಾಯಿಂಟ್ ಲೆಕ್ಕಾಚಾರದ ಮೇಲೆ ಅವಲಂಬಿತವಾಗಬಹುದು. ಆದರೆ ಎರಡೂ ಸೋತರೆ ಹೊರಬೀಳುವುದು ಖಚಿತ.

ಡೆಲ್ಲಿ ಕ್ಯಾಪಿಟಲ್ಸ್

ಬಾಕಿ ಪಂದ್ಯಗಳು: ಗುಜರಾತ್, ಮುಂಬೈ, ಪಂಜಾಬ್

ಅಕ್ಷರ್ ಪಟೇಲ್

ಅಕ್ಷರ್ ಪಟೇಲ್ ನಾಯಕತ್ವದ ತಂಡವು ಟೂರ್ನಿಯ ಆರಂಭವನ್ನು ಚೆನ್ನಾಗಿಯೇ ಮಾಡಿತ್ತು. ಮಧ್ಯದ ಹಂತದಲ್ಲಿ ಕೆಲವು ಸೋಲು ಮತ್ತು ಮಳೆಯಿಂದಾಗಿ ಅಂಕಗಳನ್ನು ಕಳೆದುಕೊಂಡಿತು. ಸದ್ಯ ಐದನೇ ಸ್ಥಾನದಲ್ಲಿದೆ. ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯಬೇಕಾದರೆ ಇನ್ನುಳಿದಿರುವ ಮೂರು ಪಂದ್ಯಗಳನ್ನೂ ಜಯಿಸುವ ಒತ್ತಡದಲ್ಲಿದೆ. ಎರಡರಲ್ಲಿ ಜಯಿಸಿದರೆ, ಬೇರೆ ತಂಡಗಳ ಅಂಕಗಳ ಲೆಕ್ಕಾಚಾರವನ್ನು ಕಾಯ-ಬೇಕಾಗುತ್ತದೆ. ಅದೃಷ್ಟದ ಮೊರೆ ಹೋಗಬೇಕು. ಎರಡರಲ್ಲಿ ಸೋತರೆ ನಾಕೌಟ್ ಬಾಗಿಲು ಮುಚ್ಚಲಿದೆ.

ಕೋಲ್ಕತ್ತ ನೈಟ್ ರೈಡರ್ಸ್

ಬಾಕಿ ಪಂದ್ಯ: ಆರ್‌ಸಿಬಿ, ಸನ್‌ರೈಸರ್ಸ್

ಅಜಿಂಕ್ಯ ರಹಾನೆ

ಹಾಲಿ ಚಾಂಪಿಯನ್ ತಂಡಕ್ಕೆ ಈಗ ಉಳಿದಿರುವ ಎರಡೂ ಪಂದ್ಯಗಳಲ್ಲಿ ಜಯಿಸಿದರೂ ಪ್ಲೇಆಫ್ ಖಚಿತವಿಲ್ಲ. ಏಕೆಂದರೆ 11 ಅಂಕ ಗಳಿಸಿರುವ ತಂಡವು ಇನ್ನೆರಡೂ ಪಂದ್ಯಗಳನ್ನು ಗೆದ್ದರೆ 15ಕ್ಕೆ ಮುಟ್ಟಬಹುದು. ಆದರೆ ಅಗ್ರ ನಾಲ್ಕು ತಂಡಗಳು ಈಗಾಗಲೇ 14 ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ್ದು ರನ್‌ರೇಟ್‌ನಲ್ಲಿಯೂ ಕೋಲ್ಕತ್ತಕ್ಕಿಂತ ಉತ್ತಮ ಸ್ಥಿತಿಯಲ್ಲಿವೆ.

ಲಖನೌ ಸೂಪರ್ ಜೈಂಟ್ಸ್

ಬಾಕಿ: ಸನ್‌ರೈಸರ್ಸ್, ಗುಜರಾತ್, ಆರ್‌ಸಿಬಿ

ರಿಷಭ್ ಪಂತ್

ರಿಷಭ್ ಪಂತ್ ನಾಯಕತ್ವದ ಲಖನೌ ತಂಡವು ತನ್ನ ಪಾಲಿನ ಎಲ್ಲ ಪಂದ್ಯಗಳನ್ನೂ ಗೆದ್ದುಬಿಟ್ಟರೆ ಒಟ್ಟು 16 ಅಂಕ ಗಳಿಸಬಹುದು. ಆಗ ಒಂದೊಮ್ಮೆ ಪಂಜಾಬ್, ಮುಂಬೈ ಮತ್ತು ಡೆಲ್ಲಿ ತಂಡಗಳು ತಮ್ಮ ಪಾಲಿನ ಎಲ್ಲ ಪಂದ್ಯಗಳನ್ನೂ ಸೋತರೆ ಲಖನೌಗೆ ಅದೃಷ್ಟ ಒಲಿಯಬಹುದು.

● ಈ ಅವಧಿಯಲ್ಲಿ ಮಳೆಯಿಂದಾಗಿ ಪಂದ್ಯಗಳ ಆಯೋಜನೆ ಮತ್ತು ಫಲಿತಾಂಶದಲ್ಲಿ ವ್ಯತ್ಯಾಸವಾಗಬಹುದು. ಆಗ ಪಾಯಿಂಟ್ ಲೆಕ್ಕಾಚಾರಗಳು ಬದಲಾಗಬಹುದು.

ಚಿನ್ನಸ್ವಾಮಿಯಲ್ಲಿ ವಿರಾಟ್ ಅಭ್ಯಾಸ

ನೆಟ್ಸ್‌ನಲ್ಲಿ ಮಯಂಕ್ ಅಗರವಾಲ್, ರಹಾನೆ ತಾಲೀಮು

ಪ್ರಜಾವಾಣಿ ವಾರ್ತೆ

ಆರ್‌ಸಿಬಿಯ ಮಯಂಕ್ ಅಗರವಾಲ್ ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು (ಎಡ). ಅಭ್ಯಾಸಕ್ಕೆ ಬಂದ ಆರ್‌ಸಿಬಿ ವಿರಾಟ್ ಕೊಹ್ಲಿ ಮತ್ತು ಕೆಕೆಆರ್ ತಂಡದ ನಾಯಕ ಅಜಿಂಕ್ಯ ರಹಾನೆ — ಎಕ್ಸ್ ಚಿತ್ರ

ಬೆಂಗಳೂರು: ವಿರಾಟ್ ಕೊಹ್ಲಿ ಅವರು ಟೆಸ್ಟ್ ಕ್ರಿಕೆಟ್ ಮಾದರಿಯಿಂದ ನಿವೃತ್ತಿ ಘೋಷಿಸಿದ ನಂತರ ಮೊದಲ ಬಾರಿಗೆ ಉದ್ಯಾನ ನಗರಿಗೆ ಬಂದಿಳಿದಿದ್ದಾರೆ.

ಇದೇ 17ರಂದು ನಡೆಯಲಿರುವ ಐಪಿಎಲ್ ಪಂದ್ಯದ ಪೂರ್ವಸಿದ್ಧತೆಗಾಗಿ ಅವರು ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದ ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದರು. ಅವರೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರೂ ಅಭ್ಯಾಸದಲ್ಲಿ ಪಾಲ್ಗೊಂಡರು. ಗಾಯಗೊಂಡಿರುವ ದೇವದತ್ತ ಪಡಿಕ್ಕಲ್ ಅವರ ಬದಲಿಗೆ ಸ್ಥಾನ ಪಡೆದಿರುವ ಮಯಂಕ್ ಅಗರವಾಲ್ ಕೂಡ ನೆಟ್ಸ್‌ನಲ್ಲಿ ಬ್ಯಾಟಿಂಗ್ ನಡೆಸಿದರು.

ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಕೂಡ ಅಭ್ಯಾಸದಲ್ಲಿ ಹಾಜರಿದ್ದರು. ಗಾಯದಿಂದಾಗಿ ಅವರು ಪಂದ್ಯದಲ್ಲಿ ಆಡುವುದಿಲ್ಲವೆಂಬ ಮಾತುಗಳು ಕೇಳಿಬಂದಿದ್ದವು. ಆದರೆ ನೆಟ್ಸ್‌ನಲ್ಲಿ ಅವರು ಚುರುಕಾಗಿ ತಾಲೀಮು ನಡೆಸಿದ್ದರಿಂದ ಕಣಕ್ಕಿಳಿಯುವ ಭರವಸೆ ಮೂಡಿದೆ.

ಇದೇ ಸಂದರ್ಭದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರೂ ಅಭ್ಯಾಸ ನಡೆಸಿದರು. ಮುಸ್ಸಂಜೆಗೆ ಮಳೆ ಬರುವ ವಾತಾವರಣ ಇದ್ದ ಕಾರಣ ಉಭಯ ತಂಡಗಳೂ ರಾತ್ರಿ ಏಳು ಗಂಟೆಯೊಳಗೆ ಅಭ್ಯಾಸ ಮುಗಿಸಿ ಹೋಟೆಲ್‌ಗೆ ಮರಳಿದವು.

ವಿರಾಟ್ ಲವಲವಿಕೆಯಿಂದ ಅಭ್ಯಾಸದಲ್ಲಿ ಪಾಲ್ಗೊಂಡರು. ಸಹ ಆಟಗಾರರೊಂದಿಗೆ ಕೀಟಲೆ ಮಾಡುತ್ತ, ನಗುತ್ತ ತಾಲೀಮು ಮಾಡಿದರು. ಕೋಲ್ಕತ್ತ ತಂಡದ ನಾಯಕ ಅಜಿಂಕ್ಯ ರಹಾನೆಯೊಂದಿಗೆ ಬಹಳ ಹೊತ್ತು ಮಾತನಾಡಿದರು. ತಮ್ಮೆದುರಿಗೆ ಬಂದ ಸಿಬ್ಬಂದಿ, ಅಧಿಕಾರಿಗಳ ಕೈಕುಲುಕಿ ನೆಟ್ಸ್‌ನತ್ತ ನಡೆದರು.

ಹೇಜಲ್‌ವುಡ್ ಲಭ್ಯ: ಪ್ಲೇ ಆಫ್ ಹೊಸ್ತಿಲಲ್ಲಿರುವ ಆರ್‌ಸಿಬಿ ತಂಡಕ್ಕೆ ಒಂದು ಶುಭಸುದ್ದಿ ಇದೆ. ತಂಡದ ಪ್ರಮುಖ ವೇಗಿ, ಆಸ್ಟ್ರೇಲಿಯಾದ ಜೋಶ್ ಹೇಜಲ್‌ವುಡ್ ಬೆಂಗಳೂರಿಗೆ ಮರಳಿದ್ದಾರೆ. ಭಾರತ–ಪಾಕ್ ಸಂಘರ್ಷದ ಕಾರಣ ಐಪಿಎಲ್ ಟೂರ್ನಿಗೆ ಒಂದು ವಾರ ಬಿಡುವು ನೀಡಿದ್ದ ಸಂದರ್ಭದಲ್ಲಿ ಬಹುತೇಕ ವಿದೇಶಿ ಆಟಗಾರರು ತಮ್ಮ ತವರಿಗೆ ಮರಳಿದ್ದರು. ಅದರಲ್ಲಿ ಬಹಳಷ್ಟು ಜನರು ಮರಳಿ ಬಂದಿಲ್ಲ. ಆದರೆ ಜೋಶ್ ಮರಳಿರುವುದು ಆರ್‌ಸಿಬಿಯಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ.

ಟಿಮ್ ಡೇವಿಡ್, ವೆಸ್ಟ್ ಇಂಡೀಸ್‌ನ ರೊಮೆರಿಯೊ ಶೆಫರ್ಡ್, ದಕ್ಷಿಣ ಆಫ್ರಿಕಾದ ಲುಂಗಿ ಗಿಡಿ ಕೂಡ ಮರಳಿ ಬಂದಿದ್ದಾರೆ.

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	11	8	3	16	0.793
ರಾಯಲ್ ಚಾಲೆಂಜರ್ಸ್ ಬೆಂಗಳೂರು	11	8	3	16	0.482
ಪಂಜಾಬ್ ಕಿಂಗ್ಸ್	11	7	3	15	0.376
ಮುಂಬೈ ಇಂಡಿಯನ್ಸ್	12	7	5	14	1.156
ಡೆಲ್ಲಿ ಕ್ಯಾಪಿಟಲ್ಸ್	11	6	4	13	0.362
ಕೋಲ್ಕತ್ತ ನೈಟ್ ರೈಡರ್ಸ್	12	5	6	11	0.193
ಲಖನೌ ಸೂಪರ್ ಜೈಂಟ್ಸ್	11	5	6	10	-0.469
ಸನ್‌ರೈಸರ್ಸ್ ಹೈದರಾಬಾದ್	11	3	7	7	-1.192
ರಾಜಸ್ಥಾನ ರಾಯಲ್ಸ್	12	3	9	6	-0.718
ಚೆನ್ನೈ ಸೂಪರ್ ಕಿಂಗ್ಸ್	12	3	9	6	-0.992

'ಪ್ಲೇಆಫ್: ದಕ್ಷಿಣ ಆಫ್ರಿಕಾ ಆಟಗಾರರನ್ನು ಬಿಡಿ'

ನವದೆಹಲಿ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಆಡುವ ದಕ್ಷಿಣ ಆಫ್ರಿಕಾದ ಆಟಗಾರರನ್ನು ಮೇ 26ರ ಒಳಗೆ ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಐಪಿಎಲ್ ಫ್ರಾಂಚೈಸಿಗಳಿಗೆ ಬಿಸಿಸಿಐ ಗುರುವಾರ ಸೂಚನೆ ನೀಡಿದೆ. ಹೀಗಾಗಿ ಈ ಆಟಗಾರರು ಪ್ಲೇ ಆಫ್ ಹಂತದಿಂದ ಲಭ್ಯರಿರುವುದಿಲ್ಲ.

ಆದರೆ ವೆಸ್ಟ್ ಇಂಡೀಸ್ ಆಟಗಾರರು ಟೂರ್ನಿಯ ಉಳಿದೆಲ್ಲಾ ಪಂದ್ಯಗಳಿಗೆ ಲಭ್ಯರಿರಲಿದ್ದಾರೆ ಎಂದು ತಂಡಗಳಿಗೆ ನೀಡಿದ ಸೂಚನೆಯಲ್ಲಿ ತಿಳಿಸಲಾಗಿದೆ. ಭಾರತ– ಪಾಕಿಸ್ತಾನ ಗಡಿ ಸಂಘರ್ಷದ ಪರಿಣಾಮ ಮೇ 9 ರಿಂದ ಸ್ಥಗಿತಗೊಂಡಿದ್ದ ಐಪಿಎಲ್‌ನ ಉಳಿದ ಪಂದ್ಯಗಳು 17 ರಿಂದ (ಶನಿವಾರ) ಮುಂದುವರಿಯಲಿವೆ. ಮೂಲ ವೇಳಾಪಟ್ಟಿಯ ಪ್ರಕಾರ ಮೇ 25ರಂದು ಫೈನಲ್ ನಡೆಯಬೇಕಿತ್ತು. ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಅಂತಿಮ ಪಂದ್ಯ ಜೂನ್ 3ಕ್ಕೆ ನಿಗದಿ ಆಗಿದೆ.

ಹೊರದೇಶಗಳ ಆಟಗಾರರ ಲಭ್ಯತೆಗೆ ಸಂಬಂಧಿಸಿ ಬಿಸಿಸಿಐ, ಕ್ರಿಕೆಟ್ ಸೌತ್ ಆಫ್ರಿಕಾ ಸೇರಿದಂತೆ ವಿದೇಶಿ ಮಂಡಳಿಗಳ ಜೊತೆ ಮಾತುಕತೆ ನಡೆಸಿತ್ತು. ಆದರೆ ಲಾರ್ಡ್ಸ್‌ನಲ್ಲಿ ಜೂನ್ 11ರಿಂದ ಡಬ್ಲ್ಯುಟಿಸಿ ಫೈನಲ್ ಇರುವ ಕಾರಣ ದಕ್ಷಿಣ ಆಫ್ರಿಕಾದ ಕ್ರಿಕೆಟ್ ಮಂಡಳಿ ತನ್ನ ಬಿಗಿಪಟ್ಟು ಸಡಿಲಿಸಲಿಲ್ಲ.

ದಕ್ಷಿಣ ಆಫ್ರಿಕಾ ಆಟಗಾರರು ಮೇ 31ರಂದು ಇಂಗ್ಲೆಂಡ್‌ನಲ್ಲಿ ಕೂಡಿಕೊಳ್ಳಲಿದ್ದಾರೆ. ವೆಸ್ಟ್ ಇಂಡೀಸ್, ಇಂಗ್ಲೆಂಡ್ ವಿರುದ್ಧ ಏಕದಿನ ಪಂದ್ಯಗಳ ಸರಣಿಯನ್ನು ಆಡಲಿದ್ದು ಮೊದಲ ಪಂದ್ಯ ಇದೇ ತಿಂಗಳ 29ರಂದು ನಡೆಯಲಿದೆ.

ದಕ್ಷಿಣ ಆಫ್ರಿಕಾದ ಆಟಗಾರರಾದ ಮಾರ್ಕೊ ಯಾನ್ಸೆನ್ (ಪಂಜಾಬ್ ಕಿಂಗ್ಸ್), ಟ್ರಿಸ್ಟನ್ ಸ್ಟಬ್ಸ್ (ಡೆಲ್ಲಿ ಕ್ಯಾಪಿಟಲ್ಸ್), ಕಗಿಸೊ ರಬಾಡ (ಗುಜರಾತ್ ಟೈಟನ್ಸ್), ಕಾರ್ಬಿನ್ ಬಾಷ್ (ಮುಂಬೈ ಇಂಡಿಯನ್ಸ್) ಅವರು ತಮ್ಮ ತಂಡಗಳ ಪರ ಉತ್ತಮ ಪ್ರದರ್ಶನ ನೀಡಿದ್ದಾರೆ. ಲಯದಲ್ಲಿರುವ ಇಂಗ್ಲೆಂಡ್ ಬ್ಯಾಟರ್ ಜೋಸ್ ಬಟ್ಲರ್ ಅವರನ್ನು ಟೈಟನ್ಸ್ ತಂಡ ಪ್ಲೇ ಆಫ್ ಪಂದ್ಯಗಳಿಗೆ ಕಳೆದುಕೊಳ್ಳುವುದು ನಿಚ್ಚಳವಾಗಿದೆ. ಅವರು ಇಂಗ್ಲೆಂಡ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಪಾಕ್ ಅಣ್ವಸ್ತ್ರ: ಐಎಇಎ ನಿಗಾವಹಿಸಲಿ

ಒಂದನೇ ಪುಟದಿಂದ...

'ಪಾಕಿಸ್ತಾನವು ಎಷ್ಟೊಂದು ಬೇಜವಾಬ್ದಾರಿಯಿಂದ ಭಾರತಕ್ಕೆ ಹಲವಾರು ಬಾರಿ ಅಣ್ವಸ್ತ್ರ ದಾಳಿಯ ಬೆದರಿಕೆ ಹಾಕಿದೆ ಎಂಬುದನ್ನು ಇಡೀ ಜಗತ್ತು ನೋಡಿದೆ' ಎಂದು ಅವರು ಸೈನಿಕರೊಂದಿಗೆ ಸಂವಾದದಲ್ಲಿ ಹೇಳಿದರು.

'ಶ್ರೀನಗರದ ನೆಲದಿಂದ ನಾನು ಜಗತ್ತಿನೆದುರು ಒಂದು ಪ್ರಶ್ನೆಯನ್ನಿಡಲು ಬಯಸುತ್ತೇನೆ. ಅಂತಹ ಬೇಜವಾಬ್ದಾರಿ ಮತ್ತು ಪುಂಡ ರಾಷ್ಟ್ರದ ಕೈಯಲ್ಲಿ ಅಣ್ವಸ್ತ್ರಗಳು ಸುರಕ್ಷಿತವಾಗಿರಲಿವೆಯೇ?' ಎಂದರು.

'ಆಪರೇಷನ್ ಸಿಂಧೂರ'ವು ಭಾರತ ತನ್ನ ಇತಿಹಾಸದಲ್ಲಿ ಭಯೋತ್ಪಾದನೆಯ ವಿರುದ್ಧ ಕೈಗೊಂಡ ಅತಿದೊಡ್ಡ ಕಾರ್ಯಾಚರಣೆ ಎಂದು ರಕ್ಷಣಾ ಸಚಿವರು ಬಣ್ಣಿಸಿದರು.

'ಕಳೆದ 35-40 ವರ್ಷಗಳಿಂದ ನಾವು ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸುತ್ತಿದ್ದೇವೆ. ಭಯೋತ್ಪಾದನೆಯ ವಿರುದ್ಧ ಯಾವುದೇ ರೀತಿಯ ಹೋರಾಟಕ್ಕೂ ಸಿದ್ಧ ಎಂಬುದನ್ನು ಭಾರತವು ಜಗತ್ತಿಗೆ ತೋರಿಸಿಕೊಟ್ಟಿದೆ' ಎಂದು ಹೇಳಿದರು.

'ಅವರು ನಮ್ಮ ಹಣೆಯ ಮೇಲೆ ದಾಳಿ ಮಾಡಿದರು. ನಾವು ಅವರ ಎದೆಯ ಮೇಲೆ ಗಾಯ ಮಾಡಿದ್ದೇವೆ. ಈಗ ಆಗಿರುವ ಗಾಯಗಳನ್ನು ಗುಣಪಡಿಸಲು ಪಾಕಿಸ್ತಾನದ ಮುಂದಿರುವ ಏಕೈಕ ಮಾರ್ಗವೆಂದರೆ, ಭಯೋತ್ಪಾದಕರಿಗೆ ಮತ್ತು ಭಯೋತ್ಪಾದಕ ಸಂಘಟನೆಗಳಿಗೆ ಬೆಂಬಲ ನೀಡುವುದನ್ನು ನಿಲ್ಲಿಸುವುದು ಆಗಿದೆ' ಎಂದರು.

ರಾಜನಾಥ ಸಿಂಗ್ ಅವರು ಶ್ರೀನಗರದಲ್ಲಿ ಸೇನೆಯ ಅಧಿಕಾರಿಯೊಬ್ಬರಿಗೆ ಸಿಹಿ ತಿನ್ನಿಸಿದರು —ಪಿಟಿಐ ಚಿತ್ರ

ರಾಜನಾಥ ಸಿಂಗ್ ಹೇಳಿಕೆಗೆ ಪಾಕ್ ಖಂಡನೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಅಣ್ವಸ್ತ್ರ ಶಸ್ತ್ರಾಗಾರದ ಕುರಿತು ರಕ್ಷಣಾ ಸಚಿವ ರಾಜನಾಥ ಸಿಂಗ್ ನೀಡಿರುವ ಹೇಳಿಕೆಯನ್ನು ಪಾಕಿಸ್ತಾನ ಖಂಡಿಸಿದೆ. ರಾಜನಾಥ ಸಿಂಗ್ ಅವರಿಗೆ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ (ಐಎಇಎ) ನಿಬಂಧನೆಗಳ ಬಗ್ಗೆ ಜ್ಞಾನವೇ ಇಲ್ಲ ಎಂದೂ ಟೀಕಿಸಿದೆ.

ಪಾಕಿಸ್ತಾನ ವಿದೇಶಾಂಗ ವ್ಯವಹಾರಗಳ ವಕ್ತಾರ ಶಫ್ಕತ್ ಅಲಿ ಖಾನ್ ಪ್ರತಿಕ್ರಿಯಿಸಿ, 'ರಾಜನಾಥ್ ಸಿಂಗ್ ಅವರ ಹೇಳಿಕೆಗಳು ಅವರ ಹತಾಶೆ ಮತ್ತು ಅಭದ್ರತೆಯನ್ನು ತೋರಿಸುತ್ತವೆ. ಅವರಿಗೆ ಐಎಇಎ ನಿಯಮಗಳ ಬಗ್ಗೆ ಅರಿವು ಇಲ್ಲ' ಎಂದಿದ್ದಾರೆ.

ಸಿಂಧೂ ಜಲ ಒಪ್ಪಂದ ಅಮಾನತು ಪರಿಶೀಲನೆ; ಪಾಕಿಸ್ತಾನದ ಮನವಿಗೆ ಭಾರತ ಪ್ರತಿಕ್ರಿಯೆ

ಭಯೋತ್ಪಾದನೆ ನಿಲ್ಲುವವರೆಗೂ ಅಮಾನತು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪಾಕಿಸ್ತಾನವು ಗಡಿಯಾಚೆಗಿನ ಭಯೋತ್ಪಾದನೆ ನಿಲ್ಲಿಸುವವರೆಗೂ ಸಿಂಧೂ ಜಲ ಒಪ್ಪಂದ ಅಮಾನತಿನಲ್ಲಿರಲಿದೆ ಎಂದು ಭಾರತ ಗುರುವಾರ ಹೇಳಿದೆ.

ಎಸ್.ಜೈಶಂಕರ್

ಒಪ್ಪಂದ ಅಮಾನತು ನಿರ್ಧಾರವನ್ನು ಮರುಪರಿಶೀಲಿಸುವಂತೆ ಪಾಕಿಸ್ತಾನ ಮನವಿ ಮಾಡಿದ ಬೆನ್ನಲ್ಲೇ ಭಾರತದ ಹೇಳಿಕೆ ಹೊರಬಿದ್ದಿದೆ.

'ಸಿಂಧೂ ಜಲ ಒಪ್ಪಂದವನ್ನು ಅಮಾನತು ಮಾಡಲಾಗಿದೆ ಮತ್ತು ಪಾಕಿಸ್ತಾನ ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿಲ್ಲಿಸುವವರೆಗೂ ಈ ನಿರ್ಧಾರ ಜಾರಿಯಲ್ಲಿರಲಿದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸ್ಪಷ್ಟಪಡಿಸಿದ್ದಾರೆ.

ಒಪ್ಪಂದ ಅಮಾನತು ನಿರ್ಧಾರವನ್ನು ಮರುಪರಿಶೀಲಿಸಲು ಕೋರಿ ಪಾಕಿಸ್ತಾನದ ಜಲಸಂಪನ್ಮೂಲ ಕಾರ್ಯದರ್ಶಿ ಸೈಯದ್ ಅಲಿ ಮುರ್ತಾಜಾ ಪತ್ರ ಬರೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ದೇಬಶ್ರೀ ಮುಖರ್ಜಿ ಅವರಿಗೆ ಬರೆದ ಪತ್ರದಲ್ಲಿ, ಜಲ ಒಪ್ಪಂದಕ್ಕೆ ಸಂಬಂಧಿಸಿದಂತೆ ಭಾರತದ ಜತೆ ಚರ್ಚಿಸಲು ತಮ್ಮ ಸರ್ಕಾರ ಸಿದ್ಧವಿದೆ ಎಂದು ಹೇಳಿದ್ದಾರೆ. ಅದೇ ರೀತಿ, ಯಾವ ಆಧಾರದಲ್ಲಿ ಒಪ್ಪಂದವನ್ನು ಅಮಾನತಿನಲ್ಲಿರಿಸಲಾಗಿದೆ ಎಂದೂ ಪ್ರಶ್ನಿಸಿದ್ದಾರೆ.

ಭಾರತದ ನಿರ್ಧಾರ 'ಏಕಪಕ್ಷೀಯ ಮತ್ತು ಕಾನೂನುಬಾಹಿರ' ಹಾಗೂ 'ಪಾಕಿಸ್ತಾನದ ಜನರು ಮತ್ತು ಅದರ ಆರ್ಥಿಕತೆಯ ಮೇಲಿನ ದಾಳಿಗೆ ಸಮನಾದುದು' ಎಂದಿದ್ದಾರೆ. ಪಾಕಿಸ್ತಾನದ ಜತೆ ಮಾತುಕತೆಗೆ ಪ್ರತಿನಿಧಿಗಳನ್ನು ಹೆಸರಿಸುವಂತೆಯೂ ಪತ್ರದಲ್ಲಿ ಕೋರಿದ್ದಾರೆ.

ಭಾರತದ ನಿರ್ಧಾರವು ಪಾಕಿಸ್ತಾನದ ಜನರ ಜೀವನದ ಮೇಲೆ ಪರಿಣಾಮ ಬೀರಲಿರುವುದರಿಂದ ಅಮಾನತು ನಿರ್ಧಾರ ಮರುಪರಿಶೀಲಿಸುವಂತೆ ಆಗ್ರಹಿಸಿದ್ದಾರೆ.

'ಭಾರತದ ನಿಲುವು ದೃಢ'

'ಸಿಂಧೂ ಜಲ ಒಪ್ಪಂದ ಅಮಾನತಿನಲ್ಲಿರಿಸುವ ತನ್ನ ನಿಲುವಿನಲ್ಲಿ ಭಾರತ ದೃಢವಾಗಿದೆ' ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನದ ಮನವಿಯ ಬಗ್ಗೆ ಜಲಶಕ್ತಿ ಸಚಿವಾಲಯದ ಅಧಿಕಾರಿಗಳು ಅಧಿಕೃತವಾಗಿ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ಆದರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಭಾರತದ ನಿಲುವು ಬದಲಾಗುವ ಸಾಧ್ಯತೆಯಿಲ್ಲ ಎಂದು ಸರ್ಕಾರದ ಮೂಲಗಳು ಸೂಚಿಸಿವೆ. ಪಾಕಿಸ್ತಾನದ ಮನವಿಯ ಬಗ್ಗೆ ಸರ್ಕಾರದ ಉನ್ನತ ಮಟ್ಟದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ ಎಂದು ಸಚಿವಾಲಯದ ಮೂಲಗಳು ಹೇಳಿವೆ.

ಪಾಕಿಸ್ತಾನದ ಸಮಗ್ರತೆ, ಸಾರ್ವಭೌಮತ್ವವನ್ನು ಉಲ್ಲಂಘಿಸಲು ಯಾರಾದರೂ ಪ್ರಯತ್ನಿಸಿದರೆ, ತಕ್ಕ ಪ್ರತ್ಯುತ್ತರ ನೀಡುತ್ತೇವೆ

ಲೆ.ಜ. ಅಹ್ಮದ್ ಶರೀಫ್ ಚೌಧರಿ
ಪಾಕಿಸ್ತಾನ ಸೇನೆಯ ವಕ್ತಾರ

'ಪಾಕ್ ಜತೆಗಿನ ಮಾತುಕತೆ ಸ್ಪಷ್ಟ ದ್ವಿಪಕ್ಷೀಯ'

ನವದೆಹಲಿ (ಪಿಟಿಐ): 'ಪಾಕಿಸ್ತಾನ ಜೊತೆಗಿನ ಮಾತುಕತೆ 'ಸ್ಪಷ್ಟವಾಗಿ ದ್ವಿಪಕ್ಷೀಯ' ಮಟ್ಟದ್ದಾಗಿದ್ದು, ಇದರಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಇಲ್ಲಿ ಹೇಳಿದರು.

'ಭಾರತ–ಪಾಕ್ ಡಿಜಿಎಂಒ ಮಾತುಕತೆ'

ಇಸ್ಲಾಮಾಬಾದ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕರು (ಡಿಜಿಎಂಒ) ಕದನ ವಿರಾಮ ಒಪ್ಪಂದ ಕುರಿತು ಚರ್ಚಿಸಿದ್ದಾರೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ಡಾರ್ ಗುರುವಾರ ಹೇಳಿದ್ದಾರೆ.

ನಾಲ್ಕು ದಿನಗಳ ಸೇನಾ ಸಂಘರ್ಷದ ಬಳಿಕ ಉಭಯ ದೇಶಗಳು ಮೇ 10ರಂದು ಕದನ ವಿರಾಮ ಒಪ್ಪಂದ ಮಾಡಿಕೊಂಡಿದ್ದವು.

'ಪಾಕಿಸ್ತಾನದ ಡಿಜಿಎಂಒ ಮೇಜರ್ ಜನರಲ್ ಕಾಶಿಫ್ ಅಬ್ದುಲ್ಲಾ ಮತ್ತು ಭಾರತದ ಡಿಜಿಎಂಒ ಲೆಫ್ಟಿನೆಂಟ್ ಜನರಲ್ ರಾಜೀವ್ ಘಯಿ ಅವರು ಬುಧವಾರ ಮಾತುಕತೆ ನಡೆಸಿದ್ದಾರೆ' ಎಂದು ಡಾರ್ ಅವರು ಪಾಕ್ ಸಂಸತ್ತಿಗೆ ತಿಳಿಸಿದ್ದಾರೆ. ಆದರೆ ಅವರ ಹೇಳಿಕೆ ಬಗ್ಗೆ ಭಾರತ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮಾತುಕತೆಗೆ ಸಂಬಂಧಿಸಿದ ಹೆಚ್ಚಿನ ವಿವರಗಳ ಬಹಿರಂಗವಾಗಿಲ್ಲ. ಆದರೆ, ಜಿಯೊ ನ್ಯೂಸ್‌ಗೆ ನೀಡಿದ ಹೇಳಿಕೆಯಲ್ಲಿ ಡಾರ್, 'ಕದನ ವಿರಾಮವನ್ನು ಮೇ 18ರವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ' ಎಂದಿದ್ದಾರೆ.

ಕಾಶ್ಮೀರ: ಮೂವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭದ್ರತಾ ಪಡೆ ಹಾಗೂ ಉಗ್ರರ ನಡುವೆ ಗುರುವಾರ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರು ಹತರಾಗಿದ್ದಾರೆ.

ದಕ್ಷಿಣ ಕಾಶ್ಮೀರದ ಅವಂತಿಪೋರದ ನಾದೆರ್ ತ್ರಾಲ್ ಪ್ರದೇಶದಲ್ಲಿ ಮೂವರು ಭಯೋತ್ಪಾದಕರು ಅಡಗಿದ್ದಾರೆಂಬ ಮಾಹಿತಿ ಮೇರೆಗೆ ಭದ್ರತಾ ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸಿದ್ದರು.

ಉಗ್ರರು, ಭದ್ರತಾ ಸಿಬ್ಬಂದಿಯನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆಸಿದ ಪರಿಣಾಮ, ಗುಂಡಿನ ಚಕಮಕಿ ಏರ್ಪಟ್ಟಿದೆ. ಭದ್ರತಾ ಪಡೆಗಳ ಗುಂಡಿಗೆ ಮೂವರು ಉಗ್ರರು ಸಾವಿಗೀಡಾಗಿದ್ದಾರೆ. ಹತರಾದ ಉಗ್ರರು ಯಾವ ಸಂಘಟನೆಗೆ ಸೇರಿದವರು ಎಂಬ ಮಾಹಿತಿ ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸತ್ತವರಿಗೂ ಉದ್ಯೋಗ

ಸಂಭಲ್ (ಉತ್ತರ ಪ್ರದೇಶ), (ಪಿಟಿಐ): ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ, ಮೃತಪಟ್ಟಿದ್ದವರ ಹೆಸರಿನಲ್ಲಿ ಉದ್ಯೋಗ ಚೀಟಿ ಸೃಷ್ಟಿಸಿ, ಕೂಲಿ ಹಣ ಪಡೆದಿರುವ ಅಕ್ರಮ ಇಲ್ಲಿ ನಡೆದಿದೆ.

ಮೃತರ ಹೆಸರಿನಲ್ಲಿ ಉದ್ಯೋಗ ಚೀಟಿ ಸೃಷ್ಟಿಸಿರುವ 12ಕ್ಕೂ ಹೆಚ್ಚು ಪ್ರಕರಣಗಳು ಜಿಲ್ಲೆಯ ಪನ್ವಾಸಾ ಬ್ಲಾಕ್‌ನ ಅಟರಸಿ ಗ್ರಾಮದಲ್ಲಿ ಬಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಭಯದಿಂದ ಜಾತಿ ಜನಗಣತಿಗೆ ಒಪ್ಪಿದ ಮೋದಿ'

ದರ್ಭಂಗಾ, ಬಿಹಾರ (ಪಿಟಿಐ): 'ದೇಶದ ಜನರ ಭಯದಿಂದಲೇ ಪ್ರಧಾನಿ ನರೇಂದ್ರ ಮೋದಿ ಅವರು ಜಾತಿ– ಜನಗಣತಿ ನಡೆಸಲು ಒಪ್ಪಿಗೆ ಸೂಚಿಸಿದರು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಹೇಳಿಕೆ ನೀಡಿದ್ದಾರೆ.

ರಾಹುಲ್ ಗಾಂಧಿ

ಇಲ್ಲಿನ ಅಂಬೇಡ್ಕರ್ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳ ಜೊತೆ ಗುರುವಾರ ನಡೆಸಿದ ಸಂವಾದದಲ್ಲಿ ಮಾತನಾಡಿದ ಅವರು, 'ನೀವು ತಲೆಯಿಂದ ಸಂವಿಧಾನಕ್ಕೆ ನಮಸ್ಕರಿಸಬೇಕು ಎಂದು ಹೇಳಿದೆವು, ಅದರಂತೆ ನಡೆದುಕೊಂಡರು. ಅದೇ ರೀತಿ, ಜಾತಿ ಜನಗಣತಿ ನಡೆಸುವಂತೆ ಸರ್ಕಾರಕ್ಕೆ ಒತ್ತಾಯಿಸಿದ್ದೆವು. ಎರಡು ಸಂದರ್ಭದಲ್ಲಿ ಜನರ ಭಯದಿಂದ ಅದನ್ನು ಒಪ್ಪಿಕೊಂಡರು' ಎಂದರು.

'ಸಂಪೂರ್ಣ ಸರ್ವಾಧಿಕಾರದ ವರ್ತನೆ'

ನವದೆಹಲಿ (ಪಿಟಿಐ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಪೂರ್ವ ನಿಗದಿಯಾಗಿದ್ದ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಬಿಹಾರದ ಜೆಡಿಯು–ಬಿಜೆಪಿ ಸರ್ಕಾರ ನಡೆಯು ಸಂಪೂರ್ಣ ಸರ್ವಾಧಿಕಾರದ ವರ್ತನೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿಡಿಕಾರಿದ್ದಾರೆ.

ದಲಿತ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವುದು ಸಂವಿಧಾನಕ್ಕೆ ವಿರುದ್ಧವೇ? ಅವರ ಶಿಕ್ಷಣ, ನೇಮಕಾತಿ ಪರೀಕ್ಷೆ ಹಾಗೂ ಉದ್ಯೋಗದ ಬಗ್ಗೆ ಮಾತನಾಡುವುದು ಪಾಪವೇ? ಎಂದು ಪ್ರಶ್ನಿಸಿದ್ದಾರೆ. 'ಇದು ಬಿಜೆಪಿ–ಜೆಡಿಯು ಸರ್ಕಾರದ ಸರ್ವಾಧಿಕಾರಿ ವರ್ತನೆಯಾಗಿದೆ' ಎಂದು ಹೇಳಿದ್ದಾರೆ.

ಮೂರು ಬೇಡಿಕೆ ಈಡೇರಿಸಲಿ: 'ದೇಶದಾದ್ಯಂತ ಪರಿಣಾಮಕಾರಿ ಜಾತಿ ಜನಗಣತಿ, ಖಾಸಗಿ ವಿದ್ಯಾಸಂಸ್ಥೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯಗಳ ಉಪ ಯೋಜನೆಗಳಿಗೆ ಅಗತ್ಯ ಅನುದಾನ ಬಿಡುಗಡೆಗೆ ಯುವ ಸಮುದಾಯವು ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದರು.

ಸಂವಾದಕ್ಕೆ ತಡೆ: ಮಿಥಿಲಾ ವಿಶ್ವವಿದ್ಯಾಲಯದ ಅಂಬೇಡ್ಕರ್ ವಿ.ವಿಯಲ್ಲಿ ರಾಹುಲ್ ಗಾಂಧಿ ಸಂವಾದ ನಡೆಸಲು ಒಪ್ಪಿಗೆ ಪಡೆದಿದ್ದರು. ಆದರೆ, ಕಾರ್ಯಕ್ರಮಕ್ಕೆ ತೆರಳುವ ವೇಳೆ ವಿ.ವಿಯ ಪ್ರವೇಶ ದ್ವಾರದಲ್ಲಿ ಸ್ಥಳೀಯಾಡಳಿತವು ತಡೆಯೊಡ್ಡಿತು. ಹೀಗಾಗಿ, ಅವರು ಕಾಲ್ನಡಿಗೆಯಲ್ಲಿ ಹಾಸ್ಟೆಲ್‌ಗೆ ತೆರಳಿ, 'ಶಿಕ್ಷಾ ನ್ಯಾಯ ಸಂವಾದ' ನಡೆಸಿಕೊಟ್ಟರು.

'ಸುಪ್ರೀಂ'ಗೆ ಮುರ್ಮು 14 ಪ್ರಶ್ನೆ

ಒಂದನೇ ಪುಟದಿಂದ...

ಸುಪ್ರೀಂ ಕೋರ್ಟ್

ರಾಜ್ಯಪಾಲರು ಅಂಕಿತಕ್ಕಾಗಿ ಕಳುಹಿಸುವ ಮಸೂದೆಗಳನ್ನು ರಾಷ್ಟ್ರಪತಿ ತಡೆಹಿಡಿದಿದ್ದರೆ, ರಾಜ್ಯ ಸರ್ಕಾರಗಳು ನೇರವಾಗಿ ಸುಪ್ರೀಂ ಕೋರ್ಟ್ ಕದ ತಟ್ಟಬಹುದು ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್.ಮಹಾದೇವನ್ ಅವರು ಇದ್ದ ನ್ಯಾಯಪೀಠವು, ಏಪ್ರಿಲ್ 8ರಂದು ತೀರ್ಪು ನೀಡಿತ್ತು.

ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳ ಕುರಿತು ನಿರ್ಧಾರ ಕೈಗೊಳ್ಳಲು ಎಲ್ಲ ರಾಜ್ಯಪಾಲರಿಗೆ ಕಾಲಮಿತಿ ನಿಗದಿ ಮಾಡಿತ್ತು. ಮಂತ್ರಿ ಪರಿಷತ್ತಿನ ಸಲಹೆಯಂತೆ ರಾಜ್ಯಪಾಲರು ಕ್ರಮ ಕೈಗೊಳ್ಳುವುದು ಕಡ್ಡಾಯ ಎಂದೂ ಪೀಠವು ಹೇಳಿತ್ತು.

ಕೇಂದ್ರದ ನಡೆಗೆ ಸ್ಟಾಲಿನ್ ಖಂಡನೆ

ಚೆನ್ನೈ (ಪಿಟಿಐ): ರಾಜ್ಯ ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ರಾಜ್ಯಪಾಲರಿಗೆ ಕಾಲಮಿತಿ ಕುರಿತು ಸುಪ್ರೀಂ ಕೋರ್ಟ್ ಅಭಿಪ್ರಾಯ ಕೇಳಲು ಕೇಂದ್ರ ಸರ್ಕಾರ ರಾಷ್ಟ್ರಪತಿಗಳ ಮೂಲಕ ಪ್ರಶ್ನೆಗಳನ್ನು ಕೇಳಿರುವುದು ಖಂಡನೀಯ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ಹೇಳಿದ್ದಾರೆ.

'ಈ ವಿಚಾರವನ್ನು ಈಗಾಗಲೇ ಇತ್ಯರ್ಥಪಡಿಸಿರುವಾಗ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಬುಡಮೇಲು ಮಾಡಲು ಯತ್ನಿಸುತ್ತಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಂಕಿತ: ರಾಜ್ಯಪಾಲರಿಂದ ವಿಳಂಬ

ನವದೆಹಲಿ: ಕಳೆದ ವರ್ಷ ರಾಜ್ಯ ವಿಧಾನಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳ ಪೈಕಿ ಶೇ 18ರಷ್ಟು ಮಸೂದೆಗಳಿಗೆ ಅಂಕಿತ ಹಾಕಲು ರಾಜ್ಯಪಾಲರು ಮೂರು ತಿಂಗಳಿಗೂ ಅಧಿಕ ಸಮಯ ತೆಗೆದುಕೊಂಡಿದ್ದಾರೆ ಎಂದು ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್ ಸಂಸ್ಥೆ ಹೇಳಿದೆ.

ಸಂಸ್ಥೆಯು ಗುರುವಾರ ತನ್ನ ವರದಿ ಬಿಡುಗಡೆ ಮಾಡಿದೆ. ಅರುಣಾಚಲ ಪ್ರದೇಶ, ಬಿಹಾರ, ದೆಹಲಿ, ಮಿಜೋರಾಂ ಮತ್ತು ರಾಜಸ್ಥಾನ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ತಿಂಗಳ ಒಳಗಾಗಿ ಅಂಕಿತ ಹಾಕಲಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ರಾಷ್ಟ್ರಪತಿ ಕೇಳಿದ್ದೇನು?

ಒಂದನೇ ಪುಟದಿಂದ...

4. 200ನೇ ವಿಧಿಯಡಿ ರಾಜ್ಯಪಾಲರು ಕೈಗೊಳ್ಳುವ ಕ್ರಮಗಳ ಕುರಿತು ನ್ಯಾಯಿಕ ಪರಾಮರ್ಶೆ ನಡೆಸುವುದನ್ನು ಸಂವಿಧಾನದ 361ನೇ ವಿಧಿಯು ಸಂಪೂರ್ಣವಾಗಿ ಪ್ರತಿಬಂಧಿಸುತ್ತದೆಯೇ?
5. ರಾಜ್ಯಪಾಲರು ತಮ್ಮ ಅಧಿಕಾರವನ್ನು ಯಾವ ರೀತಿ ಚಲಾಯಿಸಬೇಕು ಮತ್ತು ಅದಕ್ಕಾಗಿ ಕಾಲಮಿತಿ ಕುರಿತು ಸಾಂವಿಧಾನಿಕವಾದ ಆದೇಶ ಇಲ್ಲದ ಸಂದರ್ಭದಲ್ಲಿ, ಅವರಿಗೆ ಕಾಲಮಿತಿ ನಿಗದಿ ಮಾಡಲು ಹಾಗೂ ಹೇಗೆ ಅಧಿಕಾರ ಚಲಾಯಿಸಬೇಕು ಎಂಬುದರ ಕುರಿತು ನ್ಯಾಯಿಕ ಆದೇಶಗಳ ಪ್ರಕಾರ ಸೂಚನೆ ನೀಡಬಹುದೇ?
6. ಸಂವಿಧಾನದ 201ನೇ ವಿಧಿಯಡಿ ರಾಷ್ಟ್ರಪತಿಯವರು ತಾವು ಹೊಂದಿರುವ ವಿವೇಚನಾಧಿಕಾರ ಚಲಾಯಿಸುವರು. ಅವರ ಈ ಅಧಿಕಾರ ಕುರಿತು ನ್ಯಾಯಾಲಯ ವಿಚಾರಣೆ ನಡೆಸಬಹುದೇ?
7. ರಾಷ್ಟ್ರಪತಿಯವರಿಗೆ ಕಾಲಮಿತಿ ಮತ್ತು ಅವರು ಹೇಗೆ ತಮ್ಮ ಅಧಿಕಾರ ಚಲಾಯಿಸಬೇಕು ಎಂಬ ಬಗ್ಗೆ ಸಾಂವಿಧಾನಿಕ ಆದೇಶ ಇಲ್ಲದಿದ್ದಾಗ, ಈ ಕುರಿತು ನ್ಯಾಯಾಲಯಗಳು ಆದೇಶ ಹೊರಡಿಸುವ ಮೂಲಕ ಕಾಲಮಿತಿ ನಿಗದಿ ಮಾಡಬಹುದೇ?
8. ರಾಷ್ಟ್ರಪತಿಯವರು ಹೊಂದಿರುವ ಅಧಿಕಾರ ಕುರಿತು ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. 143ನೇ ವಿಧಿಯಡಿ, ರಾಷ್ಟ್ರಪತಿಯವರು ಸುಪ್ರೀಂ ಕೋರ್ಟ್‌ನ ಸಲಹೆ ಕೇಳಬೇಕೇ? ರಾಷ್ಟ್ರಪತಿ ಅಂಕಿತಕ್ಕಾಗಿ ಮಸೂದೆಯೊಂದನ್ನು ರಾಜ್ಯಪಾಲರು ಕಾಯ್ದಿರಿಸಿದ ಸಂದರ್ಭದಲ್ಲಿ, ರಾಷ್ಟ್ರಪತಿಯು ಸುಪ್ರೀಂ ಕೋರ್ಟ್‌ನ ಅಭಿಪ್ರಾಯ ಕೇಳಬೇಕೇ?
9. ಕಾಯ್ದೆಯೊಂದು ಜಾರಿಯಾಗುವುದಕ್ಕೆ ಮುನ್ನವೇ, ರಾಜ್ಯಪಾಲರು ಹಾಗೂ ರಾಷ್ಟ್ರಪತಿಯು ಕ್ರಮವಾಗಿ 200ನೇ ವಿಧಿ ಮತ್ತು 201ನೇ ವಿಧಿಯಡಿ ಕೈಗೊಂಡಿರುವ ನಿರ್ಧಾರಗಳ ಕುರಿತು ನ್ಯಾಯಾಲಯ ವಿಚಾರಣೆ ನಡೆಸಬಹುದೇ? ಮಸೂದೆಯೊಂದು ಕಾಯ್ದೆಯಾಗಿ ಜಾರಿಯಾಗುವುದಕ್ಕೂ ಮುನ್ನವೇ ಅದರಲ್ಲಿನ ಅಂಶಗಳ ಕುರಿತು ಕೋರ್ಟ್‌ಗಳು ನ್ಯಾಯನಿರ್ಣಯ ಮಾಡುವುದಕ್ಕೆ ಅನುಮತಿ ಇದೆಯೇ?
10. ರಾಷ್ಟ್ರಪತಿ/ರಾಜ್ಯಪಾಲರು ತಮ್ಮ ಸಾಂವಿಧಾನಿಕ ಅಧಿಕಾರ ಚಲಾಯಿಸಿರುವುದನ್ನು ಮತ್ತು ಹೊರಡಿಸಿದ ಆದೇಶಗಳಿಗೆ, ಸಂವಿಧಾನದ 142ನೇ ವಿಧಿಯಡಿ ಪರ್ಯಾಯ ಅಧಿಕಾರ ಚಲಾವಣೆ/ಆದೇಶ ಹೊರಡಿಸುವಂತಹ ಕ್ರಮ ತೆಗೆದುಕೊಳ್ಳಬಹುದೇ?
11. ರಾಜ್ಯ ವಿಧಾನಸಭೆ ಅಂಗೀಕರಿಸಿದ ಮಸೂದೆಗೆ ರಾಜ್ಯಪಾಲರು ತಮಗಿರುವ ಅಧಿಕಾರ (200ನೇ ವಿಧಿಯಡಿ) ಬಳಸಿ ಅಂಕಿತ ಹಾಕದೆ ಇದ್ದಾಗಲೂ, ಅದು ಕಾನೂನು ಆಗಿ ಜಾರಿಗೆ ಬರಲು ಅವಕಾಶ ಇದೆಯೇ?
12. ಸಂವಿಧಾನದ 145(3)ನೇ ವಿಧಿ ಪ್ರಕಾರ, ಸುಪ್ರೀಂ ಕೋರ್ಟ್‌ನ ಯಾವುದೇ ನ್ಯಾಯಪೀಠವು ತನ್ನ ಮುಂದಿರುವ ಅರ್ಜಿಯು, ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿ ಮೂಲಭೂತ ಪ್ರಶ್ನೆಗಳನ್ನು ಒಳಗೊಂಡಿದೆ ಎಂಬ ಬಗ್ಗೆ ಮೊದಲು ತೀರ್ಮಾನಿಸುವುದು ಕಡ್ಡಾಯವಲ್ಲವೇ? ನಂತರ ಈ ವಿಚಾರವನ್ನು ಕನಿಷ್ಠ ಐವರು ಸದಸ್ಯರು ಇರುವ ಪೀಠಕ್ಕೆ ವರ್ಗಾಯಿಸಬೇಕಲ್ಲವೇ?
13. ತನ್ನ ಮುಂದಿರುವ ಪ್ರಕರಣಗಳು/ಅರ್ಜಿಯಲ್ಲಿನ ಅಂಶಗಳು, ಸಂವಿಧಾನ ಅಥವಾ ಸದ್ಯ ಜಾರಿಯಲ್ಲಿರುವ ಕಾನೂನಿಗೆ ವಿರುದ್ಧವಾಗಿ ಇಲ್ಲವೇ ಅಸಮಂಜಸವಾಗಿದ್ದಾಗ ಮಾತ್ರ 142ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಬೇಕು/ಆದೇಶ ಹೊರಡಿಸಬೇಕಲ್ಲವೇ?
14. ಸಂವಿಧಾನದ 131ನೇ ವಿಧಿಯಡಿ ದಾಖಲಿಸುವ ದಾವೆ ಹೊರತುಪಡಿಸಿದಂತೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವಿನ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ಸುಪ್ರೀಂ ಕೋರ್ಟ್ ಹೊಂದಿರುವ ಅಧಿಕಾರ ವ್ಯಾಪ್ತಿಯನ್ನು ಸಂವಿಧಾನ ಪ್ರತಿಬಂಧಿಸುತ್ತದೆಯೇ?

ಬಿಹಾರದ ಪಟ್ನಾದಲ್ಲಿ ನಡೆದ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಪ್ರಶಸ್ತಿ ಗೆದ್ದ ಕರ್ನಾಟಕ ಬಾಲಕಿಯರ ಬ್ಯಾಸ್ಕೆಟ್‌ಬಾಲ್ ತಂಡ. (ನಿಂತವರು) ಎಡದಿಂದ: ಕೊಂಡೂರು ಆದ್ಯಾ, ಶರ್ವಾಣಿ ಎಸ್, ನಿರೀಕ್ಷಾ ಬಿ.ಸಿ, ಪವಿತ್ರಾ ಎನ್ (ಅಸಿಸ್ಟೆಂಟ್ ಕೋಚ್), ಸತ್ಯನಾರಾಯಣ ಕೆ. (ಮುಖ್ಯ ಕೋಚ್), ಡಾ.ಆರ್ ಭಾವನಾ (ಫಿಜಿಯೊ), ನಿಧಿ ಯು, ತಾರುಶೀ ತರುಣ್, ಮಹೆಕ್ ಶರ್ಮಾ (ಮಂಡಿಯೂರಿದವರು) ಶ್ರೇಯಾ ವಿ, ನಿಧಿ ಶ್ರೀನಿವಾಸ್ (ನಾಯಕಿ), ತ್ರಿಶಾ, ದೇವಿಪ್ರಿಯಾ ಸಿ. ಸಜೀಶ್, ಅರ್ಚನಾ ಗಿರಿ, ಎಂ.ಆರ್ ಶೀತಲ್

ಖೇಲೊ ಇಂಡಿಯಾ ಯೂತ್ ಗೇಮ್ಸ್ ಬ್ಯಾಸ್ಕೆಟ್‌ಬಾಲ್

ಕರ್ನಾಟಕ ಬಾಲಕಿಯರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಧಿ ಉಮೇಶ್ ಮತ್ತು ಮಹೆಕ್ ಶರ್ಮಾ ಅವರ ಅಮೋಘ ಆಟದ ಬಲದಿಂದ ಕರ್ನಾಟಕದ ಬಾಲಕಿಯರ ಬ್ಯಾಸ್ಕೆಟ್‌ಬಾಲ್ ತಂಡವು ಬಿಹಾರದ ಪಟ್ನಾದಲ್ಲಿ ನಡೆದ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಗುರುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಕರ್ನಾಟಕ ತಂಡವು 86–61ರಿಂದ ಹರಿಯಾಣ ತಂಡವನ್ನು ಮಣಿಸಿತು. ವಿರಾಮದ ವೇಳೆ 46–25 ಮುನ್ನಡೆ ಸಾಧಿಸಿದ್ದ ರಾಜ್ಯದ ಬಾಲಕಿಯರು ಉತ್ತರಾರ್ಧದಲ್ಲೂ ಪಾರಮ್ಯ ಮೆರೆದರು.

ಕರ್ನಾಟಕ ನಿಧಿ ಉಮೇಶ್ 27, ಮಹೆಕ್ 21, ಮತ್ತು ನಿಧಿ ಶ್ರೀನಿವಾಸ್ 17 ಅಂಕ ಗಳಿಸಿದರು. ಹರಿಯಾಣ ತಂಡದ ಭೂಮಿ ಕಟಾರಿಯಾ ಮತ್ತು ಖುಷಿ ಕ್ರಮವಾಗಿ 22 ಅಂಕ ಗಳಿಸಿ ಹೋರಾಟ ತೋರಿದರು. ಸೆಮಿಫೈನಲ್‌ನಲ್ಲಿ ಕರ್ನಾಟಕ 79–65ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಮುನ್ನಡೆದಿತ್ತು.

ಡಬ್ಲ್ಯುಟಿಸಿ ಬಹುಮಾನ ಮೊತ್ತ ದುಪ್ಪಟ್ಟು ಏರಿಕೆ

ದುಬೈ (ಪಿಟಿಐ): 2025ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ವಿಜೇತ ತಂಡ ₹30.80 ಕೋಟಿ (3.6 ದಶಲಕ್ಷ ಡಾಲರ್) ಬಹುಮಾನದ ಮೊತ್ತ ಪಡೆಯಲಿದೆ. ಇದು ಹಿಂದಿನ ಆವೃತ್ತಿಗಿಂತ ಎರಡೂ ಪಟ್ಟು ಹೆಚ್ಚು.

2023ರ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಭಾರತ ತಂಡವನ್ನು ಸೋಲಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಗೆದ್ದ ಸಂದರ್ಭದಲ್ಲಿ ಆಸ್ಟ್ರೇಲಿಯಾ ₹13.68 ಕೋಟಿ ಬಹುಮಾನ ಪಡೆದಿತ್ತು.

ಜೂನ್ 11 ರಿಂದ ಲಾರ್ಡ್ಸ್‌ನಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಮೂರನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ನಿಗದಿಯಾಗಿದೆ. ಈ ಬಾರಿ ರನ್ನರ್ ಅಪ್ ಆಗುವ ತಂಡ ಸುಮಾರು ₹18 ಕೋಟಿ ಜೇಬಿಗಿಳಿಸಲಿದೆ. ಈ ಹಿಂದಿನ ಎರಡು ಆವೃತ್ತಿಗಳಲ್ಲಿ ರನ್ನರ್ ಅಪ್ ತಂಡ ₹6.84 ಕೋಟಿ ಬಹುಮಾನ ಪಡೆದಿತ್ತು.

'ಬಹುಮಾನ ಮೊತ್ತದಲ್ಲಿ ಹೆಚ್ಚಳ ಮಾಡಿರುವುದು ಟೆಸ್ಟ್ ಕ್ರಿಕೆಟ್‌ಗೆ ಆದ್ಯತೆ ನೀಡುವ ವಿಶ್ವ ಕ್ರಿಕೆಟ್ ಸಮಿತಿಯ ಪ್ರಯತ್ನವನ್ನು ಎತ್ತಿ ತೋರಿಸುತ್ತಿದೆ' ಎಂದು ಅದು ಗುರುವಾರ ಹೇಳಿಕೆಯಲ್ಲಿ ತಿಳಿಸಿದೆ.

ಈ ಹಿಂದಿನ (2024–25) ಡಬ್ಲ್ಯುಟಿಸಿ ಅಭಿಯಾನದಲ್ಲಿ ದಕ್ಷಿಣ ಆಫ್ರಿಕಾ ತವರಿನಲ್ಲಿ ಲಂಕಾ ಮತ್ತು ಪಾಕಿಸ್ತಾನ ತಂಡಗಳ ಮೇಲೆ 2–0 ಗೆಲುವು ಪಡೆದಿದ್ದು ಅಂತಿಮವಾಗಿ ಶೇ 69.44 ಪರ್ಸೆಂಟೇಜ್ ಪಾಯಿಂಟ್ಸ್ ಗಳಿಸಿತ್ತು. ಆಸ್ಟ್ರೇಲಿಯಾ (67.54 ಪರ್ಸೆಂಟೇಜ್ ಪಾಯಿಂಟ್ಸ್) ಎರಡನೇ ಸ್ಥಾನ ಗಳಿಸಿತ್ತು. ಆದರೆ ಅಭಿಯಾನದ ಬಹುಭಾಗ ಮುನ್ನಡೆಯಲ್ಲಿದ್ದ ಭಾರತ ಅಂತಿಮವಾಗಿ (50.00) ಮೂರನೇ ಸ್ಥಾನಕ್ಕಿಳಿದಿತ್ತು.

ಏಷ್ಯನ್ ಚೆಸ್: ನಿಹಾಲ್ ರನ್ನರ್‌ಅಪ್

ಅಲ್ ಐನ್ (ಯುಎಇ), (ಪಿಟಿಐ): ಅಗ್ರ ಶ್ರೇಯಾಂಕ ಪಡೆದಿದ್ದ ಭಾರತದ ಗ್ರ್ಯಾಂಡ್‌ಮಾಸ್ಟರ್ ನಿಹಾಲ್ ಸರಿನ್ ಅಂತಿಮ ಸುತ್ತಿನಲ್ಲಿ ಇರಾನ್‌ನ ಬದ್ರಿಯಾ ದಾನೇಶ್ವರ್ ಅವರನ್ನು ಸೋಲಿಸಿ ಸತತ ನಾಲ್ಕನೇ ಗೆಲುವು ದಾಖಲಿಸಿದರು. ಆ ಮೂಲಕ ಏಷ್ಯನ್ ವೈಯಕ್ತಿಕ ಓಪನ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ರನ್ನರ್ ಅಪ್ ಸ್ಥಾನ ಪಡೆದರು.

ದಾನೇಶ್ವರ್ ಬುಧವಾರದ ಕೊನೆಗೆ ಏಕಾಂಗಿಯಾಗಿ ಮುನ್ನಡೆಯಲ್ಲಿದ್ದರು. ಕೊನೆಯ ಸುತ್ತಿನ ನಂತರ ನಿಹಾಲ್ ಮತ್ತು ದಾನೇಶ್ವರ್ ತಲಾ ಏಳು ಅಂಕ ಪಡೆದರೂ, ಇರಾನ್‌ನ ಆಟಗಾರ ಉತ್ತಮ ಟೈಬ್ರೇಕ್ ಸ್ಕೋರ್‌ನಿಂದಾಗಿ ಪ್ರಶಸ್ತಿ ಗೆದ್ದರು. ಕೇರಳದ ನಿಹಾಲ್ ಟೂರ್ನಿಯ ಆರಂಭದಲ್ಲಿ ಪರದಾಡಿದರೂ, ಕೊನೆಯ ಕೆಲವು ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿದರು.

ಶ್ರೀಹರಿ 86ನೇ ಜಿಎಂ: ಎಲ್.ಆರ್. ಶ್ರೀಹರಿ ಈ ಕೂಟದಲ್ಲಿ ತಮ್ಮ ಮೂರನೇ ಹಾಗೂ ಅಂತಿಮ ಜಿಎಂ ನಾರ್ಮ್ ಪಡೆಯುವ ಮೂಲದ ದೇಶದ 86ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿದರು.

ಟಿ20 ತಂಡಕ್ಕೆ ಮರಳಿದ ಶಫಾಲಿ

ನವದೆಹಲಿ (ಪಿಟಿಐ): ಆಕ್ರಮಣಕಾರಿ ಆರಂಭ ಆಟಗಾರ್ತಿ ಶಫಾಲಿ ವರ್ಮಾ ಅವರನ್ನು ಇಂಗ್ಲೆಂಡ್ ಪ್ರವಾಸ ಕೈಗೊಳ್ಳುವ ಭಾರತ ಮಹಿಳಾ ಟಿ20 ತಂಡಕ್ಕೆ ಆಯ್ಕೆ ಮಾಡಲಾಗಿದೆ. ಏಳು ತಿಂಗಳ ನಂತರ ಶಫಾಲಿ ಭಾರತ ತಂಡಕ್ಕೆ ಮರಳಿದ್ದಾರೆ. ಆದರೆ ಅವರು ಏಕದಿನ ತಂಡದಲ್ಲಿ ಸ್ಥಾನ ಪಡೆದಿಲ್ಲ.

ಐದು ಪಂದ್ಯಗಳ ಸರಣಿ ಜೂನ್ 28ರಂದು ಟ್ರೆಂಟ್‌ಬ್ರಿಜ್‌ನಲ್ಲಿ ಆರಂಭವಾಗಲಿದೆ. ಶಫಾಲಿ 2024ರ ಅಕ್ಟೋಬರ್‌ನಲ್ಲಿ ಕೊನೆಯ ಬಾರಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.

ಭಾರತ ಐದು ಟಿ20 ಪಂದ್ಯಗಳ ನಂತರ ಮೂರು ಏಕದಿನ ಪಂದ್ಯಗಳ ಸರಣಿಯನ್ನು ಆಡಲಿದೆ. ಎರಡೂ ಮಾದರಿಗಳಿಗೆ 15 ಮಂದಿಯ ತಂಡ ಪ್ರಕಟಿಸಲಾಗಿದೆ.

ಟಿ20 ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪ ನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಯಷ್ತಿಕಾ ಭಾಟಿಯಾ (ವಿಕೆಟ್ ಕೀಪರ್), ಹರ್ಲೀನ್ ಡಿಯೋಲ್, ದೀಪ್ತಿ ಶರ್ಮಾ, ಸ್ನೇಹ ರಾಣಾ, ಶ್ರೀ ಚರಣಿ, ಶುಚಿ ಉಪಾಧ್ಯಾಯ, ಅಮನ್ಜೋತ್ ಕೌರ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ್, ಸಯಾಲಿ ಸಾತ್ಘರೆ.

ಏಕದಿನ ತಂಡದಲ್ಲಿ ಪ್ರತಿಕಾ ರಾವಲ್, ತೇಜಲ್ ಹಸಬ್ನಿಸ್ ಸ್ಥಾನ ಪಡೆದಿದ್ದು, ಶಫಾಲಿ ಅವರನ್ನು ಸೇರ್ಪಡೆ ಮಾಡಿಲ್ಲ.

ಬ್ಯಾಡ್ಮಿಂಟನ್: ಭಾರತದ ಸವಾಲು ಅಂತ್ಯ

ಬ್ಯಾಂಕಾಕ್ (ಪಿಟಿಐ): ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಎರಡನೇ ಸುತ್ತಿನಲ್ಲೇ ಭಾರತದ ಸವಾಲು ಅಂತ್ಯಗೊಂಡಿದೆ. ಗುರುವಾರ ನಡೆದ ಪಂದ್ಯಗಳಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್ ಆಟಗಾರ್ತಿಯರು ಸೋಲನುಭವಿಸಿದರು.

ವಿಶ್ವ ಡಬಲ್ಸ್ ಕ್ರಮಾಂಕದಲ್ಲಿ ಹತ್ತನೇ ಸ್ಥಾನದಲ್ಲಿರುವ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಎರಡನೇ ಸುತ್ತಿನಲ್ಲಿ 20–22, 14–21 ರಿಂದ ಜಪಾನ್‌ನ ರುಯಿ ಹಿರೊಕಾಮಿ ಮತ್ತು ಸಯಾಕಾ ಹೊಬರಾ ಜೋಡಿಯೆದುರು ಪರಾಭವಗೊಂಡರು.

ಭಾರತದ ಪ್ರಮುಖ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಈ ಟೂರ್ನಿಯಲ್ಲಿ ಬುಧವಾರ ಮೊದಲ ಸುತ್ತಿನಲ್ಲೇ ಸೋಲನುಭವಿಸಿದ್ದರು. ಉನ್ನತಿ ಹೂಡಾ ಅವರು ಅಗ್ರಶ್ರೇಯಾಂದ ಪೋರ್ನ್‌ಪವೀ ಚೊಚುವಾಂಗ್ ಅವರಿಗೆ 14–21, 11–21 ರಲ್ಲಿ ಸೋಲನುಭವಿಸಿದರು.

ವಿಶ್ವ ಕ್ರಮಾಂಕದಲ್ಲಿ 23ನೇ ಸ್ಥಾನದಲ್ಲಿರುವ ಮಾಳವಿಕಾ ಬನ್ಸೋಡ್ 12–21, 16–21ರಲ್ಲಿ ಸ್ಥಳೀಯ ಫೇವರೀಟ್ ರಟ್ಚನೋಕ್ ಇಂತನೊನ್ ಎದುರು ಸೋತರು.

ಪುರುಷರ ವಿಭಾಗದಲ್ಲಿ ಎರಡನೇ ಸುತ್ತು ತಲುಪಿದ್ದ ಏಕೈಕ ಆಟಗಾರ ತರುಣ್ ಮನ್ನೇಪಲ್ಲಿ ಅವರು ಎರಡನೇ ಶ್ರೇಯಾಂಕದ ಆ್ಯಂಡರ್ಸ್ ಅಂಟೊನ್ಸೆನ್ (ಡೆನ್ಮಾರ್ಕ್) ಅವರಿಗೆ ಹೆಚ್ಚಿನ ಪ್ರತಿರೋಧ ತೋರದೇ 14–21, 16–21ರಲ್ಲಿ ಮಣಿದರು.

ದೋಹಾ ಡೈಮಂಡ್ ಲೀಗ್ ಇಂದು

ನೀರಜ್‌ಗೆ ಪ್ರಶಸ್ತಿ ಗೆಲ್ಲುವ ಸವಾಲು

ನೀರಜ್ ಚೋಪ್ರಾ

ದೋಹಾ (ಪಿಟಿಐ): ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಶುಕ್ರವಾರ ಇಲ್ಲಿ ನಡೆಯುವ ಡೈಮಂಡ್ ಲೀಗ್ ಕೂಟದಲ್ಲಿ ಉತ್ತಮ ಆರಂಭ ಪಡೆಯುವ ನಿರೀಕ್ಷೆಯಲ್ಲಿದ್ದಾರೆ.

ಚೋಪ್ರಾ ಅವರಿಗೆ ಇಲ್ಲಿ ಎರಡು ಬಾರಿಯ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್, 2024ರ ವಿಜೇತರಾದ ಝೆಕ್ ಗಣರಾಜ್ಯದ ಯಾಕುಬ್ ವಾಡ್ಲೆಚ್, ಜರ್ಮನಿಯ ಜೂಲಿಯನ್ ವೇಬರ್ ಮತ್ತು ಮ್ಯಾಕ್ಸ್ ದೆಹ್ನಿಂಗ್, ಕೆನ್ಯಾದ ಜೂಲಿಯಸ್ ಯೆಗೊ ಮತ್ತು ಜಪಾನ್‌ನ ಗೆಂಕಿ ಡೀನ್ ಅವರಿಂದ ಸವಾಲು ಎದುರಾಗಲಿದೆ. ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್ ಅರ್ಷದ್ ನದೀಮ್ ಇಲ್ಲಿ ಭಾಗವಹಿಸುತ್ತಿಲ್ಲ.

ಭಾರತದ ಇನ್ನೊಬ್ಬ ಸ್ಪರ್ಧಿ ಕಿಶೋರ್ ಜೇನಾ ಅವರೂ 11 ಮಂದಿಯ ಕಣದಲ್ಲಿದ್ದಾರೆ. ಆದರೆ ಇತ್ತೀಚಿನ ತಿಂಗಳಲ್ಲಿ ಅವರು ಉತ್ತಮ ಲಯದಲ್ಲಿಲ್ಲ. ಹೋದ ವರ್ಷ ಜೇನಾ ಇಲ್ಲಿ 76.31 ಮೀ. ಥ್ರೋದೊಡನೆ 9ನೇ ಸ್ಥಾನ ಪಡೆದಿದ್ದರು. ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 87.54 ಮೀ. ಕಳೆದ ವರ್ಷ ವಿಜೇತರಾದ ವಾಡ್ಲೆಚ್ ಈಟಿಯನ್ನು 88.38 ಮೀ. ದೂರ ಎಸೆದಿದ್ದರು.

2023ರ ಆವೃತ್ತಿಯಲ್ಲಿ 88.67 ಮೀ. ಥ್ರೊ ಮೂಲಕ ಇಲ್ಲಿ ಚಾಂಪಿಯನ್ ಆಗಿದ್ದ ನೀರಜ್ ಚೋಪ್ರಾ, ಕಳೆದ ವರ್ಷ 88.36 ಮೀ. ದಾಖಲಿಸಿ ಎರಡನೇ ಸ್ಥಾನ ಪಡೆದಿದ್ದರು. ಚೋಪ್ರಾ ಅವರಿಗೆ ಈಗ ಹಲವು ಬಾರಿಯ ಒಲಿಂಪಿಕ್ ಚಾಂಪಿಯನ್ ಯಾನ್ ಝೆಲೆಜ್ನಿ ಕೋಚ್ ಆಗಿದ್ದಾರೆ.

ಚೋಪ್ರಾ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 89.94 ಮೀ. ಆಗಿದ್ದು, 90 ಮೀ. ಮೈಲಿಗಲ್ಲು ತಲುಪಲು ಪ್ರಯತ್ನದಲ್ಲಿದ್ದಾರೆ. ಝೆಲೆಜ್ನಿ ತಮ್ಮ ಕ್ರೀಡಾಜೀವನದ ಉತ್ತುಂಗದಲ್ಲಿದ್ದಾಗ ಈ ದೂರವನ್ನು ಸಲೀಸಾಗಿ ಸಾಧಿಸುತ್ತಿದ್ದರು.

ಇತರ ಸ್ಪರ್ಧಿಗಳು: ಭಾರತದ ಗುಲ್ವೀರ್ ಸಿಂಗ್ ಮತ್ತು ಪಾರುಲ್ ಚೌಧರಿ ಅವರು ಕ್ರಮವಾಗಿ ಪುರುಷರ 5,000 ಮೀ. ಓಟ ಮತ್ತು ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಅದೃಷ್ಟ ಪರೀಕ್ಷಿಸಲಿದ್ದಾರೆ. ಸಿಂಗ್ 5,000 ಮತ್ತು 10,000 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ.

'ಅರ್ಷದ್ ಆತ್ಮೀಯನಾಗಿರಲಿಲ್ಲ'

'ನದೀಮ್ ಮತ್ತು ನಾನು ಎಂದೂ ಆತ್ಮೀಯ ಸ್ನೇಹಿತರಾಗಿಲಿಲ್ಲ. ಈಗ ಭಾರತ– ಪಾಕಿಸ್ತಾನ ಸಂಘರ್ಷದ ಬಳಿಕ ಪರಿಸ್ಥಿತಿ ಮೊದಲಿನಂತೆ ಇರುವುದೂ ಇಲ್ಲ' ಎಂದು ನೀರಜ್ ಚೋಪ್ರಾ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯ ನಂತರ ಭಾರತದ ಅಥ್ಲೀಟ್ ಮತ್ತು ಅವರ ಕುಟುಂಬದವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ನಿಂದನಾತ್ಮಕ ಪೋಸ್ಟ್‌ಗಳ ಸುರಿಮಳೆಯಾಗಿದೆ. ಈಗ ಮುಂದಕ್ಕೆ ಹೋಗಿರುವ ಎನ್‌ಸಿ ಕ್ಲಾಸಿಕ್ ಸ್ಪರ್ಧೆಗೆ ಆಯೋಜಕ ನೀರಜ್ ಅವರು ನದೀಮ್ ಅವರನ್ನು ಆಹ್ವಾನಿಸಿದ್ದು ಟೀಕೆಗಳಿಗೆ ಗುರಿಯಾಗಿತ್ತು.

'ನಮ್ಮಿಬ್ಬರ ಮಧ್ಯೆ (ನದೀಮ್) ಆತ್ಮೀಯತೆ ಇರಲಿಲ್ಲ. ನಾವೆಂದೂ ಆಪ್ತಮಿತ್ರರಾಗಿರಲಿಲ್ಲ. ಈಗ ಗಡಿ ಸಂಘರ್ಷದಿಂದ ಮೊದಲಿನಂತೆ ಇರುವುದೂ ಇಲ್ಲ. ಆದರೆ ನನ್ನ ಜೊತೆ ಗೌರವದಿಂದ ಯಾರಾದರೂ ಮಾತನಾಡಿದರೆ ನಾನು ಸ್ಪಂದಿಸುತ್ತೇನೆ' ಎಂದು ಚೋಪ್ರಾ ತಿಳಿಸಿದ್ದಾರೆ.

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. **ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ಕಾಗದಪತ್ರ ಅಗತ್ಯವಿರಬಹುದು. **ಬಡ್ಡಿ ದರಗಳು, ಡೌನ್ ಪೇಮೆಂಟ್ ಮತ್ತು ಅವಧಿ ಆಯ್ಕೆಗಳು ಅರ್ಜಿದಾರರ ಸಾಲ ಪ್ರೊಫೈಲ್ ಅನ್ನು ಸಾಲದಾತರು ವಿಶ್ಲೇಷಣೆ ಮಾಡುವುದನ್ನು ಆಧರಿಸಿದೆ. **ಕೊಡುಗೆಗಳು/ವೈಶಿಷ್ಟ್ಯಗಳನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. #ಪೈನ್ ಲ್ಯಾಬ್ಸ್ ಮಶೀನ್‌ಗಳ ಮೂಲಕ IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿಕೊಂಡು ಮಾಡಿದ EMI ವಹಿವಾಟುಗಳಿಗೆ ಆಯ್ದ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಆಫರ್ ಲಭ್ಯವಿದೆ. #ಗ್ರಾಹಕರು 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಗರಿಷ್ಠ ₹5000 ವರೆಗೆ ಪಡೆಯಬಹುದು. #ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಒಂದು ವಹಿವಾಟಿಗೆ ಮಾನ್ಯವಾಗಿದೆ. #ಸ್ಕೀಮ್ ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಲಭ್ಯವಿದೆ. *3 ವರ್ಷಗಳ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್ ಕೇವಲ Activa 110 ಮತ್ತು Activa 125 ಡಿಲಕ್ಸ್ ವೇರಿಯಂಟ್‌ನಲ್ಲಿ ಮಾತ್ರ ಲಭ್ಯವಿದೆ. *₹5500 ಮೌಲ್ಯದ 3 ವರ್ಷದ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್‌ನ ವಿವರವಾದ ನಿಯಮ ಮತ್ತು ಷರತ್ತುಗಳ ಬಗ್ಗೆ ದಯವಿಟ್ಟು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳನ್ನು ಸಂಪರ್ಕಿಸಿ. *ಈ ಮೇಲಿನ ಸ್ಕೀಮ್ ಅನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಎಲ್ಲ ಕೊಡುಗೆಗಳು ಮೇ 31, 2025 ರವರೆಗೆ ಮಾನ್ಯವಾಗಿದೆ. ^ಸೀಮಿತ ಅವಧಿಯ ವಿಶೇಷ ದರವು ಕರ್ನಾಟಕ ರಾಜ್ಯದಲ್ಲಿ Activa 110cc ಸ್ಟಾಂಡರ್ಡ್ OBD2B ವೇರಿಯಂಟ್‌ಗಾಗಿದೆ. ಸೀಮಿತ ಅವಧಿಯ ವಿಶೇಷ ಬೆಲೆಯ ಬಗ್ಗೆ ವಿವರಗಳಿಗಾಗಿ, ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳನ್ನು ಸಂಪರ್ಕಿಸಿ. ಕ್ರಿಯೇಟಿವ್‌ನಲ್ಲಿ ತೋರಿಸಿದ ವೈಶಿಷ್ಟ್ಯಗಳು ಎಲ್ಲ ವೇರಿಯಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. ಚಿತ್ರದಲ್ಲಿ ತೋರಿಸಿದ ಉತ್ಪನ್ನಗಳು ಮಾರ್ಕೆಟ್‌ನಲ್ಲಿನ ಅಸಲಿ ಉತ್ಪನ್ನಕ್ಕಿಂತ ಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಆಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 73532510007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in